ಕರ್ನಾಟಕ ವಿಧಾನಸಭೆ

(13ನೇ ವಿಧಾನಸಭೆ – 3ನೇ ಅಧಿವೇಶನ)
ಸೋಮವಾರ 14ನೇ ಸೆಪ್ಟೆಂಬರ್ 2009ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತ್ತು.
ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್ ರವರು
ಪೀಠವನ್ನು ಅಲಂಕರಿಸಿದ್ದರು.

11.00 A.M.

ಅಧ್ಯಕ್ಷರು: ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಇದುವರೆಗೆ ಏನು ಚರ್ಚೆ ನಡೆಯಿತು ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡಬೇಕು. ಇದರ ಬಗ್ಗೆ further discussion ಬೇಡ. ಮೊನ್ನೆ ತಾವೆಲ್ಲಾ ಮಾತುಕೊಟ್ಟಿದ್ದೀರಿ. ಅಂದು ರಾತ್ರಿ 9.30 ಗಂಟೆಯವರೆಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಇಂದು ಬೆಳಿಗ್ಗೆ ಮುಖ್ಯಮಂತ್ರಿಯವರು ಉತ್ತರ ಕೊಡಬೇಕೆಂದು ನಿರ್ಣಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರದ ನಂತರ ತಮ್ಮ adjournment motionನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಇನ್ನೂ ನಾಳೆ ಮತ್ತು ನಾಡಿದ್ದು ಅಧಿವೇಶನವಿದೆ. ಖಂಡಿತ ಅದಕ್ಕೆ ಅವಕಾಶ ಕೊಡುತ್ತೇನೆ. ಆದರೆ, ಇವತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯ ಮುಗಿದುಹೋಗಲಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನಾನು, ಜಯಚಂದ್ರರವರು ಮತ್ತು ಅನೇಕ ಜನ ಸದಸ್ಯರುಗಳು ತಮಗೆ ಕೆ.ಐ.ಎ.ಡಿ.ಬಿ.ಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಚರ್ಚೆ ಮಾಡಬೇಕೆಂದು ಒಂದು ನೋಟೀಸ್‌ನ್ನು ಕೊಟ್ಟಿದ್ದೇವೆ. ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅದಕ್ಕೂ ಮೊದಲು ನಾವು ಇದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್‌ನ್ನು ಮಾಡುತ್ತೇನೆ. ಅನಂತರ ನೀವು ಏನು ತೀರ್ಮಾನ ಮಾಡಿತ್ತೀರೋ ಅದರಂತೆ ಮಾಡೋಣ.

ಅಧ್ಯಕ್ಷರು: ತಾವು ಕೊಟ್ಟಿರುವ ನೋಟಿಸ್ ಮತ್ತು ಅವರು ಕೊಟ್ಟಿರುವ ನೋಟಿಸ್ ಇದೆ. ಇಲ್ಲವೆಂದು ನಾನು ಹೇಳಲಿಲ್ಲ. ಆದರೆ, ವಿರೋಧ ಪಕ್ಷದ

ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುವಂಥದ್ದು, ಪ್ರಿಲಿಮಿನರಿ ಸಬ್‌ಮಿಷನ್ ಎಂದರೆ ಹೆಚ್ಚುಕಡಿಮೆ ಚರ್ಚೆಯೇ ಪ್ರಾರಂಭವಾದಂತೆ.

ಶ್ರೀ ಸಿದ್ದರಾಮಯ್ಯ: ಇಲ್ಲ.

ಅಧ್ಯಕ್ಷರು: ಹೌದು. ಏಕೆಂದರೆ ಇದುವರೆಗೆ adjournment motionದ್ದು ಏನೇನಾಗಿದೆ ಎಂಬುದು ನನಗೆ ಎಲ್ಲಾ ಗೊತ್ತಿದೆ. ನೀವು ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೂ ಅವಕಾಶ ಕೊಡುತ್ತೇನೆ. ಮುಂದೆ ಯಾವ ರೀತಿಯಾಗಿ ಅದರ ಬಗ್ಗೆ ಚರ್ಚೆಯನ್ನು ಮುಂದುವರೆಸಬೇಕು ಎಂಬುದಕ್ಕೂ ನಾನು ಅವಕಾಶ ಕೊಡುತ್ತೇನೆ. ಆದ್ದರಿಂದ ನೀವು ನನಗೆ ಸ್ವಲ್ಪ ಸಹಕಾರ ಕೊಡಿ. ಮೊದಲು ಮಾನ್ಯ ಮುಖ್ಯಮಂತ್ರಿಯವರು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಉತ್ತರವನ್ನು ಕೊಡಲಿ. ಆ ವಿಚಾರವನ್ನು ಮೊದಲು ಕ್ಲೋಸ್ ಮಾಡೋಣ. ಬರಗಾಲದ ಬಗ್ಗೆಯೂ ತಾವು adjournment motionನ್ನು ಕೊಟ್ಟಿದ್ದೀರಿ. ಅದನ್ನು / ನಿಯಮ 69ಕ್ಕೆ ಪರಿವರ್ತನೆ ಮಾಡಿ ಇವತ್ತೇ ಚರ್ಚೆಗೆ ಇಟ್ಟಿದ್ದೇನೆ. ಆದ್ದರಿಂದ ಒಂದೊಂದೇ subjectನ್ನು ಕ್ಲೋಸ್ ಮಾಡಿಕೊಂಡು ಹೋಗೋಣ.

ಶ್ರೀ ಸಿದ್ದರಾಮಯ್ಯ: ಹೆಬ್ಬಗೋಡಿ ಹತ್ತಿರ ಚರ್ಚ್ ಮೇಲೆ ನಡೆದಿರುವ ದಾಳಿಯ ಬಗ್ಗೆ ಇಲ್ಲಿ ಬೆಳಿಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಮುಖ್ಯಮಂತ್ರಿಗಳು ಹೊರಗಡೆಯೇ ಅನೇಕ ವಿಚಾರಗಳನ್ನು ಹೇಳುತ್ತಿದ್ದಾರೆ. ಆದರೆ, ವಿಧಾನಸಭೆಯಲ್ಲಿ ಅವರು ಉತ್ತರವನ್ನು ಕೊಟ್ಟಿಲ್ಲ. ನಾವು ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಆವತ್ತು ನಾನು ಅದರ ಬಗ್ಗೆ ಉತ್ತರ ಕೊಡಲು ಸಿದ್ದವಾಗಿದ್ದೆ. ಆದರೆ ತಾವೇ ಸೋಮವಾರ ಉತ್ತರ ಕೊಡಿಯೆಂದು ಹೇಳಿದಿರಿ.

ಶ್ರೀ ಸಿದ್ದರಾಮಯ್ಯ: ತಾವು ಉತ್ತರ ಕೊಡಿ. ಆದರೆ ಎಲ್ಲವನ್ನು ಹೊರಗಡೆಯೇ ಹೇಳಿಕೊಂಡು ಕುಳಿತುಕೊಂಡರೆ ಹೇಗೆ? ಇದಕ್ಕೆ ವಿರೋಧ ಪಕ್ಷದವರೇ ಕಾರಣ.....

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು): ನೀವೂ ಹೊರಗಡೆ ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ: ನಾವು ಹೇಳುವುದು ಬೇರೆ. ಸರ್ಕಾರ ನಡೆಸುವವರು ನೀವು. ಆದ್ದರಿಂದ ಉತ್ತರ ಕೊಡಬೇಕಾಗಿರುವವರು ನೀವು. ನಾನಲ್ಲಾ. It is your responsibility.

ಅಧ್ಯಕ್ಷರು: ಇದರ ಬಗ್ಗೆ ಮೊನ್ನೆ statement ಮಾಡುತ್ತೇನೆಂದು ಹೇಳಿದ್ದರು. ಇವತ್ತು ಅದನ್ನೂ ಮಾಡುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಚಾರ ಇದೆ.

ಅಧ್ಯಕ್ಷರು: ಹೌದು ನಿಮ್ಮದೂ ಮತ್ತು ಅವರದ್ದೂ ನಿಲುವಳಿ ಸೂಚನೆ ಬಂದಿದೆ. ಮಾನ್ಯ ಮುಖ್ಯಮಂತ್ರಿಯವರ ಉತ್ತರ ಆದಮೇಲೆ ಅವರದ್ದು ಮತ್ತು ನಿಮ್ಮದು ಎರಡನ್ನೂ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ: ಆಗಲಿ.

1. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಅತ್ಯಂತ ಅರ್ಥಪೂರ್ಣ ಚರ್ಚೆಯಾಗಿ, ಪ್ರತಿಪಕ್ಷದ ನಾಯಕರು ಮತ್ತು ಉಪನಾಯಕರು, ರೇವಣ್ಣನವರು, ಆ ಕಡೆ ಮತ್ತು ಈ ಕಡೆ ಇರುವಂಥ ಎಲ್ಲಾ ಸದಸ್ಯರುಗಳು ಮನಬಿಚ್ಚಿ ಮಾಡನಾಡಿದ್ದಾರೆ. ಅನೇಕ ಉಪಯುಕ್ತ ಸಲಹೆಗಳನ್ನೂ ಕೊಟ್ಟಿದ್ದಾರೆ. ಸದನ ಸೇರುವ ಮೊದಲು ಏನು ಒಪ್ಪಂದ ಆಗಿತ್ತು ಆ ರೀತಿ ಕಾರ್ಯಕಲಾಪ ನಡೆಯುವುದಕ್ಕೆ ಪ್ರತಿಪಕ್ಷದ ನಾಯಕರು ಮತ್ತು ನೀವೆಲ್ಲಾ ಸಹಕಾರ ಕೊಟ್ಟಿದ್ದೀರಿ. ಒಳ್ಳೆಯ ಸಂಪ್ರದಾಯ. ನಾವು ಅಧಿಕಾರಕ್ಕೆ ಬಂದ 14 ತಿಂಗಳ ನಂತರ ಈ ಸಂದರ್ಭದಲ್ಲಿ ಜನರು ಮೆಚ್ಚುವ ರೀತಿಯಲ್ಲಿ, ಒದೊಂದು ನಿಮಿಷವೂ ವ್ಯರ್ಥವಾಗದ ರೀತಿಯಲ್ಲಿ ಚರ್ಚೆಯಾಗಿದೆ. ಅದಕ್ಕಾಗಿ ನಾನು ನಿಮಗೆಲ್ಲಾ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪ್ರಾರಂಭದ ದಿವಸ ಈ ಚರ್ಚೆಗೆ ಅವಕಾಶ ಸಿಗದೆ ಅಡ್ಡಿಯಾಗುತ್ತಿದೆಯೋ ಎಂಬ ಭಾವನೆಯಿಂದ ನಾನು ಸ್ವಲ್ಪ ಆವೇಶಗೊಂಡು ದುಃಖ ಉಮ್ಮಳಿಸಿದ್ದು ನಿಜ. ಆದರೆ, ಇವತ್ತು ಅತ್ಯಂತ ಆನಂದ, ತೃಪ್ತಿ, ಸಮಾಧಾನದಿಂದ ಒಬ್ಬ ರೈತನ ಮಗನಾಗಿ ಉತ್ತರವನ್ನು ಇಲ್ಲಿ ನಿಂತುಕೊಂಡು ಕೊಡುತ್ತಿದ್ದೇನೆ. ನನಗೆ ಆಸೆ ಇದೆ, ನಮ್ಮ ಅಧ್ಯಕ್ಷರು ಮತ್ತು ಪ್ರತಿಪಕ್ಷದ ನಾಯಕರು ಸಹಕಾರ

ಮಾಡಿಕೊಟ್ಟರೆ ಪ್ರತಿಯೊಂದು ಪ್ರಮುಖ ಇಲಾಖೆಯ ಬಗ್ಗೆ ಅದು ವಿದ್ಯುತ್, ನೀರಾವರಿ, ಆರೋಗ್ಯ, ಸಮಾಜ ಕಲ್ಯಾಣ ಇಲಾಖೆ ಇರಲಿ, ಇದೇ ರೀತಿಯ ಸುದೀರ್ಘವಾದ ಚರ್ಚೆ ಒಂದು, ಎರಡು ದಿವಸವಾಗಬೇಕು. ಆದ್ದರಿಂದ, ನವೆಂಬರ್‌ನಲ್ಲಿ ಸುಮಾರು 20 ದಿವಸಗಳ ಕಾಲ, ಮಾನ್ಯ ಅಧ್ಯಕ್ಷರು ನಿಗದಿ ಮಾಡಿದ ದಿವಸದಿಂದ ಈ ರೀತಿ ಪ್ರಮುಖವಾದ ವಿಷಯಗಳ ಬಗ್ಗೆ ಚರ್ಚೆ ಮಾಡೋಣ. ತಾವು ಅದರ ಬಗ್ಗೆ ಬೆಳಕು ಚೆಲ್ಲಿ. ಅದರಿಂದ ಆಡಳಿತದಲ್ಲಿ ಸುಧಾರಣೆ ತರಲು ಸಾಧ್ಯವಾಗುತ್ತದೆ. ಗೊತ್ತಿದ್ದೋ, ಗೊತ್ತಿಲ್ಲದೆಯೋ ನಮ್ಮಲ್ಲಿ ಆಗುತ್ತಿರುವ ಲೋಪದೋಷಗಳನ್ನು ತಿದ್ದಿಕೊಂಡು, ಈ ನಾಡಿನ ಜನರೇನು ನಮಗೆ ಜವಾಬ್ದಾರಿಯನ್ನು ಹೊರಿಸಿ ಇಲ್ಲಿಗೆ ಕಳುಹಿಸಿದ್ದಾರೆ. ಆ ಕರ್ತವ್ಯವನ್ನು ನಿರ್ವಹಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಈ ಕಡೆಯಿಂದ ಮಾಡುತ್ತೇವೆ ಎಂಬ ಭರವಸೆಯನ್ನು ಈ ಮನೆಯ ಮೂಲಕ ನಾಡಿನ ಜನರಿಗೆ ಕೊಡಲು ಬಯಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷಗಳು ಸರಿಯಾದ ರೀತಿ ಜವಾಬ್ದಾರಿಯಿಂದ ನಡೆದುಕೊಂಡು ಚರ್ಚೆಯಲ್ಲಿ ಪಾಲ್ಗೊಂಡರೆ ಬಹಳಷ್ಟು ಒಳ್ಳೆಯ ಕೆಲಸವನ್ನು, ಬಹಳಷ್ಟು ಲೋಪದೋಷಗಳನ್ನು, ಬಹಳಷ್ಟು ಭ್ರಷ್ಟಾಚಾರದ ಹಗರಣಗಳನ್ನು ನಮ್ಮ ಅಧಿಕಾರಿಗಳಲ್ಲಿರುವ ಅಲಕ್ಷ್ಯತನವೇನಿದೆ, ಆಮೆ ವೇಗದಲ್ಲಿ ಕೆಲಸ ಮಾಡುವಂಥ ಪ್ರವೃತ್ತಿಯೇನಿದೆ, ನಾವು ನೀವು ಇಲ್ಲಿ ಬಡಿದಾಡುತ್ತಿರುವ ಲಾಭವನ್ನು ಮಧ್ಯವರ್ತಿಗಳು ಪಡೆಯುವಂಥ ಪರಿಸ್ಥಿತಿಯೇನಿದೆ. ಅದಕ್ಕೆ ಪರಿಹಾರ ಸಿಗಬಹುದು, ಸುಧಾರಣೆಯಾಗಬಹುದು, ಆ ದಿಕ್ಕಿನಲ್ಲಿ ನಾಲ್ಕು ಹೆಜ್ಜೆಗಳನ್ನಿಡಬಹುದೆಂದು ನನ್ನ ಭಾವನೆ. ನಾವು ಆಡಳಿತ ಪಕ್ಷದಲ್ಲಿ ಇದ್ದಾಕ್ಷಣ ವಿರೋಧ ಪಕ್ಷದವರು ಟೀಕೆ ಟಿಪ್ಪಣಿಗಳನ್ನೇ ಮಾಡಬಾರದು ಎಂಬುದಿಲ್ಲ. ನಿಮ್ಮದೇ ಆದ ಭಾಷೆಯಲ್ಲಿ ಸರ್ಕಾರಕ್ಕೆ ಬಿಸಿ ಮುಟ್ಟುವ ರೀತಿಯಲ್ಲಿ ಜಾಗೃತಿ ಮೂಡುವ ರೀತಿ ಮಾತನಾಡುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯ ನಿಮಗಿದೆ. ಆದಕ್ಕೆ ಪ್ರತಿಪಕ್ಷವಾಗಿ ನೀವು ಇರುವುದು. ನಾನು ಅಲ್ಲಿ ಕುಳಿತಿದ್ದಾಗ ಈ ಕೆಲಸವನ್ನು ಮಾಡಿದ್ದೇನೆ. ಆಗ ನಾನು ಬಹಳಷ್ಟು ಆಕ್ರೋಶಕ್ಕೆ ಒಳಗಾದ್ದದ್ದುಂಟು. ಕಾರಣ ಆಗ ನನ್ನ ಹಿಂದೆ ಸಂಖ್ಯೆ ಕಡಿಮೆ ಇತ್ತು. ಪ್ರಾಮಾಣಿಕವಾಗಿ ನಾನು ಒಪ್ಪಿಕೊಳ್ಳಬೇಕೆಂದರೆ ಈ ಮನೆಯಲ್ಲಿ ಇಬ್ಬರು ಇದ್ದಾಗ, ಬಹಳ influence

ಮಾಡಿ ನೀವು ಒಬ್ಬರನ್ನು ತೆಗೆದುಕೊಂಡು ಹೋದ ಮೇಲೆ ನಾನು ಒಬ್ಬನೇ ಇದ್ದಾಗಲೂ ಕೂಡ ಹಿಂದಿರುಗಿ ನೋಡದೆಯೇ ಆಗ ಮಾನ್ಯ ಸಿದ್ದರಾಮಣ್ಣನವರೇ ನಾನು ಮಾತನಾಡಿದ್ದುಂಟು. ಅದನ್ನು ನೀವು ಕುಳಿತು observe ಮಾಡಿದ್ದೀರಿ. ಅನೇಕ ಜನ ಹಿರಿಯ ಸದಸ್ಯರು ಅಂದು ನಮ್ಮ ಜೊತೆಗಿದ್ದವರಿಗೆ ನಮ್ಮ ಪರಿಸ್ಥಿತಿ ಏನಿತ್ತು ಎಂದು ಗೊತ್ತು. ಮಾನ್ಯ ವಸಂತ ಬಂಗೇರರವರು ನಗುತ್ತಿದ್ದಾರೆ. ನಾನು ಒಬ್ಬ ಇದ್ದಾಗ ಎಲ್ಲರೂ ಗಮನಿಸಿದ್ದಾರೆ. ಇವತ್ತು ನಾಡಿನ ಜನರ ಆಶೀರ್ವಾದದಿಂದ ಇಲ್ಲಿ ಕುಳಿತು ಕೆಲಸ ಮಾಡುವಂತಹ ಅವಕಾಶ ಸಿಕ್ಕಾಗ, ಪ್ರತಿಪಕ್ಷದವರು ಟೀಕೆಯನ್ನೇ ಮಾಡಬಾರದು ಎಂದು ನಾನು ನಿರೀಕ್ಷೆ ಮಾಡುವುದು ಸರ್ವಥಾ ಸರಿಯಲ್ಲ. ಖಂಡಿತಾ ನಿಮ್ಮ ಟೀಕೆಗಳಿಗೆ ಸ್ವಾಗತ ಇದೆ. ಆ ಟೀಕೆಗಳು ಸತ್ಯಾಂಶದಿಂದ ಕೂಡಿರಬೇಕು. ಸತ್ಯಕ್ಕೆ ಹತ್ತಿರವಿರಬೇಕು. ಅಷ್ಟೇ ನನ್ನ ವಿನಮ್ರವಾದ ಬಿನ್ನಹ. ಕೆಲವರು ಮೊಸರಿನಲ್ಲಿ ಇಲ್ಲದ ಕಲ್ಲನ್ನು ಹುಡುಕುವಂತಹ ಪ್ರಯತ್ನವನ್ನು ಮಾಡಿದ್ದೀರಿ, ಮಾಡುತ್ತಿದ್ದೀರಿ. ಅದು ಎಷ್ಟರಮಟ್ಟಿಗೆ ಸರಿ ಎಂದು ಇಲ್ಲಿ ಸುದೀರ್ಘವಾಗಿ ಚರ್ಚೆಗಳಾದಾಗ ಗೊತ್ತಾಗುತ್ತದೆ. ಆವೇಶದಲ್ಲಿ ನಾನೂ ಕೂಡ ಹೇಳಿದ್ದು ಉಂಟು. ಅಂಕಿ ಅಂಶಗಳನ್ನು ಹೇಳಬೇಕಾದರೆ ನಮಗೆ ಅನೇಕ ಸಂದರ್ಭದಲ್ಲಿ ಕೋಟಿ ರೂಪಾಯಿಗಳಿಗೆ ಬೆಲೆಯೇ ಇಲ್ಲ. ನಾವು ಗೊತ್ತಿಲ್ಲದ ಹಾಗೆ ನೂರಾರು ಕೋಟಿ, ಸಾವಿರಾರು ಕೋಟಿ ರೂಪಾಯಿಯ ಶಬ್ದಗಳನ್ನು ಉಪಯೋಗಿಸಿಬಿಡುತ್ತೇವೆ. ಮಾಧ್ಯಮದಲ್ಲಿ ಅದೇ ಬರುತ್ತದೆ. ನಮ್ಮನ್ನು ನಂಬಿ ಆಯ್ಕೆ ಮಾಡಿ ಕಳುಹಿಸಿರುವಂತಹ ಜನತೆಗೆ ಹೌದಾ ಇಷ್ಟೆಲ್ಲಾ ಅನಾಹುತ ಆಗುತ್ತಿದೆಯಾ ಎಂದು ಅನಿಸುತ್ತದೆ. ಹೌಸಿಂಗ್ ಬಗ್ಗೆ ಚರ್ಚೆಯಾದಾಗ ಈ ಅನುಭವ ನಿಮಗೂ ಬಂದಿದೆ. ನಮಗೂ ಬಂದಿದೆ. ಇದು ಆಗಬಾರದು. ವಾಸ್ತವಿಕ ಅಂಕಿ ಅಂಶಗಳ ಆಧಾರದ ಮೇಲೆ ದಾಖಲೆಯೊಂದಿಗೆ ಅಥವಾ ಸಂದರ್ಭ ಬಂದರೆ ನಮ್ಮನ್ನು ಸರಿ ದಾರಿಯಲ್ಲಿ ತೆಗೆದುಕೊಂಡು ಹೋಗುವ ಮಾಹಿತಿಯೊಂದಿಗೆ ಮಾನ್ಯ ರೇವಣ್ಣನವರೇ, ಈ ಒಂದು ಸದನದಲ್ಲಿ ಚರ್ಚೆ ಆಗಬೇಕು ಎನ್ನುವ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಯೀಲ್ಡ್ ಆಗುವುದಿಲ್ಲ. Sir,

please tell him. ರೇವಣ್ಣವರೆ, ನೀವು ಮಾತನಾಡುವಾಗ ನಾನು ಮಾಡನಾಡಿಲ್ಲ. ನಾನು ಇನ್ನೂ ಪ್ರಾರಂಭವೇ ಮಾಡಿಲ್ಲ.

ಕಳೆದ ವರ್ಷ ನೀವು ಯಾರೂ ಕೇಳದಿದ್ದರೂ ಸಹ ನಾನು ಜನತೆಗೆ ಪ್ರತಿ ನೂರು ದಿನಕ್ಕೊಮ್ಮೆ ನಮ್ಮ ಸಾಧನೆ ಬಗ್ಗೆ, ನಾವು ಮಾಡುವಂತಹ ಕೆಲಸ ಕಾರ್ಯದ ಬಗ್ಗೆ ಜನತಾ ನ್ಯಾಯಾಲಯದ ಮುಂದೆ ಎಂದರೆ ಜನರ ಮುಂದೆ ವರದಿಯನ್ನು ಒಪ್ಪಿಸುತ್ತೇನೆ ಎಂದು ಹೇಳಿದ್ದೇನೆ. ನೂರು ದಿವಸಗಳಿಗೊಮ್ಮೆ, ಇನ್ನೂರು ದಿವಸಗಳಿಗೊಮ್ಮೆ ಒಂದು ವರ್ಷದ ಸಾಧನೆಯನ್ನು ಜನರಿಗೆ ಒಪ್ಪಿಸುವಂತಹ ಪ್ರಯತ್ನ ನಾನು ಮಾಡಿದ್ದೇನೆ. ನನಗೆ ಅನಿಸುತ್ತದೆ ಹಿಂದೆ ಯಾವಾಗಲೂ ಮಾಡಿರಲಿಲ್ಲ. ಏಕೆ? ಕಾರಣವೇನೆಂದರೆ ಜನತೆಗೆ ವಾಸ್ತವಿಕ ವರದಿಯನ್ನು ಒಪ್ಪಿಸಿದಾಗ ಖರ್ಚಾಗಿರಬಹುದು, ಖರ್ಚು ಮಾಡದಿರಬಹುದು. ಅಭಿವೃದ್ಧಿಯಾಗಿರಬಹುದು, ಆಗದಿರಬಹುದು, ಕೆಲವು ಕ್ಷೇತ್ರದಲ್ಲಿ ಸಾಧನೆಯಾಗಿರಬಹುದು, ಕೆಲವು ಕ್ಷೇತ್ರದಲ್ಲಿ ಸಾಧನೆಯಾಗಿಲ್ಲದಿರಬಹುದು. ಆದರೆ ನಮ್ಮ ಅಧಿಕಾರಿಗಳು ಪ್ರತಿ ನೂರು ದಿನಗಳಿಗೊಮ್ಮೆ ಏನಾಗಿದೆ, ಏನಿಲ್ಲವೆನ್ನುವ ವಾಸ್ತವಿಕವಾದಂತಹ ಅಂಶವನ್ನು ಜವಾಬ್ದಾರಿಯಿಂದ ಕೊಟ್ಟಾಗ ಒಳ್ಳೆಯ ಕೆಲಸ ಮಾಡಿದ ಅಧಿಕಾರಿಗಳಿಗೆ ನಾವು ಬೆನ್ನು ತಟ್ಟಬಹುದು. ತಪ್ಪು ಮಾಡಿದವರು, ನಿರ್ಲಕ್ಷ್ಯ ಮಾಡಿದವರು ಎಚ್ಚರ ವಹಿಸಬಹುದು. ಈ ದೃಷ್ಟಿಯಿಂದ ಇದು ಬಹಳ ಉಪಕಾರಿಯಾಗಿದೆ. ಇದನ್ನು ಜನ ಒಪ್ಪಿದ್ದಾರೆ, ಮೆಚ್ಚಿದ್ದಾರೆ. ಈ ಒಂದು ಹೊಸ ಪದ್ಧತಿಯನ್ನು ಜನ ಒಪ್ಪಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಈ ವರ್ಷ ಸಹ ಸೆಪ್ಟೆಂಬರ್ 2009ರವರೆಗೆ ಆದ ಅರ್ಧ ವಾರ್ಷಿಕ ಪ್ರಗತಿಯ ವರದಿಯನ್ನು ಅಕ್ಟೋಬರ್ ತಿಂಗಳಿನಲ್ಲಿ ನಾನು ಜನರಿಗೆ ಒಪ್ಪಿಸುವವನಿದ್ದೇನೆ. ಆದರೂ ಸಹ ಸದನದಲ್ಲಿ ಚರ್ಚೆಯಾದ ಕೆಲವು ಪ್ರಮುಖ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಉತ್ತರವನ್ನು ಕೊಡುವಂಥದ್ದು ನನ್ನ ಕರ್ತವ್ಯ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ನಾವು ಮಾಡಿದಂತಹ ಕೆಲಸ ಕಾರ್ಯಗಳನ್ನು ಬೇರೆ ರಾಜ್ಯಗಳಿಗೆ ಹೋಲಿಸಿದಾಗ ದೇಶದಲ್ಲಿ ನಮ್ಮ ರಾಜ್ಯ ನಾಲ್ಕನೇ ಸ್ಥಾನದಲ್ಲಿದೆ. ಇದು ತೃಪ್ತಿ ತರುವಂಥದ್ದಲ್ಲ. ನಾಲ್ಕನೇ ಸ್ಥಾನದಲ್ಲಿದ್ದರೂ ಸಹ ಆಂಧ್ರಪ್ರದೇಶಕ್ಕೆ ಹೋಲಿಸಿದಾಗ, ಮಾನ್ಯ

ಜಯಚಂದ್ರರವರೆ, ಅವರು ಆರು ತಿಂಗಳಿಗೆ ಎರಡು ಸಾವಿರ ಚಿಲ್ಲರೆ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ ಎಂದಾಗ ನಾವು ಮೊನ್ನೆವರೆಗೂ ಖರ್ಚು ಮಾಡಿರುವುದು 442 ಕೋಟಿ ರೂಪಾಯಿ ಮಾತ್ರ. ಇದು ತುಲನೆ ಮಾಡುವುದಕ್ಕೆ ಬರುವುದಿಲ್ಲ. ಆದರೆ ನಾವು ಗಮನಿಸಬೇಕಾಗಿರುವುದು 2006-07ರಲ್ಲಿ ವರ್ಷಪೂರ್ತಿ 248 ಕೋಟಿ ರೂಪಾಯಿ ಖರ್ಚಾಗಿದೆ. 2007-08ರಲ್ಲಿ 233 ಕೋಟಿ ರೂಪಾಯಿ ಖರ್ಚಾಗಿದೆ ಎಂದರೆ ಕಡಿಮೆಯಾಯಿತು. 2008-09ರಲ್ಲಿ ವರ್ಷಪೂರ್ತಿ 358 ಕೋಟಿ ರೂಪಾಯಿ ಖರ್ಚಾಗಿದೆ. 2009-10ರಲ್ಲಿ September 12ರವರೆಗೆ 442 ಕೋಟಿ ರೂಪಾಯಿ ಖರ್ಚಾಗಿದೆ. ಇದು ಪ್ರಾಮಾಣಿಕವಾಗಿ, ಮಾನ್ಯ ರೋಷನ್‌ಬೇಗ್‌ರವರೆ, ನಮಗೆ ಸಮಾಧಾನವಾಗಿಲ್ಲ.

ಶ್ರೀ ಸಿದ್ದರಾಮಯ್ಯ: ಹಾಗೆ ಅದರ ಜೊತೆಜೊತೆಯಲ್ಲೇ 2006-07ರಲ್ಲಿ ಎಷ್ಟು ಹಣ ಲಭ್ಯ ಇತ್ತು? 2007-08, 2008-09ರಲ್ಲಿ ಎಷ್ಟು ಲಭ್ಯವಿತ್ತು? ಅದರಲ್ಲಿ ಎಷ್ಟು ಉಳಿಕೆಯಾಯಿತು ಎನ್ನುವುದನ್ನು ಹೇಳಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ವಿವರವನ್ನು ನೋಡಿದಾಗ ಹಿಂದಿನ ವರ್ಷಗಳಿಗಿಂತ ಈ ವರ್ಷ ಹೆಚ್ಚು ಪ್ರಗತಿಯಾಗಿದೆ. ಈ ಸಾರಿ ನೀವೆಲ್ಲ ಸಹಕಾರವನ್ನು ಕೊಟ್ಟರೆ ಕನಿಷ್ಠ 2,000 ಕೋಟಿ ರೂಪಾಯಿಯನ್ನು ಮುಟ್ಟಬೇಕೆಂದು ಪ್ರಯತ್ನವನ್ನು ಮಾಡಿದ್ದೇವೆ. ಕೇಂದ್ರದವರು ಹಣವನ್ನು ಬಿಡುಗಡೆ ಮಾಡುವುದಕ್ಕೂ ಕಾಯದೆ ರಾಜ್ಯ ಸರ್ಕಾರದ ಬೊಕ್ಕಸದಿಂದ 70 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ನಾನು ನಮ್ಮ ಹಣಕಾಸಿನ ಇಲಾಖೆಯವರಿಗೆ 70 ಕೋಟಿ ರೂ. ಅಲ್ಲ 170 ಕೋಟಿ ರೂ. ಆಗಲಿ ಕೆಲಸಗಳು ನಿಲ್ಲಬಾರದು. ಬಿಡುಗಡೆ ಮಾಡಬೇಕೆಂದು ಹೇಳಿದ್ದೆನು. ನಾವು ಕೇಂದ್ರಕ್ಕೆ ಮನವಿಯನ್ನು ಸಲ್ಲಿಸಿದ್ದು ಅವರು ನಮ್ಮ ಪ್ರಗತಿಯನ್ನು ಮೆಚ್ಚಿ ಕಳೆದ ವಾರ ಇನ್ನೂ 438 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಈ ಹಣವನ್ನೂ ಸಹ ಶೀಘ್ರದಲ್ಲೇ ಜಿಲ್ಲೆಗಳಿಗೆ ಬಿಡುಗಡೆ ಮಾಡಿ ಪ್ರಾಮಾಣಿಕವಾಗಿ ಹಣ ಉಪಯೋಗವಾಗುವ ರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತೇನೆ. ಆದ್ದರಿಂದ ಆ ಕಡೆ ಕುಳಿತು ಪ್ರತಿಪಕ್ಷದ ನಾಯಕರು ಮಾತನಾಡುವಂತಹ

ಕಾಲದಲ್ಲಿ ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ ಇಷ್ಟಾಗಿದೆ. ಇನ್ನೂ ಹೆಚ್ಚಾಗಬೇಕೆಂದು ನೀವು ಅಪೇಕ್ಷೆ ಪಡುವುದರಲ್ಲಿ ಏನೂ ತಪ್ಪಿಲ್ಲ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ನಾನು ಅಧಿಕಾರಕ್ಕೆ ಬಂದ ತಕ್ಷಣ ಈ ಮನೆಗೆ ಒಂದು ಭರವಸೆಯನ್ನು ಕೊಟ್ಟಿದ್ದೆನು. ವಿದ್ಯುತ್ ಅಭಾವದಿಂದ ರಾಜ್ಯದ ಅಭಿವೃದ್ಧಿ ಏನು ಕುಂಠಿತವಾಗುತ್ತಿದೆ. ಈ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು, ಗಮನವನ್ನು ಕೊಡುತ್ತೇವೆನ್ನುವ ಭರವಸೆಯನ್ನು ನಾನು ಕೊಟ್ಟಿದ್ದೇನೆ. ಮಾನ್ಯ ಸಿದ್ದರಾಮಣ್ಣನವರೆ, ಯಾವುದೇ ಒಂದು ಯೋಜನೆಯನ್ನು ತಮಗೆ ಗೊತ್ತಿರುವ ಹಾಗೆ ಅದರಲ್ಲೂ ವಿದ್ಯುತ್ ಕ್ಷೇತ್ರದಲ್ಲಿ 14–15 ತಿಂಗಳಲ್ಲಿ ಸಾಧನೆ ಮಾಡಿ ತೋರಿಸಿಬಿಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಸಮಯ ಬೇಕಾಗುತ್ತದೆ. ದೀರ್ಘಕಾಲದ ಯೋಜನೆಗಳು, ದೂರದೃಷ್ಟಿ ಇರಬೇಕಾಗುತ್ತದೆ. ಇವುಗಳ ಬಗ್ಗೆ ಚಿಂತನೆ ಇದ್ದಿದ್ದರೆ ಇವತ್ತು ವಿದ್ಯುತ್ ಅಭಾವವನ್ನು ಎದುರಿಸುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ನಮಗೆ ಅವಕಾಶಗಳೇ ಇರಲಿಲ್ಲವೆಂದು ಇಲ್ಲ. ಆದರೆ ಎಲ್ಲೋ ಒಂದು ಕಡೆ ಈ ಬಗ್ಗೆ ಗಂಭೀರ ಚಿಂತನೆಯಾಗಲಿಲ್ಲ. ಕಳೆದ ಕೆಲವು ವರ್ಷಗಳಿಂದ ವಿದ್ಯುತ್ ಕೊರತೆ ಶೇಕಡ 20ಕ್ಕೂ ಹೆಚ್ಚು ಮೀರಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಆದ್ಯತೆಯನ್ನು ನೀಡಿ ಪ್ರಪ್ರಥಮ ಬಾರಿಗೆ ಕೆಪಿಸಿಎಲ್‌ಗೆ 500 ಕೋಟಿ ರೂಪಾಯಿ ಷೇರು ಬಂಡವಾಳವಾಗಿ ನಾವು ಕೊಟ್ಟಿದ್ದೇವೆ. ಅನುಷ್ಠಾನದಲ್ಲಿದ್ದಂತಹ ವಿದ್ಯುತ್ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವುದಕ್ಕೋಸ್ಕರ 2008–09ರಲ್ಲಿ ಹಿಂದಿನ ಸರ್ಕಾರಗಳ ಶ್ರಮದ ಜೊತೆಗೆ ಸೇರಿ 1,252 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಸಾಮರ್ಥ್ಯವನ್ನು ಕಲ್ಪಿಸಲಾಗಿದೆ. 2008–09ರ ಸಾಲಿನಲ್ಲಿ 1300 ಮೆ.ವ್ಯಾ. ವಿದ್ಯುತ್ ಅನ್ನು ಉತ್ಪಾದನೆ ಮಾಡುವುದಕ್ಕೆ, ಸಾಮರ್ಥ್ಯ ಹೆಚ್ಚಿಸುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡಿಯೇ ಮಾಡುತ್ತೇವೆ. ಒಟ್ಟಿನಲ್ಲಿ ಈ ಮನೆಯ ಮೂಲಕ ನಾಡಿನ ಜನರಿಗೆ ಭರವಸೆಯನ್ನು ಕೊಡುತ್ತೇನೆ; ಮುಂದಿನ ಚುನಾವಣೆಗೆ ಹೋಗುವ ಮುನ್ನ, ಈ ಅವಧಿ ಮುಗಿಯುವುದಕ್ಕಿಂತ ಮುನ್ನ 5000 ಮೆ.ವ್ಯಾ. ವಿದ್ಯುತ್ ಅನ್ನು ಉತ್ಪಾದಿಸುವ ಸಾಮರ್ಥ್ಯ ಹೆಚ್ಚಿಸುತ್ತೇವೆ

11.30 A.M.

ಎನ್ನುವ ಭರವಸೆಯನ್ನು ಕೊಡುತ್ತೇವೆ. ನೂರಕ್ಕೆ ನೂರು ಆ ಸಾಧನೆಯನ್ನು ಮಾಡಿ ತೋರಿಸುತ್ತೇವೆ ಎನ್ನುವ ಭರವಸೆಯನ್ನು ಈ ನಾಡಿನ ಜನರಿಗೆ ಈ ದಿಸೆಯಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಚಪ್ಪಾಳೆ ಯಾವುದೂ ಬೇಡ. ಅವರು ಮೌನವಾಗಿ ಕೇಳುತ್ತಿದ್ದಾರೆ. ಸಾಧನೆಯಾದ ಮೇಲೆ ಮಾಡೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಸಾಧನೆ ಮಾಡಿದ್ದರೆ ಅಭಿನಂದಿಸಲು ನಾವು ತಯಾರಿದ್ದೇವೆ. ಆದರೆ, ಮಾಡದಿರುವ ಸಾಧನೆಯನ್ನು ಮಾಡಿದ್ದೇವೆಂದು ಹೇಳುತ್ತೀರಲ್ಲ?

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ: ಹೇಳುವುದಕ್ಕೆ ನಿಮಗೇನೂ ಕಾರಣವಿಲ್ಲ. ಅವರು ಹೇಳಿದ ಮೇಲೆ ಮಾಡಿಯೇ ಮಾಡುತ್ತಾರೆ. wait ಮಾಡಿ ಸ್ವಲ್ಪ.

(ಗೊಂದಲ)

ಅಧ್ಯಕ್ಷರು: ವಿರೂಪಾಕ್ಷಪ್ಪನವರೆ ಕುಳಿತುಕೊಳ್ಳಿ. ಅವರು yield ಆಗಿಲ್ಲ, ಅವರು ಉತ್ತರ ಕೊಟ್ಟ ಮೇಲೆ ಮಾತನಾಡಿ. ವಿರೂಪಾಕ್ಷಪ್ಪನವರೆ, argument ಮಾಡಬೇಡಿ. ಏನಾದರೂ ಮಾತನಾಡುವುದಿದ್ದರೆ ಆಮೇಲೆ ಮಾತನಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಇವರು ಹೇಳುವುದು ಹೇಗಿದೆ ಎಂದರೆ, ರೈತರಿಗೆ ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿದರಲ್ಲ, ಆ ತರಹ ಸತ್ಯವನ್ನು ಈಗ ಹೇಳುತ್ತಿದ್ದಾರೆ. ಆ ತರಹ ಸತ್ಯ ದಯಮಾಡಿ ಹೇಳಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: 1252 ಮೆ.ವ್ಯಾ. ವಿದ್ಯುತ್ ಅನ್ನು ಕಳೆದ ಒಂದು ವರ್ಷದಲ್ಲಿ ಉತ್ಪಾದನೆ ಮಾಡಿದ್ದೇವೆ ಎಂದು ಹೇಳಿದರು. ಅದರ ವಿವರ ಕೊಟ್ಟರೆ ಒಳ್ಳೆಯದು. ಅದು ಎಲ್ಲಿಂದ ಬಂದಿದೆ? ಯಾವಾಗ ಪ್ರಾರಂಭವಾಯಿತು? ಆ project ಅನ್ನು ನೀವು ಯಾವಾಗ ಮಾಡಿದಿರಿ?

ಅದನ್ನು ಹೇಳಬೇಕು. ಬಳ್ಳಾರಿ ಶಾಖೋತ್ಪಾದನೆ ಘಟಕವನ್ನು ಉದ್ಘಾಟನೆ ಮಾಡಿ, 500 ಮೆ.ವ್ಯಾ. ವಿದ್ಯುತ್ ಅನ್ನು ನಮ್ಮ ಸರ್ಕಾರ ಮಾಡಿದೆ ಎಂದು ನೀವು ಬೆನ್ನು ತಟ್ಟಿಕೊಳ್ಳುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಎದ್ದು ನಿಂತಿದ್ದಾರೆ, ಅವರು ಉತ್ತರ ಕೊಟ್ಟ ನಂತರ ತಾವು ಏನಾದರೂ ಕೇಳುವುದಿದ್ದರೆ ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇಂಧನ ಬಗ್ಗೆ ವಿಶೇಷ ಚರ್ಚೆ ಮಾಡೋಣವೆಂದು ಈಶ್ವರಪ್ಪನವರು ಹೇಳಿದ್ದರು. ಈಗ ಸುಮ್ಮನಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು): ನವೆಂಬರ್ ತಿಂಗಳಿನಲ್ಲಿ ವಿಶೇಷ ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ: ನಾಳೆಯೋ, ನಾಡಿದ್ದೋ ಚರ್ಚೆ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ರಾಜ್ಯದ ಇತಿಹಾಸದಲ್ಲಿ ಮೊದಲ ಸಾರಿ ಛತ್ತೀಸ್‌ಘಡಕ್ಕೆ ಹೋಗಿ 2400 ಮೆ.ವ್ಯಾ. ವಿದ್ಯುತ್ ಅನ್ನು ಉತ್ಪಾದನೆ ಮಾಡುವುದಕ್ಕೆ MOU ಗೆ ಸಹಿ ಮಾಡಿ, ಅಲ್ಲಿ ಜಮೀನುಗಳನ್ನು ಕೊಳ್ಳುವಂಥ ಪ್ರಕ್ರಿಯೆ ಪೂರ್ಣ ಮಾಡಿದ್ದು, ಇನ್ನೊಂದೆರಡು ತಿಂಗಳಲ್ಲಿ ಆ ಕೆಲಸವನ್ನು ಶುಭಾರಂಭ ಮಾಡುವುದಕ್ಕೆ ಎಲ್ಲಾ ರೀತಿಯ ಸಿದ್ಧತೆ ನಡೆದಿದೆ. ಬಳ್ಳಾರಿಯಲ್ಲಿ 3ನೇ ಹಂತದ 500 ಮೆ.ವ್ಯಾ. ವಿದ್ಯುತ್ ಉತ್ಪಾದನೆಗೆ ಕೆಲಸ ಪ್ರಾರಂಭವಾಗಿದೆ. ಯಡ್ಲಾಪುರದಲ್ಲಿ 800 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ. ಕೂಡಿಗೆಯಲ್ಲಿ 4200 ಮೆ.ವ್ಯಾ. ತದಡಿಯಲ್ಲಿ ಅನಿಲ ಆಧಾರಿತ ವಿದ್ಯುತ್ ಉತ್ಪಾದನೆಯಲ್ಲಿ 2100 ಮೆ.ವ್ಯಾ. ಯರಮರಸ್‌ನಲ್ಲಿ 1600 ಮೆ.ವ್ಯಾ., ಗುಂಡ್ಯಾ ಜಲ ವಿದ್ಯುತ್‌ನಲ್ಲಿ 800 ಮೆ.ವ್ಯಾ. ನವೀಕರಿಸುವಂಥ ಇಂಧನ ಯೋಜನೆಗಳಿಂದ 1000 ಮೆ.ವ್ಯಾ. ಹೀಗೆ ಖಾಸಗಿ ಕ್ಷೇತ್ರದಲ್ಲಿಯೂ ವಿದ್ಯುತ್ ಉತ್ಪಾದನೆಗೆ ಅನುಮೋದನೆ ನೀಡಿದ ಯೋಜನೆಗಳನ್ನು ಸೇರಿಸಿದರೆ,

ಭಗವಂತ ಎಲ್ಲವನ್ನೂ ಸರಿಯಾಗಿ ನಡೆಸಿದರೆ, ಮುಂದಿನ ಕೆಲವೇ ವರ್ಷಗಳಲ್ಲಿ ಸುಮಾರು 20,000 ಮೆ.ವ್ಯಾ. ಹೆಚ್ಚುವರಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಸೃಷ್ಟಿಸುವುದಕ್ಕೆ ಅವಕಾಶವಿದೆ. ಮಾಡಿಬಿಡುತ್ತೇವೆಂದು ಬೆನ್ನು ತಟ್ಟಿಕೊಳ್ಳುವುದಕ್ಕೆ ನಾನ್ಯಾರು? ಅವಕಾಶವಿದೆ. ಕಳೆದ ವರ್ಷ ಕಷ್ಟದ, ಬರಗಾಲದ ಸಮಯವಾಗಿತ್ತು. ರಾಜ್ಯದಲ್ಲಿ ವಿದ್ಯುತ್ ಕೊರತೆಯನ್ನು ಬಹಳ ಗಂಭೀರವಾಗಿ ಎದುರಿಸಬೇಕಾಯಿತು. ಹೊರ ರಾಜ್ಯದಿಂದ ವಿದ್ಯುತ್ ಖರೀದಿ ಮಾಡಿ ರಾಜ್ಯಕ್ಕೆ ವಿತರಣೆ ಮಾಡಬೇಕಾಯಿತು. 2004–05ರಲ್ಲಿ ವಿದ್ಯುತ್ ಕ್ಷೇತ್ರಕ್ಕೆ ಸರ್ಕಾರ ನೀಡಿದ ಅನುದಾನ 2,040 ಕೋಟಿ ರೂ. ಆಗಿದ್ದರೆ, 2005–06ರಲ್ಲಿ 1901 ಕೋಟಿ ರೂ. ಕೊಟ್ಟಿತ್ತು. ನಮ್ಮ ಅವಧಿಯಲ್ಲಿ ಅಂದರೆ 2008–09ರಲ್ಲಿ ಈ ಕ್ಷೇತ್ರಕ್ಕೆ 2,926 ಕೋಟಿ ರೂ.ಗಳ ಅನುದಾನವನ್ನು ನೀಡಿದ್ದೇವೆ. ಸಿದ್ದರಾಮಯ್ಯನವರು, ಪ್ರತಿಪಕ್ಷದವರು ಮೆಚ್ಚಬೇಕಾದ ಅಂಕಿ ಅಂಶವನ್ನು ಹೇಳುತ್ತೇನೆ ಅಥವಾ ನಿಮಗೆ ಸಮಾಧಾನವಾಗುವಂಥ ಅಂಕಿ ಅಂಶವನ್ನು ಹೇಳುತ್ತೇನೆ. ಬಡವರಿಗೆ ಬೇಕಾದ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಯೋಜನೆಯಲ್ಲಿ 2004–05ರಲ್ಲಿ ಕೇವಲ 65,445 ಮನೆಗಳಿಗೆ ಸಂಪರ್ಕ ನೀಡಿದ್ದರೆ, 2005–06ರಲ್ಲಿ 35,076 ಮನೆಗಳಿಗೆ ಈ ಸೌಲಭ್ಯ ನೀಡಲಾಗಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಅಂದರೆ 2008–09ರಲ್ಲಿ 2 ಲಕ್ಷದ 67 ಸಾವಿರದ 798 ಮನೆಗಳಿಗೆ ಸೌಲಭ್ಯ ಕಲ್ಪಿಸಿದ್ದೇವೆ. ರೇವಣ್ಣನವರೆ, this is not correct.

(ಗೊಂದಲ)

ಶ್ರೀ ಸಿದ್ದರಾಮಯ್ಯ: 2004–05ರಲ್ಲಿ ಇದ್ದ ತಾವು ಆ ಯೋಜನೆ ಹೆಸರು ಹೇಳಬೇಕು. ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆ ಜಾರಿಯಲ್ಲಿತ್ತು. ಕೇಂದ್ರ ಸರ್ಕಾರದಿಂದ ಎಷ್ಟು ಬಂದಿದೆ? ಅದನ್ನು ಹೇಳಬೇಕು. ಎರಡು ವರ್ಷಗಳಲ್ಲಿ ಎಷ್ಟು ಕೊಟ್ಟಿದ್ದೀರಿ ಅದನ್ನು ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ದಯಮಾಡಿ, ಯಾವ್ಯಾವಾಗ ಎಂದು ಹೇಳಿ. ಕೇಂದ್ರ ಸರ್ಕಾರದಿಂದ 9%, 10% ಪರ್ಸೆಂಟೋ ಎಂದು ಹೇಳಿ.

(ಗೊಂದಲ)

ಅಧ್ಯಕ್ಷರು: ರೇವಣ್ಣ, ಜಯಚಂದ್ರರವರೆ, ಅವರು complete ಮಾಡಿದ ನಂತರ ತಾವು ಸ್ಪಷ್ಟೀಕರಣ ಕೇಳಬಹುದು. ಮಾನ್ಯ ಮುಖ್ಯಮಂತ್ರಿಯವರು yield ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: I am very sorry. ನಾನು yield ಆಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ರಾಜ್ಯದ ಅಭಿವೃದ್ಧಿಗೆ ಕೇಂದ್ರ, ರಾಜ್ಯ ಸರ್ಕಾರದ ಪಾಲೂ ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಪೂರ್ತಿ ಮಾತನಾಡುವುದಕ್ಕೂ ಬಿಡುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮುಖ್ಯಮಂತ್ರಿಯವರು ಹೇಳುವವರೆಗಾದರೂ ಕಾಯಿರಿ. ಅವರೇನು ಹೇಳುತ್ತಾರೆನ್ನುವುದನ್ನು ಕೇಳಿ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರ complete ಮಾಡಲಿ. ಆಮೇಲೆ, ತಮ್ಮ ಸ್ಪಷ್ಟೀಕರಣ ಇದ್ದರೆ ಕೇಳಿ. ನಿಮಗೆಲ್ಲ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಹೇಳಿದ ಹಾಗೆ ಉತ್ತರ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಏನು ಉತ್ತರ ಕೊಡುತ್ತಾರೆನ್ನುವುದನ್ನು ಕೇಳಿ. ನಂತರ ಏನಾದರೂ ಸ್ಪಷ್ಟೀಕರಣ ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಜನರಿಗೆ ಸರಿಯಾದ ಸಂದೇಶ ಹೋಗಬೇಕು. ಈ ರಾಜ್ಯದ ಮುಖ್ಯಮಂತ್ರಿಯಾಗಿ ಹೇಳಬೇಕು. What we expect from the Government is....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: It is not correct. ನಾನು ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಕೇಂದ್ರ ಸರ್ಕಾರದ ಕಾರ್ಯಕ್ರಮ ಯಾವುದು? ಯಾವ ಕಾರ್ಯಕ್ರಮದಲ್ಲಿ ಎಷ್ಟು ಖರೀದಿ ಮಾಡಿದ್ದಾರೆ? ಯಾವ ಕಾರ್ಯಕ್ರಮದಡಿಯಲ್ಲಿ ವಿದ್ಯುತ್ ಕೊಟ್ಟಿದ್ದಾರೆ? ಹಣ ಯಾರು ಕೊಟ್ಟರು? ಎಷ್ಟು ಖರ್ಚಾಗಿದೆ? ಎಲ್ಲಾ ಹೇಳಬೇಕು.

(ಗೊಂದಲ)

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ಮುಖ್ಯಮಂತ್ರಿಯವರು yield ಆಗಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ಕೊಟ್ಟಿರತಕ್ಕಂಥ target ಎಷ್ಟು? ರಾಜ್ಯದ ಪಾಲು ಎಷ್ಟು? ಕೇಂದ್ರ ಸರ್ಕಾರದ ಪಾಲು ಎಷ್ಟು?

(ಗೊಂದಲ)

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಉತ್ತರ ಕೊಡಲು ಅವಕಾಶ ಕೊಟ್ಟಿದ್ದೇನೆ. ಅವರು

ಹೇಳುವುದರಲ್ಲಿ ಏನಾದರೂ ಮಾಹಿತಿ ಬಿಟ್ಟಿದ್ದರೆ ನಂತರ ನೀವು ಕೇಳಿ. ನೀವು ಅವರಿಗೆ opportunity ಕೊಡಿ. ನೀವು ಮಾತನಾಡುವಾಗ ಅವರು intervention ಮಾಡಿದ್ದಾರೆಯೇ? ಯಾರೂ ಮಾಡಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು ಹೇಳುವುದು ಬೇರೆ. ಸರ್ಕಾರದ ಕಡೆಯಿಂದ ಮುಖ್ಯಮಂತ್ರಿಯವರು ಹೇಳುವಾಗ ಸತ್ಯ, ವಾಸ್ತವಾಂಶವನ್ನು ಹೇಳಬೇಕು. ಅದು ಬಿಟ್ಟು ಸುಮ್ಮನೆ ನಾವು ಮಾಡಿದ್ದೇವೆ, ನಾವು ಮಾಡಿದ್ದೇವೆ ಎಂದರೆ ಏನರ್ಥ?

(ಗೊಂದಲ)

ಅಧ್ಯಕ್ಷರು: ಸಿದ್ದರಾಮಯ್ಯವರೆ, ತಾವು ಮಾತನಾಡುವಾಗ ಅವರ್‍ಯಾರೂ intervene ಮಾಡಿಲ್ಲ. ಮುಖ್ಯಮಂತ್ರಿಯವರು ಮೊದಲು complete ಮಾಡಲಿ. ಯಾವುದಾದರೂ ವಿಷಯ ಬಿಟ್ಟಿದ್ದರೆ ನೀವು ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: As a matter of fact, this Government is implementing Rajiv Gandhi Rural Electrification Scheme.

(ಗೊಂದಲ)

ಅಧ್ಯಕ್ಷರು: ಸಿದ್ದರಾಮಯ್ಯನವರೆ, ಅವರು yield ಆಗಿಲ್ಲ. ಮುಖ್ಯಮಂತ್ರಿಯವರು complete ಮಾಡಲಿ. ಏನಾದರೂ ಮಾಹಿತಿ ಸರಿಯಿರದಿದ್ದರೆ ಮತ್ತೆ ಅದನ್ನು ಹೇಳಲಿಕ್ಕೆ ತಮಗೆ ಅವಕಾಶ ಇದ್ದೇ ಇದೆ. ತಾವು ಮಾತನಾಡುವಾಗ ಅವರೆಲ್ಲರೂ ಸುಮ್ಮನೆ ಕುಳಿತಿದ್ದರು. ಈಗ ಮಾನ್ಯ ಮುಖ್ಯಮಂತ್ರಿಯವರು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು: ರೇವಣ್ಣನವರೆ, please ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರು continue ಮಾಡಲಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ನಮಗೆ allotment ಆದ 1500 M.W. ನಲ್ಲಿ 1000 M.W. ಕೂಡ ಕೊಟ್ಟಿಲ್ಲ. ಕೇಂದ್ರ ಸರ್ಕಾರ ನಮಗೆ ದ್ರೋಹ ಮಾಡಿದೆ. ಇದರ ಬಗ್ಗೆ ಯಾರೂ ಮಾತನಾಡುತ್ತಿಲ್ಲವಲ್ಲ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅದರ ಬಗ್ಗೆಯೂ ಚರ್ಚೆ ಮಾಡೋಣ, ಬನ್ನಿ. ಕೇಂದ್ರ ಸರ್ಕಾರದಿಂದ ಎಷ್ಟು ತೆಗೆದುಕೊಳ್ಳಲಿಕ್ಕಾಗಲಿಲ್ಲವೆನ್ನುವುದನ್ನೂ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಮುಖ್ಯಮಂತ್ರಿಯವರು ನಿಮ್ಮ ಸಹಕಾರದಿಂದಲೂ ಮಾಡಿದ್ದೇವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರವನ್ನು ಮುಂದುವರೆಸಲಿ.

ಶ್ರೀ ಕೆ.ಎಸ್. ಈಶ್ವರಪ್ಪ: ಕೇಂದ್ರ ಸರ್ಕಾರ ಹೇಗೆ ಹೇಗೆ ದ್ರೋಹ ಮಾಡಿದೆ, ರಾಜ್ಯಕ್ಕೆ ಬರಬೇಕಾದ್ದನ್ನು ಕೊಟ್ಟಿಲ್ಲ. ತಮಿಳುನಾಡಿಗೆ, ಆಂಧ್ರಕ್ಕೆ ಹೇಗೆ ಕೊಡುತ್ತಿದ್ದಾರೆ, ಅದರ ಬಗ್ಗೆ ನೀವ್ಯಾರೂ ಪ್ರಸ್ತಾಪವೇ ಮಾಡಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಕೇಂದ್ರ ಸರ್ಕಾರ ಕೊಟ್ಟಿರುವ ಹಣವನ್ನು ನಿಮ್ಮ ಸರ್ಕಾರದಿಂದ ಖರ್ಚು ಮಾಡುವುದಕ್ಕಾಗುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಯಾವುದು ಖರ್ಚಾಗಿಲ್ಲ? ಎಲ್ಲಾ ಮಾಡಲಾಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: NREGS ಹಣ ಖರ್ಚು ಮಾಡುವುದಕ್ಕಾಗಲಿಲ್ಲ. ವಿದ್ಯುದ್ದೀಕರಣದಲ್ಲಿ ಹಣ ಖರ್ಚು ಮಾಡಲಿಕ್ಕಾಗಲಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಯಾವ್ಯಾವುದಕ್ಕೆ ಹಣ ಬಂದಿದೆ? ನಿಮಗೆ ತೋರಿಸುತ್ತೇವೆ.

(ಗೊಂದಲ)

ಅಧ್ಯಕ್ಷರು: ಈಶ್ವರಪ್ಪನವರೆ, ರೇವಣ್ಣನವರೆ, please ಕುಳಿತುಕೊಳ್ಳಿ. ಮುಖ್ಯಮಂತ್ರಿಯವರ ಉತ್ತರ complete ಮಾಡಲಿ. ಈಗ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಉತ್ತರ ಕೊಡಲು ಅವಕಾಶ ಕೊಟ್ಟಿದ್ದೇನೆ. ಅವರು yield ಆಗಿಲ್ಲ. ಅವರು complete ಮಾಡಲಿ. ಯಾರಾದರೂ ಏನಾದರೂ ಸ್ಪಷ್ಟೀಕರಣ ಕೇಳುವುದಿದ್ದರೆ ನಂತರ ಕೇಳಿ. ಈಶ್ವರಪ್ಪನವರೆ, ಜಯಚಂದ್ರರವರೆ, please ಕುಳಿತುಕೊಳ್ಳಿ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ಈಶ್ವರಪ್ಪನವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಾ?

(ಗೊಂದಲ)

ಅಧ್ಯಕ್ಷರು: Please, ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಈ ರೀತಿ ಪರಸ್ಪರ ಮಾತನಾಡಬಾರದು.

ಶ್ರೀ ಸಿದ್ದರಾಮಯ್ಯ: ವಿದ್ಯುದ್ದೀಕರಣಕ್ಕೆ ಹಣ ಕೊಡುವವರು ಯಾರು? ಎಷ್ಟು ಬರುತ್ತದೆ? ಎಷ್ಟು ಹಣ ಖರ್ಚಾಗಿದೆ ಅದನ್ನೂ ಹೇಳಲಿ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ರೇವಣ್ಣನವರೆ, ನಾಯ್ಡುರವರೆ ದಯವಿಟ್ಟು ಕುಳಿತುಕೊಳ್ಳಿ. ನೀವೂ ಸಹ ಈ ರೀತಿ behave ಮಾಡಿದರೆ ಹೇಗೆ? ಇದು ಸರಿಯಲ್ಲ. ಇದು ನನಗೆ ಅರ್ಥವಾಗುತ್ತಿಲ್ಲ. ನೀವು senior Leaders ಆಗಿ ಈ ರೀತಿ behave ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಕೇಂದ್ರ ಸರ್ಕಾರಕ್ಕೆ ಕಣ್ಣಿಲ್ಲ, ಕಿವಿ ಇಲ್ಲ, ಮೂಗು ಇಲ್ಲ, ಹೃದಯವಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಕೇಂದ್ರ ಸರ್ಕಾರ ದ್ರೋಹ ಮಾಡಿದೆ ಎಂದು ಹೇಳಿರುವ ಮಾತನ್ನು, ಪದವನ್ನು ಈಶ್ವರಪ್ಪನವರು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಕೇಂದ್ರ ಸರ್ಕಾರಕ್ಕೆ ಕಣ್ಣಿಲ್ಲ, ಮೂಗು ಇಲ್ಲ, ಹೃದಯ ಇಲ್ಲ, ರಾಜ್ಯದ ಜನರು ಸಾಯುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಈ ರೀತಿ ಕೇಂದ್ರ ಸರ್ಕಾರದ ಮೇಲೆ ಹೇಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ಈ ರೀತಿ ಎಲ್ಲರೂ behave ಮಾಡಿದರೆ ನಾನು ಸದನವನ್ನು ಹೇಗೆ ನಡೆಸುವುದು?

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಯಾರ್‍ಯಾದರೂ ಒಂದು ಮಾತಾದರೂ ಆಡಿದ್ದೀರಾ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ನೀವು ಯಾವುದೋ ಹೇಳುತ್ತೀರಿ. ನೀವು ಅವರ ದಾರಿತಪ್ಪಿಸುತ್ತಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ದಾರಿ ತಪ್ಪಿಸುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಈಶ್ವರಪ್ಪನವರೆ, ಆಮೇಲೆ ನೀವೂ ಮಾತನಾಡಿ, ಅವರೂ ಮಾತನಾಡಲಿ. ಈಗ ಎಲ್ಲರೂ ಪರಸ್ಪರ ಈ ರೀತಿ ಮಾತನಾಡಿದರೆ ನಾನು ಹೇಗೆ ಸದನ ನಡೆಸುವುದು? ಯಾರೂ ಮಾತನಡಲು ಸಭಾಧ್ಯಕ್ಷರ ಒಪ್ಪಿಗೆ ತೆಗೆದುಕೊಳ್ಳುವುದಿಲ್ಲ. ಎಲ್ಲರೂ ಎದ್ದು ನಿಂತು ಪರಸ್ಪರ ಮಾತನಾಡುತ್ತೀರಿ. ಇದು ಸರಿಯಲ್ಲ. ಸಭಾಧ್ಯಕ್ಷರು ಎದ್ದು ನಿಂತಾಗ ಸದಸ್ಯರು ಕುಳಿತುಕೊಳ್ಳಬೇಕೆನ್ನುವುದು ಯಾರಿಗೂ ಗೊತ್ತಿಲ್ಲ. ಸಭಾಧ್ಯಕ್ಷರು ಎದ್ದು ನಿಂತು ಎಲ್ಲರನ್ನೂ ಕುಳಿತುಕೊಳ್ಳಿ ಎಂದು ಹೇಳಿದಾಗ ಯಾರೂ ಕುಳಿತುಕೊಳ್ಳುವುದಕ್ಕೆ ತಯಾರಿಲ್ಲ. ತಾವೆಲ್ಲ seniors ಇದ್ದೀರಿ. ಈ ರೀತಿ behave ಮಾಡಿದರೆ ನಾನು ಸದನ ಹೇಗೆ ನಡೆಸಬೇಕು? ಜಯಚಂದ್ರರವರೆ, ನೀವೇ ಪರಸ್ಪರ ಮಾತನಾಡಿಕೊಳ್ಳಿ. ಗುತ್ತೇದಾರ್‌ರವರೆ, ದಯವಿಟ್ಟು ಕುಳಿತುಕೊಳ್ಳಿ. ನಾನು ಮುಖ್ಯಮಂತ್ರಿಯವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಹೇಳಿದ ನಂತರ ಏನಾದರೂ ಮಾಹಿತಿ ಸರಿಯಿಲ್ಲವೆಂದರೆ ನೀವು ಸ್ಪಷ್ಟೀಕರಣ ಕೇಳಬಹುದು. ಅದು ಬಿಟ್ಟು ಪದೇ ಪದೇ ನೀವು ಇದೇ ರೀತಿ reply ಕೊಡಬೇಕೆಂದು ಹೇಳಲಿಕ್ಕೆ ಆಗುತ್ತದೆಯೇ? ಅವರು ಏನು ಮಾಹಿತಿ ಕೊಡುತ್ತಾರೋ ಕೊಡಲಿ.

ಆಮೇಲೆ ಅದು ಸರಿಯಿಲ್ಲವೆಂದರೆ ಅದನ್ನು ನೀವು question ಮಾಡಬಹುದು. ನೀವು question ಮಾಡಲಿಕ್ಕೆ ನಾನು ನಿಮಗೆ ಅವಕಾಶ ಕೊಡುತ್ತೇನೆ. ಪ್ರತಿಯೊಂದು sentenceಗೂ ನೀವು ಈ ರೀತಿ ಮಾಡಿದರೆ ನಾನು ಸದನ ನಡೆಸುವುದು ಹೇಗೆ? ಸಭಾಧ್ಯಕ್ಷರು ಎದ್ದು ನಿಂತು ಸದಸ್ಯರು ಕುಳಿತುಕೊಳ್ಳಿ ಎಂದು ಹೇಳಿದಾಗ ಯಾರೂ respond ಮಾಡುವುದಕ್ಕೆ ತಯಾರಿಲ್ಲ. ಇದು ಒಳ್ಳೆಯದಲ್ಲ. ನಾನು ಯಾವಾಗಲೂ ಎದ್ದು ನಿಲ್ಲುವುದಿಲ್ಲ. ಸಭಾಧ್ಯಕ್ಷರು ನಿಂತ ಮೇಲೆ ಪ್ರತಿಯೊಬ್ಬ ಸದಸ್ಯರೂ ಕುಳಿತುಕೊಳ್ಳಬೇಕೆನ್ನುವುದು ನಿಯಮದಲ್ಲಿದೆ. ಅದನ್ನು ಯಾರೂ ಗಮನಿಸುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಅದು ಎರಡೂ ಕಡೆ apply ಆಗಬೇಕಲ್ಲವೆ?

ಅಧ್ಯಕ್ಷರು: ಎರಡೂ ಕಡೆಗೂ ನಾನು ಹೇಳಿದ್ದೇನೆ. ನಿಮಗೂ ಹೇಳುತ್ತಿದ್ದೇನೆ, ಮಂತ್ರಿಗಳಿಗೂ ಹೇಳುತ್ತಿದ್ದೇನೆ. ಎರಡು ಕಡೆಯವರಿಗೂ ಹೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ವಿರೋಧ ಪಕ್ಷದ ನಾಯಕರಾದ ತಾವು ಮೂರೂವರೆ ಗಂಟೆ ಮಾತನಾಡಿದಿರಿ. ನಿಮಗೆ ಯಾರಾದರೂ ಅಡ್ಡಿಪಡಿಸಿದ್ದಾರೆಯೇ?

ಶ್ರೀ ಸಿದ್ದರಾಮಯ್ಯ: ಹೌದು. ಮೂರೂವರೆ ಗಂಟೆಯೂ ಮಾತನಾಡುತ್ತೇನೆ, ನಾಲ್ಕುವರೆ ಗಂಟೆಯೂ ಮಾತನಾಡುತ್ತೇನೆ. How can you curtail my right? You cannot curtail my right.

ಶ್ರೀ ಎಸ್. ಸುರೇಶ್ ಕುಮಾರ್: ತಾವು ಪೂರ್ತಿ ಮಾತನಾಡುವವರೆಗೂ ನಾವು ಶಾಂತವಾಗಿ ಕೇಳಿಸಿಕೊಂಡಿದ್ದೇವೆ, ಆಲಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ: Actually ಅವರು ಮಾತನಾಡುವುದಕ್ಕೆ ನಮ್ಮ objection ಇಲ್ಲ. ಅವರು ಎಷ್ಟು ಗಂಟೆಯಾದರೂ ಉತ್ತರ ಕೊಡಲಿ. I have no objection. The question is, ಅವರು ಹೇಳುವಾಗ ತಪ್ಪು ಮಾಹಿತಿಗಳು

recordಗೆ ಹೋಗಬಾರದೆಂಬುದೇ ನಮ್ಮ objection. ಜನರಿಗೆ ಸಂದೇಶ ಹೋಗುವಾಗ ತಪ್ಪು ಮಾಹಿತಿ ಹೋಗಬಾರದೆನ್ನುವುದಕ್ಕಷ್ಟೇ ನಾವು objection ಮಾಡಿರುವುದು. ಅವರು ಭಾಷಣ ಮಾಡಬಾರದು, ನಮಗೆ ಉತ್ತರ ಕೊಡಬಾರದೆಂದು ನಾವು ಹೇಳುವುದಕ್ಕೆ ಹೋಗಲೇ ಇಲ್ಲ. ಆದರೆ, ಹೇಳುವಾಗ ಎಲ್ಲರೂ ಕೇಂದ್ರ ಸರ್ಕಾರದ ಮೇಲೆ ಟೀಕೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ? ಕೇಂದ್ರ ಸರ್ಕಾರ ದ್ರೋಹ ಮಾಡುತ್ತಿದೆ ಎಂದು ಈಶ್ವರಪ್ಪನವರು ಹೇಳಲಿಲ್ಲವೇ? ಅಂದರೆ NREGSಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಹಣ ಕೊಟ್ಟಿದ್ದು ದ್ರೋಹವೇ? ರಾಜೀವಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಗೆ ಹಣ ಕೊಟ್ಟಿದ್ದು ದ್ರೋಹವೇ? ಕೇಂದ್ರ ಸರ್ಕಾರ ಕೋಟಿಗಟ್ಟಲೆ ಹಣ ಕೃಷಿಗೆ ಕೊಟ್ಟಿದೆ. ನೀರಾವರಿಗೆ, ಕೃಷಿಗೆ ಹಣ ಕೊಡುವುದು ದ್ರೋಹವೇ?

(ಗೊಂದಲ)

ಶ್ರೀ ಬಸವರಾಜ ಎಸ್. ಬೊಮ್ಮಾಯಿ: ನೀವು ನಮಗಿಂತ senior ಇದ್ದೀರಿ. ಈ ಮನೆಯಲ್ಲೊಂದು ಸಂಪ್ರದಾಯವಿದೆ. ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಮಧ್ಯದಲ್ಲಿ ಮಾತನಾಡಬಾರದು. ನಂತರ ಬೇಕಾದರೆ clarification ಕೇಳಬಹುದು.

(ಗೊಂದಲ)

ಅಧ್ಯಕ್ಷರು: Please ಎಲ್ಲರೂ ಕುಳಿತುಕೊಳ್ಳಿ. ಬಚ್ಚೇಗೌಡರೆ, ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರು ಈಗ continue ಮಾಡಲಿ. ಮಾಹಿತಿ ಸರಿಯಿಲ್ಲವೆಂದರೆ ನಂತರ ಸ್ಪಷ್ಟೀಕರಣ ಕೇಳಬಹುದು. ಈಗ ನಾನು ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ರೇವಣ್ಣನವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನಾವು 1800 ಕೋಟಿ ರೂ.ಗಳು ಕೊಟ್ಟಿದ್ದೆವು. ಇದನ್ನು ಸದನದ ಗಮನಕ್ಕೆ ತರಬೇಕಾಗುತ್ತದೆ. 60 ಲಕ್ಷ ಕುಟುಂಬಗಳಿಗೆ ವಿದ್ಯುತ್ ಒದಗಿಸುವ ಕೆಲಸವನ್ನು ನಾವು ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹಣ ಕೊಟ್ಟ ಮೇಲೆ ದ್ರೋಹ ಎಂದು ಏಕೆ ಹೇಳುತ್ತೀರಿ? ಹಾಗಾದರೆ, ರಾಜ್ಯಕ್ಕೆ ದ್ರೋಹ ಮಾಡಿದ್ದಾರೆಂದು ಏಕೆ ಹೇಳುತ್ತೀರಿ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ನಾವು ಕೇಂದ್ರ ಸರ್ಕಾರದ ಹತ್ತಿರ ಮನವಿ ಮಾಡಲು ಮುಖ್ಯಮಂತ್ರಿಯವರ ಜೊತೆ 10–10 ಸಲ ಹೋಗಿ ಬಂದಿದ್ದೇವೆ. ಆಂಧ್ರ, ತಮಿಳುನಾಡು ರಾಜ್ಯಗಳಿಗೆ ಹಣ ಕೊಡುತ್ತಾರೆ. ನಾವೇನು ಅನ್ಯಾಯ ಮಾಡಿದ್ದೇವೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: Most inefficient Government. ಅದಕ್ಕೆ ಹಾಗೆ ಆಗಿರುವುದು.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ರಾಜ್ಯದ ಬೊಕ್ಕಸವನ್ನು ಲೂಟಿ ಹೊಡೆಯುತ್ತಿದ್ದೀರಿ. ಇದು ಬರೀ ಲೂಟಿ ಸರ್ಕಾರ.

(ಗೊಂದಲ)

ಅಧ್ಯಕ್ಷರು: Please ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಸೋನಿಯಾ ಗಾಂಧಿಯವರ ಹತ್ತಿರ ಹೋಗಿ ನಮಗೆ ಬರಬೇಕಾದ allotment ಕೊಡಿ ಎಂದು ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಕೊಟ್ಟಿದೆ ಎಂದು ಹೇಳುವಷ್ಟು ಸೌಜನ್ಯವೂ ನಿಮಗಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಹತ್ತು ಬಾರಿ ಹೇಳಿದ್ದೇವೆ. ಕೇಳಿಸಿಕೊಳ್ಳುವುದಕ್ಕೆ ನಿಮಗೆ ಕಿವಿ ಇಲ್ಲ. ನಾವೇನು ಮಾಡೋಣ?

(ಗೊಂದಲ)

ಅಧ್ಯಕ್ಷರು: ಅವರು ಉತ್ತರ complete ಮಾಡುವುದಕ್ಕೆ ಬಿಡುತ್ತಿಲ್ಲ. Please, ಅಪ್ಪಚ್ಚು ರಂಜನ್‌ರವರೆ, ಕುಳಿತುಕೊಳ್ಳಿ. ಮುಖ್ಯಮಂತ್ರಿಯವರು ಈಗ ಉತ್ತರ continue ಮಾಡುತ್ತಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಕೊಟ್ಟಿದ್ದನ್ನು, ನಿಮ್ಮ ಕೈಯಿಂದ ಬಳಸಿಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ. ಅದನ್ನು ಹೇಳಿ. ನೀವು ನಿಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದೀರಿ. You have no business to stay in the House. ಇದು ನಿಮ್ಮ inefficiency ಅನ್ನು ತೋರಿಸುತ್ತದೆ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ. ನೀವು ಇಲ್ಲಿ ಕೂಗುತ್ತೀರಿ. ಅಲ್ಲಿ ನಿಮ್ಮ ಕೈಲಿ ಕೂಗುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಕೊಟ್ಟಿರುವ ಹಣವನ್ನು ಖರ್ಚು ಮಾಡಲಿಕ್ಕೆ ಆಗುತ್ತಿಲ್ಲ.

(ಗೊಂದಲ)

ಶ್ರೀ ಜಿ. ಕರುಣಾಕರರೆಡ್ಡಿ: ದೇಶದಲ್ಲಿ ನಿಮ್ಮೊಬ್ಬರನ್ನು ಬಿಟ್ಟು ಇನ್ಯಾರೂ efficient ಇಲ್ಲ!

(**ಗೊಂದಲ**)

ಶ್ರೀ ಟಿ.ಬಿ. ಜಯಚಂದ್ರ: ಹೌದು. ಕೊಟ್ಟಿರುವ ಹಣವನ್ನು ಖರ್ಚು ಮಾಡದಿರುವುದಕ್ಕೆ ಏನೆಂದು ಕರೆಯುತ್ತೀರಿ? Inefficient ಎಂದೇ ಕರೆಯುವುದು. ಇನ್ನು ಏನೆಂದು ಕರೆಯುತ್ತಾರೆ.

(**ಗೊಂದಲ**)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಾಲಾಯಕ್ ಎಂದು ಕರೆಯಬೇಕೇ? ಮುಟ್ಠಾಳರು ಎಂದು ಕರೆಯಬೇಕೇ? Inefficiency ಎನ್ನುವ ಒಳ್ಳೆಯ ಪದವನ್ನು ಉಪಯೋಗಿಸುತ್ತಿದ್ದೇವೆ. ಅದು ಬೇಡವೆಂದರೆ ಬಿಡಿ.

(**ಗೊಂದಲ**)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಇಲ್ಲಿ ಮಂತ್ರಿಗಳು ಯಾರು? ಶಾಸಕರು ಯಾರು? ವಿರೋಧ ಪಕ್ಷದವರು ಯಾರು? ಯಾರು ಮಾತನಾಡುತ್ತಿದ್ದಾರೆ ಎನ್ನುವುದು ಒಂದೂ ಗೊತ್ತಾಗುತ್ತಿಲ್ಲ.

(**ಗೊಂದಲ**)

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) : ಕಳೆದ 3 ದಿವಸಗಳಿಂದ ಇಲ್ಲಿ ಒಳ್ಳೆಯ ಚರ್ಚೆಯಾಗಿದೆ. ಬಹಳ ವಿಸ್ತೃತವಾಗಿ ಚರ್ಚೆ ಮಾಡಿದ್ದಾರೆ. ವಿರೋಧ ಪಕ್ಷದವರು 2–3 ಗಂಟೆ ಮಾತನಾಡಿ ಬೆಳಕು ಚೆಲ್ಲಿದ್ದಾರೆ.

ಆದರೆ ಆಡಳಿತ ಪಕ್ಷದಿಂದ ಉತ್ತರ ಕೊಡಬೇಕಾದರೆ, ಈ ರಾಜ್ಯಕ್ಕೆ ರೈತರ ಪರವಾಗಿ ನಾವೇನು ಮಾಡುತ್ತೇವೆಂದು ಹೇಳುವಂಥ ಸಂದರ್ಭದಲ್ಲಿ, ಕೇಂದ್ರ ಸರ್ಕಾರ ಏನು ಮಾಡಿದೆ, ರಾಜ್ಯ ಸರ್ಕಾರ ಏನು ಮಾಡಿದೆ, ಕೇಂದ್ರಕ್ಕೆ ನಮ್ಮ ಪ್ರಪೋಸಲ್ಸ್ ಏನು, ನಾವು ರಾಜ್ಯ ಸರ್ಕಾರದವರು ಏನು ಮಾಡಬೇಕೇಂದು ಹೇಳುವಂಥ ಅವಕಾಶವನ್ನು ವಿರೋಧ ಪಕ್ಷದವರು ಕೊಟ್ಟರೆ ನಾವು

ಹೇಳುವುದಕ್ಕೆ ಸಾಧ್ಯವಾಗುತ್ತದೆ. ಅವರ ಮಾತುಗಳನ್ನು ನಾವು ಯಾವ ರೀತಿಯಿಂದ ಸಹನೆಯಿಂದ ಕೇಳಿದ್ದೇವೆ. ಅದೇ ರೀತಿಯ ಸಹನೆಯಿಂದ ನಮ್ಮ ಆಡಳಿತ ಪಕ್ಷದ ನಾಯಕರ ಮಾತುಗಳನ್ನು ಕೇಳಿ ನಂತರ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಹೆಚ್.ಸಿ. ಮಹದೇವ ಪ್ರಸಾದ್ : ನಾವು ಟೀಕೆ ಮಾಡಲಿಲ್ಲ ಸಲಹೆಗಳನ್ನು ಕೊಟ್ಟೆವು. ಸರ್ಕಾರ ನಡೆಸುವವರು ಉತ್ತರ ಕೊಡುವಾಗ ಏನು ಮಾಡುತ್ತೇವೆಂದು ಹೇಳುವುದು ಬಿಟ್ಟು ಬರೀ ಕೇಂದ್ರ ಸರ್ಕಾರವನ್ನು ಟೀಕೆ ಮಾಡಿದರೆ ರಾಜ್ಯ ಸರ್ಕಾರ ರೈತರ ಬಗ್ಗೆ ಕಾಳಜಿ ಇಟ್ಟುಕೊಂಡು ಕೊಡುವ ಉತ್ತರವೆ?

ಶ್ರೀ ಆರ್. ಅಶೋಕ್ : ಕೇಂದ್ರ ಸರ್ಕಾರದ ಯೋಜನೆಗಳನ್ನು ಯಾರೂ ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರಕಾರ ಏನು ಹಣ ಕೊಟ್ಟಿದೆ ಅದನ್ನು ಯಾರೂ ಮುಚ್ಚಿಡುವುದಕ್ಕೆ ಸಾಧ್ಯವೇ ಇಲ್ಲ. ಅದು ವೈಟ್ ಅಂಡ್ ಬ್ಲಾಕ್‌ನಲ್ಲಿದೆ. ಸರ್ಕಾರದಲ್ಲಿದೆ, ಪತ್ರಿಕೆಗಳ ಮೂಲಕ ಗೊತ್ತಾಗಿದೆ, ಟ್ರಾನ್ಸ್‌ಪರೆನ್ಸಿ ಆಕ್ಟ್ ಇದೆ, ಕೇಂದ್ರ ಸರ್ಕಾರದಿಂದ ಏನು ಹಣ ಬರುತ್ತದೆ ಅದು ಎಲ್ಲರಿಗೂ ಗೊತ್ತಿದೆ. ಅದನ್ನು ಮುಚ್ಚಿಡುವ ಯಾವ ಪ್ರಯತ್ನವೂ ಈ ಸರ್ಕಾರ ಮಾಡುವುದಿಲ್ಲ. ಕೇಂದ್ರ ಸರ್ಕಾರ ಕೊಡುವ ಒಂದೊಂದು ನಯಾ ಪೈಸೆಯನ್ನೂ ಯಾವ ಕಾರಣಕ್ಕೂ ಈ ಸರ್ಕಾರ ಮುಚ್ಚಿಡುವ ಪ್ರಯತ್ನ ಮಾಡುವುದಿಲ್ಲ. ಅದೇ ರೀತಿ ಬೇರೆ ಬೇರೆ ರಾಜ್ಯಕ್ಕೂ ಯಾವ ರೀತಿ ಹಣ ಬಿಡುಗಡೆಯಾಗುತ್ತದೆ. ಅದೇ ರೀತಿ ನಮ್ಮ ರಾಜ್ಯಕ್ಕೆ ಹಣ ಬಿಡುಗಡೆಯಾಗಬೇಕೆನ್ನುವ ಬಯಕೆಯಷ್ಟೆ ನಮ್ಮದು.

ಶ್ರೀ ಸಿದ್ದರಾಮಯ್ಯ: ರಾಜೀವಗಾಂಧಿ ಗ್ರಾಮೀಣಾ ವಿದ್ಯುದೀಕರಣಕ್ಕೆ ಕೇಂದ್ರ ಸರ್ಕಾರ, ...

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಹೇಳುವುದಕ್ಕೆ ಪೂರ್ತಿ ಅವಕಾಶ ಕೊಟ್ಟರೆ ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವು ಹೇಳಲಿಲ್ಲ ಎಂದು ತಾನೇ ಆವತ್ತು ನಮ್ಮ ಅಬ್ಜೆಕ್ಷನ್.

ಅಧ್ಯಕ್ಷರು: ಅವರು ಹೇಳುವುದಕ್ಕೆ ಅವಕಾಶ ಕೊಡಿ. ಅವರು ಮುಗಿಸಲಿ. ಅವರಿಗೆ ಉತ್ತರ ಕೊಡುವುದಕ್ಕಾದರೂ ಅವಕಾಶ ಕೊಡಿ. ದಯಮ್ಮಾಡಿ ಎರಡೂ ಕಡೆಯ ಸದಸ್ಯರು ಸಂಯಮ ತೆಗೆದುಕೊಳ್ಳಿ. ಈ ಕಡೆ ಮಂತ್ರಿಯವರು ಇರಬಹುದು, ಈ ಕಡೆಗೆ ಪ್ರತಿಪಕ್ಷದವರು ಇರಬಹುದು, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಈಗ ಮಾನ್ಯ ಮುಖ್ಯಮಂತ್ರಿಗಳಿಗೆ ಉತ್ತರ ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಏನೇ ಪ್ರಯತ್ನ ಮಾಡಿದರೂ ಇನ್ನು ಮೂರು ಮುಕ್ಕಾಲು ವರ್ಷ ನಾನು ಸಂಯಮ ಕಳೆದುಕೊಳ್ಳುವುದಿಲ್ಲ. ನನ್ನನ್ನು ಕೆರಳಿಸುವ ಪ್ರಯತ್ನ ನೀವು ಮಾಡಿದರೆ ಅದರಲ್ಲಿ ನೀವು ವಿಫಲರಾಗುತ್ತೀರಿ. ನಿಮಗೆ ಮೈ ಕೈ ನೋವು ಆಗುತ್ತದೆ. ನನಗೇನೂ ಪರಿಣಾಮವಾಗುವುದಿಲ್ಲ. ನಾನು ನಿಶ್ಚಯ ಮಾಡಿದ್ದೇನೆ. ನಿಮ್ಮ ಉದ್ದೇಶವೇ ನನ್ನನ್ನು ಕೆರಳಿಸಬೇಕು, ಕೆಣಕಬೇಕು, ಎಂದು ಇದೆ; ಅದಕ್ಕೆ ನಾನು ಬಗ್ಗುವುದಿಲ್ಲ. ಅದಕ್ಕೋಸ್ಕರ ನಾನು ದೇವರನ್ನು ಸಂಯಮದಿಂದ ಮಾತನಾಡುವುದಕ್ಕೆ ಶಕ್ತಿ ಕೊಡು ಎಂದು ಪ್ರಾರ್ಥನೆ ಮಾಡುವುದಕ್ಕೆ ದೇವರ ಮನೆಗೆ ಹೋಗಿ ನಾನು ಇಲ್ಲಿಗೆ ಬಂದಿದ್ದೇನೆ. NREGS ಬಗ್ಗೆ ಚರ್ಚೆಯಾಯಿತು. ಸಿದ್ದರಾಮಣ್ಣ ಹೇಳಿದರು. ನಿರೀಕ್ಷೆಯಂತೆ ಫಲ ನೀಡಿಲ್ಲ.

ಶ್ರೀ ಸಿದ್ದರಾಮಯ್ಯ: Is it not a fact?

ಶ್ರೀ ಬಿ.ಎಸ್. ಯಡಿಯೂರಪ್ಪ: It is a fact. ಅರೆ ಒಂದು ನಿಮಿಷ. Please hear me.

ಅಧ್ಯಕ್ಷರು: ಅವರು ಕಂಪ್ಲೀಟ್ ಮಾಡಲಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: Please hear me, ಆದರೆ ನಾನು ನಿಮಗೆ ಮನವರಿಕೆ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಹಿಂದಿನ 3–4 ವರ್ಷಗಳಿಗೆ ಹೋಲಿಸಿದರೆ ಅದು ಏನೇ ಕಾರಣ ಇರಲಿ, ಸ್ವಲ್ಪ ಪರವಾಗಿಲ್ಲ, ಎರಡು ಸಾವಿರ ಕೋಟಿ ಟಚ್ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ಯಾರಪ್ಪನ ದುಡ್ಡು, ಕೇಂದ್ರದ್ದಲ್ಲದೆ ಎಂದರೆ, ಹೌದು ಸ್ವಾಮಿ ಕೇಂದ್ರದ ದುಡ್ಡು.

ನಾನು ಅಲ್ಲ ಎಂದು ಹೇಳಿಲ್ಲ. ನನ್ನ ಅಭಿಪ್ರಾಯ ಏನೆಂದರೆ, ಕೇಂದ್ರದ ಹಣ ಕೂಡ ಈ ರಾಜ್ಯದ ಜನತೆ ನೀಡಿದಂಥ ತೆರಿಗೆಯ ಹಣ. ಸಿದ್ದರಾಮಣ್ಣನವರೆ ಯಾವುದೇ ಇರಬಹುದು, ನಿಮ್ಮ ಅನುಭವದಲ್ಲಿ, ನನಗೆ ನಿಮ್ಮ ಸಮಸ್ಯೆ ಏನು ಇದೆ ಎಂದು ಗೊತ್ತಿಲ್ಲ. ನಾನು ಏನು ಹೇಳಿದರೂ ನೀವು ಅಭ್ಯಂತರ ಮಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ನೋ, ನೋ. ಆ ರೀತಿ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇಲ್ಲ ಸರ್, ಈ ರೀತಿಯಾದರೆ ಆಗುವುದಿಲ್ಲ. ನಾನು ನನ್ನ ಮನೆಯಿಂದ ತಂದಿರುವ ದುಡ್ಡು ಎಂದು ನಾನು ಎಲ್ಲೂ ಹೇಳಿಲ್ಲ. Why are you interfering like that?

ಶ್ರೀ ಸಿದ್ದರಾಮಯ್ಯ: ಈ ರಾಜ್ಯದ ತೆರಿಗೆ ಹಣ ಎಂದು ನನಗೆ ಗೊತ್ತಿಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಗೊತ್ತಿದ್ದರೆ ನೀವು ಈ ರೀತಿ ಹೇಳುತ್ತಿರಲಿಲ್ಲ.

ಅಧ್ಯಕ್ಷರು: ನೋಡ್ರಿ ಸಿದ್ದರಾಮಯ್ಯನವರೆ, ಸರ್ಕಾರದವರು, ಮುಖ್ಯಮಂತ್ರಿಗಳು ಇದೇ ರೀತಿ ಉತ್ತರ ಕೊಡಬೇಕು. ಇದೇ ಶೈಲಿಯಲ್ಲಿ ಉತ್ತರ ಕೊಡಬೇಕೆಂದು ಹೇಳುವುದಕ್ಕೆ ಬರುವುದಿಲ್ಲ. ಅವರು ತಮ್ಮದೇ ಆದ ರೀತಿಯಲ್ಲಿ ಉತ್ತರ ಕೊಡುತ್ತಾರೆ. ಈಗ ನಿಮ್ಮದೇ ಆದ ರೀತಿಯಲ್ಲಿ ನೀವು ಟೀಕೆ ಮಾಡುತ್ತೀರಿ. ವಿಷಯ ಮಂಡನೆ ಮಾಡುತ್ತೀರಿ. ನಿಮ್ಮದು ಒಂದು ರೀತಿ, ಅವರದು ಒಂದು ರೀತಿ. ಅವರು ಉತ್ತರ ಕೊಟ್ಟ ನಂತರ ಸರಿಯಿಲ್ಲವೆಂದರೆ ನೀವು ನಂತರ ಹೇಳಿ.

ಶ್ರೀ ಸಿದ್ದರಾಮಯ್ಯ: ಸ್ವಲ್ಪ ಸತ್ಯದ ರೀತಿಯಲ್ಲಿ ಹೇಳಲಿ.

ಅಧ್ಯಕ್ಷರು: ಅದು ಅವರಿಗೆ ಬಿಟ್ಟಿದ್ದು. ಆಮೇಲೆ ಸರಿಯಿಲ್ಲ ಎಂದು ನೀವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಪ್ರಸರಣೆ ಮತ್ತು ವಿತರಣಾ ನಷ್ಟದ ಬಗ್ಗೆ 2004–05ರಲ್ಲಿ ಪ್ರತಿಶತ 30ರಷ್ಟು T & D LOSS ಇತ್ತು. 2008–09ರಲ್ಲಿ

22.05ಕ್ಕೆ ಇಳಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದೇವೆ. ನಮ್ಮ ಅಧಿಕಾರಿಗಳು ವಿಜಿಲೆನ್ಸ್ ಬಿಗಿ ಮಾಡಿ ಇನ್ನೂ ಈ T & D LOSS ಅನ್ನು ಕಡಿಮೆ ಮಾಡುವುದಕ್ಕೆ ಶತಪ್ರಯತ್ನ ಮಾಡುತ್ತಿದ್ದಾರೆ. ಈ ವರ್ಷದ ಕೊನೆಯಲ್ಲಿ ಅಥವಾ ಮುಂದಿನ ವರ್ಷದ ಮೊದಲ ಭಾಗದಲ್ಲಿ ಹೇಗಾದರೂ ಮಾಡಿ 22.05ರಷ್ಟು ಇರುವುದನ್ನು 20ಕ್ಕೆ ಇಳಿದರೆ ಇದೊಂದು ದೊಡ್ಡ ಸಾಧನೆಯಾಗುತ್ತದೆ. ಆ ದಿಕ್ಕಿನಲ್ಲಿ ಮಾನ್ಯ ಸಿದ್ದರಾಮಣ್ಣನವರೆ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಇಲ್ಲಿ ಒಂದು ವಿಷಯ ಚರ್ಚೆಯಾಯಿತು.

ಶ್ರೀ ಹೆಚ್.ಡಿ. ರೇವಣ್ಣ: ಕಂಪನಿಗಳ ಬಗ್ಗೆಯೂ ಹೇಳಿಬಿಡಿ.

ಅಧ್ಯಕ್ಷರು: ಇದು ನನಗೆ ಅರ್ಥವೇ ಆಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್, ಬೇಡ ಎಂದರೆ ನಾನು ಹೋಗುತ್ತೇನೆ. ಉತ್ತರ ಕೊಡುವುದು ಬೇಡ ಎಂದರೆ ನೀವು ಹೇಳಿ ಸರ್ ನಾನು ಹೋಗುತ್ತೇನೆ.

ಅಧ್ಯಕ್ಷರು: ರೇವಣ್ಣನವರೆ ಏಕೆ ಈ ರೀತಿ ಮಾಡುತ್ತೀರಿ. ಪದೇ ಪದೇ ಈ ರೀತಿಯಾಗಿ ಇಷ್ಟೆಲ್ಲಾ ಗದ್ದಲವಾದ ಮೇಲೂ ಮಧ್ಯ ಪ್ರವೇಶಿಸಿದರೆ ಹೇಗೆ? ನಂತರ ನಿಮಗೆ ಅವಕಾಶ ಕೊಡುತ್ತೇನೆ. ಆಗ ನೀವು ಕೇಳಿ. ನನಗೆ ಇದು ಅರ್ಥವಾಗುತ್ತಿಲ್ಲ. ಅವರಿಗೆ ಮಾತನಾಡಲಿಕ್ಕಾದರೂ ಅವಕಾಶ ಕೊಡಿ. ಎಲ್ಲದಕ್ಕೂ ಮಧ್ಯೆ ಪ್ರವೇಶಿಸಿದರೆ ಸದನ ಹೇಗೆ ನಡೆಸಬೇಕು? ಅವರು ಹೇಗೆ ಉತ್ತರ ಕೊಡಬೇಕು? ರೇವಣ್ಣನವರೆ, ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಅವರು ಟಿ ಅಂಡ್ ಡಿ ಲಾಸ್ ಬಗ್ಗೆ ಹೇಳಿದರು. ಅದೇ ರೀತಿಯಾಗಿ ಕಂಪನಿಯ ಬಗ್ಗೆಯೂ ಹೇಳಲಿ.

ಅಧ್ಯಕ್ಷರು: ನೋ, ನೋ. ರೇವಣ್ಣನವರೆ, ನಾನು ನಂತರ ನಿಮಗೆ ಅವಕಾಶ ಮಾಡಿ ಕೊಡುತ್ತೇನೆ. ನಂತರ ನೀವು ಏನಾದರೂ ಸ್ಪೆಸಿಫಿಕ್ ಆಗಿದ್ದರೆ ಕೇಳಿ. ನೀವು ಎರಡು ತಾಸು ಮಾತನಾಡಿದಿರಿ. ಆಗ ಅವರು ಏನಾದರೂ

ನಿಮಗೆ ಮಾತನಾಡಿದರೆ? ಅವರು ಉತ್ತರ ಕೊಡುವುದು ಬೇಡ ಎಂದರೆ ಬಿಟ್ಟುಬಿಡಿ. ಅವರಿಗೆ ನಾನು ಬೇಡ ಎಂದು ಹೇಳಿ ಬಿಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಕಳೆದ ವರ್ಷ ವಿದ್ಯುತ್ ಅಭಾವವಿದ್ದ ಕಾರಣ ಕೇಂದ್ರ ಸರ್ಕಾರದ ಸೂಚನೆ ಕೊಟ್ಟಂತೆ ಕಲ್ಲಿದ್ದಲು ಇಂಪೋರ್ಟ್ ಮಾಡುವುದಕ್ಕೆ ವಿಶೇಷ ಪ್ರಯತ್ನ ಮಾಡಿದೆವು. ರೇವಣ್ಣನವರು ಮಾತನಾಡುತ್ತಾ ಹೇಳಿದರು. ಇಲ್ಲದಿದ್ದರೆ ನಾನು ಇದನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಈ ಕಲ್ಲಿದ್ದಲು ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿದರು.

ಶ್ರೀ ಹೆಚ್.ಡಿ. ರೇವಣ್ಣ: ಆ ಬಗ್ಗೆ ನಿಲುವಳಿ ಸೂಚನೆ ಇದೆ. ಅದರಲ್ಲಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಏನ್ರೀ ಇದು? ಏಕೆ ಈ ರೀತಿ ಮಾಡುತ್ತೀರಿ?

ಅಧ್ಯಕ್ಷರು: ನೋಡಿ ರೇವಣ್ಣನವರೆ, I am sorry, ಹಾಗಾದರೆ ಅವರು ಏನು ಹೇಳಬೇಕೆಂದು ನೀವು ಬರೆದು ಕೊಟ್ಟು ಬಿಡಿ. ರೇವಣ್ಣನವರೆ, ನೀವು ಅವರಿಗೆ ಇದೇ ರೀತಿ ಉತ್ತರ ಹೇಳಿ ಎಂದು ಬರೆದು ಕೊಟ್ಟುಬಿಡಿ. ಅದೇ ರೀತಿ ಅವರು ಹೇಳಲಿ. ಅವರು ಯಾವ ರೀತಿ ವಿಷಯ ಮಂಡನೆ ಮಾಡುತ್ತಾರೋ ಅವರಿಗೆ ಬಿಟ್ಟಿದ್ದು. ಎಲ್ಲದಕ್ಕೂ ನೀವು ಈ ರೀತಿಯಾಗಿ ಮಧ್ಯಪ್ರವೇಶ ಮಾಡುವುದು ಸರಿಯಲ್ಲ. ನನಗೆ ಇದು ಅರ್ಥವಾಗುತ್ತಿಲ್ಲ. ಸಿ.ಸಿ. ಪಾಟೀಲ್‌ರವರೆ, ದಯಮಾಡಿ ಕುಳಿತುಕೊಳ್ಳಿ. ಏಕೆ ಈ ರೀತಿ ಮಾತನಾಡುತ್ತೀರಿ? ಆಯಿತು. ನೀವೇ ನೀವೇ ಮಾತನಾಡಿ.

ಶ್ರೀ ಸಿ.ಸಿ. ಪಾಟೀಲ್: ಮುಖ್ಯಮಂತ್ರಿಗಳಿಗೆ ಮೊದಲು ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಸಿ.ಸಿ. ಪಾಟೀಲ್: ಹಾಸನವನ್ನು ರಾಜ್ಯವನ್ನಾಗಿ ಮಾಡಿಕೊಂಡು ಬಿಡಿ.

ಶ್ರೀ ಹೆಚ್.ಡಿ. ರೇವಣ್ಣ: ನೀವು ಶಿವಮೊಗ್ಗ, ಸಕಲೇಶಪುರವನ್ನು ರಾಜ್ಯವನ್ನಾಗಿ ಮಾಡುತ್ತೀರಾ?

ಶ್ರೀ ಹೆಚ್.ಸಿ. ಬಾಲಕೃಷ್ಣ: ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು: ಸಿ.ಸಿ. ಪಾಟೀಲ್‌ರವರೆ, ರೇಣುಕಾಚಾರ್ಯರವರೆ, ನೋಡಿ ಯಾರಾದರೂ ಸದಸ್ಯರು ಏನಾದರೂ ಮಾಡನಾಡುವುದಾದರೆ ಸಭಾಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಮಾತನಾಡಿ. ನೀವೇ ಎದ್ದು ನಿಂತು ಮಾತನಾಡುವ ಅವಶ್ಯಕತೆಯಿಲ್ಲ. ಯಾರಾದರೂ ಮಾತನಾಡುವುದಿದ್ದರೆ ನನಗೆ ಅಡ್ರೆಸ್ ಮಾಡಿ ಮಾತನಾಡಿ. ನೀವೇ ಪರಸ್ಪರ ಚರ್ಚೆ ಮಾಡುವುದು, ಡಿಬೇಟ್ ಮಾಡುವ ಅವಶ್ಯಕತೆಯಿಲ್ಲ. ಇಲ್ಲಿ ಸಭಾಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಮಾತನಾಡಿ. ಸಿ.ಸಿ. ಪಾಟೀಲ್‌ರವರೆ, ಮತ್ತೆ ನೀವು ಅಲ್ಲಿಯೇ ಮಾತನಾಡುತ್ತೀರಲ್ಲ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ರೇವಣ್ಣನವರು ಹೇಳಿದರು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಆದರೆ ಆಡಳಿತ ಪಕ್ಷದ ಸದಸ್ಯರು ಕುಳಿತುಕೊಳ್ಳುವ ಸೌಜನ್ಯ ಕೂಡ ತೋರಿಸುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇಷ್ಟು ವರ್ಷ ಸುದೀರ್ಘವಾದ ಅನುಭವ ಈ ಇಲಾಖೆಯಲ್ಲಿ ರೇವಣ್ಣನವರಿಗೆ ಇದೆ. ಅವರು ಏನಾದರೂ ಆರೋಪ ಮಾಡಿದರೆ ಅದರಲ್ಲಿ ಸತ್ಯಾಂಶ ಬಹಳಷ್ಟು ಇರಬಹುದು ಎಂದು ಸಾಮಾನ್ಯವಾಗಿ ಜನ ಅಂದುಕೊಳ್ಳುತ್ತಾರೆ. ಅದಕ್ಕೋಸ್ಕರ ನಾನು ತೀರ್ಮಾನ ಮಾಡಿದ್ದೇನೆ. ರೇವಣ್ಣನವರೆ, 2002ರಿಂದ ಇವತ್ತಿನವರೆವಿಗೂ ಈ ಕಲ್ಲಿದ್ದಲು ಖರೀದಿಯಲ್ಲಿ ಏನೇನು ವ್ಯವಹಾರ ನಡೆದಿದೆ ಈ ಬಗ್ಗೆ retired high Court judge ನಿಂದ ತನಿಖೆ ಮಾಡಿಸುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಲೋಕಾಯುಕ್ತರಿಗೆ ಕೊಡಿ ಸ್ವಾಮಿ.

ಅಧ್ಯಕ್ಷರು: ದಯಮಾಡಿ ಯಾರೂ ಈ ರೀತಿಯಾಗಿ ಮಧ್ಯದಲ್ಲಿ ಮಾತನಾಡುವುದಕ್ಕೆ ಹೋಗಬೇಡಿ. ಬಾಲಕೃಷ್ಣರವರೆ, ಸ್ವಲ್ಪ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ರೇವಣ್ಣನವರು ಈ ಮನೆಯಲ್ಲಿ ನಿಂತು ಪ್ರಸ್ತಾಪ ಮಾಡಬೇಕಾದರೆ ಕಲ್ಲಿದ್ದಲು ಖರೀದಿಯಲ್ಲಿ ......

ಶ್ರೀ ಹೆಚ್.ಸಿ. ಬಾಲಕೃಷ್ಣ: ಆ ವಿಷಯ ಪ್ರಸ್ತಾಪವೇ ಮಾಡಿಲ್ಲ.

ಅಧ್ಯಕ್ಷರು: ನೋಡಿ ಬಾಲಕೃಷ್ಣರವರೆ, ಈ ರೀತಿಯಾಗಿ ನಡುವೆ ಮಾತನಾಡಿದರೆ ಹೇಗೆ? ಅವರು ಏನು ಹೇಳುತ್ತಾರೆ ಹೇಳಲಿ ಬಿಡಿ. ಅವರೇನು ಉತ್ತರ ಕೊಡುತ್ತಾರೆ ಕೊಡಲಿ.

ಶ್ರೀ ಟಿ.ಬಿ. ಜಯಚಂದ್ರ: ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು: ಇದರಲ್ಲಿ ಏನು ಇದೆ ಪಾಯಿಂಟ್ ಆಫ್ ಆರ್ಡರ್?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಉತ್ತರ ಕೊಡುವುದಕ್ಕೆ ಬೇಡ ಎನ್ನುವುದಕ್ಕೆ ನೀವು ಯಾರು? ನಾನು ಯಾವುದು ಮಾಡಬೇಕು, ಯಾವುದು ಬಿಡಬೇಕು ಎನ್ನುವುದಕ್ಕೆ ನೀವು ಯಾರು?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ನಾವೆಲ್ಲಿ ಚರ್ಚೆ ಮಾಡಿದ್ದೇವೆ? ನಾವೆಲ್ಲಿ ಆರೋಪ ಮಾಡಿದ್ದೇವೆ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಆರೋಪಗಳನ್ನು ಮಾಡಿಬಿಡುತ್ತಾರೆಂದು ಭಯದಿಂದ ಮಾಡಿದ್ದಾರೆ. ಅಷ್ಟೇ ವಿನಾ ಬೇರೆ ಏನೂ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಇದು ವಿಶೇಷವಾದಂಥ ಅಧಿವೇಶನವಾಗಿದ್ದು, ವಿಶೇಷವಾದ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಕರೆದಂಥ ಸಭೆ. ಮಾನ್ಯ ಮುಖ್ಯಮಂತ್ರಿಗಳು ಕಲ್ಲಿದ್ದಲು ಬಗ್ಗೆ ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಆ ವಿಷಯ ವಿಧಾನ ಸಭೆಯಲ್ಲಿ ಪ್ರಸ್ತಾಪವಾಗಿಲ್ಲ.

12.00 A.M.

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ಮೊದಲು ಅವರು ಉತ್ತರ ಕೊಡಲಿ. ಇದೇ ರೀತಿಯಾಗಿ ಉತ್ತರ ಕೊಡಬೇಕೆಂದು ಮತ್ತು ಕಲ್ಲಿದ್ದಲು ಬಗ್ಗೆ ಹಾಗೂ ಪವರ್ ಬಗ್ಗೆ ಮಾತನಾಡಬಾರದೆಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ವಿಷಯ ಸೀಮಿತವಾಗಿದೆ. ಆದ್ದರಿಂದ, ಅವರು ನೀಡುವ ಉತ್ತರ ಬಹಳ ಮಹತ್ವವಾಗಿರುತ್ತದೆ.

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ನೀವು ಉತ್ತರ ಬರೆದು ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ: ಸರ್ಕಾರಕ್ಕೆ ತನ್ನದೇ ಆದಂಥ ಅಧಿಕಾರ ಇದೆ. ಆದ್ದರಿಂದ, ಇದೇ ರೀತಿ ಮಾಡಿ ಎಂದು ನಾವು ಅಧಿಕಾರ ಚಲಾವಣೆ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಇದನ್ನು ನೀವು ಸ್ವಾಗತ ಮಾಡಬೇಕು. ಆದರೆ, ನೀವೇಕೆ ಹೆದರಿಕೊಳ್ಳುತ್ತಿದ್ದೀರಿ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನಿಮ್ಮ ಸಲಹೆ ನನಗೆ ಬೇಕಾಗಿಲ್ಲ. ನಾನು ಸಭಾನಾಯಕರನ್ನು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಅದನ್ನು ಸ್ವಾಗತ ಮಾಡಿ. ಏಕೆ ವಿರೋಧ ಮಾಡುತ್ತಿದ್ದೀರಿ?

ಶ್ರೀ ಟಿ.ಬಿ. ಜಯಚಂದ್ರ: ನಿಮ್ಮಿಂದ ನಾನು ಕಲಿಯಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಹೇಳುವುದೇನೆಂದರೆ, ಸದನದಲ್ಲಿ ಯಾವ ವಿಚಾರ ಚರ್ಚೆಯಾಗಿ ಸಲಹೆಗಳನ್ನು ಕೊಡಲಾಗಿದೆಯೋ ಅದಕ್ಕೆ ಸೀಮಿತವಾಗಿರುವ ರೀತಿಯಲ್ಲಿ ನಿಮ್ಮಿಂದ ಉತ್ತರ ಬರಬೇಕೆಂದು ನನ್ನ ಬಯಕೆಯಾಗಿದೆ. ಕಾರಣ ಏನೆಂದರೆ, ನೀವು ನೀಡಿರುವ ಪುಸ್ತಕದಲ್ಲಿರುವ ಸಲಹೆಗಳಿಗೆ ಸಂಬಂಧಪಟ್ಟಂತೆ ನಿಮ್ಮ ಮುಂದಿನ ಹೆಜ್ಜೆಗಳು ಕಾರ್ಯಕ್ರಮದ ಮೂಲಕ ಹೇಳಬೇಕೇ ವಿನಾ ಕೇವಲ ಅನುಕಂಪದ ಮಾತು ರೈತರಿಗೆ ಸಹಾಯವಾಗುವುದಿಲ್ಲ. ಹಾಗೆಯೇ ಟೀಕೆಟಿಪ್ಪಣಿಗಳಿಂದಲೂ ಕೂಡ ಸಹಾಯವಾಗುವುದಿಲ್ಲ. ಇವತ್ತಿನ ದಿವಸ ರೈತರ ಸಮಸ್ಯೆ ಏನೆಂಬುದು ಎಲ್ಲರಿಗೂ ಸಹ ಗೊತ್ತಿದೆ. ಆದರೆ, ವಿಶೇಷವಾದಂಥ ಸಭೆ ಕರೆದಾಗ ರೈತನ ಸಮಸ್ಯೆ ಪರಿಹಾರ ಮಾಡತಕ್ಕಂಥ ಮತ್ತು ಆತನಿಗೆ ಸಾಂತ್ವನ ಮಾಡಿ ಆತನನ್ನು ಮೇಲಕ್ಕೆ ತರುವ ಬಗ್ಗೆ ಮಾತ್ರ ಸೀಮಿತವಾಗಿ ಉತ್ತರ ಹೇಳಿ.

ಶ್ರೀ ಆರ್. ಅಶೋಕ್: ಮಾನ್ಯ ಜಯಚಂದ್ರರವರು ಸರ್ಕಾರದ ಪರವಾಗಿ ರಿಪ್ಲೈ ಮಾಡುತ್ತಿದ್ದಾರೆಯೇ? ಇದಕ್ಕೆ ಸರ್ಕಾರ ರಿಪ್ಲೈ ಮಾಡಬೇಕೆ ಅಥವಾ ಅವರು ಮಾಡಬೇಕೆ?

ಶ್ರೀ ಟಿ.ಬಿ. ಜಯಚಂದ್ರ: ಅವರು ಕೇಳುತ್ತಿದ್ದಾರೆ. ನೀವೇನು ನನಗೆ ಹೇಳುವುದು?

(ಗೊಂದಲ)

ಶ್ರೀ ಆರ್. ಅಶೋಕ್: ನಿಮಗೆ ಯಾರು ಅನುಮತಿ ಕೊಟ್ಟಿರುವುದು?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: What is this?

(ಗೊಂದಲ)

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾಗಿಯೇ ಉತ್ತರ ಕೊಡಬೇಕೆಂದು ಮತ್ತು ಇದೇ ವಿಷಯದ ಬಗ್ಗೆ

ಮಾತನಾಡಬೇಕೆಂದು ತಾವು ಸರ್ಕಾರಕ್ಕೆ ಬರೆದು ಕೊಡಿ. ಮಾನ್ಯ ಜಯಚಂದ್ರರವರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ, ತಾವೂ ಸಹ ಕುಳಿತುಕೊಳ್ಳಿ.

(ಗೊಂದಲ)

ಶ್ರಿ ಆರ್. ಅಶೋಕ್: ಸರ್ಕಾರದ ಪರವಾಗಿ ಅವರು ರಿಪ್ಲೈ ಕೊಡುತ್ತಾರೆಯೇ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ....

ಅಧ್ಯಕ್ಷರು: ಇಲ್ಲಿಗೆ ಬಂದಿರುವ Dignitariesಗೆ ಸ್ವಾಗತ ಮಾಡುತ್ತೇನೆ. ಆನಂತರ ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಆಯಿತು. Welcome ಮಾಡಿ.

Mr. Speaker: The following dignitaries are witnessing the proceedings of this august House from the Speaker's Gallaery. On behalf of all the Hon'ble Members of Karnataka Legislative Assembly and on my own I welcome them.

1. Mr. Syed Mohammed Abrahim Abass, Senior Cultural Advisor of Afghan Government and Mrs. Syed Mohammed Abrahim Abass.
2. Mr. Adgur Harazhiya, Deputy Speaker, Republic Afghan province.
3. Mr. Anatoliya Tcerkobnuk, councilor of Russian Executive.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, 12 ಲಕ್ಷ ಟನ್ ಕಲ್ಲಿದ್ದಲು ಖರೀದಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ involve ಆಗಿದ್ದಾರೆ.

ಅವರು ಕೊಟ್ಟಿರುವ ಪತ್ರ ನನ್ನ ಹತ್ತಿರ ಇದೆ. ಆದ್ದರಿಂದ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಿಲುವಲಿ ಸೂಚನೆ ತೆಗೆದುಕೊಂಡು ಬಂದಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವುದಕ್ಕೆ ಸಭೆ ಕರೆಯಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸ್ವಲ್ಪ ತಾಳ್ಮೆಯಿಂದ ಇರಿ.

ಶ್ರಿ ಸಿದ್ದರಾಮಯ್ಯ: ನನಗೆ ತಾಳ್ಮೆ ಬೇಕಾದಷ್ಟು ಇದೆ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ಅವರೇ ಉತ್ತರವನ್ನು ಬರೆದು ಕೊಡಲಿ. ಮಾನ್ಯ ಮುಖ್ಯಮಂತ್ರಿಗಳು ನೀಡುತ್ತಿರುವ ಉತ್ತರವನ್ನು ಕೇಳುವುದಕ್ಕೆ ಅವರಿಗೆ ಸೌಜನ್ಯ ಇಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಇವರಿಗೆ ಉತ್ತರ ಕೊಡುವುದಕ್ಕೆ ಬಾರದೆ ಇದ್ದರೆ ನಾವು ಬರೆದು ಕೊಡುತ್ತೇವೆ. ಸದನದಲ್ಲಿ ಯಾವ ರೀತಿಯಾಗಿ ಮಾಡನಾಡಬೇಕೆಂಬುದು ಇವರಿಗೆ ಇನ್ನೂ ಗೊತ್ತಿಲ್ಲ ಎಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ನಾನು ಹೇಳುವುದನ್ನು ಈ ಕಡೆಯಾಗಲಿ ಅಥವಾ ಆ ಕಡೆಯಾಗಲಿ ಯಾರೂ ಕೇಳುತ್ತಿಲ್ಲ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ನೀವೇನು ಮಾಡಿದ್ದೀರಿ ಎಂಬುದು ನಮಗೆ ಗೊತ್ತಿಲ್ಲವೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಕಲ್ಲಿದ್ದಲು ಖರೀದಿಯಲ್ಲಿ ಅವ್ಯವಹಾರ ನಡೆದಿರಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಖಾತರಿಯಾಗಿರಬೇಕೆಂದು ನನಗೆ ಅನಿಸುತ್ತಿದೆ. ಈ ಮಾತನ್ನು ನೀವೇ ಹೇಳಿದ್ದೀರಿ. ಇಲ್ಲದಿದ್ದರೆ, ಹೈಕೋರ್ಟ್ ಜಡ್ಜ್ ಕಡೆಯಿಂದ ಸುಮ್ಮನೆ ತನಿಖೆ ಮಾಡಿಸುತ್ತೀರಾ? ಅಂದರೆ, ಶೂನ್ಯಕ್ಕೆ ತನಿಖೆ ಮಾಡುಸುತ್ತೀರಾ? ಮಾನ್ಯ ಅಧ್ಯಕ್ಷರೆ, ಶೂನ್ಯಕ್ಕಂತೂ ತನಿಖೆ ಮಾಡಿಸುವುದಕ್ಕೆ ಆಗುವುದಿಲ್ಲ. ಅಲ್ಲಿ ಬೆಂಕಿ ಇದ್ದರೆ ಮಾತ್ರ ಹೊಗೆ ಬರುವುದಕ್ಕೆ ಸಾಧ್ಯ. ಬೆಂಕಿ ಇಲ್ಲದೆ ಹೊಗೆ ಹೇಗೆ ಬರುವುದಕ್ಕೆ ಸಾಧ್ಯ? ಅಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಅವರಿಗೆ ಈಗ ಖಾತರಿಯಾಗಿದೆ. Suo-motu ಅವರೇ ಸ್ಟೇಟ್‌ಮೆಂಟ್ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿಸುತ್ತೇನೆಂದು ಹೇಳಿರತಕ್ಕಂಥದ್ದು ಬಹಳ ಸಂತೋಷ. ನಾವು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡುವಾಗ ಯಾವುದೇ ಹಗರಣ ಮತ್ತು ಭ್ರಷ್ಟಾಚಾರದ ಬಗ್ಗೆ ಎಲ್ಲಿಯೂ ಕೂಡ ಪ್ರಸ್ತಾಪ ಮಾಡಿಲ್ಲ. ಕಲ್ಲಿದ್ದಲಿನ ಬಗ್ಗೆ ನಮ್ಮ ಹತ್ತಿರ ಮಾಹಿತಿ ಇದ್ದರೂ ಕೂಡ ನಾವು ಪ್ರಸ್ತಾಪ ಮಾಡಿಲ್ಲ. ಇವತ್ತು ಆ ವಿಷಯದ ಬಗ್ಗೆ ಚರ್ಚೆ ಮಾಡಲು ನೋಟಿಸ್ ಕೊಟ್ಟಿದ್ದಾರೆ. ಆದ್ದರಿಂದ, ಅದನ್ನು ಪ್ರಸ್ತಾಪ ಮಾಡುವುದಕ್ಕಿಂತ ಮುಂಚಿತವಾಗಿಯೇ ಇದನ್ನು ಏತಕ್ಕೆ ಹೇಳುತ್ತಿದ್ದೀರಿ? ಈ ವಿಷಯದ ಬಗ್ಗೆ ಚರ್ಚೆ ಮಾಡಲು ಮಾನ್ಯ ಅಧ್ಯಕ್ಷರು ಅವಕಾಶ ಕೊಡಲಿ. ಆನಂತರ ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡೋಣ. ಆಮೇಲೆ ಯಾವ ತರಹದ ಅಥವಾ ಯಾವ ಸ್ವರೂಪದ ತನಿಖೆ ಆಗಬೇಕೆಂದು ನಿರ್ಧಾರ ತೆಗೆದುಕೊಳ್ಳಿ. ಏಕೆಂದರೆ, ಅವ್ಯವಹಾರ ಆಗಿರತಕ್ಕಂಥದ್ದನ್ನು ಈಗ ನೀವೇ ಒಪ್ಪಿಕೊಂಡಿದ್ದೀರಿ. ಅವ್ಯವಹಾರ ನಡೆದಿದೆ ಎಂಬುದು admittedly it is a fact. Such being the case, ಬೇರೆ ರೀತಿಯಲ್ಲಿ ತೀರ್ಮಾನ ಮಾಡೋಣ. ಇದಕ್ಕೆ ಸಿಬಿಯ ತನಿಖೆ ಅಥವಾ ಸಿಟಿಂಗ್ ಹೈಕೋರ್ಟ್ ಜಡ್ಜ್ ಕಡೆಯವರಿಂದ

ಬೇಕಾದರೆ ಮಾಡಿಸೋಣ. ಈಗ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಕ್ಕೆ ಮಾತ್ರ ಸೀಮಿತವಾಗಿ ಉತ್ತರ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಿಲುವಲಿ ಸೂಚನೆ ಮೇಲೆ ಚರ್ಚೆ ಮಾಡಲು ನಾವು ನೋಟಿಸ್ ಕೊಟ್ಟಿದ್ದೇವೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆ.

ಅಧ್ಯಕ್ಷರು: ಆಯಿತು. ಈಗ ಅವರು ಉತ್ತರ ಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಜಯಚಂದ್ರರವರೆ, ಈ ಭಾಷಣದ ಕೊನೆಯಲ್ಲಿ ಈ ರಾಜ್ಯದ ರೈತರಿಗೆ ಮತ್ತು ಗ್ರಾಮೀಣ ಜನರಿಗೆ ಸಂಬಂಧಪಟ್ಟಂತೆ ಸುಮಾರು 36 ಹೊಸ ಹೆಜ್ಜೆಗಳನ್ನು ನಾವೇನು ಇಡಬೇಕೆಂದು ತೀರ್ಮಾನ ಮಾಡಿದ್ದೇವೆಯೋ ಆ ಮಾಹಿತಿಯನ್ನು ನಾನು ನಿಮಗೆ ಕೊಡುತ್ತೇನೆ. ಈಗ ತಾವುಗಳು ಸ್ವಲ್ಪ ಸಮಾಧಾನದಿಂದ ಇರಿ. ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ವಿದ್ಯುತ್ ಇಲಾಖೆ ಬಗ್ಗೆ ಚರ್ಚೆ ಆಗತಕ್ಕಂಥ ಕಾಲದಲ್ಲಿ ಕೆಲವು ಸುಧಾರಣೆಗಳನ್ನು ಮಾಡುತ್ತಿದ್ದೇವೆ. ಅಂದರೆ, ಟ್ರಾನ್ಸ್‌ಮಿಷನ್ ಲಾಸ್ ಮತ್ತು ತೆಫ್ಟ್ ಕಡಿಮೆ ಮಾಡುವುದಕ್ಕೆ ಹೆಜ್ಜೆ ಇಟ್ಟಿದ್ದೇವೆ. ಕಲ್ಲಿದ್ದಲು ಖರೀದಿಗೆ ಸಂಬಂಧಪಟ್ಟಂತೆ ಅಂದರೆ, ಎಲ್ಲೋ ಒಂದು ಕಡೆ ಅವ್ಯವಹಾರ ನಡೆದಿದೆ ಎಂದು ಜನರಲ್ಲಿ ಒಂದು ರೀತಿಯ ಸಂಶಯದ ಭಾವನೆ ಇದೆ. ಅದಕ್ಕೋಸ್ಕರ ಕೆಪಿಸಿ ಯಲ್ಲಿ 2002 ರಿಂದ 2009ರವರೆಗೆ ಅಂದರೆ ನನ್ನ ಅವಧಿಯನ್ನು ಸೇರಿ ಕಲ್ಲಿದ್ದಲು ಖರೀದಿ ಬಗ್ಗೆ ತನಿಖೆ ಮಾಡಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ನಾವು ನೋಟಿಸ್ ಕೊಟ್ಟು ಚರ್ಚೆಯಾದ ನಂತರ ಇದಕ್ಕೆ ಉತ್ತರ ಕೊಡಲಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಅವರು ಏನು ಹೇಳುತ್ತಾರೆಯೋ ಅದನ್ನು ಮೊದಲು ಕೇಳಿ. ಏಕೆ ಈ ರೀತಿ ಮಾಡುತ್ತಿದ್ದೀರಿ? ಉತ್ತರ ಕೊಟ್ಟ ನಂತರ ನೀವು ಏನು ಬೇಕಾದರೂ ಕೇಳಿ. ಅಂದರೆ, ನೀವು ಹೇಳಿರುವುದು

ಮತ್ತು ನೀವು ಮಾಡಿರುವುದು ಸರಿಯಲ್ಲವೆಂದು ಆಮೇಲೆ ತಾವು ಹೇಳಿ. ನಿಮಗೆ ನಾನು ಅವಕಾಶ ಕೊಡುತ್ತೇನೆ. ಪದೇ ಪದೇ ಎದ್ದು ನಿಂತರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, 2002 ರಿಂದ 2009ರವರೆಗೆ ಮತ್ತು ನನ್ನ ಅವಧಿಯನ್ನು ಸೇರಿಸಿ ಕೆಪಿಸಿಎಲ್ ನಿಂದ ಕಲ್ಲಿದ್ದಲು ಖರೀದಿ ಮಾಡಿರುವಂಥ ಬಗ್ಗೆ ನಿವೃತ್ತ ಹೈಕೋರ್ಟ್ ಜಡ್ಜ್‌ನಿಂದ ತನಿಖೆ ಮಾಡಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ. ಇದನ್ನು ಮಾಡಿಸುತ್ತೇನೆ. ನಾನು ಅಧಿಕಾರಕ್ಕೆ ಬಂದ ಮೇಲೆ ಕಳೆದ ವರ್ಷ ಬೇಸಿಗೆಯಲ್ಲಿ ವಿದ್ಯುತ್ ಅಭಾವ ಇತ್ತು. ಕಲ್ಲಿದ್ದಲನ್ನು ಸ್ಟಾಕ್ ಮಾಡಿಕೊಳ್ಳಿ ಮತ್ತು ಆಮದು ಮಾಡಿಕೊಳ್ಳಿ ಎಂದು ಕೇಂದ್ರ ಸರ್ಕಾರ ಕೂಡ ಹೇಳಿತ್ತು. 2008ರ ಮೇ ತಿಂಗಳಲ್ಲಿ ಅಂದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಒಂದೆರಡು ದಿನಗಳ ಮೊದಲೇ ಕೆಪಿಸಿಎಲ್ ನಿಂದ 6 ಲಕ್ಷ ಮೆಟ್ರಿಕ್ ಟನ್ ಖರೀದಿಗೆ ಟೆಂಡರ್ ಕರೆಯಲಾಗಿತ್ತು. ಇದರಲ್ಲಿ 12 ಕಂಪನಿಗಳು ಭಾಗವಹಿಸಿದ್ದವು. ನಾಲ್ಕು ಕಂಪನಿಗಳು ನಮ್ಮ ಎಲ್ಲಾ ಷರತ್ತುಗಳನ್ನು......

(ಗೊಂದಲ)

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಕೃಷಿ ಬಗ್ಗೆ ಅವರು ಮಾತನಾಡಲಿ. ಬೇರೆ ವಿಷಯದ ಬಗ್ಗೆ ಈಗ ಬೇಡ.

ಅಧ್ಯಕ್ಷರು: ಅವರು ಉತ್ತರ ಕೊಡಲಿ. ಈಗ ಏನು ತೊಂದರೆಯಾಗಿದೆ? ಮಾನ್ಯ ನಾಯ್ಡುರವರೇ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನೀವು ಎರಡು ಗಂಟೆ ಮಾತನಾಡಿದ್ದೀರಿ. ಆಗ ನಾವು ನಿಮಗೆ ಏನೂ ಅಡ್ಡಿ ಮಾಡಲಿಲ್ಲ. ಮತ್ತೆ ಆಗ ನಾವೇನೂ ಉತ್ತರ ಕೊಡಲಿಲ್ಲ.

(ಗೊಂದಲ)

ಶ್ರೀ ಸಿ.ಸಿ. ಪಾಟೀಲ್: ನಿಮಗೇಕೆ ಭಯ ತನಿಖೆ ಮಾಡಲಿ ಬಿಡಿ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ ಮತ್ತು ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೆ, ದಯವಿಟ್ಟು ಕುಳಿತುಕೊಳ್ಳಿ. ಅವರು ಮೊದಲು ಉತ್ತರ ಕೊಡಲಿ. ಅನಂತರ ಸರಿಯಾಗಿಲ್ಲವೆಂದು ತಾವು ಹೇಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಉತ್ತರ ಕೇಳಿಸಿಕೊಳ್ಳುವಂಥ ತಾಳ್ಮೆ ಕೂಡ ಅವರಿಗೆ ಇಲ್ಲ.

ಅಧ್ಯಕ್ಷರು: ಮೊದಲು ಅವರು ಕೊಡಲಿ. ಅನಂತರ ಅವರು ಹೇಳಿರುವ ಉತ್ತರ ಸರಿಯಾಗಿಲ್ಲವೆಂದು ತಾವು ಹೇಳಿ. ನಿಮಗೂ ಕೂಡ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: 12 ಕಂಪನಿಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದವು. 4 ಕಂಪನಿಗಳು ಎಲ್ಲಾ ಷರತ್ತುಗಳನ್ನು ಪೂರೈಸಲು qualify ಆಗಿದ್ದವು.

(ಗೊಂದಲ)

ಅಧ್ಯಕ್ಷರು: ಅವರೇನು ಬೇರೆ ವಿಷಯಗಲು ಹೇಳಬಾರದೆ? ನೀವು ಹೇಳಿದಂಥ ವಿಷಯಗಳಿಗೆ ಮಾತ್ರ ಅವರು ಸೀಮಿತರಾಗಿರಬೇಕೆ? ಈ ರೀತಿ ನಡವಳಿಕೆ ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದರಲ್ಲಿ 3 ಜನ Financial bid ಕೊಟ್ಟರು. ಇದರಲ್ಲಿ ಭಾಟಿಯಾ ಇಂಟರ್‌ನ್ಯಾಷನಲ್ ಕಂಪನಿ L1 ಆಗಿತ್ತು. ಅವರು ಒಂದು ಟನ್‌ಗೆ 2967 ರೂಪಾಯಿ ಕೋಟ್ ಮಾಡಿದ್ದರು. ನಾವು ಅವರ ಜೊತೆ ನೆಗೋಷಿಯಟ್ ಮಾಡಿ 2967 ರೂಪಾಯಿ ಒಂದು ಟನ್‌ಗೆ ಇದ್ದಂಥದನ್ನು ಒಂದು ಟನ್‌ಗೆ 68 ರೂಪಾಯಿ ಇಳಿಸಿ 2899 ರೂಪಾಯಿಗೆ ಖರೀದಿ ಮಾಡಬೇಕೆಂದು ತೀರ್ಮಾನ ಮಾಡಿದೆವು. ನಾವು ಬೆಲೆಯಲ್ಲಿ ಇಳಿಕೆ ಮಾಡಿದ್ದರಿಂದ 4.8 ಕೋಟಿ ರೂಪಾಯಿ ಉಳಿತಾಯ ಆಯಿತು. ಇದರಲ್ಲಿ

ಮುಖ್ಯವಾದ ಅಂಶ ಏನೆಂದರೆ, 6 ಲಕ್ಷ ಟನ್ ಕೊಡಬೇಕೆಂದು ಅಗ್ರಿಮೆಂಟ್ ಆಗಿ ನಾವು ತೆಗೆದುಕೊಳ್ಳುವಾಗ ಇದರಲ್ಲಿ 15% ಜಾಸ್ತಿಯಾದರೂ ನೀವು ಕೊಡಬೇಕು. 15% ಅಕಸ್ಮಾತ್ ಕಡಿಮೆಯಾದರೆ, ನಾವು ತೆಗೆದುಕೊಳ್ಳುವುದಿಲ್ಲ. ಈ ಕಂಡಿಷನ್ ಆದಮೇಲೆ ಅವರನ್ನು ಒಪ್ಪಿಸಿದೆವು. ಭಾಟಿಯಾ ಕಂಪನಿಗೆ ಈ ಜವಾಬ್ದಾರಿಯನ್ನು ಕೊಟ್ಟ ಮೇಲೆ 6 ಲಕ್ಷ ಟನ್‌ನಷ್ಟು ಕೋಲ್ ಅನ್ನು ಅವರಿಂದ ಖರೀದಿ ಮಾಡಿದ್ದೇವೆ.

6 ಲಕ್ಷ ಟನ್ ಕೊಲ್ ಜಾಸ್ತಿ ಬೇಕೆಂದು ತೀರ್ಮಾನ ಮಾಡಿದೆವು. ಇದು ಭಾರತ ಸರ್ಕಾರದ ಕಂಪನಿಯಾಗಿದ್ದರಿಂದ ಅವರಿಗೆ ಟೆಂಡರ್‌ನ್ನು ಕರೆಯದೆ ನಾವು exemptionನ್ನು ಕೊಟ್ಟಿದ್ದೆವು. ಅವರನ್ನು ನೇರವಾಗಿ ಕರೆದೆವು, ಭಾಟಿಯಾ ಸೇರಿ ನಾವು MMTCಯಿಂದ ಖರೀದಿಯನ್ನು ಮಾಡಬೇಕಾಯಿತು. 17 ರಾಜ್ಯಗಳು ನಮಗಿಂತ ಹೆಚ್ಚಿಗೆ ಕೊಟ್ಟು MMTCಯಿಂದ ಖರೀದಿ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಟೆಂಡರ್ ಮೂಲಕವೇ ಕೊಳ್ಳಬೇಕೆಂದು ಹೈಕೋರ್ಟಿಗೆ ಕೆಲವರು ಹೋದರು ಮಾನ್ಯ ಜಯಚಂದ್ರರವರೆ, ನಾವು ಈ exemptionನ್ನು ಕೊಟ್ಟಿದ್ದೆವು. ಅರ್ಧ ಟೆಂಡರ್‌ನ್ನು ಕೊಟ್ಟಿದ್ದು ಆ ಪ್ರಕಾರ ಅವರು ಸಪ್ಲೈ ಮಾಡಿದ್ದರು. ಅಷ್ಟು ಹೊತ್ತಿಗೆ ಹೈಕೋರ್ಟ್, ಸುಪ್ರೀಂಕೋರ್ಟು ನೀವು ಅರ್ಧ ಬೇಕಾದರೆ ತೆಗೆದುಕೊಳ್ಳಿ ಇನ್ನು ಹೆಚ್ಚು ನೀವು ಪೂರ್ಣ ಮಾಡಬೇಡಿ. ನೀವು ಟೆಂಡರ್‌ನ್ನೇ ಕರೆಯಬೇಕು. ಕೇಂದ್ರ ಸರ್ಕಾರದ್ದು ಆದರೂ ನೀವು ಏಕೆ ನೇರವಾಗಿ ಕೊಡುತ್ತೀರಿ ಎಂದು ಅವರು ಹೇಳಿದರು. ಹೀಗಾಗಿ ನಾವು 50% ಖರೀದಿಯನ್ನು ಮಾಡಿದ್ದೆವು. ಅದನ್ನು ಅಲ್ಲಿಗೆ ನಿಲ್ಲಿಸಿಬಿಟ್ಟೆವು. ಬಹಳ ಮುಖ್ಯವಾಗಿ ಈ ವರ್ಷ 2009–10ರಲ್ಲಿ ಇದೇ ಭಾಟಿಯ International Companyಗೆ ರೂ. 4,180 per tonne ಖರೀದಿಗೆ ಒಪ್ಪಂದ ಆಗಿದೆ. ಬೇರೆ ರಾಜ್ಯವೆಂದರೆ, ಪಕ್ಕದ ಆಂಧ್ರದಿಂದಲೂ ನಾನು ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಅವರು ಪರ್‌ಟನ್‌ಗೆ ಇದರಲ್ಲಿ 5,555 ರೂಪಾಯಿಯನ್ನು ಕೊಡುತ್ತಿದ್ದಾರೆ. ತಮಿಳುನಾಡಿನವರು 4,880 ರೂಪಾಯಿಗಳನ್ನು ಕೊಡುತ್ತಿದ್ದಾರೆ. ನಾವು 4,180 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅಂದರೆ ಉಳಿತಾಯವನ್ನು ಮಾಡಿ ನಮ್ಮ ಅಧಿಕಾರಿಗಳು

ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿ ನಮಗೆ ಉಳಿಸುವಂತಹ ಕೆಲಸವನ್ನು ಮಾಡಿದ್ದಾರೆ. ಆದರೆ 2002 ರಿಂದ 2007–08ರವರೆಗೆ 7 ವರ್ಷಗಳ ಕಾಲ 3 ಕಂಪನಿಗಳಿಗೆ ಅಂದರೆ Gupta Coal, R.N. Energy, Global Coal, ಇವುಗಳಿಗೆ ಒಂದು ವರ್ಷಕ್ಕೆ 500 ಕೋಟಿ ರೂಪಾಯಿಗಳನ್ನು ಬರೀ ವಾಷ್ ಮಾಡುವುದಕ್ಕೋಸ್ಕರ ಹಿಂದಿನವರು ಹಣವನ್ನು ಕೊಟ್ಟರು. 58 ಲಕ್ಷ ಮೆಟ್ರಿಕ್ ಟನ್‌ಗೆ ಒಂದು ವರ್ಷಕ್ಕೆ ಕೋಲ್ ವಾಷ್ ಮಾಡುವುದಕ್ಕೆ 500 ಕೋಟಿ ರೂಪಾಯಿಗೆ ಕೊಟ್ಟರು. ಅಂದರೆ 7 ವರ್ಷದಲ್ಲಿ ಅನಗತ್ಯವಾಗಿ 3500 ಕೋಟಿ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಯಿತೆಂದು ಒಂದು ಅಂದಾಜು. ಈ ವರ್ಷ ನಾವು ಅಧಿಕಾರಕ್ಕೆ ಬಂದ ಮೇಲೆ ಏನು ಮಾಡಿದೆವು ಅಂದರೆ, ಇದನ್ನು ನಾನು ಹೇಳಬೇಕಲ್ಲ? ಹಿಂದೆ ಇವರು ಕೊಟ್ಟಾಗ ಏನು ಮಾಡಿದರು? ಪ್ರತಿ ವರ್ಷ ಕರೆಯಬೇಕಾಗಿತ್ತು. 500 ಕೋಟಿ ರೂಪಾಯಿಗಳು ಪ್ರತಿ ವರ್ಷ ಜಾಸ್ತಿಯಾಯಿತಲ್ಲ? ಸಾಮಾನ್ಯವಾಗಿ ವಾಷ್ ಮಾಡುವುದಕ್ಕೆ ಪ್ರತಿ ವರ್ಷ ಟೆಂಡರ್‌ನ್ನು ಕರೆಯಬೇಕಾಗಿತ್ತು. ಟೆಂಡರ್ ಕರೆಯಲಿಲ್ಲ. ಟೆಂಡರ್ ಕರೆಯದೇ ಅವರಿಗೆ extend ಮಾಡಿಕೊಳ್ಳುತ್ತಾ ಬಂದರು. ಇದರ ಪರಿಣಾಮ ಒಂದು ಅಂದಾಜಿನ ಪ್ರಕಾರ ಈ ನಮ್ಮ ಸರ್ಕಾರಕ್ಕೆ 7 ವರ್ಷದಲ್ಲಿ 3,500 ಕೋಟಿ ರೂಪಾಯಿಗಳ ಭಾರ ಬಿದ್ದಿದೆ. ಇನ್ನೊಂದು ಬಹಳ ನೀವು ಆಶ್ಚರ್ಯಚಕಿತರಾಗಬಹುದು. ಕೋಲ್ ಒರಿಸ್ಸಾದ ತಾಲಚ್ಚೇರ್‌ನಿಂದ ರಾಯಚೂರಿಗೆ ಬರಬೇಕು. ಅದು ನೇರವಾಗಿ ಬರಬಹುದಾಗಿತ್ತು. ರೈಲ್ವೆಯಿಂದ ತರಲು ಅವಕಾಶವಿದ್ದರೂ ಸಹ ತಾಲಚ್ಚೇರ್‌ನಿಂದ ಪ್ಯಾರಾದೀಪ್‌ಗೆ ಬಂತು. ಅಲ್ಲಿಂದ ರೈಲ್ವೆ ಮುಖಾಂತರ ಚೆನ್ನೈಗೆ ಬಂತು, ಚೆನ್ನೈನಿಂದ ರಾಯಚೂರಿಗೆ ಬಂತು, 350 ಕಿ.ಮೀ. ಸುತ್ತಿಕೊಂಡು ಬಂತು. ಒಂದು ವರ್ಷಕ್ಕೆ 160 ಕೋಟಿ ರೂಪಾಯಿಗಳು ನಷ್ಟ ಆಯಿತು. ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಇದನ್ನು ರದ್ದು ಮಾಡಿದ್ದೇವೆ. ಇದರ ಬಗ್ಗೆ ಸಮಗ್ರವಾದಂತಹ ತನಿಖೆಯು ಆಗಬೇಕೆಂದು ನನಗೆ ನಾನು ವಾಸ್ತವಿಕ ಸತ್ಯಸಂಗತಿಗಳು ಗೊತ್ತಾಗಬೇಕೆಂದು ಹೇಳಿ Retired High Court Judgeರವರಿಂದ ಈ ಸಮಗ್ರವಾದಂತಹ ಒಂದು ತನಿಖೆಯನ್ನು ಮಾಡಬೇಕೆಂದು ತೀರ್ಮಾನವನ್ನು ಮಾಡಿದ್ದೇನೆ. ಈ

ತನಿಖೆ ಆದಷ್ಟು ಬೇಗ ಮಾಡಿಸುತ್ತೇನೆ. ಪ್ಯಾರಾದೀಪ್‌ದಿಂದ ಚೆನ್ನೈಗೆ ಸಮುದ್ರದಿಂದ ಬಂತು. ಅದರಿಂದ ಇವೆಲ್ಲವೂ ಏನೇನು ಆಗಿದೆ ಎಂಬುದರ ಬಗ್ಗೆ ತನಿಖೆಯು ಆದಾಗ ಮಾತ್ರ ಗೊತ್ತಾಗುತ್ತದೆ. ಮುಂದೆ ಬರುವವರು ತಪ್ಪನ್ನು ಮಾಡಬಾರದು. ತಪ್ಪು ಮಾಡಿದ್ದರೆ ಯಾರು ಅಧಿಕಾರಿಗಳು ಸೇರಿದ್ದಾರೆ ಅಂತಹವರ ಮೇಲೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅದಕ್ಕೋಸ್ಕರ ಈ ಸಂದರ್ಭದಲ್ಲಿ ಹೇಳಿದ್ದೇನೆ. ನೈಸ್ ಕಂಪನಿಯ ಬಗ್ಗೆ ಆ ಮನೆಯಲ್ಲಿ ಪ್ರಸ್ತಾಪವಾಗಿದೆ. ಇಲ್ಲಿ ಆಗಿಲ್ಲ. ಅದಕ್ಕೋಸ್ಕರ ನಾನು ಇಲ್ಲಿ ಚರ್ಚೆ ಮಾಡುವುದಿಲ್ಲ. ನನ್ನ ಅಪೇಕ್ಷೆ ಏನೆಂದರೆ, ನೈಸ್ ಕಂಪನಿಯ ವಿಷಯದಲ್ಲಿ ಒಂದು ದಿವಸ ಕಾಲ ಈ ಮನೆಯಲ್ಲಿ ಸಮಗ್ರವಾದಂತಹ ಚರ್ಚೆಯಾಗಬೇಕು. ವಾಸ್ತವಿಕವಾದಂತಹ ಸತ್ಯಾಂಶಗಳು ಏನು ಎಂಬುದು ರಾಜ್ಯದ ಜನತೆಗೆ ಗೊತ್ತಾಗಬೇಕು. ದೇಶದ ಜನತೆಗೂ ಗೊತ್ತಾಗಬೇಕು. ಇದರಲ್ಲಿ ಯಾರು ಎಷ್ಟರಮಟ್ಟಿಗೆ ಜವಾಬ್ದಾರರು ಇದ್ದಾರೆ, ಈ ಸಂಗತಿಗಳೂ ಕೂಡ ಚರ್ಚೆಯಾಗಬೇಕೆಂದು ನಾನು ಈ ಸಲಹೆಯನ್ನು ಕೊಡುತ್ತಿದ್ದೇನೆ. ಬಹಳ ಮುಖ್ಯವಾಗಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಸಿದ್ದರಾಮಣ್ಣನವರು ಹೇಳಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕು. ನಾನು ಒಂದು ಮಾತನ್ನು ಈ ಮನೆಯ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರತಿ ವರ್ಷ ನೀವೆಲ್ಲರೂ ಅಪೇಕ್ಷೆಪಟ್ಟಂತೆ 60 ದಿವಸವಾದರೂ ಮಿನಿಮಮ್ ಅಧಿವೇಶನ ನಡೆಯಲೇಬೇಕು. ಇದು 7–8 ವರ್ಷದಿಂದ ಕಾರ್ಯರೂಪಕ್ಕೆ ಬಂದಿಲ್ಲ.

ಶ್ರೀ ಸಿದ್ದರಾಮಯ್ಯ: ನೀವು ಕಾನೂನು ಮಾಡಿದ ಮೇಲೆ ಅದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಕಾನೂನು ಮಾಡಿದ ಮೇಲೂ ಆಗಿಲ್ಲ.

ಶ್ರೀ ಸಿದ್ದರಾಮಯ್ಯ: ಕಾನೂನು ಮಾಡಿದ ಮೇಲೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಆಯಿತಪ್ಪಾ. ಕಾನೂನು ಆದಮೇಲೆ ಆಗಲಿಲ್ಲ. ಓ.ಕೆ. ಕಾನೂನು ಆದ ಮೇಲೆ ಆಗಲಿಲ್ಲ. ಇದಕ್ಕೆ ಕಾನೂನು ಅಗತ್ಯವೇ ಇರಲಿಲ್ಲ. ಹೆಚ್ಚು ದಿವಸ ಅಧಿವೇಶನ ನಡೆಯಬೇಕೆಂದು ಕಾನೂನು ಮಾಡಿಕೊಳ್ಳುವಂತಹ ಪರಿಸ್ಥಿತಿ ಏತಕ್ಕೆ ಬಂತೆಂದರೆ, ಹೆಚ್ಚು ದಿವಸ ಅಧಿವೇಶನ

ನಡೆಸದೆ ಇದ್ದುದರಿಂದ ನಾವೇ ಒಂದು ಕಾನೂನನ್ನು ಮಾಡಿಕೊಂಡೆವು. ನಾನು ಈ ಮನೆಯ ಮೂಲಕ ರಾಜ್ಯದ ಜನತೆಗೆ ಭರವಸೆಯನ್ನು ಕೊಡುತ್ತೇನೆ. ಲೋಕಸಭೆಯಲ್ಲಿ ಏನು ಸತ್‌ಸಂಪ್ರದಾಯವಿದೆ, ಅದೇ ರೀತಿಯಲ್ಲಿ ವರ್ಷದ ಪ್ರಾರಂಭದಲ್ಲಿಯೇ 60 ದಿವಸ ವಿಧಾನಮಂಡಲದ ಅಧಿವೇಶನ ಹೇಗೆ ನಡೆಯಬೇಕು. ಯಾವ ಯಾವ ತಿಂಗಳಲ್ಲಿ ಎಷ್ಟು ದಿವಸಗಳು ನಡೆಯಬೇಕು ಈ ಬಗ್ಗೆ ಸನ್ಮಾನ್ಯ ಅಧ್ಯಕ್ಷರು ಒಂದು ಟೈಮ್ ಟೇಬಲ್‌ನ್ನು ಹಾಕಿದರೆ ಒಳ್ಳೆಯದು.

ಅಧ್ಯಕ್ಷರು: ಬಿಎಸಿ ಮೀಟಿಂಗ್‌ನಲ್ಲಿ suggestion ಮಾಡಿದ್ದೀರಲ್ಲಾ ಆ ರೀತಿ One year calendar of events ಹಾಕಿ ಬಿಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಆಗಿಬಿಡಬೇಕು ಸಾರ್. I am ready Sir.

ಅಧ್ಯಕ್ಷರು: ಚಳಿಗಾಲದ ಅಧಿವೇಶನ, ಬೇಸಿಗೆಕಾಲದ ಅಧಿವೇಶನ ಅದು ಒಂದು ವರ್ಷದ್ದೆ,

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ನಿಮ್ಮ ಕಾಲದಲ್ಲಿ.....

ಶ್ರೀ ಸಿದ್ದರಾಮಯ್ಯ: ಈ ವರ್ಷವೇ ಮಿನಿಮಮ್ 60 ದಿವಸಗಳ ಕಾಲ ಅಧಿವೇಶನವನ್ನು ಮಾಡೋಣ. ಮುಂದಿನ ವರ್ಷ ಎಷ್ಟು ದಿವಸಗಳ ಮಾಡಬೇಕೆಂದು ಅದು calender of event ಮಾಡೋಣ.

ಅಧ್ಯಕ್ಷರು; ನಾವು ಡಿಸೆಂಬರ್ ತಿಂಗಳಿನಲ್ಲಿಯೇ ಡಿಸಿಷನ್ ತೆಗೆದುಕೊಂಡು ಬಿಡಬೇಕು.

ಶ್ರೀ ಸಿದ್ದರಾಮಯ್ಯ: ಈ ನವೆಂಬರ್‌ನಲ್ಲಿ ಎಷ್ಟು ದಿವಸಗಳ ಕಾಲ ಅಧಿವೇಶನ ನಡೆಯುತ್ತದೆ? ಈ ತಿಂಗಳಲ್ಲಿ 10 ದಿನ ಅಥವಾ 15 ದಿನ ನಡೆಸಲಿ, ಇನ್ನು ಉಳಿದ ದಿನಗಳ ಅಧಿವೇಶನವನ್ನು ನವೆಂಬರ್ ತಿಂಗಳಲ್ಲಿ ನಡೆಸಲಿ. ಒಟ್ಟಾರೆಯಾಗಿ 60 ದಿನಗಳನ್ನು ನಡೆಸೋಣ. ಆಮೇಲೆ ಮುಂದಿನ ವರ್ಷ ಏನು ಮಾಡಬೇಕೆಂದು ಟೈಮ್ ಟೇಬಲ್‌ನ್ನು ಹಾಕಿಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ನಿಮ್ಮ ವಿಷಯವನ್ನೇ ಮಾತನಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಪಾರ್ಲಿಮೆಂಟ್‌ನಲ್ಲಿ ಹೇಗೆ ಬಜೆಟ್ ಸೆಷನ್‌ನ್ನು ಯಾವತ್ತು ಕರೆಯುತ್ತಾರಲ್ಲಾ, ಆ ತರಹ ಅದನ್ನು ರೂಲ್ಸ್ ಕಮಿಟಿಯಲ್ಲಿಟ್ಟು ನಾಳೆನೇ ಅಪ್ರೂವ್ ಮಾಡಿಸಿಕೊಟ್ಟರೆ .....

ಅಧ್ಯಕ್ಷರು: ಇದಕ್ಕೆ Rules Committee ಬೇಕಾಗಿಲ್ಲ. We have to take decision. BAC meetingನಲ್ಲಿ decisionನ್ನು ತೆಗೆದುಕೊಳ್ಳಬಹುದು.

ಶ್ರೀ ಟಿ.ಬಿ. ಜಯಚಂದ್ರ: That is a ...

ಅಧ್ಯಕ್ಷರು: ಬಿಎಸಿ ಮೀಟಿಂಗ್‌ನಲ್ಲಿ ಡಿಸಿಷನ್‌ನ್ನು ತೆಗೆದುಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಸಭಾಧ್ಯಕ್ಷರೆ, ನೀವು ಸಲಹೆಯನ್ನು ಕೊಟ್ಟಿದ್ದೀರಿ. 60 ದಿವಸ ನಡೆಯುವ ಬಗ್ಗೆ ಟೈಮ್ ಟೇಬಲ್ ಹಾಕಿ. ಪಾರ್ಲಿಮೆಂಟ್‌ನಲ್ಲಿ ಏನು ಸತ್‌ಸಂಪ್ರದಾಯವಿದೆ. ಅದನ್ನು ಇಲ್ಲಿ ಹಾಕಿಕೊಡಬೇಕು. ಇದುವರೆಗೂ 29 ದಿವಸ ಅಧಿವೇಶನ ನಡೆದಿದೆ. ಈಗ 6 ದಿವಸಗಳ ಕಾಲ ಅಧಿವೇಶನ ನಡೆಯುತ್ತದೆ. ಒಟ್ಟು 35 ದಿವಸಗಳು ಆಯಿತು. ನವೆಂಬರ್‌ನಲ್ಲಿ ಚಳಿಗಾಲದ ಅಧಿವೇಶನ 20 ದಿವಸಗಳ ಕಾಲ ಹೇಗೆ ನಡೆಯಬೇಕೆಂಬುದರ ಬಗ್ಗೆ ನೀವು ಈಗಲೇ ಟೈಮ್ ಟೇಬಲ್‌ನ್ನು ಹಾಕಿಬಿಡಿ. ಅದಕ್ಕೆ ನಾವು ಸಿದ್ಧರಿದ್ದೇವೆ. ಒಟ್ಟು 55 ದಿವಸಗಳು ಆಯಿತು.

ಶ್ರೀ ಸಿದ್ದರಾಮಯ್ಯ: ಇನ್ನು 5 ದಿವಸಗಳ ಕಾಲ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಯಾಕೆ ಸಾರ್ ಹೀಗೆ ಮಾಡುತ್ತಾರೆ?

ಶ್ರೀ ಸಿದ್ದರಾಮಯ್ಯ: ಏನೂ ಮಾಡಿಲ್ಲ. ಇನ್ನು 5 ದಿವಸಗಳ ಕಾಲ ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಹೂಂ. ಅದಕ್ಕೂ ನಾನು ರೆಡಿ ಇದ್ದೇನೆ. ನೀವು ದಯಮಾಡಿ ಈ ವರ್ಷದಿಂದಲೇ 60 ದಿವಸಗಳ ಕಾಲ ಆಗುವ ಹಾಗೆ ಮಾಡಿದರೆ, I will be the happiest man. ನನಗೆ ಏನೂ ತೊಂದರೆ ಇಲ್ಲ. ಈ ಸಂಪ್ರದಾಯವನ್ನು ಮುಂದುವರಿಸಬೇಕು. ಇನ್ನು ಎರಡನೆಯದಾಗಿ

ಹೇಳುವುದಾದರೆ, ಆಡಳಿತದಲ್ಲಿ ಸುಧಾರಣೆ ಆಗಬೇಕೆಂದು ಇದ್ದರೆ ಸರ್ಕಾರಿ ನೌಕರರು ಸಮಯಕ್ಕೆ ಸರಿಯಾಗಿ ಸರ್ಕಾರಿ ಕಛೇರಿಗೆ ಬರಬೇಕು. ಅಗತ್ಯವಿದ್ದರೆ ಒಂದು ಗಂಟೆ ಕಾಲ ಹೆಚ್ಚಿಗೆ ಕುಳಿತುಕೊಳ್ಳುವುದಕ್ಕೆ ಸಿದ್ಧರಾಗಬೇಕು. ಅತಿವೃಷ್ಟಿಯಿಂದ ಜನರು ಸಂಕಷ್ಟವನ್ನು ಎದುರಿಸುತ್ತಿರುವಂತಹ ಈ ಸಂದರ್ಭದಲ್ಲಿ 100ಕ್ಕೆ 90 ಜನ ರೈತರ ಮಕ್ಕಳೇ ಗ್ರಾಮೀಣ ಪ್ರದೇಶದಿಂದ ಬಂದು ಇಲ್ಲಿ ನೌಕರರು ಇರಬೇಕಾದರೆ, ಅವರು ಜನರಿಗೆ available ಇರಬೇಕು. ಗ್ರಾಮಾಂತರ ಪ್ರದೇಶದಲ್ಲಿ ಕೊನೆಯ ಪಕ್ಷ ತಾಲ್ಲೂಕಿನಲ್ಲಿ ಕೆಲಸವನ್ನು ಮಾಡುವ ಅಧಿಕಾರಿಗಳು ತಾಲ್ಲೂಕು ಕೇಂದ್ರದಲ್ಲಿ ಆದರೂ ಇರಬೇಕು. ನಾನು Chief Secretaryಯವರಿಗೆ ಮತ್ತು ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಯವರಿಗೆ ಸೂಚನೆಯನ್ನು ಕೊಡುತ್ತೇನೆ. ನೀವು ದೂರವಾಣಿ ಮೂಲಕ ಸಂಪರ್ಕ ಮಾಡಿ. ಯಾರಿಗೆ without your permission ತಾಲ್ಲೂಕು ಕೇಂದ್ರವನ್ನು ಬಿಟ್ಟು ತನ್ನ ಹೆಂಡತಿ ಮಕ್ಕಳು ಎಂದು ಹೇಳಿ ನಗರಕ್ಕೆ ಬರುವಂತಹ ಅಭ್ಯಾಸ ಏನು ಇರುತ್ತದೆ ಅಂಥವರಿಗೆ ಒಂದು ಅಥವಾ ಎರಡು ಸಾರಿ ವಾರ್ನ್ ಮಾಡಿ, ಮೂರನೇ ಸಾರಿಗೆ "ಇಷ್ಟವಿಲ್ಲದಿದ್ದರೆ resign ಮಾಡಿಹೋಗಿ ಬೇರೆಯವರು ಬರುತ್ತಾರೆ" ಎಂದು ಹೇಳಬೇಕು. ಈ ಕಟ್ಟುನಿಟ್ಟಿನ ಒಂದು ಕ್ರಮವನ್ನು ಜಾರಿಗೆ ತರಬೇಕೆನ್ನುವಂತಹ ಒಂದು ಸೂಚನೆಯನ್ನು ನಾನು ನಮ್ಮ ಅಧಿಕಾರಿಗಳಿಗೆ ಕೊಡುವವನಿದ್ದೇನೆ. ಅದನ್ನು ಕೊಡುತ್ತೇನೆ. ಎರಡನೆಯದಾಗಿ ನಾನು ನಮ್ಮ ಸಚಿವ ಸಂಪುಟದ ಸದಸ್ಯರಿಗೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಹೋದ ಕಡೆಯಲ್ಲಿ ರಿವ್ಯೂ ಮಾಡುತ್ತೀರಿ, ಎಲ್ಲವನ್ನು ಮಾಡುತ್ತೀರಿ, 10 ಗಂಟೆಗೆ ಕಛೇರಿಗೆ ಬರಬೇಕು, 10.30 ಗಂಟೆಗೆ ಆಗಾಗ್ಗೆ ವಾರಕ್ಕೆ ಒಂದು ಸಾರಿ, 15 ದಿನಕ್ಕೆ ಒಂದು ಸಾರಿ, ತಿಂಗಳಿಗೆ ಒಂದು ಸಾರಿ ನಿಮ್ಮ ಜಿಲ್ಲೆಯ ಒಂದು ಕಛೇರಿಗೆ ಹೋಗಿ ಸುಮ್ಮನೆ ಕುಳಿತುಕೊಳ್ಳಿ. ಏನೂ ಮಾತನಾಡಬೇಡಿ. ಯಾರು ಎಷ್ಟುಹೊತ್ತಿಗೆ ಬರುತ್ತಾರೆ ಎಂದು ನೋಟ್ ಮಾಡಿಕೊಳ್ಳಿ. ನಾನೂ ಸಹ ಬೆಂಗಳೂರಿನಲ್ಲಿದ್ದಾಗ ಅಥವಾ ಬೇರೆ ಕಡೆಗೆ ಹೋದಾಗ ಬೆಳಿಗ್ಗೆ 10.00 ಗಂಟೆಗೆ ಅಥವಾ 10.15 ಗಂಟೆಗೆ ಹೋಗಿ ಬಂದು

ಕಛೇರಿ ಕೆಲಸ ನಡೆಯುತ್ತಿದೆ. ಮತ್ತೆ ಸಾಯಂಕಾಲ 4.45 ಗಂಟೆಗೆ ಅಥವಾ 5.00 ಗಂಟೆಗೆ ಕಛೇರಿ ಸಮಯ ಮುಗಿಯುವ ಟೈಮ್‌ಗೆ 5 ಅಥವಾ 10 ನಿಮಿಷ ಮುಂಚೆ ಹೋಗುವ ಅಭ್ಯಾಸ ಮಾಡಿದರೆ ಕೇಳುವವರು ಇದ್ದಾರೆ ಎಂದು ಸ್ವಲ್ಪ ಸುಧಾರಣೆಯಾಗಬಹುದು ಎಂಬ ಆಶಾಭಾವನೆ ಅಷ್ಟೇ. ಈ ಪ್ರಯತ್ನ ನಮ್ಮ ಶಾಸಕ ಮಿತ್ರರು ಮಾಡಬೇಕು. ನಾವು ಈ ದಿಕ್ಕಿನಲ್ಲಿ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇವೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮುಂದೆ ಕೋಮು ಗಲಭೆಗಳು ಆದಾಗ ಕಾನೂನು ಮತ್ತು ಸುವ್ಯವಸ್ಥೆಯು ಹದಗೆಟ್ಟಾಗ ಇದರ ಸಂಪೂರ್ಣ ಜವಾಬ್ದಾರಿ ಜಿಲ್ಲಾಧಿಕಾರಿ ಮತ್ತು ಎಸ್.ಪಿ. ಯವರು ಹೊರಬೇಕಾಗುತ್ತದೆ. ಅವರ ಮೇಲೆ ನಿರ್ದಾಕ್ಷಿಣ್ಯವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಹಿಂದೂ ಅಥವಾ ಮುಸ್ಲಿಂ ಇರಲಿ, ಕ್ರಿಶ್ಚಿಯನ್ ಇರಲಿ ಅವರ ಧರ್ಮದ ಅನ್ವಯ ಪೂಜೆ, ಪುನಸ್ಕಾರ, ಮೆರವಣಿಗೆಗೆ ಒಂದು ಸಣ್ಣ ಅಡ್ಡಿಯನ್ನೂ ಪೋಲೀಸ್ ಇಲಾಖೆಯ ಅಧಿಕಾರಿಗಳು ಮಾಡಕೂಡದು. ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕು. ಪೋಲೀಸ್ ಬಂದೋಬಸ್ತನ್ನು ಮಾಡಬೇಕು. ಅಲ್ಪಸಂಖ್ಯಾತ ಮುಸ್ಲಿಂರ ಮೆರವಣಿಗೆ ಇರಬಹುದು. ಕ್ರಿಶ್ಚಿಯನ್‌ರವರ ಹಬ್ಬ ಇರಬಹುದು, ಹಿಂದೂಗಳ ಹಬ್ಬ ಇರಬಹುದು. ಆ ಸಂಪ್ರದಾಯಗಳು ಇವೆ. ಗಣಪತಿ ಹಬ್ಬ ಎಂದಾಕ್ಷಣ ಗಲಾಟೆ ಶುರು ಎಂದರ್ಥ. ಏಕೆ ಗಲಾಟೆಯಾಗುತ್ತದೆ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಯಾಯ ಸಮಾಜದವರು ತಮ್ಮ ಧರ್ಮದ ಪಾಲನೆಗಾಗಿ ತಮ್ಮ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಅಡ್ಡಿ ಮಾಡಲು ನಾವು ಯಾರು? ಅಡ್ಡಿಯನ್ನು ಮಾಡುವವರನ್ನು ಬಿಡಬಾರದು. ಈ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವುದರ ಬಗ್ಗೆ ನಾನು ಸೂಚನೆಯನ್ನು ಕೊಡುತ್ತೇನೆ. ಸೋಮಾರಿ ಅಧಿಕಾರಿಗಳು, ಬೇಜವಾಬ್ದಾರಿ ಅಧಿಕಾರಿಗಳು ಇದ್ದಾರೆ. ಭ್ರಷ್ಟಾಚಾರದಲ್ಲಿ ಒಂದು ರೀತಿಯಲ್ಲಿ ಲೋಕಾಯುಕ್ತದವರು ಮಾಡಿರುವಂತಹ ಆರೋಪವನ್ನು ನೋಡಿದಾಗ ಅಥವಾ ತನಿಖೆಯಿಂದ ಬರುತ್ತಿರುವಂತಹ ವರದಿಯನ್ನು ನೋಡಿದಾಗ ಭಯವಾಗುತ್ತದೆ.

ಅದಕ್ಕೋಸ್ಕರ ಕೆಸಿಎಸ್‌ಆರ್‌ಗೆ ಒಂದು ಬದಲಾವಣೆಯನ್ನು ತಂದು ಐಎಎಸ್:ಐಪಿಎಸ್ ಅಧಿಕಾರಿಗಳು ಸೇರಿದಂತೆ ತಪ್ಪು ಮಾಡಿದವರಿಗೆ ಕಡ್ಡಾಯ ನಿವೃತ್ತಿಯನ್ನು ಮಾಡುವುದಕ್ಕೆ ನಾವು ಕಾರ್ಯಕ್ರಮವನ್ನು ರೂಪಿಸುವುದು ಅನಿವಾರ್ಯವಾಗಿದೆ ಎಂಬ ಮಾತನ್ನು ಹೇಳುತ್ತೇನೆ. ಕೇಂದ್ರ ಸಚಿವರಾದ ಶ್ರೀ ವೀರಪ್ಪ ಮೊಯ್ಲಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಭ್ರಷ್ಟ ಅಧಿಕಾರಿಗಳನ್ನು ಶಿಕ್ಷಿಸುವುದಕ್ಕೆ ಸಂವಿಧಾನದ 311ನೇ ವಿಧಿ ರಕ್ಷಾ ಕವಚವಾಗಿದೆ. ಅದು ದುರ್ಬಳಕೆಯಾಗುತ್ತಿದೆ. ಸಂವಿಧಾನದ 309ನೇ ವಿಧಿಗೆ ಒಂದು ಸೂಕ್ತವಾದಂತಹ ತಿದ್ದುಪಡಿಯನ್ನು ತರಬೇಕೆಂದು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದಕ್ಕೆ ಪಾರ್ಲಿಮೆಂಟ್‌ನಲ್ಲಿ ಬೆಂಬಲವನ್ನು ಕೊಡುತ್ತೇವೆ. ಕರ್ನಾಟಕದಲ್ಲಿ ಈ ಬಗ್ಗೆ ಬಿಗಿ ನಿಲುವನ್ನು ನಾವು ತೆಗೆದುಕೊಳ್ಳುತ್ತೇವೆ. ಸನ್ಮಾನ್ಯ ಅಧ್ಯಕ್ಷರೆ, ಭೂಕಬಳಿಕೆಯ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ನಾನು ಉತ್ತರವನ್ನು ಕೊಡಬೇಕಾದರೆ ಸಂಬಂಧಪಟ್ಟ ಸಚಿವರು ಕೊಡುತ್ತಾರೆ. ಆದರೆ ಭೂಕಬಳಿಕೆಯು ಬೆಂಗಳೂರಿನಲ್ಲಷ್ಟೇ ಅಲ್ಲ, ಎಲ್ಲಾ ಪ್ರಮುಖ ನಗರಗಳಲ್ಲಿಯೂ ಒತ್ತುವರಿ ಆಗುತ್ತಿದೆ. ಈ ಕೆಲಸವನ್ನು ಬಲಾಢ್ಯರು ಮಾಡುತ್ತಿದ್ದಾರೆ. ಸರ್ಕಾರದ ಕಾರ್ಯಕ್ರಮಗಳಿಗೆ ಒಳ್ಳೆಯ ಯೋಜನೆಗಳಿಗೆ ನೆಲೆಯೇ ಇಲ್ಲದಂತಾಗಿದೆ. ಯಾವನೇ ಇರಬಹುದು, ಕೊನೆಯಪಕ್ಷ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಒತ್ತುವರಿ ಮಾಡಿರುವಂತಹ ಜಮೀನನ್ನು ಸರ್ಕಾರವು ವಾಪಸ್ಸು ತೆಗೆದುಕೊಳ್ಳಬೇಕು. ಇದರ ಬಗ್ಗೆ ತಾವು ಯಾವ ರೀತಿಯಾದಂತಹ ಸಲಹೆಯನ್ನು ಕೊಡುತ್ತೀರಿ, ಆ ರೀತಿ ಬಿಗಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಆ ಬಲಾಢ್ಯರನ್ನು ಮೆಟ್ಟಿ ನಿಲ್ಲಬೇಕು. ಸರ್ಕಾರಕ್ಕೆ ಆ political will ಇದೆ. ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಆ ದಿಕ್ಕಿನಲ್ಲಿ ನಾವು ಮತ್ತು ನೀವೆಲ್ಲರೂ ಸೇರಿ ಮಾಡೋಣ. ರೈತರ ಜ್ವಲಂತ ಸಮಸ್ಯೆ ಇದೆ. ಒಂದು ಅಂದಾಜಿನ ಪ್ರಕಾರ 80 ಲಕ್ಷ ರೈತ ಕುಟುಂಬಗಳು ಇದ್ದರೆ, ಸಾಲ ಸಿಕ್ಕಿರುವುದು 17–18 ಲಕ್ಷ ಜನರಿಗೆ ಮಾತ್ರ ಸಿಕ್ಕಿದೆ. ನಾನು ಆದಷ್ಟು ಬೇಗ Co-operative Institutionಗೆ ಸಂಬಂಧಪಟ್ಟಂತೆ ಪ್ರಮುಖರು ರಾಷ್ಟ್ರೀಕೃತ ಬ್ಯಾಂಕಿಗೆ

ಸಂಬಂಧಪಟ್ಟಂತಹ ಅಧಿಕಾರಿಗಳು ಪ್ರಮುಖರನ್ನು ಕರೆದು ಸಭೆಯನ್ನು ಮಾಡಿ ಹೆಚ್ಚು ಜನರಿಗೆ ಸಾಲ ಸಿಗಬೇಕು ಎನ್ನುವ ಬಗ್ಗೆ ಚರ್ಚೆ ಮಾಡುತ್ತೇನೆ. ಶ್ರೀಮಂತರ ಮನೆಯ ಬಾಗಿಲಿಗೆ ಹೋಗಿ ಕೈಕಟ್ಟಿ ನಿಂತುಕೊಳ್ಳುವುದು ನಿಲ್ಲಬೇಕು. ಕೇಂದ್ರದಲ್ಲಿಯೂ ಈ ಬಗ್ಗೆ ಡಿಬೇಟ್ ಆಗಬೇಕೆಂಬುದರ ಬಗ್ಗೆ ನಾವು ಮನವಿಯನ್ನು ಸಲ್ಲಿಸೋಣ. ಇಲ್ಲಿ ಆದಷ್ಟು ಬೇಗ ಹೆಚ್ಚು ಜನ ರೈತರಿಗೆ ಸಾಲದ ವ್ಯವಸ್ಥೆಯು ಆಗಬೇಕು. ಹೆಚ್ಚು ಜನ ರೈತರಿಗೆ ಬೆಳೆ ವಿಮೆ ಪೂರ್ಣ ಕವರ್ ಆಗಬೇಕು. ಅದು ಪೂರ್ಣ ಕವರ್ ಆಗುತ್ತಿಲ್ಲ. ಯಾವುದೇ ಸರ್ಕಾರಕ್ಕೆ ಅತಿವೃಷ್ಟಿಯಿಂದ ಬರಗಾಲದಿಂದ ಬೆಳೆ ನಾಶವಾದರೆ ಅದಕ್ಕೆ ಪರಿಹಾರ ಕೊಡುವಂತಹ ಶಕ್ತಿ ಇವತ್ತು ಇಲ್ಲ. ಅದಕ್ಕಾಗಿ ಪ್ರತಿಯೊಂದು ಬೆಳೆಗೆ ಬೆಳೆ ವಿಮೆಯು ಅವನಿಗೆ ಭಾರ ಆಗದ ರೀತಿಯಲ್ಲಿ ವಿಮೆ ಕಂತನ್ನು ಕಡಿಮೆ ಮಾಡಿ ಆ ಬೆಳೆ ವಿಮೆಯಲ್ಲಿ ಅವನಿಗೆ ನ್ಯಾಯ ಸಿಗುವಂತೆ ಮಾಡುವುದಕ್ಕೆ ನನ್ನ ಸರ್ಕಾರವು ಬದ್ಧವಾಗಿದೆ. ಆ ದಿಕ್ಕಿನಲ್ಲಿ ಏನೇನು ಮಾಡಬಹುದು ಎಂಬುದನ್ನು ನಾನು ಇವತ್ತು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೋಮು ಗಲಭೆ ಎನ್ನುವಂತಾಹದ್ದು ನಮ್ಮ ಸಮಾಜಕ್ಕೆ ಹಿಡಿದಂತಹ ದೊಡ್ಡ ಪಿಡುಗು. ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ಪ್ರಾರಂಭವಾದಂತಹ ಈ ಪಿಡುಗು ಸ್ವಾತಂತ್ರ್ಯ ನಂತರವೂ ಮುಂದುವರಿದಿದೆ. ಕೋಮು ಗಲಭೆಗೆ ಕಾರಣ ಹುಡುಕುವಂತಹ ಸಮಯ ಇವತ್ತಲ್ಲ. ಇದರ ಬಗ್ಗೆ ವಿವರವಾಗಿ ಚರ್ಚೆಯನ್ನು ಮಾಡೋಣ. ಆದರೆ ಕೆಲವು ರಾಜಕೀಯ ಸಂಘಟನೆಗಳು, ಧಾರ್ಮಿಕ ಮತ್ತು ಸಾಮಾಜಿಕ ಸಂಘಟನೆಗಳು ಕೆಲವೊಮ್ಮೆ ಕೋಮು ಗಲಭೆಗೆ ಉತ್ತೇಜನವನ್ನು ನೀಡಿರಬಹುದು ಎಂಬ ಬಗ್ಗೆ ಚರ್ಚೆಯಾಗಬೇಕು; ಇದಕ್ಕೆ ಪರಿಹಾರವನ್ನು ಹುಡುಕಬೇಕು. ಈ ನಾಡಿನಲ್ಲಿ ಎಲ್ಲಾ ವರ್ಗದ ಜನರು ಒಂದೇ ತಾಯಿಯ ಮಕ್ಕಳಂತೆ ಬಾಳಬೇಕು ಎಂದು ಇಲ್ಲಿರುವಂತಹ ಎಲ್ಲರ ಒಂದು ಅಪೇಕ್ಷೆ ಇದೆ. ನಾನು ಯಾವ ಯಾವ ವರ್ಷ ಎಷ್ಟೆಷ್ಟು ಕೋಮುಗಲಭೆಗಳು ಆಯಿತು, ಎಷ್ಟು ಸಾವುನೋವಾಯಿತು ಈ ಬಗ್ಗೆ ಚರ್ಚೆ ಮಾಡುವಂತಹ ಸಮಯದಲ್ಲಿ ವಿವರಣೆಯನ್ನು ಕೊಡುತ್ತೇನೆ. ಇವತ್ತು ನಿಮಗೆ ಪ್ರಸ್ತಾಪವನ್ನು ಮಾಡುವಂತಹ ಸಂದರ್ಭವಲ್ಲ. ಅದಕ್ಕೆ ನಾನು

ಮಾತನಾಡುವಂತಹ ಸಂದರ್ಭದಲ್ಲಿ ಈಗ ಇಷ್ಟಪಡುವುದಿಲ್ಲ. ಇಲ್ಲಿ ಸಾವಯವ ಕೃಷಿಯ ಬಗ್ಗೆ ಚರ್ಚೆಯಾಯಿತು. ಇದರಲ್ಲಿ ಒಂದು ವ್ಯವಸ್ಥಿತವಾದಂತಹ ಆಂದೋಲನವನ್ನೇ ನಮ್ಮ ಸರ್ಕಾರ ಪ್ರಾರಂಭ ಮಾಡಿದೆ. ಈ ಸಾವಯವ ಕೃಷಿ ಮಿಷನ್ ರಚನೆ ಮಾಡಿದ್ದೇವೆ. ಬಹಳ ಬದ್ಧತೆ ಮತ್ತು ಪ್ರಾಮಾಣಿಕತೆಯಿಂದ ಪಾರದರ್ಶಕತೆಯಿಂದ ನಾವು ಕೆಲಸವನ್ನು ಮಾಡುತ್ತಿದ್ದೇವೆ. ಇದರಲ್ಲಿಯೂ ಸಹ ವಿನಾಕಾರಣ ಆರೋಪಗಳು ಕೇಳಿಬರುತ್ತಿವೆ. 60 ಕೋಟಿ ರೂಪಾಯಿಗಳು ದುರುಪಯೋಗವಾಗಿದೆ ಎಂದು ಹೇಳಿ ಪದೇ ಪದೇ ಒಂದು ಆರೋಪ ಮಾಡುತ್ತಿರುವುದನ್ನು ನಾನು ಕೇಳಿದ್ದೇನೆ. ಸಾವಯವ ಕೃಷಿಗೆ ಬಿಡುಗಡೆ ಮಾಡಿರುವಂತಹ ಹಣ 50 ಕೋಟಿ ರೂಪಾಯಿಗಳು ಮಾತ್ರ, ಈ ಪೈಕಿ 7.5 ಕೋಟಿ ರೂಪಾಯಿಗಳು, ಅದಕ್ಕಿಂತ ಹಿಂದಿನ ವರ್ಷ, ಅಂದರೆ 2007–08ರಲ್ಲಿ ಬಾಕಿ ಬಿಲ್ಲು ಇಲಾಖೆ 7.5 ಕೋಟಿ ರೂಪಾಯಿಗಳನ್ನು ನೀಡಿದೆ. ಆದರೆ ನಮ್ಮ ಅವಧಿಯಲ್ಲಿ 2008–09ರಲ್ಲಿ ಈ ಕಾರ್ಯಕ್ಕೆ ಈ ಮಿಷನ್ ಮೂಲಕ ನೀಡಿರುವ ಹಣ ಕೇವಲ 42.5 ಕೋಟಿ ರೂಪಾಯಿಗಳು, ಆ ಪೈಕಿ ಈವರೆಗೆ ರೈತರ ಬ್ಯಾಂಕ್ ಖಾತೆಗೆ ಜಮಾ ಆಗಿರುವುದು 10 ಕೋಟಿ ರೂಪಾಯಿಗಳು. 60 ಕೋಟಿ ರೂಪಾಯಿಗಳು ಎಲ್ಲಿ ದುರುಪಯೊಗವಾಗುತ್ತದೆ? ಉಳಿದ 32.5 ಕೋಟಿ ರೂಪಾಯಿಗಳ ಹಣ ಇನ್ನು ಕೃಷಿ ಸಹಾಯಕ ನಿರ್ದೇಶಕರು ಮತ್ತು ಇದಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ರಚಿಸಿರುವಂತಹ ಸಾವಯವ ಕೃಷಿ ಟ್ರಸ್ಟ್ ಅಧ್ಯಕ್ಷರ ಜಂಟಿ ಖಾತೆಯಲ್ಲಿದೆ. ಪ್ರತಿ ತಾಲ್ಲೂಕಿನಲ್ಲಿ ಈ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದಕ್ಕೆ 18 ಜನ ರೈತರನ್ನು ಸೇರಿಸಿ ಒಂದು ಟ್ರಸ್ಟ್ ಮಾಡಿದ್ದೇವೆ. ಈ ಟ್ರಸ್ಟ್ ಪ್ರತಿ ತಾಲ್ಲೂಕಿನಲ್ಲಿಯೂ ಸುಮಾರು 300 ಜನ ರೈತರನ್ನು ಆಯ್ಕೆ ಮಾಡಿ ಜನರಿಗೆ ಪ್ರೇರಣೆ ನೀಡಿ ಪ್ರೋತ್ಸಾಹ ಮಾಡುವುದಕ್ಕೆ ಈ ಪದ್ಧತಿಯನ್ನು ಅಳವಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಒಟ್ಟು 52,000 ರೈತರು ಈ ಕೃಷಿ ಪದ್ಧತಿಯನ್ನು ಅಲವಡಿಸಿಕೊಂಡಿರುವ ಬಗ್ಗೆ ಸ್ಥಳ ತನಿಖೆಯನ್ನು ಮಾಡಿ ನಂತರವೇ ಅವರಿಗೆ ಸರ್ಕಾರದ ಅನುದಾನವನ್ನು ಕೊಡುತ್ತೇವೆ. ಅದಕ್ಕೂ ಮುಂಚೆ ಕೊಡುವುದಿಲ್ಲ. ಸೆಪ್ಟೆಂಬರ್ 30ರ ಒಳಗಾಗಿ

ಸಾವಯವ ಕೃಷಿಯನ್ನು ಯಾರ್ಯಾರು ಅಳವಡಿಸಿಕೊಂಡಿದ್ದಾರೆಂಬ ಬಗ್ಗೆ ತನಿಖೆಯನ್ನು ಮಾಡಿ, ನಂತರ ಅವರಿಗೆ ಚೆಕ್ ಮೂಲಕ ಅವರ ಖಾತೆಗೆ ಹಣವನ್ನು ಕೊಡಬೇಕೆಂದು ನಾವು ತೀರ್ಮಾನವನ್ನು ಮಾಡಿದ್ದೇವೆ. ಈ ಹಣವು misuse ಆಗುವುದಕ್ಕೆ ಬಿಡುವುದಿಲ್ಲ. ನಮ್ಮ ಸಾವಯವ ಕೃಷಿ ಮಿಷನ್ ಅತ್ಯಂತ ಪಾರದರ್ಶಕದಿಂದ ಪ್ರಾಮಾಣಿಕ ಮತ್ತು ಬದ್ಧತೆಯಿಂದ ಕೆಲಸವನ್ನು ಮಾಡುತ್ತಿದೆ. ಇದರಿಂದ ನಮ್ಮ ರಾಜ್ಯದಲ್ಲಿ ಮುಂಬರುವಂತಹ ದಿವಸಗಳಲ್ಲಿ 3 ಲಕ್ಷ ಜನರಿಗಾದರೂ ಸಾವಯವ ಕೃಷಿಯನ್ನು ವಿಸ್ತರಣೆಯನ್ನು ಮಾಡಬೇಕೆಂದು ನಾವು ಚಿಂತನೆಯನ್ನು ಮಾಡಿದ್ದೇವೆ. ಮಾಜಿ ರಾಷ್ಟ್ರಪತಿಗಳಾದಂತಹ ಶ್ರೀ ಅಬ್ದುಲ್ ಕಲಾಂಜಿಯವರು ಬಂದು ಪ್ರಮಾಣವಚನವನ್ನು ಸ್ವೀಕಾರಮಾಡಿಸಿ, ಅವರು ಬೆನ್ನು ತಟ್ಟಿ ಹೋದಮೇಲೆ ಇದಕ್ಕೊಂದು ಹೊಸ ಪ್ರೇರಣೆ, ಒಂದು ಹೊಸ ಶಕ್ತಿ ನಮಗೆ ಬಂದಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಿಪಿಎಲ್ ಕಾರ್ಡಿನ ಬಗ್ಗೆ ಬಹಳಷ್ಟು ಚರ್ಚೆಯಾಯಿತು. ನಾನು ಈ ಮನೆಯಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ. ಯಾರು ಬಿಪಿಎಲ್ ಕಾರ್ಡನ್ನು ಪಡೆಯುವುದಕ್ಕೆ ಅರ್ಹನಿದ್ದಾನೆ, ಒಬ್ಬನಿಗೆ ವಂಚನೆಯಾದರೆ, ಒಬ್ಬನಿಗೆ ಸಿಗಲಿಲ್ಲವೆನ್ನುವಂತಹ ದೂರು ಬಂದರೆ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಕೊಡೋಣ. ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ನಮ್ಮ ಶಾಸಕರುಗಳು ಪರಿಶೀಲನೆ ಮಾಡಿ ನೀವು ಏನು ಹೇಳುತ್ತೀರಾ. ಆ ರೀತಿ ಮಾಡೋಣ. ಉದ್ದೇಶಪೂರ್ವಕವಾಗಿ ಇದ್ದವನಿಗೆ ಕೊಟ್ಟು ನ್ಯಾಯಬೆಲೆ ಅಂಗಡಿಯಲ್ಲಿ 3 ರಿಂದ 5 ಕಾರ್ಡುಗಳು ಇಬ್ಬೊಬ್ಬನಿಂದ ಸಂಗ್ರಹ ಮಾಡಿಕೊಂಡು ಅದಕ್ಕೆ ಶಾಮೀಲಾಗಿ ಬಡವರಿಗೆ ಸಿಗಬೇಕಾಗಿರುವುದನ್ನು ಲೂಟಿ ಮಾಡುತ್ತಿದ್ದಾರೆ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬೇಕಾಗುತ್ತದೆ. ಈಗಾಗಲೇ ಮಾನ್ಯ ಜಯಚಂದ್ರರವರೆ, ಈ ಬಗ್ಗೆ ನಮಗೆ ತಂದು ಆಹಾರ ಸಚಿವರು ತೋರಿಸಿದರು. ಈ ಕೇರಿಯಲ್ಲಿ ಫೋಟೋವನ್ನು ತೆಗೆಸಿಕೊಂಡು ಒಂದು ಕಾರ್ಡು. ಪಕ್ಕದ ಕೇರಿಯಲ್ಲಿ ಫೋಟೋವನ್ನು ತೆಗೆಸಿಕೊಂಡು ಒಂದು ಕಾರ್ಡು ಇನ್ನೊಂದು ಕೇರಿಯಲ್ಲಿ ಫೋಟೋವನ್ನು

ತೆಗೆಸಿಕೊಂಡು ಒಂದು ಕಾರ್ಡು ಹೀಗೆ ಸಾಲಾಗಿ ಫೋಟೋಗಳು ಸಿಕ್ಕಿದೆ. ಇವರಿಗೆ ಒಂದು ಕಾರ್ಡು ಕೊಟ್ಟು ರೇವಣ್ಣನವರೆ, ಉಳಿದವರನ್ನು ಕ್ಷಮಿಸುವುದಲ್ಲ. ಅವರ ಮೇಲೆ ಕ್ರಿಮಿನಲ್ ಕೇಸನ್ನು ಹಾಕಬೇಕು. ಜನರಿಗೆ ಸಿಗುವಂಥ ವ್ಯವಸ್ಥೆಯನ್ನು ಕಬಳಿಸುವಂಥ ಈ ವ್ಯವಸ್ಥೆಯೇನಿದೆ, ಇದನ್ನು ನಾವು tolerate ಮಾಡುವುದಿಲ್ಲ. ಇದು ನಿಮಗೆ ಗೊತ್ತಿರಬಹುದು ಬಹಳ ಗಂಭೀರವಾಗಿ ಇದರ ಬಗ್ಗೆ ಚರ್ಚೆಯಾಗುತ್ತಿದೆ. ಸಾಕಷ್ಟು ಜನರಿಗೆ ಇದರಿಂದ ಗೊಂದಲ ಉಂಟಾಗುತ್ತಿದೆ. ಬಹಳ ವಿವರಕ್ಕೆ ಹೋಗುವುದಿಲ್ಲ. ನಿನ್ನೆ ದಿವಸ

11.00 A.M.

ಇಡೀ ರಾಜ್ಯದ ಜನರ ಗಮನ ಸೆಳೆಯುವ ರೀತಿಯಲ್ಲಿ ಲೋಕಾಯುಕ್ತ ಸಂತೋಷ್ ಹೆಗ್ಡೆಯವರು, ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಸ್.ಆರ್. ನಾಯಕ್‌ರವರು ಮತ್ತು ಚೀಫ್ ಜಸ್ಟೀಸ್‌ರವರು ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೋಸ್ಕರ ಬಿ.ಪಿ.ಎಲ್. ಬಗ್ಗೆ ಯಾರು ಡೂಪ್ಲಿಕೇಟ್ ಕಾರ್ಡ್ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿ ಫೋಟೋ ತೆಗೆಸಿ ಫೋಟೋ ಇಲ್ಲದಿದ್ದರೆ ಕೊಡುವುದಿಲ್ಲವೆಂದು ಹೇಳಿದ್ದೇವೆಂದು ಹೇಳಿದರು. ಹೌದು, ಫೋಟೋ ತೆಗೆಸಲಿಕ್ಕೆ ಅವಧಿ ಕೊಟ್ಟಿದ್ದೇವೆ. ಒಬ್ಬನಿಗೂ ವಂಚನೆ ಮಾಡುವುದಿಲ್ಲ. ಈ ಬಗ್ಗೆ ಸಮಗ್ರ ತನಿಖೆಗೋಸ್ಕರ ಲೋಕಾಯುಕ್ತರವರಿಗೆ ದಾಖಲೆಗಳನ್ನು ಕೊಡುತ್ತಿದ್ದೇನೆ. ಬಿ.ಪಿ.ಎಲ್.ನಲ್ಲಿ ಏನೇನು ಅವ್ಯವಹಾರವಾಗಿದೆ ಇದರ ಬಗ್ಗೆ ಸಮಗ್ರ ತನಿಖೆ ಮಾಡಲಿಕ್ಕೆ ಅವರು ನಿನ್ನೆ ಕಳಕಳಿ ವ್ಯಕ್ತಪಡಿಸಿರುವುದರಿಂದ ಮತ್ತೆ ಅವರಿಗೆ ಈ ಜವಾಬ್ದಾರಿಯನ್ನು ಕೊಟ್ಟರೆ ಪ್ರಾಮಾಣಿಕವಾಗಿ ನಮಗೆ ನ್ಯಾಯ ಸಿಗುತ್ತದೆ. ಕೆಲಸ ಆಗುತ್ತದೆಂಬ ವಿಶ್ವಾಸವಿರುವುದರಿಂದ ಅವರಿಗೆ ಏನು ಹೆಚ್ಚಿನ ಸಿಬ್ಬಂದಿ ಬೇಕು ನಾನು ಕೊಡಲಿಕ್ಕೆ ಸಿದ್ಧನಿದ್ದೇನೆ. ಹಾಗಾಗಿ ಲೋಕಾಯುಕ್ತರವರ ಜೊತೆ ನಾವು ನೀವು ಹೋಗಿ ಮಾತನಾಡೋಣ. ಅವರಿಗೆ ಈ ಜವಾಬ್ದಾರಿಯನ್ನು ಕೊಡಬೇಕೆಂಬ ಒಂದು ತೀರ್ಮಾನವನ್ನು ನಾನು ಮಾಡಿದ್ದೇನೆ. ಒಂದು ಕಾಲಕ್ಕೆ ಭೂಮಿಯ ಪ್ರತಿಶತ 60ರಷ್ಟು ಇದ್ದ ಅರಣ್ಯ ಈಗ 11ಕ್ಕೆ ಇಳಿದಿದೆ. ಇದರಿಂದ

ಮಳೆ ಇಲ್ಲದಂತಾಗಿದೆ. ಮಳೆ ಕುಸಿದಿದೆ, ಮಳೆಗಾಲ ಅನಿಶ್ಚಿತವಾಗುತ್ತಿದೆ. ನೀರು ಸಂಗ್ರಹಣೆ ಒಂದೇ ನಮ್ಮ ಮುಂದಿರುವ ಮಾರ್ಗವಾಗಿರುವಂಥ ಈ ಸಂದರ್ಭದಲ್ಲಿ ಕೆಲವು ಕಾರ್ಯಕ್ರಮಗಳನ್ನು ನಾವು ಯೋಚನೆ 'ಮಾಡಿದ್ದೇವೆ. ಈಗಿರುವಂಥ ಸಣ್ಣ ಕೆರೆಗಳ, ಹೊಂಡಗಳ ಜೀರ್ಣೋದ್ಧಾರ ಆಗುವುದು ಅಗತ್ಯವಾಗಿದೆ. ಭೂಗರ್ಭ, ಜಲ ಸಂಪದ್ಭರಿತವಾಗುವಂತೆ ಹಳ್ಳ ಹಾಗೂ ನದಿಗಳಿಗೆ ಒಡ್ಡುಗಳನ್ನು ನಿರ್ಮಾಣ ಮಾಡಬೇಕೆಂದು ಮಾಡಿದ್ದೇವೆ. ನದಿಗಳ ಜೋಡಣೆ, ಹರಿಯುವ ನದಿಗಳನ್ನು, ಕೆರೆಗಳನ್ನು ತುಂಬಿಸಿ ಅಂತರ್ಜಲ ಕುಸಿಯದಂತೆ ಕ್ರಮ ಕೈಗೊಳ್ಳುತ್ತೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಮೂವತ್ತೇಳು ಸಾವಿರಗಳಿಗಿಂತ ಹೆಚ್ಚು ಕೆರೆಗಳಿತ್ತು. ಜನರ ದುರಾಸೆಯಿಂದ ಈಗ ಅದು ಮೂವತ್ತು ಸಾವಿರಕ್ಕೆ ಇಳಿದಿದೆ. ಬಹಳಷ್ಟು ಕೆರೆಗಳು ತನ್ನ ರೂಪವನ್ನು ಕಳೆದುಕೊಂಡಿವೆ. ಬೆಂಗಳೂರು ಒಂದರಲ್ಲೇ ನೂರಾರು ಕೆರೆಗಳು ಒತ್ತುವರಿಯಾಗಿದೆ. ನಮ್ಮ ರೋಷನ್ ಬೇಗ್‌ರವರು ಹೇಳಿದಂತೆ ಈ ಕೆರೆ ಒತ್ತುವರಿ ಮಾಡುವುದನ್ನು ಬಿಗಿ ಮಾಡುತ್ತಿದ್ದೇವೆ. ಹೂಳು ತೆಗೆಯುತ್ತಿದ್ದೇವೆ. ಅಭಿವೃದ್ಧಿಪಡಿಸುತ್ತಿದ್ದೇವೆ. ಇದು ಕೇವಲ ಬೆಂಗಳೂರಿನದ್ದಲ್ಲ, ಇಡೀ ರಾಜ್ಯದಲ್ಲಿ ಎಷ್ಟೇ ಹಣ ಖರ್ಚಾಗಲಿ, ಕೆರೆಗಳಲ್ಲಿ ಹೂಳು ತೆಗೆಸಿ, ಒತ್ತುವರಿಯನ್ನು ತೆಗೆದು ಹಾಕಿ, ಅಂತರ್ಜಲ ಕುಸಿಯದಂತೆ ಕೆರೆಗಳಲ್ಲಿ ನೀರು ಸಂಗ್ರಹ ಮಾಡುವುದಕ್ಕೆ ಏನೇನು ಸಾಧ್ಯವಿದೆ ಅದನ್ನೆಲ್ಲಾ ಮಾಡುತ್ತೇವೆ. ಮಳೆ ನೀರು ಕೊಯ್ಲಿಗೆ, ಅದು ಭೂಮಿಯಲ್ಲಿ ಇಂಗುವುದಕ್ಕೆ ಈಗಾಗಲೇ ಕಾರ್ಯಕ್ರಮವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿ ಅದಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಕೊಟ್ಟು ನಾವು ಕೆಲಸ ಮಾಡಲಿಕ್ಕೆ ಸಿದ್ಧರಿದ್ದೇವೆ. ಬಹಳ ಆತಂಕ ತರುವಂಥ ಸಂಗತಿಯೇನೆಂದರೆ ರಾಜ್ಯದ 29,800 ಹಳ್ಳಿಗಳ ಪೈಕಿ ಸುಮಾರು ಶೇಕಡ 60ರಷ್ಟು ಹಳ್ಳಿಗಳಲ್ಲಿ ದೊರಕುವ ಕುಡಿಯುವ ನೀರಿಯಲ್ಲಿ ಫ್ಲೋರೈಡ್, ನೈಟ್ರೇಟ್, ಕಬ್ಬಿಣ ಮತ್ತು ಸಲ್ಫೇಟ್ ಲವಣಗಳು ಹೆಚ್ಚಿನ ಪ್ರಮಾಣದಲ್ಲಿವೆ. ಬಹಳ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುತ್ತದೆ. ಅದಕ್ಕೋಸ್ಕರ ಈ ಬಗ್ಗೆ ವಿಶೇಷವಾದಂಥ ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ. ಇವತ್ತು ಈ ಮೂರು ದಿವಸ ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ಚರ್ಚೆಯಾಗುವುದಕ್ಕೆ

ಕಾರಣವೇನೆಂದರೆ, ಡಾ: ಅಬ್ದುಲ್ ಕಲಾಂರವರಿಗೆ ಈ ಅಧಿವೇಶನ ಕರೆದಿರುವ ಬಗ್ಗೆ ನಿಮ್ಮ ಸಲಹೆ ನಿಮ್ಮ ಜಂಟಿ ಸದನದಲ್ಲಿ ನೀವು ಹೇಳಿದಂಥ ವಿಷಯದ ಆಧಾರದ ಮೇಲೆ ಈ ಅಧಿವೇಶನವನ್ನು ಕರೆದಿದ್ದೇವೆ. ಅದಕ್ಕೋಸ್ಕರ ಇನ್ನೇನು ಮಾಡಬಹುದು ಎಂದು ಸಲಹೆಗಳನ್ನು ಕೊಡಿ ಎಂದು ಪತ್ರವನ್ನು ಬರೆದಿದ್ದೆವು ಮತ್ತು ಪರ್ಸನಲ್ ಆಗಿ ಮಾತನಾಡಿದ್ದೆವು. ಅವರು ದಿನಾಂಕ: 7.9.2009ರಂದು ಪತ್ರ ಬರೆದು 20 ಪುಟಗಳ ವಿವರವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನ ಅಪೇಕ್ಷೆ ಇದೆ. ನೀವು ಒಪ್ಪುವುದಾದರೆ ಚಳಿಗಾಲದ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಅಬ್ದುಲ್ ಕಲಾಂಜಿಯವರನ್ನು ಕರೆಸಿ ನಮ್ಮೆಲ್ಲರ ಶಾಸಕ ಮಿತ್ರರು ಕುಳಿತು, ಅವರ ನಿರೀಕ್ಷೆ ಏನು, ಅವರ ಅಪೇಕ್ಷೆ ಏನು, ನಾವು ಯಾವ ದಿಕ್ಕಿನಲ್ಲಿ ಈಗ ಹೋಗುತ್ತಿದ್ದೇವೆ, ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದೇವೆಯೇ ಮತ್ತು ಮುಂದೇನು ಮಾಡಬೇಕೆಂಬುದರ ಬಗ್ಗೆ ಒಂದು ದಿವಸ ಪೂರ್ಣ ಅವರದೊಂದಿಗೆ ಚರ್ಚೆ ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಆ ಮಹಾನ್ ಚೇತನದ ಉಪಯೋಗವನ್ನು ನಾವು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರ PURA ಕಲ್ಪನೆಯನ್ನು ಪುನರುಚ್ಚರಿಸುತ್ತೇನೆ. ಆಹಾರ ಸಂರಕ್ಷಣೆ, ಮಾರುಕಟ್ಟೆ ಸುಧಾರಣೆ, ಮಾಹಿತಿ ತಂತ್ರಜ್ಞಾನ ವಿಸ್ತರಣೆ, N.R.E.G.S. ನ ಸಮರ್ಪಕ ಬಳಕೆ ಮಾಡಿಕೊಳ್ಳುವುದು, ಕೃಷಿ ಸಂಶೋಧನೆ ಬಗ್ಗೆ, ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯ ಇತ್ಯಾದಿಗಳ ಬಗ್ಗೆ ಬಹಳ ವಿಸ್ತೃತವಾದ ಸಲಹೆಗಳನ್ನು ನೀಡಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಸಭಾನಾಯಕರು, ಈಗ ತಮ್ಮ ಮುಂದಿನ ಹೆಜ್ಜೆಗಳೇನು ಎಂಬುದರ ಬಗ್ಗೆ ನೋಟ್ ಅನ್ನು circulate ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಮುಖ್ಯಮಂತ್ರಿಗಳಿಗೆ ಸಭಾಧ್ಯಕ್ಷರ ಮುಖೇನ ತರುವಂಥದ್ದು ಏನೆಂದರೆ ಬಹುಶಃ ಈ ದೇಶದಲ್ಲಿ ಹಸಿರು ಕ್ರಾಂತಿಗೆ ಹೆಸರಾಗಿದ್ದಂಥವರೆಂದರೆ ಡಾ: ನಾರ್ಮನ್ ಬೋರ್ಲಾಗ್‌ರವರು ಅವರು ನಿನ್ನೆ ನಿಧನರಾಗಿದ್ದಾರೆ. ಅವರು ಅಮೇರಿಕಾದಲ್ಲಿದ್ದಾಗ ಅವರ ಸಂಶೋಧನೆ ಎಷ್ಟರಮಟ್ಟಿಗೆ ಭಾರತ ದೇಶಕ್ಕೆ ಸಹಾಯವಾಯಿತು ಎಂಬುದರ ಬಗ್ಗೆ ನಾವು ಅವರಿಗೆ ನೊಬೆಲ್ ಪ್ರಶಸ್ತಿ

ಕೊಡುವುದರೊಂದಿಗೆ ಭಾರತ ಸರ್ಕಾರ ಕೂಡ ಅವರಿಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ಕೊಟ್ಟಿದೆ. ಹಸಿರು ಕ್ರಾಂತಿಯಲ್ಲಿ ಒಂದು ದೊಡ್ಡ ಹೆಜ್ಜೆಯನ್ನಿಟ್ಟು ಅತ್ಯಂತ ಮಾನವತಾವಾದವನ್ನು ಮಾಡಿದಂಥ ಕ್ರಾಂತಿಯನ್ನು ಮಾಡಿದವರು ಯಾರೆಂದರೆ ಅದು ನಾವು ನೆನೆಸಲೇಬೇಕಾಗಿದ್ದಂಥವರು ಎಂದರೆ ಡಾ: ನಾರ್ಮನ್ ಬೋರ್ಲಾಗ್‌ರವರು ಇವತ್ತು ಅವರು ನಿಧನರಾಗಿರುವಂಥ ಸಂದರ್ಭದಲ್ಲಿ ಇಲ್ಲಿಂದ ಅವರಿಗೆ ಒಂದು ಸಂದೇಶ ಹೋಗಬೇಕು ಎಂಬುದು ಮುಖ್ಯವಾಗಿದೆ. ಅವರಿಂದ ಕರ್ನಾಟಕ ರಾಜ್ಯಕ್ಕೆ ಏನು ಸಹಾಯವಾಗಿತ್ತು ಎಂಬುದು ತಲುಪಬೇಕು. ನಾನು ಮೂರು ವರ್ಷಗಳಲ್ಲಿ ಅಧಿಕಾರದಲ್ಲಿಲ್ಲದ ಸಂದರ್ಭದಲ್ಲಿಯೂ ಕೂಡ ಅವರನ್ನು ಭೇಟಿ ಮಾಡಿದ್ದೆ. ಅವರು ಕರ್ನಾಟಕದ ಅದರಲ್ಲಿಯೂ ವಿಶೇಷವಾಗಿ ಧಾರವಾಡ ಆ ಭಾಗದಲ್ಲಿ ಬೆಳೆಯತಕ್ಕಂಥ ಗೋಧಿ, ಜೋಳ ಅದಕ್ಕೆ ವಿಶೇಷವಾದಂಥ ಒತ್ತನ್ನು ಕೊಟ್ಟು ರೋಗ ಇಲ್ಲದೇ ಇರತಕ್ಕಂಥ ಗೋಧಿಯನ್ನು ಬೆಳೆಯುವಂಥ ಹೊಸ ಸಂಶೋಧನೆಯನ್ನು ಅವರು ಮಾಡಿಕೊಟ್ಟಿದ್ದರ ಫಲವಾಗಿ ಇವತ್ತು ನಮ್ಮ crop productivity ಜಾಸ್ತಿಯಾಗಿದೆ. ಇವತ್ತು ಡಾ: ಸ್ವಾಮಿನಾಥನ್ ಅವರನ್ನು ನಂಬರ್ ಒನ್ ಎಂದು ಹೇಳುತ್ತೇವೆಯೋ ಅವರೂ ಕೂಡ ಇವತ್ತು ಬೋರ್ಲಾಗ್‌ರವರಿಂದ ಮಾರ್ಗದರ್ಶನ ಪಡೆದಿರುವಂಥ ಕೃಷಿ ವಿಜ್ಞಾನಿ. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಈಗ ವಿಶೇಷವಾಗಿ ನಾವು ಚರ್ಚೆ ಮಾಡುವಂಥ ಸಂದರ್ಭದಲ್ಲಿ ನನ್ನ ಒಂದು ಸಲಹೆ ಏನೆಂದರೆ, ನೀವು ಕೊಟ್ಟಿರುವಂಥದ್ದನ್ನು glance ಮಾಡಿದೆ. ಆದರೆ ಬೋರ್ಲಾಗ್‌ರವರು ಕೊಟ್ಟಂಥ ಸಲಹೆಗಳನ್ನು ಇದರಲ್ಲಿ ಯಾವುದೂ ಸಹ ಅಳವಡಿಕೆಯಾಗಿಲ್ಲ. ಹಾಗಾಗಿ ತಾವು ಆ ಮಾಹಿತಿಯನ್ನು ಪಡೆದು ಅದನ್ನೂ ಕೂಡ ಅಳವಡಿಸಿ ಮುಂದಿನ Food Securityಗೆ ಅವರ ನಿಲುವು ಏನಾಗಿತ್ತು ಎನ್ನುವುದನ್ನು ಪ್ರಕಟಿಸಿದರೆ ಬಹುಶಃ ಅವರ ಆತ್ಮಕ್ಕೆ ಶಾಂತಿ ದೊರೆತಂತಾಗುವುದು ಎಂಬ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಹಳ ಪ್ರಮುಖವಾದ ವಿಚಾರಗಳನ್ನು ಜಯಚಂದ್ರರವರು ಪ್ರಸ್ತಾಪ ಮಾಡಿದ್ದಾರೆ. ಈ ಖ್ಯಾತ ಕೃಷಿ ತಜ್ಞ ನಾರ್ಮನ್ ಬೋರ್ಲಾಗ್‌ರವರು ಕೃಷಿ ಕ್ಷೇತ್ರಕ್ಕೆ ನೀಡಿದಂಥ ಕೊಡುಗೆ ಅಪಾರವಾದುದು.

ಅವರ ಸಂಶೋಧನೆ ಫಲವಾಗಿ ಕೃಷಿ ಉತ್ಪನ್ನ ಹೆಚ್ಚಾಗಿದೆ. ಅವರ ನೆನಪಿಗಾಗಿ ಅವರು ನೀಡಿರುವಂಥ ಸಲಹೆಗಳನ್ನು ಸ್ಟಡಿ ಮಾಡಿ implement ಮಾಡುವುದಕ್ಕೆ ಏನೇನು ಸಾಧ್ಯವಿದೆ ಮತ್ತು ನೀವೆಲ್ಲಾ ಕೊಡುವ ಸಲಹೆಗಳನ್ನು implement ಮಾಡಲಿಕ್ಕೆ ನಾನು ಸಿದ್ಧನಿದ್ದೇನೆಂದು ಹೇಳುತ್ತೇನೆ.' ಅಬ್ದುಲ್ ಕಲಾಂರವರು ಬಿಜಾಪುರ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ PURA ಮಾದರಿಯ ಅಭಿವೃದ್ಧಿಗೆ ಪ್ರತ್ಯೇಕ ವಿವರಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ನಾನು ಅದನ್ನೂ ಸಹ implement ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಕಲಾಂರವರಿಗೆ ಮತ್ತೊಮ್ಮೆ ಈ ಸಲಹೆ ಕೊಟ್ಟಿದ್ದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಅಧಿವೇಶನದಲ್ಲಿ ನಡೆದಂಥ ವಿಚಾರ ಮಂಥನದಿಂದ ಹೊರಬಂದಿರುವಂಥ ಅಮೂಲ್ಯ ಸಲಹೆಗಳ ಪೈಕಿ ಕೆಲವನ್ನು ಅನುಷ್ಠಾನಗೊಳಿಸಲಿಕ್ಕೆ ಏನು ಮಾಡಬಹುದು ಎಂದು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಬಿತ್ತನೆ ಬೀಜ ನೀಡುವುದಕ್ಕೆ ರೈತರಿಗೆ ಸಹಾಯ ನೀಡುವುದು, ಗ್ರಾಮ ಸೇವಕರ ನೇಮಕಾತಿ, ರೈತರ ಮಕ್ಕಳಿಗೆ ತರಬೇತಿ ಮತ್ತು ನೇಮಕಾತಿ, ಉಪ ಕಸುಬುಗಳಿಗೆ ಉತ್ತೇಜನ, ಕುರಿ ಸಾಕಾಣಿಕೆಗೆ ಪ್ರೋತ್ಸಾಹ, ನೀರಾವರಿ ಸೌಲಭ್ಯ ವಿಸ್ತರಣೆ, ವಿದ್ಯುತ್ ಕ್ಷೇತ್ರ ಸುಧಾರಣೆ, ಶಿಕ್ಷಣದಲ್ಲಿ ಕೃಷಿ ಪಠ್ಯ ಕ್ರಮ ಕಡ್ಡಾಯ ಮಾಡುವಂಥದ್ದು, ಸ್ವಯಂ ಸೇವಾ ಸಂಘಗಳ ಮೂಲಕ ಅರಣ್ಯ ಬೆಳೆಸುವುದಕ್ಕೆ ಹೆಚ್ಚು ಉತ್ತೇಜನ ಮಾಡುವಂಥದ್ದು, ರೈತರಿಗೆ ಸಮಂಜಸವಾದ ಬೆಲೆ ನಿಗದಿ ಮಾಡುವಂಥದ್ದು, ಎಲ್ಲಾ ಗ್ರಾಮಗಳಲ್ಲಿ ಶೌಚಾಲಯವನ್ನು ಕಡ್ಡಾಯ ಮಾಡುವುದಕ್ಕೆ ಹಣಕಾಸಿನ - ಹೆಚ್ಚಿನ ನೆರವನ್ನು ಕೊಡಲು ಏನೇನು ಸಾಧ್ಯವಿದೆಯೋ ಆ ಕಡೆ ಗಮನ ಕೊಡುವಂಥದ್ದು. ಗ್ರಾಮೀಣ ರಸ್ತೆಗಳ ನಿರ್ಮಾಣದ ಬಗ್ಗೆ, ಆರೋಗ್ಯ ಸೌಲಭ್ಯಗಳ ಬಗ್ಗೆ, ಆಹಾರ ಸಂರಕ್ಷಣೆ ಮತ್ತು ಮಾರುಕಟ್ಟೆ ಬಗ್ಗೆ, ವ್ಯಕ್ತಿ ವಿಕಸನದ ಬಗ್ಗೆ ಅಬ್ದುಲ್ ಕಲಾಂಜಿಯವರು ಅನೇಕ ವಿಷಯಗಳನ್ನು ಮಾತನಾಡಿದ್ದಾರೆ. ತಜ್ಞರು ಮತ್ತು ಸಾರ್ವಜನಿಕರ ಸಲಹೆಗಳನ್ನೂ ಸಹ ನಾನು ಕೇಳಿದ್ದೆನು. ನೂರಾರು ಜನ E-mail ಮೂಲಕ, ಪತ್ರಿಕೆಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಸಾಕಷ್ಟು ಉತ್ತಮ ಸಲಹೆಗಳು ಬಂದಿವೆ. ಅದರಲ್ಲಿ ಕೆಲವು ಸಲಹೆಗಳನ್ನು ಮಾತ್ರ ಹೇಳುತ್ತೇನೆ. ಡಾ: ಪ್ರಬುಲ್ ಚಂದ್ರ, ಶಿವಮೊಗ್ಗ, ಸಣ್ಣ ಚೆಕ್ ಡ್ಯಾಮ್‌ಗಳಿಗೆ

ಆದ್ಯತೆ ನೀಡಿ, ರೈತರ ಬೆಳೆಯನ್ನು ನೇರವಾಗಿ ಖರೀದಿ ಮಾಡಿ ಎನ್ನುವ ಮಾತನ್ನು ಹೇಳಿದ್ದಾರೆ. ಶ್ರೀ ಗುರುಶರಣ್ ಗೋಳಾ, ಆಳಂದ ತಾಲ್ಲೂಕು ಇವರು ಬೆಳೆ ವಿಮೆಯನ್ನು 90 ಪ್ರತಿಶತ ಹೆಚ್ಚಿಸಬೇಕು ಎನ್ನುವ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಡಾ: ಹೆಚ್.ಡಿ. ಗಂಗಲ್, ಹುಬ್ಬಳ್ಳಿ ಇವರು ಹಳ್ಳಿಗಳಲ್ಲಿ ಉತ್ತಮ ಆರೋಗ್ಯ ಸೇವೆ ಒದಗಿಸುವುದರ ಬಗ್ಗೆ ಹೇಳಿದ್ದಾರೆ. ಡಾ: ಎ. ಓಬಾರೆಡ್ಡಿ, ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ ಇವರು ಉತ್ತಮ ಸಂಸ್ಥೆಗೆ ಅಮೃತಮಹಲ್ ಕಾವಲ್ ಅಭಿವೃದ್ಧಿಪಡಿಸಿಕೊಡಿ. ಹೈನುಗಾರಿಕೆಗೆ ಆದ್ಯತೆ ನೀಡಿ, ರೈತರಿಗೆ ಉತ್ತಮ ತಳಿಯ ಎತ್ತುಗಳನ್ನು ಒದಗಿಸಿ ಎನ್ನುವ ಮಾತನ್ನು ಹೇಳಿದ್ದಾರೆ. ಡಾ: ಆರ್. ಸುರೇಶ್ ಕುಮಾರ್, SBM India Limited, Bangalore ಇವರು ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ, ಮೇಲ್ವಿಚಾರಣೆಗೆ ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆಯನ್ನು ರಚಿಸಿ ಎನ್ನುವ ಉತ್ತಮವಾದ ಸಲಹೆ ಕೊಟ್ಟಿದ್ದಾರೆ. ಸಿದ್ದರಾಮಪ್ಪ, ದಂಗಾಪುರ್, ಅಧ್ಯಕ್ಷರು, ಜಿಲ್ಲಾ ಪರಿಶಿಷ್ಟ ಸಮಾಜ, ಗುಲ್ಬರ್ಗಾ ಇವರು ಶಾಲಾ ಕಾಲೇಜುಗಳಲ್ಲಿ ಕೃಷಿಗೆ ಸಂಬಂಧಪಟ್ಟ ಪಠ್ಯಪುಸ್ತಕಗಳನ್ನಿಡಿ ಎಂದು ಹೇಳಿದ್ದಾರೆ ಮತ್ತು ಹೊಲಕ್ಕೊಂದು ಕೆರೆ, ಹೊಲಕ್ಕೆ ಒಂದು ಹೊಂಡ, ಇದರ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಿ ಎಂದು ಹೇಳಿದ್ದಾರೆ. ಡಾ: ಹೆಚ್.ಎಂ. ಮರಳುಸಿದ್ದಯ್ಯ, ಬೆಂಗಳೂರು ಇವರು ನಿರ್ಮಲ ಕರ್ನಾಟಕ ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಾರಿಗೆ ತನ್ನಿ, ಶಿಕ್ಷಣ, ಆರೋಗ್ಯ, ಕಾಯಕ, ಸಾಮರಸ್ಯ ಹಾಗೂ ಜನಾಧಿಕಾರಗಳೆಂಬ ಪಂಚಮುಖಿ ಅಭಿವೃದ್ಧಿಗೆ ಒಂದು ಕಲ್ಪನೆಯನ್ನು ಜಾರಿಗೊಳಿಸಿ ಎಂದು ಹೇಳಿದ್ದಾರೆ. ಶ್ರೀ ರಾಮರಾವ್ ದೇಶಪಾಂಡೆ, ಚಿಂಚೋಳಿ ತಾಲ್ಲೂಕು, ಬೆಳೆ ವಿಮೆ ಕಡ್ಡಾಯ ಮಾಡಿ, ನೀರಾವರಿಗೆ ಆದ್ಯತೆ ಕೊಡಿ ಎಂದು ಹೇಳಿದ್ದಾರೆ. ಶ್ರೀಮತಿ ಬಿ. ಶೋಭಾ ಅರಸ್, ತೆಕ್ಕಟ್ಟೆ ಇವರು ಜನತೆಗೆ ಏನನ್ನೂ ನೀವು ಉಚಿತವಾಗಿ ಕೊಡಬೇಡಿ. ಗುಣಮಟ್ಟದ ವಿದ್ಯುತ್ ಸೌಲಭ್ಯವನ್ನು ಒದಗಿಸಿ ಸಾಕು ಇದರಿಂದ ನಾವು ಬದುಕುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಕೆ. ನಾಗರಾಜ್, ತೊಪ್ಪಿನಘಟ್ಟ, ಶಿವಮೊಗ್ಗ ಇವರು internet ಮೂಲಕ ರೈತರಿಗೆ ಮಾರುಕಟ್ಟೆ ಮಾಹಿತಿ ಮತ್ತು ಸಲಹೆಗಳನ್ನು ನೀಡಿ

ಎಂದು ಹೇಳಿದ್ದಾರೆ. ಶ್ರೀ ಮೃತ್ಯುಂಜಯ, ಬೆಂಗಳೂರು, ಇವರು ಕೃಷಿಗೆ ಅಗತ್ಯವಿರುವಂಥ ವಸ್ತುಗಳಿಗೆ ತೆರಿಗೆ ವಿನಾಯಿತಿಯನ್ನು ನೀಡಿ ಎನ್ನುವ ಮಾತನ್ನು ಹೇಳಿದ್ದಾರೆ. ಶ್ರೀ ಭಜಂದಲಿ ಜೂಬ್, ಬೆಂಗಳೂರು, ಸುಭಾಷ್ ಪಾಳೇಗಾರ್ ಇವರು ಜಪಾನಿನ ಜೊಕಾವೋರವರ ಸಾವಯವ ಕೃಷಿ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಸಹಾಯ ಮಾಡಿ ಎಂದು ಹೇಳಿದ್ದಾರೆ. ಮಾಧ್ಯಮಗಳಿಂದ ಬಹಳ ದೊಡ್ಡ ಸ್ವಾಗತ ಸಿಕ್ಕಿದೆ. ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾಧ್ಯಮದ ಸ್ನೇಹಿತರು ಇದರ ಬಗ್ಗೆ ಕೊಟ್ಟಿರುವಂಥ ಸಲಹೆಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಈಗ ಬರುವ ದಿವಸಗಳಲ್ಲಿ ಭವಿಷ್ಯದ ಹೆಜ್ಜೆಗಳೇನು, ಯಾವ ದಿಕ್ಕಿನಲ್ಲಿ ನಾವು ಯೋಚನೆ ಮಾಡುತ್ತಿದ್ದೇವೆ, ಈ ಮೂರು ದಿವಸಗಳ ಅಧಿವೇಶನ ಕೇವಲ ನಾಮಕಾವಸ್ತೆಗೆ ಚರ್ಚೆಯಾಗಿ, ಬರೀ ಭರವಸೆ ಕೊಟ್ಟು ಎದ್ದು ನಿಲ್ಲದೆ, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಕೆಲವು ಚಿಂತನೆಗಳು ಆಗಿದೆ. ಅದರ ಬಗ್ಗೆ ನಿಮ್ಮ ಸಲಹೆಗಳನ್ನು ನಾನು ಕೇಳುತ್ತೇನೆ.

ಕಲಾಂಪುರ: ಈ ಅಧಿವೇಶನದ ಚರ್ಚೆಯಿಂದ ಡಾ: ಅಬ್ದುಲ್ ಕಲಾಂರವರ "ಪುರ" (PURA) ಕಲ್ಪನೆಯ ಸಾಕಾರಕ್ಕಾಗಿ ಸರ್ಕಾರಕ್ಕೆ ಒಂದು ಹೊಸ ಯೋಜನೆಯನ್ನು ಹಮ್ಮಿಕೊಳ್ಳುವಂಥ ಉದ್ದೇಶವನ್ನು ಗಟ್ಟಿ ಮಾಡಿದೆ.

ಈ ದಿಸೆಯಲ್ಲಿ ಹೋಬಳಿ ಕೇಂದ್ರದಲ್ಲಿ ನಗರಮಟ್ಟದ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮತ್ತು ಆ ಹೋಬಳಿಯ ಗ್ರಾಮಗಳಿಗೆ ವಿವಿಧ ಸಂಪರ್ಕ ಜಾಲ ಸೌಲಭ್ಯ ಕಲ್ಪಿಸಲು "ಕಲಾಂಪುರ" ಎಂಬ ಹೆಸರನ್ನು ಇಟ್ಟು, ಈ ನೂತನ ಯೋಜನೆಯನ್ನು ಪ್ರತಿ ಗ್ರಾಮೀಣ ಶಾಸಕರ ಕ್ಷೇತ್ರಕ್ಕೆ ಒಂದರಂತೆ, 200 ಹೋಬಳಿಗಳಲ್ಲಿ ಜಾರಿಗೆ ತರುವುದಕ್ಕೆ ಈ ವರ್ಷವೇ ಅನುಭವಿ ಸಂಸ್ಥೆ ಮುಖಾಂತರ ಯೋಜನಾ ವರದಿಗಳನ್ನು (ಡಿ.ಪಿ.ಆರ್.) ತಯಾರಿಕೆಗೆ ನಾನು ಚಾಲನೆ ಕೊಡುತ್ತೇನೆ. ಇದು ಮೊದಲನೆಯದು.

ಈ ವರದಿಗಳನ್ನು ಆಧರಿಸಿ ಡಾ: ಕಲಾಂರವರ ಕಲ್ಪನೆಯಂತೆ ಆಯ್ಕೆಯಾದ ಗ್ರಾಮ ಗುಚ್ಛಗಳನ್ನು ಅಭಿವೃದ್ಧಿಪಡಿಸುತ್ತೇವೆ. ಈ ದಿಸೆಯಲ್ಲಿ ಮುಂದಿನ ಆಯವ್ಯಯ ತಯಾರಿಸುವ ಮುನ್ನ ಡಾ: ಕಲಾಂರವರ ಜೊತೆ, ಶಾಸಕರ ಜೊತೆ ಹಾಗೂ ನಿಮ್ಮ ಜೊತೆ ಚರ್ಚೆ ಮಾಡಿ ಸಮಾಲೋಚನೆ ಮಾಡಿ ಕಾರ್ಯರೂಪಕ್ಕೆ ತರುವಂಥ ಪ್ರಯತ್ನ ಮಾಡುತ್ತೇವೆ.

ಗ್ರಾಮೀಣ ರಸ್ತೆ: ಇನ್ನು ಗ್ರಾಮೀಣ ರಸ್ತೆಗೆ ಸಂಬಂಧಪಟ್ಟಂತೆ ಇದು ಅತ್ಯಂತ ಪ್ರಮುಖವಾದುದು ಹಾಗೂ ನಾನು ಬಹಳ ಜವಾಬ್ದಾರಿಯುತವಾಗಿ ಈ ಮಾತನ್ನು ಹೇಳುತ್ತೇನೆ. ಇದನ್ನು ನಮ್ಮೆಲ್ಲಾ ಸದಸ್ಯರು ಗಮನಿಸಬೇಕು. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಆದ್ಯತೆ ಮತ್ತು ಅನುದಾನ ನೀಡುವ ಅವಶ್ಯಕತೆ ಇದೆ. ಈ ಬಗ್ಗೆ ಹಲವಾರು ಸದಸ್ಯರು ತಮ್ಮ ಸಲಹೆಗಳನ್ನು ನೀಡಿದ್ದಾರೆ. ನಮ್ಮ ಶಾಸಕರಲ್ಲಿ ನಾನು ವಿನಂತಿ ಮಾಡುವುದು ಏನೆಂದರೆ, ಇವತ್ತಿನಿಂದ ಬೇರೆ ಬೇರೆ ಕಾಮಗಾರಿಗಳು ಬೇಕು ಎಂದು ಯಾರೂ ಸಹ ಕಾಗದವನ್ನು ಕೊಡದೇ ಇದ್ದರೆ, ಒತ್ತಾಯ ಮಾಡದೇ ಇದ್ದರೆ, ನನ್ನ ಅಪೇಕ್ಷೆ ಇರುವುದು ಏನೆಂದರೆ, ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆ ಅಭಿವೃದ್ಧಿ ಮಾಡಲು ವಿಶೇಷ ಯೋಜನೆ ತಯಾರು ಮಾಡುತ್ತೇನೆ. ಇದೇ ವರ್ಷ ಮಾಡುತ್ತೇನೆ. ಮುಂದಿನ ವರ್ಷ ಮಾಡುವುದಿಲ್ಲ. ಇದೇ ವರ್ಷ ಟೆಂಡರ್ ಪ್ರಕ್ರಿಯೆ ಪ್ರಾರಂಭ ಮಾಡುತ್ತೇನೆ. ಈ ಮೂಲಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ 10,000 ಕಿ.ಮೀ. ಉದ್ದದ ಗುಣಮಟ್ಟದ ರಸ್ತೆಗಳನ್ನು ಮಾಡುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿ ಇನ್ನು ಎರಡು-ಎರಡೂವರೆ ವರ್ಷಗಳಲ್ಲಿ ಮಾಡುತ್ತೇವೆ. ನೀವು ನಿಮ್ಮ ಕ್ಷೇತ್ರಗಳಿಗೆ ಹೋದಾಗ ಈ 50 ಕಿ.ಮೀ. ರಸ್ತೆ ಅಭಿವೃದ್ಧಿಯಿಂದ ನಿಮಗೆ ಸಮಾಧಾನ ತರುವಂಥ ರೀತಿಯಲ್ಲಿ ಪೂರ್ತಿಯಾಗಿ ಉತ್ತಮ ಗುಣಮಟ್ಟದ ರಸ್ತೆಯ ವ್ಯವಸ್ಥೆಯನ್ನು ಮಾಡುತ್ತೇವೆ. ಇದಕ್ಕೆ ಕಾರ್ಯಕ್ರಮವನ್ನು ರೂಪಿಸುತ್ತೇನೆ.

ನಿವೇಶನಕ್ಕೆ ಭೂಮಿ: ನಿವೇಶನ ಇಲ್ಲವೆಂದು ಎಲ್ಲಾ ಕಡೆ ಕೇಳಿಬರುತ್ತಿದೆ. ಬಡವರಿಗೆ ಆಶ್ರಯ ಮನೆಗಳು ಸಿಗುತ್ತಿಲ್ಲ ಎಂದು ಹೇಳುತ್ತೀರಿ. ಅದಕ್ಕೋಸ್ಕರ ಬೇರೆ ಮೂಲಗಳಿಂದ ಉಳಿತಾಯ ಮಾಡಿ ಇದೇ ವರ್ಷದಲ್ಲಿ ಜಮೀನು

ಖರೀದಿ ಮಾಡಿ ನಿವೇಶನಗಳನ್ನು ಮಾಡುವುದಕ್ಕೆ 100 ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು ಎನ್ನುವ ತೀರ್ಮಾನವನ್ನು ನಾನು ಮಾಡಿದ್ದೇನೆ.

Rural Development and Self-employment Training Institute (RUDSETI- ರುಡ್‌ಸೆಟಿ): ಈ ಸಂಸ್ಥೆಗೆ ಸಂಬಂಧಿಸಿದಂತೆ ಇವತ್ತು ಕೇಂದ್ರ ಸರ್ಕಾರದವರು ಶ್ರೀ ಕ್ಷೇತ್ರ ಧರ್ಮಸ್ಥಳದ ಮಾನ್ಯ ಹೆಗಡೆಯವರ ಬಗ್ಗೆ ಮಾತನಾಡಿದ್ದಾರೆ. ಇದು ಬಹಳ ಅಭಿಮಾನದ ಸಂಗತಿ. ಇವತ್ತು ನಮ್ಮ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಬಗ್ಗೆ ಚಿಂತನೆ ಮಾಡುತ್ತಿರುವ ಒಬ್ಬರು ಚಿಂತಕರಾದ ಶ್ರೀ ಕ್ಷೇತ್ರ ಧರ್ಮಸ್ಥಳದ ಮಾನ್ಯ ಹೆಗಡೆಯವರ ಬಗ್ಗೆ ಕೇಂದ್ರ ಸರ್ಕಾರವೂ ಚಿಂತನೆ ಮಾಡುತ್ತಿರುವುದು ಅತ್ಯಂತ ಸ್ವಾಗತಾರ್ಹವಾದ ಸಂಗತಿ. ಶ್ರೀ ಕ್ಷೇತ್ರ ಧರ್ಮಸ್ಥಳದ ರುಡ್‌ಸೆಟಿ ಮುಖಾಂತರ ಗ್ರಾಮೀಣಾಭಿವೃದ್ಧಿಗೆ ತೆಗೆದುಕೊಂಡಂಥ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ನಡೆಯುತ್ತಿವೆ. ಇಡೀ ದೇಶದ ಗಮನವನ್ನು ಸೆಳೆದಿದೆ. ಕೇಂದ್ರ ಸರ್ಕಾರವೂ ಸಹ ಈ ಮಾದರಿಯಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಮುಂದೆ ಬಂದಿದೆ. ನಮ್ಮ ರಾಜ್ಯದಲ್ಲಿರುವ ಈ ಒಂದು ಅತ್ಯುತ್ತಮ ಸಂಸ್ಥೆಯ ಸಹಯೋಗದೊಂದಿಗೆ ಗುಡಿ ಮತ್ತು ಗೃಹ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಜನರನ್ನು ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ಈ ಸಂಸ್ಥೆ ಸ್ವಸಹಾಯ ಗುಂಪುಗಳ ತರಬೇತಿ, ಉತ್ಪಾದನೆ ಮತ್ತು ಮಾರುಕಟ್ಟೆ ವ್ಯವಸ್ಥೆ ಸಹ ಮಾಡುತ್ತಿದೆ.

ಇದೇ ವರ್ಷ ಶ್ರೀ ಕ್ಷೇತ್ರ ಧರ್ಮಸ್ಥಳ ರುಡ್‌ಸೆಟಿ ಸಂಸ್ಥೆಗೆ ವಿಶೇಷ ಅನುದಾನ ನೀಡಿ ರಾಜ್ಯದ ವಿವಿಧೆಡೆ ಇದರ ಚಟುವಟಿಕೆಗಳ ವ್ಯಾಪ್ತಿಯನ್ನು ವಿಸ್ತರಣೆ ಮಾಡುವುದಕ್ಕೆ ನಾನು ಕಾರ್ಯಕ್ರಮವನ್ನು ರೂಪಿಸುತ್ತೇನೆ.

ಬ್ಯಾಂಕ್ ಮತ್ತು ಬೇರೆ ಸಂಸ್ಥೆಗಳಿಗೆ ತಾಲ್ಲೂಕು ಕೇಂದ್ರಗಳಲ್ಲಿ ರುಡ್‌ಸೆಟಿ ಸ್ಥಾಪಿಸಲು ಪ್ರೋತ್ಸಾಹಧನ ನೀಡಲಾಗುತ್ತದೆ.

ಸ್ತ್ರೀಶಕ್ತಿ ಗುಂಪುಗಳಿಗೆ ಗುಡಿ ಕೈಗಾರಿಕೆ ಕೈಗೊಳ್ಳಲು ಉತ್ತೇಜನ ನೀಡಿ ಅವರಿಗೂ ಸಹಾಯಧನದ ಸೌಲಭ್ಯ ವಿಸ್ತರಿಸುತ್ತೇವೆ. ಅವು ಉತ್ಪಾದಿಸುವ ಮತ್ತು ಸರ್ಕಾರಕ್ಕೆ ಅಗತ್ಯವಿರುವ ಫಿನೈಲ್, ಫೈಲ್ ಕವರ್ ಮತ್ತಿತರ 'ಸರಕುಗಳನ್ನು ನೇರವಾಗಿ ಖರೀದಿಸಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನೊಂದು ಮಾತನ್ನು ನಮ್ಮ ಅಧಿಕಾರಿಗಳಿಗೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸರ್ಕಾರದ ಸಂಸ್ಥೆಯಾದ ಭದ್ರಾವತಿ ಪೇಪರ್ ಮಿಲ್ಸ್‌ನಿಂದ ನಮಗೆ ಸುದ್ದಿ ಬಂದಿದೆ. ನಮ್ಮ ರಾಜ್ಯದಲ್ಲಿಯೇ ಇದ್ದು, ನಾವು ಲಾಭದಾಯಕವಾಗಿ ಮಾಡುವ ಹಾಗೆ ಇದ್ದರೂ ಕೂಡ ಬೇರೆ ಬೇರೆ ಕಡೆಯಿಂದ ಇವತ್ತು ಪೇಪರ್ ಅನ್ನು ಖರೀದಿ ಮಾಡುವಂಥ ಪ್ರಯತ್ನ ನಡೆಯುತ್ತಿದೆ. ಇದು ನಿಲ್ಲಬೇಕು. ನಾನು ಸೂಚನೆ ಕೊಡುತ್ತೇನೆ. ನಮ್ಮ ಪ್ರಯತ್ನ ಯಾವ ಕಾರಣಕ್ಕೂ ಸಹ ನಮಗೆ ಅಗತ್ಯವಿರುವ ಪೇಪರ್ಸ್ ಅನ್ನು ಭದ್ರಾವತಿ ಪೇಪರ್ ಮಿಲ್‌ನಿಂದಲೇ ಖರೀದಿ ಮಾಡಬೇಕು ಎನ್ನುವ ಸೂಚನೆಯನ್ನು ನಾನು ಇವತ್ತು ಕೊಡುತ್ತಿದ್ದೇನೆ. ಅದಕ್ಕೆ ಏನಾದರೂ ಈಗಾಗಲೇ ಟೆಂಡರ್ ಕರೆಯುವುದು ಅಥವಾ ಮತ್ತೊಂದನ್ನು ಮಾಡುತ್ತಿದ್ದರೆ ಅದನ್ನು ನಿಲ್ಲಿಸಬೇಕು. ಈ ಸೂಚನೆ ಇವತ್ತಿನಿಂದ ಜಾರಿಗೆ ಬರುತ್ತದೆ. ಇದನ್ನು ಗಮನಿಸಬೇಕು ಎಂದು ಹೇಳುತ್ತೇನೆ.

ಕಿಸಾನ್ ಕ್ರೆಡಿಟ್ ಕಾರ್ಡ್: ಇನ್ನು ಕಿಸಾನ್ ಕ್ರೆಡಿಟ್ ಕಾರ್ಡ್ ಬಗ್ಗೆ ಹೇಳುವುದಾದರೆ ಎಲ್ಲಾ ರೈತರಿಗೆ ಸಕಾಲದಲ್ಲಿ ಮೂರು ಪ್ರತಿಶತ ಬಡ್ಡಿ ದರದಲ್ಲಿ ಸಾಲ ಸಿಗುವಂತೆ ಮಾಡಲು ಮುಂದಿನ ಎರಡು ವರ್ಷಗಳಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್ ವ್ಯವಸ್ಥೆ ಮಾಡುತ್ತೇವೆ. ಈ ದಿಸೆಯಲ್ಲಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳ ಪ್ರಮುಖರ ಜೊತೆ ಸಭೆ ನಡೆಸಿ ರಾಜ್ಯದಾದ್ಯಂತ ಕಿಸಾನ್ ಕ್ರೆಡಿಟ್ ಕಾರ್ಡ್ ಅಭಿಯಾನ ಕೈಗೊಳ್ಳಬೇಕೆಂದು ಯೋಚನೆ ಮಾಡಿದ್ದೇವೆ.

ಕೃಷಿ ಸಂಸ್ಕರಣೆಗೆ ಉತ್ತೇಜನ: ಭೂ ಪರಿವರ್ತನೆ ಅಗತ್ಯವಿಲ್ಲ: ಇನ್ನು ಕೃಷಿ ಸಂಸ್ಕರಣೆಗೆ ಉತ್ತೇಜನಕ್ಕೆ ಸಂಬಂಧಿಸಿದಂತೆ, ಬಹಳ ಮುಖ್ಯವಾಗಿ ನಮ್ಮ ಸದನದ ಗೌರವಾನ್ವಿತ ಸದಸ್ಯರು ಗಮನಿಸಬೇಕು. ಇನ್ನು ಮುಂದೆ ಕೃಷಿ ಸಂಸ್ಕರಣೆ ಯೋಜನೆಗಳನ್ನು ಮಾಡುವುದಕ್ಕೆ, ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವವರಿಗೆ 5 ಎಕರೆಯವರೆಗೆ ಭೂಪರಿವರ್ತನೆ ಅಗತ್ಯವಿಲ್ಲ. ನಾಳೆ

ಬೆಳಿಗ್ಗೆ 5 ಎಕರೆಗಳನ್ನು ಖರೀದಿ ಮಾಡಿದರೆ ಗ್ರಾಮೀಣ ಪ್ರದೇಶದಲ್ಲಿ 8 ದಿನಗಳಲ್ಲಿ ಕೃಷಿ ಆಧಾರಿತ ಕಾರ್ಯಕ್ರ, ಗುಡಿ ಕೈಗಾರಿಕೆಗಳನ್ನು ಮಾಡುವುದಕ್ಕೆ permission ಕೊಡುವಂಥ ಒಂದು ವಿನೂತನ ಯೋಜನೆ ಇದು. ಕೃಷಿ ಆಧಾರಿತ ಕೈಗಾರಿಕೆಗಳು, ಉಗ್ರಾಣ ಮತ್ತು ಶೀತಲೀಕರಣ ಕೇಂದ್ರ, ಕೃಷಿ ಪೂರಕ ಚಟುವಟಿಕೆಗಳೆಂದು ನಾವು ಪರಿಗಣನೆ ಮಾಡಿದ್ದೇವೆ. ಇಂತಹ ಕೈಗಾರಿಕೆಗಳ ಸ್ಥಾಪನೆಗೆ ಜಿಲ್ಲಾ ಕೇಂದ್ರಗಳನ್ನು ಹೊರತುಪಡಿಸಿ ಮಾಡಬೇಕು. ಏಕೆಂದರೆ, ಇದೇ ನೆಪದಲ್ಲಿ ಅವರು ಇನ್ನು ಬೇರೆ ಏನೋ ಮಾಡಬಾರದು. 5 ಎಕರೆಯವರೆಗೆ ಭೂ ಪರಿವರ್ತನೆ ಅಗತ್ಯವಿಲ್ಲದಂತೆ ಮಾಡಲು ಭೂ ಕಂದಾಯ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ತರುತ್ತೇವೆ. ಭೂಮಿ ಖರೀದಿ ಸರಳೀಕರಣ ಜಿಲ್ಲಾ ಕೇಂದ್ರವನ್ನು ಹೊರತುಪಡಿಸಿ ಕೃಷಿ ಆಧಾರಿತ ಕೈಗಾರಿಕೆಗಳು, ಉಗ್ರಾಣ ಮತ್ತು ಶೀತಲೀಕರಣ ಕೇಂದ್ರ ಸ್ಥಾಪನೆಗಳಿಗೆ ಈ ರೀತಿಯ ಇತರೆ ಅನುಕೂಲತೆಗಳಿಗೆ 5 ಎಕರೆ ಜಮೀನು ಖರೀದಿ ಮಾಡುವುದಕ್ಕೆ ಭೂ ಸುಧಾರಣೆ ಅಧಿನಿಯಮದ 79(ಎ) ಮತ್ತು 79(ಬಿ) ಪ್ರಕರಣಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಬೇಕು ಎಂದು ನಾವೂ ತೀರ್ಮಾನ ಮಾಡಿದ್ದೇವೆ.

ಹೆಚ್ಚುವರಿ ಸಹಾಯಧನ: ಕರ್ನಾಟಕ ಕೈಗಾರಿಕಾ ನೀತಿ 2009-14ರಡಿ ಈಗ ನೀಡುತ್ತಿರುವ ಸಹಾಯಧನವು ಕೆಲವು ವಲಯಗಳಿಗೆ ಮಾತ್ರ ಸೀಮಿತವಾಗಿದೆ. ಕೃಷಿ ಆಧಾರಿತ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಈ ವಲಯವಾರು ವರ್ಗೀಕರಣಗಳನ್ನು ತೆಗೆದುಹಾಕಿ ರಾಜ್ಯದ 164 ತಾಲ್ಲೂಕುಗಳಲ್ಲೂ (12 ಅಭಿವೃದ್ಧಿ ಹೊಂದಿದ ತಾಲ್ಲೂಕುಗಳನ್ನು ಹೊರತುಪಡಿಸಿ) ಶೇಕಡಾ 25ರಷ್ಟು ಸಹಾಯಧನ (ಗರಿಷ್ಠ ರೂ. 30 ಲಕ್ಷ) ಸಹಾಯಧನವನ್ನು ಕೊಡುತ್ತೇವೆ. ಈ ಸಹಾಯಧನವನ್ನು ಉಗ್ರಾಣ ಮತ್ತು ಶೀತಲೀಕರಣ ಕೇಂದ್ರ, ಇತರೆ ಕಾರ್ಯಕ್ರಮಗಳಿಗೆ ಅವರು ಉಪಯೋಗ ಮಾಡಿಕೊಳ್ಳಬಹುದು. ಇವುಗಳಿಗೆ ವಿದ್ಯುತ್ ಅನ್ನು ಪ್ರತಿ ಯೂನಿಟ್‌ಗೆ ಒಂದು ರೂಪಾಯಿಯಂತೆ ಸಹಾಯಧನವನ್ನು ಕೊಡುತ್ತೇವೆ. ಗ್ರಾಮೀಣ ಪ್ರದೇಶದ ಕೈಗಾರಿಕೆಗಳನ್ನು ತೆಗೆದು ಲಾಭದಾಯಕವಾಗಿ ನಡೆಸಬೇಕೆನ್ನುವುದಕ್ಕೋಸ್ಕರ ಈ concession ಕೊಡಬೇಕೆಂದು ಯೋಚನೆ ಮಾಡಿದ್ದೇವೆ.

ಬೆಳೆ ವಿಮೆ ವಿಸ್ತರಣೆ ಹಾಗೂ ಸಹಾಯಧನ: ಬೆಳೆ ವಿಮೆಗೆ ಒಂದು ಪ್ರಮುಖವಾದ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈಗಿರುವ ವಿಮಾ ಯೋಜನೆ ಹೆಚ್ಚು ರೈತರಿಗೆ ತಲುಪುತ್ತಿಲ್ಲ. ಇದನ್ನು ಸರಳೀಕರಿಸಿ ಮತ್ತು ವಿಸ್ತರಿಸಲು ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಟೆಲಿ ಮೆಟ್ರಿಕ್ ಮಳೆ ಮಾಪನ ಕೇಂದ್ರ ಸ್ಥಾಪಿಸಿ, ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸುತ್ತೇವೆ. ಜೊತೆಗೆ ಸಣ್ಣ ಮತ್ತು ಅತಿ ಸಣ್ಣ ರೈತರು ಕಟ್ಟಬೇಕಾದಂತಹ ಬೆಳೆ ವಿಮೆ ಪ್ರೀಮಿಯಂನಲ್ಲಿ ಶೇಕಡ 50ರಷ್ಟನ್ನು ಸರ್ಕಾರವೇ ಇನ್ನು ಮೇಲೆ ಭರಿಸುತ್ತದೆ. ಈಗ ಕೇವಲ ಶೇಕಡ 10 ಮಾತ್ರ ಇದೆ. ಶೇಕಡ 50ರಷ್ಟನ್ನು ನಾವೇ ಭರಿಸಬೇಕೆಂದು ತೀರ್ಮಾನ ಮಾಡಿದ್ದೇವೆ.

ಹಸಿರು ಹೊನ್ನು: "ಹಸಿರು ಹೊನ್ನು" ಈ ವಿಶಿಷ್ಟ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಮೂಲಕ ಕಳೆದ ಆಗಸ್ಟ್ ತಿಂಗಳಿನಲ್ಲಿ ದಾವಣಗೆರೆ ಜಿಲ್ಲೆಯ ಎಪ್ಪತ್ತೈದು ಗ್ರಾಮಗಳಲ್ಲಿ ಮೂರು ಲಕ್ಷ ಹೊಂಗೆ, ಬೇವು ಇತ್ಯಾದಿ ಜೈವಿಕ ಇಂಧನ ಸಸಿಗಳನ್ನು ನೆಡಲಾಗಿದೆ. ಈ ಹಸಿರು ಹೊನ್ನು ಕಾರ್ಯಕ್ರಮವನ್ನು ರೈತರ ಸಹಭಾಗಿತ್ವದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಎಲ್ಲ ತಾಲ್ಲೂಕುಗಳಿಗೆ ವಿಸ್ತರಣೆ ಮಾಡುತ್ತೇವೆ. ರೈತರಿಗೆ ಉಚಿತ ಸಸಿಗಳನ್ನು ಹಂಚುವುದರ ಜೊತೆಗೆ, ಅವರು ಮಾಡುವ ಜೈವಿಕ ಎಣ್ಣೆ ಕಾಳುಗಳಿಗೆ ಅಂದರೆ, ಬೇವು, ಹೊಂಗೆ, ಧೂಪ, ನಾಗಸಂಪಿಗೆ, ಹಿಪ್ಪೆ, ಜಟ್ರೋಪ ಇತ್ಯಾದಿ ಇವುಗಳಿಗೆ ಹಾಲಿಗೆ ಯಾವ ರೀತಿ ಎರಡು ರೂಪಾಯಿ ಪ್ರೋತ್ಸಾಹಧನವನ್ನು ಕೊಡುತ್ತೇವೆಯೋ ಅದೇ ರೀತಿ ಕೆ.ಜಿ.ಗೆ ಒಂದು ರೂಪಾಯಿ ಪ್ರೋತ್ಸಾಹಧನವನ್ನು ಕೊಡಬೇಕೆಂದು ತೀರ್ಮಾನ ಮಾಡಲಾಗಿದೆ. ಉಚಿತವಾಗಿ ಗಿಡಗಳು, ಒಂದು ರೂಪಾಯಿ ಪ್ರೋತ್ಸಾಹಧನ.

ಸಾವಯವ ಕೃಷಿ: ಮುಂದಿನ ನಾಲ್ಕು ವರ್ಷಗಳಲ್ಲಿ ಕನಿಷ್ಠ ಐದು ಲಕ್ಷ ರೈತರಿಗೆ ಇದನ್ನು ವಿಸ್ತರಣೆ ಮಾಡಬೇಕೆಂದು ತೀರ್ಮಾನ ಮಾಡಿ ಕಾರ್ಯಕ್ರಮ ರೂಪಿಸುತ್ತೇವೆ.

ಜಲ ರಕ್ಷಣೆ: ಉದ್ಯೋಗ ಖಾತರಿ ಯೋಜನೆಯಲ್ಲಿ ಕೃಷಿ ಹೊಂಡ, ಭೂ ಸಮತಟ್ಟು, ಒಡ್ಡು, ಕಲ್ಲೊಡ್ಡು, ಇತ್ಯಾದಿ ಜಲಾನಯನ ಕಾಮಗಾರಿಗಳನ್ನು

ಕೈಗೊಂಡು ಹೊಲದ ನೀರನ್ನು ಹೊಲದಲ್ಲೇ ಹಿಡಿದಿಡುವುದರ ಮೂಲಕ ಒಣ ಬೇಸಾಯದ ರೈತರಿಗೆ ಅನುಕೂಲ ಮಾಡಿಕೊಡುವ ವಿನೂತನ ಯೋಜನೆಯನ್ನು ಮಾಡುತ್ತಿದ್ದೇವೆ.

ಬೀಜಗಳ ಸಂಶೋಧನೆ ಮತ್ತು ಉತ್ಪಾದನೆಗೆ ಪ್ರೋತ್ಸಾಹ: ಕೃಷಿ ವಿಶ್ವವಿದ್ಯಾಲಯದ ಪ್ರಮುಖರನ್ನು ಕರೆಸಿ ಮಾತನಾಡಿದ್ದೇನೆ. ಹೊಸ ತಳಿಗಳ ಸಂಶೋಧನೆಗೆ ಹೆಚ್ಚಿನ ಅನುದಾನ ನೀಡುವುದರ ಜೊತೆಗೆ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಜಮೀನು ಮತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಫಾರ್ಮ್‌ಗಳಲ್ಲಿ ಬೀಜಗಳ ಉತ್ಪಾದನೆಗೆ ಉತ್ತೇಜನ ನೀಡಿ ರೈತರಿಗೆ ಸ್ವಕಾಲದಲ್ಲಿ ಉತ್ತಮ ಬೀಜಗಳು ದೊರೆಯುವಂತೆ ಮಾಡುವುದರ ಬಗ್ಗೆ ಆದ್ಯತೆಯನ್ನು ಕೊಡುತ್ತಿದ್ದೇನೆ.

ಕೃಷಿ ಮಾರುಕಟ್ಟೆ ವ್ಯವಸ್ಥೆ ಸುಧಾರಣೆ: ಬಹಳ ಮುಖ್ಯವಾಗಿ ಕೃಷಿ ಮಾರುಕಟ್ಟೆ ವ್ಯವಸ್ಥೆ ಸುಧಾರಣೆಯಾಗಬೇಕು. ರೈತರಿಗೆ ಅವರು ಬೆಳೆದ ಉತ್ಪನ್ನಗಳ ಮಾರಾಟಕ್ಕೆ ಆಗುತ್ತಿರುವ ತೊಂದರೆಗಳು ಕಡಿಮೆಯಾಗಬೇಕು. ಅದಕ್ಕೆ ಎ.ಪಿ.ಎಂ.ಸಿ.ಗಳಲ್ಲಿ ಗಣಕೀಕರಣ ಮತ್ತು ಆಧುನೀಕರಣ ಮಾಡಲಾಗುತ್ತದೆ. ಇದೇ ವರ್ಷ ಕೆಲವು ಪ್ರಮುಖ ಎ.ಪಿ.ಎಂ.ಸಿ.ಗಳಿಗೆ ರೈತರು ಸರಾಗವಾಗಿ ತಮ್ಮ ಮಾಲುಗಳನ್ನು ತೆಗೆದುಕೊಂಡು ಹೋಗಲು ಬೇಕಾದ ವ್ಯವಸ್ಥೆಯನ್ನು ಮಾಡಲಾಗಿದೆ. ಅದರಲ್ಲಿ ಕಡಿಮೆ ಖರ್ಚಿನಲ್ಲಿ ಅವರ ಹಣ್ಣು ಮತ್ತು ತರಕಾರಿ ಸಾಗಿಸುವುದಕ್ಕೆ ಅನುಕೂಲ ಮಾಡಲಿಕ್ಕೆ ಚಿಂತನೆಯನ್ನು ಮಾಡಿದ್ದೇವೆ.

ತೋಟಗಾರಿಕೆಗೆ ಪ್ರೋತ್ಸಾಹ: ತೋಟಗಾರಿಕೆ ಬೆಳೆಗಳಿಗೆ ಪ್ರೋತ್ಸಾಹ ನೀಡಲು ರಾಜ್ಯದಲ್ಲಿ 4 ಮೆಗಾ ಮಾರ್ಕೆಟ್‌ಗಳ ಸ್ಥಾಪನೆಗೆ ಖಾಸಗಿ ಸಹಭಾಗಿತ್ವದಲ್ಲಿ ಚಾಲನೆ ನೀಡುತ್ತೇವೆ. ಇಲ್ಲಿ ಹಣ್ಣು ಮತ್ತು ತರಕಾರಿ ಕೇಂದ್ರಗಳ ವರ್ಗೀಕರಣ, ಶೀತಲೀಕರಣ ಮತ್ತು ಪ್ಯಾಕಿಂಗ್‌ಗೆ ಸಹ ವ್ಯವಸ್ಥೆ ಮಾಡುತ್ತೇವೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಒಂದು ವಿಶೇಷ

ತೋಟಗಾರಿಕಾ ರಫ್ತು ವಲಯವನ್ನು ಸ್ಥಾಪನೆ ಮಾಡುವುದಕ್ಕೆ ನಾವು ತೀರ್ಮಾನವನ್ನು ಮಾಡಿದ್ದೇವೆ.

ಪಶುಸಂಗೋಪನೆಗೆ ಉತ್ತೇಜನ: ಸಂಚಾರಿ ಚಿಕಿತ್ಸಾಲಯ: ಸಂಚಾರಿ ಚಿಕಿತ್ಸಾಲಯಗಳ ಅಗತ್ಯವಿದೆ. ಕುರಿ, ಹಂದಿ ಮತ್ತಿತರ ಪಶು ಸಾಕಾಣಿಕೆಗೆ ವಿಶೇಷ ಉತ್ತೇಜನ ನೀಡುತ್ತೇವೆ. ಅವುಗಳ ಆರೋಗ್ಯ ರಕ್ಷಣೆಗಾಗಿ ಚಿಕಿತ್ಸೆಗೆ ಅಗತ್ಯವಿರುವಂಥ ಸಂಚಾರಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸುತ್ತೇವೆ. ಪಶುಚಿಕಿತ್ಸೆಗೆ ಸಹಾಯವಾಣಿಯನ್ನೂ ಸಹಾ ಸ್ಥಾಪಿಸುತ್ತೇವೆ.

ಅಮೃತಮಹಲ್ ಕಾವಲ್ ಅಭಿವೃದ್ಧಿ: ಬಹಳ ಪ್ರಮುಖವಾದ ಇನ್ನೊಂದು ತೀರ್ಮಾನವನ್ನು ನಾವು ತೆಗೆದುಕೊಂಡಿರುವುದೇನೆಂದರೆ, ಅಮೃತಮಹಲ್ ಕಾವಲ್ ಅಭಿವೃದ್ಧಿ ಚಿಕ್ಕಮಗಳೂರು ಜಿಲ್ಲೆಯ ಅಮೃತಮಹಲ್ ಕಾವಲ್‌ನ ಒತ್ತುವರಿ ತೆಗೆದುಹಾಕಿ ಅಭಿವೃದ್ಧಿಪಡಿಸುವ ಕಾರ್ಯ ಪ್ರಾರಂಭವಾಗಿದೆ. ಈ ಕಾವಲಿನ ಸಂರಕ್ಷಣೆ ಮತ್ತು ಪಶುತಳಿಗಳ ಅಭಿವೃದ್ಧಿ ಸಂಶೋಧನೆಗೆ ಪೂರಕವಾಗಿ ಅಲ್ಲಿ ಹೊಸ ಪಶುವೈದ್ಯಕೀಯ ಕಾಲೇಜ್ ಪ್ರಾರಂಭ ಮಾಡುತ್ತೇವೆ. ಬಹಳ ವಿಸ್ತಾರವಾದ ಭೂಮಿ ಇದೆ. ಅವರ ಲಾಭವಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಪಶುವೈದ್ಯರ ಕೊರತೆ ನೀಗಿಸಲು ಮತ್ತು ಪಶುಸಂಗೋಪನೆಗೆ ಹೆಚ್ಚು ಉತ್ತೇಜನ ಕೊಡುವಂತಾಗುತ್ತದೆ ಎಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದೇವೆ.

ಮಾರಾಟ ವ್ಯವಸ್ಥೆ: ಕುರಿ ಮಾಂಸ, ಉಣ್ಣೆ, ಮೀನು ಮತ್ತಿತರ ಪಶು ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಮಾಡುವತ್ತಾ ಗಮನ ಕೊಡುತ್ತೇವೆ. ಮಾನ್ಯ ಸದಸ್ಯರು ಇಲ್ಲಿ ಸಲಹೆ ಕೊಟ್ಟರು, ಸಜೀವವಾಗಿ ದೇಹ ತೂಕ ಮಾಡಲು ಡಿಜಿಟಲ್ ತೂಕ ಯಂತ್ರಗಳ ವ್ಯವಸ್ಥೆ ಮಾಡುತ್ತೇವೆ. ಇದಕ್ಕಾಗಿ ವೈಜ್ಞಾನಿಕ ಮಾರುಕಟ್ಟೆಗಳ ಸ್ಥಾಪನೆ ಸಹ ಮಾಡುತ್ತೇವೆ.

ಕೋಳಿ ಸಾಕಾಣಿಕೆಗೆ ಪ್ರೋತ್ಸಾಹ: ಕೋಳಿ ಸಾಕಾಣಿಕೆಗೆ ನೀಡಲಾಗುತ್ತಿದ್ದ ಸಹಾಯಧನವನ್ನು ದುರುಪಯೋಗವಾಗುತ್ತಿತ್ತೆಂಬ ಕಾರಣದಿಂದ ನಿಲ್ಲಿಸಲಾಗಿದೆ.

ಬಹಳ ದುರುಪಯೋಗವಾಗದ ರೀತಿಯಲ್ಲಿ ಮತ್ತೊಮ್ಮೆ ಯೋಜನೆಯನ್ನು ತಯಾರಿಸಿ ಹೊಸ ಪೌಲ್ಟ್ರಿ ಘಟಕಗಳಿಗೆ 25 ಪ್ರತಿಶತ ಸಹಾಯಧನ ನೀಡುತ್ತೇವೆ.

(ಈ ಹಂತದಲ್ಲಿ ಶ್ರೀ ಎನ್. ಯೋಗೀಶ್ ಭಟ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕುಡಿಯುವ ನೀರು: ರಾಜ್ಯದಲ್ಲಿ ಸುಮಾರು 20 ಸಾವಿರ ಜನವಸತಿಗಳಲ್ಲಿ ಕುಡಿಯುವ ನೀರಿನ ಗುಣಮಟ್ಟ ಉತ್ತಮವಾಗಿಲ್ಲದಿರುವುದರಿಂದ ನದಿ ಮತ್ತು ಜಲಾಶಯಗಳ ಮುಖಾಂತರ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗೆ ವಿಶೇಷ ಯೋಜನೆಯನ್ನು ರೂಪಿಸುತ್ತೇವೆ. ಈಗಾಗಲೇ ಸುಮಾರು ರೂ. 850 ಕೋಟಿ ವೆಚ್ಚದ ಬಹುಗ್ರಾಮ ವಿಶೇಷ ಯೋಜನೆಗಳನ್ನು ತಯಾರಿಸಿ ಭಾರತ ಸರ್ಕಾರಕ್ಕೆ ಕಳುಹಿಸಿದ್ದೇವೆ. ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಯೋಜನೆಯ ವಿಸ್ತರಣೆಗೂ ಸಹ ವಿಶೇಷ ನೆರವನ್ನು ಕೋರಲಾಗಿದೆ. ಕುಡಿಯುವ ನೀರಿನ ಯೋಜನೆಗಳ ಸಮರ್ಪಕ ನಿರ್ವಹಣೆಗೆ ಹೊರ ಗುತ್ತಿಗೆ ವ್ಯವಸ್ಥೆ ಜಾರಿಗೆ ತರುತ್ತೇವೆ.

ನಿರ್ಮಲ ಗ್ರಾಮ: ನಮ್ಮ ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯ ಮತ್ತು ಶೌಚಾಲಯದ ವ್ಯವಸ್ಥೆ ತೃಪ್ತಿಕರವಾಗಿಲ್ಲ. ಮುಂದಿನ ಮೂರು ವರ್ಷಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಯಶಸ್ವಿಗೊಳಿಸಿ ಆ ಮೂಲಕ ಎಲ್ಲಾ ಹಳ್ಳಿಗಳನ್ನು ನಿರ್ಮಲ ಗ್ರಾಮಗಳನ್ನಾಗಿ ಪರಿವರ್ತಿಸಲು ಪೂರಕವಾಗಿ ಈಗಿರುವ ಸಹಾಯಧನವನ್ನು ರೂ. 2500 ರಿಂದ ರೂ. 3000ಕ್ಕೆ ಹೆಚ್ಚಿಸಲಾಗುವುದು. ಹಣಕಾಸಿನ ಇತಿಮಿತಿಯೊಳಗೆ ಹೆಚ್ಚಿಸಬೇಕೆಂದು ಮಾನ್ಯ ಬಾಲಕೃಷ್ಣನವರು ಸಲಹೆಯನ್ನು ಕೊಟ್ಟಿದ್ದರು.

ಆರೋಗ್ಯ ಭಾಗ್ಯ: ಆರೋಗ್ಯ ವಿಮೆ: ನಮ್ಮ ಆರೋಗ್ಯ ಸಚಿವರ ವಿಶೇಷ ಪರಿಶ್ರಮದಿಂದ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆ ಮೂಲಕ ಈಗ ಗುಲ್ಬರ್ಗಾ ವಿಭಾಗದ ಎಲ್ಲಾ 16 ಲಕ್ಷ ಕುಟುಂಬಗಳನ್ನು ಆರೋಗ್ಯ ವಿಮಾ ವ್ಯಾಪ್ತಿಗೆ ನಾವು ತಂದಿದ್ದೇವೆ. ಈ ಯೋಜನೆಯನ್ನು ಮುಂದಿನ ವರ್ಷ ರಾಜ್ಯದಾದ್ಯಂತ ಜಾರಿಗೆ ತರಬೇಕೆನ್ನುವ ತೀರ್ಮಾನವನ್ನು ನಾವು ಮಾಡಿದ್ದೇವೆ.

ಆರೋಗ್ಯ ಕವಚ (108): ತುರ್ತು ಆರೋಗ್ಯ ಸೇವೆ ನೀಡುವ ದಿಸೆಯಲ್ಲಿ ಜಾರಿಗೆ ತಂದ ಆರೋಗ್ಯ ಕವಚವು ಯಾರು ಏನೇ ಟೀಕೆ ಮಾಡಲಿ ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಇದರ ವ್ಯಾಪ್ತಿಯನ್ನು ಮುಂದಿನ ಒಂದು ವರ್ಷದಲ್ಲಿ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಬೇಕೆಂದು ತೀರ್ಮಾನವನ್ನು ಮಾಡಿದ್ದೇವೆ.

ನರ್ಸಿಂಗ್ ವಿದ್ಯಾರ್ಥಿನಿಯರಿಗೆ ವಿಶೇಷ ಪ್ರೋತ್ಸಾಹ: ಕೇರಳದಿಂದ ಇಲ್ಲಿಗೆ ಹೆಣ್ಣುಮಕ್ಕಳು ಬರುತ್ತಾರೆ. ನರ್ಸಿಂಗ್ ಮಹತ್ವ ಗೊತ್ತು, ಸೇವಾ ಮನೋಭಾವನೆ ಅವರಲ್ಲಿದೆ. ಇಷ್ಟು ದೊಡ್ಡಪ್ರಮಾಣದಲ್ಲಿ ಸಂಬಳ ಸಿಗುತ್ತದೆ. ಅನುಕೂಲ ಇದೆ. ಆದರೆ, ನಮ್ಮ ಮಕ್ಕಳು ಇದಕ್ಕೆ ಮುಂದೆ ಬರುತ್ತಿಲ್ಲ. ಅದಕ್ಕೋಸ್ಕರ ಈ ನರ್ಸಿಂಗ್ ಕಾಲೇಜು ವಿಷಯದಲ್ಲಿ ಬೆಂಗಳೂರನ್ನು ಬಿಟ್ಟು, ಬೆಂಗಳೂರಿಗೆ ಅದರದೇ ಆದಂತಹ ವಿಶೇಷವಾದ ಕಾರಣಗಳಿವೆ, ಯಾವ ಗ್ರಾಮೀಣ ವಿದ್ಯಾರ್ಥಿನಿಯರು ನರ್ಸಿಂಗ್ ಕಾಲೇಜ್ ಸೇರುವುದಕ್ಕೆ ಮುಂದೆ ಬರುತ್ತಾರೆ, ಅವರಿಗೆ ಪ್ರೋತ್ಸಾಹ ನೀಡುವುದಕ್ಕೋಸ್ಕರ, 10,000 ರೂಪಾಯಿ ಸಹಾಯಧನವನ್ನು ಅವರು ನರ್ಸಿಂಗ್ ಕಾಲೇಜ್‌ಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ನೀಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಬೆಂಗಳೂರು ಬಿಟ್ಟು ಹೊರಗಡೆ ಈ ಯೋಜನೆಯನ್ನು ಮಾಡುತ್ತೇವೆ.

ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ: ಗ್ರಂಥಾಲಯ ಬಲಪಡಿಸುವುದು: ಈಗ ಗ್ರಾಮೀಣ ಶಾಲೆಗಳಲ್ಲಿರುವ ಗ್ರಂಥಾಲಯಗಳನ್ನು ಬಲಪಡಿಸಿ ಗ್ರಾಮಸ್ಥರಿಗೂ ಕೂಡ ಶಾಲಾ ವೇಳೆ ನಂತರ ಇವುಗಳ ಉಪಯೋಗ ದಕ್ಕುವಂತೆ ವಿಶೇಷ ಕಾರ್ಯಕ್ರಮವನ್ನು ರೂಪಿಸುತ್ತೇವೆ.

ಕೌಶಲ್ಯ ಅಭಿವೃದ್ಧಿ: ಕೌಶಲ್ಯ ಅಭಿವೃದ್ಧಿ ನಿಗಮದ ಮುಖಾಂತರ ಗ್ರಾಮೀಣ ಯುವಕ ಯುವತಿಯರಿಗೆ ತರಬೇತಿ ನೀಡಿ ಅವರಿಗೆ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಉದ್ಯೋಗ ಒದಗಿಸುವ ಕಾರ್ಯಕ್ರಮವನ್ನು ಇನ್ನೂ ವ್ಯಾಪಕವಾಗಿ ವಿಸ್ತರಿಸುತ್ತೇವೆ.

ಉನ್ನತ ಶಿಕ್ಷಣ: ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಉನ್ನತ ಶಿಕ್ಷಣದ ವ್ಯಾಪ್ತಿಗೆ ಹೆಚ್ಚು ವಿದ್ಯಾರ್ಥಿಗಳನ್ನು ತರಲು ವಿಶೇಷ ಯೋಜನೆಗಳನ್ನು ರೂಪಿಸುತ್ತಿದ್ದೇವೆ.

ನೇಕಾರರಿಗೆ ನೆರವು: ನೇಕಾರರಿಗೆ ಮೂರು ಪ್ರತಿಶತ ಬಡ್ಡಿ ದರದಲ್ಲಿ ಸಾಲದ ವ್ಯವಸ್ಥೆಯನ್ನು ಮಾಡಿದ್ದೇವೆ. ಪ್ರತಿ ಕೈಮಗ್ಗ ಅಭಿವೃದ್ಧಿ ನಿಗಮದ ಕೇಂದ್ರ ಸ್ಥಾನವನ್ನು ಸಂಪೂರ್ಣವಾಗಿ ಹುಬ್ಬಳ್ಳಿಗೆ ಸ್ಥಳಾಂತರಿಸಿ ಅವರ ಕಾರ್ಯಚಟುವಟಿಕೆಗಳು ಅಲ್ಲೇ ನಡೆಯುವಂತೆ ತೀರ್ಮಾನ ಮಾಡಿದ್ದೇವೆ. ಎಲ್ಲರೂ ಬೆಂಗಳೂರಿಗೇ ಬರುತ್ತಾರೆ. ಹೊರಗಡೆ ಇರುವುದಕ್ಕೆ ಇಷ್ಟಪಡುವುದಿಲ್ಲ. ಅದಕ್ಕೋಸ್ಕರ ಹುಬ್ಬಳ್ಳಿಗೆ ಸ್ಥಳಾಂತರಿಸಿ ಅದರ ಕಾರ್ಯಚಟುವಟಿಕೆಗಳ ವಿಸ್ತಾರಕ್ಕೆ ಹೆಚ್ಚಿನ ವಹಿವಾಟು ಬಂಡವಾಳ ನೀಡಲಾಗುವುದು, ಕೈಮಗ್ಗ ನೇಕಾರರಿಗೆ ಕನಿಷ್ಠ ದಿನಗೂಲಿ ಸಿಗುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಐದು ಸಾವಿರ ಮಗ್ಗದ ಕೋಣೆಯುಳ್ಳ ತಲಾ ರೂ. 60,000 ವೆಚ್ಚದ ಮನೆಗಳ ನಿರ್ಮಾಣಕ್ಕೆ ಶೀಘ್ರದಲ್ಲೇ ಚಾಲನೆ ಕೊಡುತ್ತೇವೆ.

1.00 P.M.

ನೀರಾವರಿ: ನೀರಾವರಿಗೆ ಹೆಚ್ಚು ಸಂಪನ್ಮೂಲ: ನೀರಾವರಿ ಯೋಜನೆಗೆ ಹೆಚ್ಚು ಸಂಪನ್ಮೂಲ ಒದಗಿಸುವುದಕ್ಕೆ ರಾಜ್ಯದಲ್ಲಿ ಪ್ರಗತಿಯಲ್ಲಿರುವ ಮತ್ತು ಉದ್ದೇಶಿತ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಸುಮಾರು 45,000 ಕೋಟಿ ರೂಪಾಯಿಗಳ ಅಗತ್ಯವಿದೆಯೆಂದು ಅಂದಾಜು ಮಾಡಿದ್ದೇವೆ. ಕೇಂದ್ರ ಸರ್ಕಾರದ ಎ.ಐ.ಡಿ.ಪಿ. ಯೋಜನೆಯಡಿ ಇನ್ನೂ ಹೆಚ್ಚು ಹಣ ತರಬೇಕಾಗಿದೆ. ಪ್ರತಿಪಕ್ಷದವರು ನಾವೆಲ್ಲರೂ ಒಟ್ಟಾಗಿ ಹೋಗಿ ನೀರಾವರಿ ನಿಗಮಗಳ ಸಂಪನ್ಮೂಲ ಕ್ರೋಢೀಕರಿಸುವುದಕ್ಕೆ ಮತ್ತು ಕೇಂದ್ರದಿಂದ ಹೆಚ್ಚು ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡೋಣ.

ಅಚ್ಚುಕಟ್ಟು ಪ್ರದೇಶಗಳ ಅಭಿವೃದ್ಧಿ: ಈಗಾಗಲೇ ಸೃಷ್ಟಿಸಿರುವ ನೀರಾವರಿ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸುವುದಕ್ಕೆ ಮಾನ್ಯ ಬಸವರಾಜ್ ಬೊಮ್ಮಾಯಿಯವರು ಇಲ್ಲೇ ಇದ್ದಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ

ಖಾತರಿ ಯೋಜನೆಯಡಿ ನಾಲಾ ಮತ್ತು ಅಚ್ಚುಕಟ್ಟು ಅಭಿವೃದ್ಧಿಗಾಗಿ ಸುಮಾರು 1000 ಕೋಟಿ ರೂಪಾಯಿ ನೀವು ಖರ್ಚು ಮಾಡಬೇಕು.

ಏಕೆಂದರೆ, ಶೇಕಡ 40ರಷ್ಟು ಹಣವನ್ನು ಮೆಷಿನರಿಗಳಿಗೆ ಉಪಯೋಗಿಸಬಹುದು. ಎಲ್ಲಾ ಜಲಾಶಯಗಳಿಗೆ ಸಂಬಂಧಿಸಿದಂತೆ ಕಾಲುವೆಗಳನ್ನು ನಿರ್ಮಿಸುವುದಕ್ಕೆ ಇದೊಂದು ಸುವರ್ಣಾವಕಾಶ. ಬೇರೆಯವರು ಮಾಡುತ್ತಿದ್ದಾರೆ. ನಿಮ್ಮದು Rs. 1,000 crores plan ಆಗಬೇಕು. ಅಲ್ಲಿಗೆ ನೀವು ಮುಟ್ಟಬೇಕು. ನಿಮ್ಮ ಅಧಿಕಾರಿಗಳಿಗೆ ಅದನ್ನೇ ಕೊಡಿ. ಈಗಾಗಲೇ ನೀವು ಪ್ರಯತ್ನ ಮಾಡುತ್ತಿದ್ದೀರಿ. ಚೆನ್ನಾಗಿ ಆಗುತ್ತಿದೆ.

ಕೆರೆಗಳಿಗೆ ನೀರು: ಮಳೆಗಾಲದಲ್ಲಿ ಜಲಾಶಯಗಳು ತುಂಬಿ ನೀರು ಸಮುದ್ರಕ್ಕೆ ವ್ಯರ್ಥವಾಗಿ ಹರಿದು ಹೋಗುತ್ತಿದೆ. ಈ ನೀರು ಕೆರೆಗಳಿಗೆ ತುಂಬುವುದಕ್ಕೆ ಎಲ್ಲೆಲ್ಲಿ ಅವಕಾಶಗಳಿವೆ ಎಂಬುದನ್ನು ಎಲ್ಲಾ ಮಾನ್ಯ ಶಾಸಕರುಗಳು ಹೇಳಬೇಕು. ದಯಮಾಡಿ ಹಣವನ್ನು ಉಪಯೋಗಿಸಿಕೊಂಡು ಕೆರೆಗಳಲ್ಲಿ ನೀರು ತುಂಬಿಸುವ ಕೆಲಸ ಮಾಡಿದರೆ ಅಂತರ್ಜಲ ಹೆಚ್ಚುತ್ತದೆ. ಅಂತರ್ಜಲ ಬಹಳ ಕೆಳಮಟ್ಟಕ್ಕೆ ಇಳಿದಿದೆ, ನಾವು ಬದುಕುವುದಕ್ಕಾಗುವುದಿಲ್ಲ ಎನ್ನುವ ಪರಿಸ್ಥಿತಿ ಏನಿದೆ, ಆಗ ಅದನ್ನು ಸರಿಪಡಿಸಬಹುದು. ಆ ಕಡೆ ಒತ್ತು ನೀಡಬೇಕು.

ಊರಿಗೊಂದು ಕೆರೆ, ಊರಿಗೊಂದು ವನ: ಇದರ ಬಗ್ಗೆ ಡಾ: ಎ.ಪಿ.ಜೆ. ಅಬ್ದುಲ್ ಕಲಾಂಜಿಯವರು ಮತ್ತು ಅನೇಕ ತಜ್ಞರ ಅಭಿಪ್ರಾಯಗಳಿವೆ. ಒಂದು ಊರಿಗೆ ಹೋದ ತಕ್ಷಣ ನಮ್ಮ ಶಾಸಕರು ಜನರಿಗೆ ತೋರಿಸುವಂತಿರಬೇಕು. ಅಲ್ಲೊಂದು ಅಭಿವೃದ್ಧಿ ಹೊಂದಿದ ಕೆರೆ ಮತ್ತು ಉದ್ಯಾನ ಸಾಯಂಕಾಲ ಬಂದರೆ ಅಲ್ಲಿ ಜನರು ಸೇರುವಂತಿರಬೇಕು. ವಿಶಾಲವಾದ ಜಾಗಗಳಿವೆ. ಉದ್ಯಾನವೆಂದು ಹೇಳುತ್ತೇವೆ. ಆದರೆ, ಅಲ್ಲಿ ಇಸ್ಪೀಟು ಆಡಿಕೊಂಡು ಕುಳಿತಿರುತ್ತಾರೆ, ನಾಯಿ-ನರಿಗಳು ನಿಂತಿರುತ್ತವೆ. ಅದನ್ನು ಅಭಿವೃದ್ಧಿಪಡಿಸಲು ಶಾಸಕರು ತಮ್ಮ ನಿಧಿಯಿಂದ 2-3 ಲಕ್ಷ ರೂ.ಗಳ ಅನುದಾನ ನೀಡಿದಲ್ಲಿ ಬೇಲಿ ಹಾಕಿಸಿ ಗಿಡಗಳನ್ನು ಬೆಳೆಸಬಹುದು. ಈ ದೃಷ್ಟಿಕೋನ ನಮ್ಮ ಶಾಸಕರುಗಳಿಗೆ ಬಂದರೆ

ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಹೆಚ್ಚಿನ ಅನುದಾನ ಕೊಡುವುದಕ್ಕೆ ನಾನು ಪ್ರಯತ್ನಿಸುತ್ತೇನೆ.

ಗ್ರಾಮಗಳಿಗೆ ಸಂಪರ್ಕಜಾಲ: ಗ್ರಾಮೀಣ ಪ್ರದೇಶಗಳಿಗೂ ಮಾಹಿತಿ ಮತ್ತು ತಂತ್ರಜ್ಞಾನದ ಲಾಭ ಮುಟ್ಟಲು ಬ್ರಾಂಡ್ ಬ್ಯಾಂಡ್ ವಿಸ್ತರಣೆಗೆ ಪ್ರೋತ್ಸಾಹ ನೀಡುತ್ತೇವೆ. ಈ ಮೂಲಕ ಗ್ರಾಮೀಣ ಬಿ.ಪಿ.ಓ. ಸ್ಥಾಪನೆಗೆ ಉತ್ತೇಜನ ನೀಡುತ್ತೇವೆ.

ವ್ಯಕ್ತಿ ವಿಕಸನಕ್ಕೆ ಉತ್ತೇಜನ: ಇನ್ನು ವ್ಯಕ್ತಿ ವಿಕಸನಕ್ಕೆ ಉತ್ತೇಜನ ನೀಡುವುದು. ನಾನು ನಿನ್ನೆ ತಾನೇ Art of Living ಸಂಸ್ಥೆಯ ಶ್ರೀ ರವಿಶಂಕರ್ ಗುರೂಜಿಯವರೊಂದಿಗೆ ಸುಮಾರು ಎರಡು ಗಂಟೆಗಳ ಕಾಲ ಮಾತನಾಡಿ ಬಂದಿದ್ದೇನೆ. ನಮ್ಮ ಗ್ರಾಮೀಣ ಜನರು ಸ್ವಾವಲಂಬನೆ, ಸಾಮೂಹಿಕ ಜವಾಬ್ದಾರಿ, ನೈತಿಕತೆ, ಸಾಮಾಜಿಕ ಬದ್ಧತೆ ಮತ್ತು ಸ್ವಾಭಿಮಾನದ ಬಾಳನ್ನು ಬಾಳಲು ನಾವು ಕಲಿಸಬೇಕಾಗುತ್ತದೆ. ಅದಕ್ಕೋಸ್ಕರ Art of Living ಸಂಸ್ಥೆಯು ಈಗಾಗಲೇ ರಾಯಚೂರು, ಬೀದರ್, ಕೊಪ್ಪಳ, ಚಿಕ್ಕಮಗಳೂರು ಇತ್ಯಾದಿ ಜಿಲ್ಲೆಗಳಲ್ಲಿ Youth Leadership Training Programme ಮಾಡುತ್ತಿದ್ದಾರೆ. ಅದರ ಮುಖಾಂತರ ಗ್ರಾಮೀಣ ಯುವಕರಲ್ಲಿ ಅರಿವು ಮೂಡಿಸುವ ಮತ್ತು ಅವರನ್ನು ತಮ್ಮ ಗ್ರಾಮಗಳ ಅಭಿವೃದ್ಧಿಗೆ ಸಿದ್ಧಗೊಳಿಸುವ ಪ್ರಯತ್ನ ನಡೆಯುತ್ತಿದೆ. ಈ ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯದ ವಿವಿಧೆಡೆಗಳಲ್ಲಿ ವ್ಯಕ್ತಿ ವಿಕಸನ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ಇದಕ್ಕಾಗಿ ವಿಶೇಷ ಅನುದಾನ ನೀಡುವವರಿದ್ದೇವೆ.

ಕೃಷಿ ಇಲಾಖೆಯ ಬಲವರ್ಧನೆ: ಈ ಹಿಂದೆ ಕೃಷಿ ಇಲಾಖೆಯಲ್ಲಿ ಕೃಷಿ ಸಹಾಯಕ (ಗ್ರಾಮ ಸೇವಕ) ಹುದ್ದೆ ಇತ್ತು. ಈ ಅಧಿಕಾರಿ ಗ್ರಾಮದಲ್ಲಿಯೇ ವಾಸವಾಗಿ ರೈತರೊಂದಿಗೆ ಉತ್ತಮ ಸಂಪರ್ಕ ಹೊಂದಿ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ರೈತರಿಗೆ ಮಾಹಿತಿಗಳನ್ನು ನೀಡಬೇಕು. ಆದರೆ, ಹಲವು ವರ್ಷಗಳಿಂದ ಈ ಹುದ್ದೆಗಳ ನೇಮಕಾತಿಯಾಗಿಲ್ಲ. ಮತ್ತೊಂದು ಪ್ರಮುಖ ನಿರ್ಧಾರವೇನೆಂದರೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಥವಾ ರೈತರ ಸಂಪರ್ಕ ಕೇಂದ್ರದ ಮಟ್ಟದಲ್ಲಿ ಕೃಷಿ ಸಹಾಯಕ ಹುದ್ದೆಯ ಅಗತ್ಯವಿದೆ. ಇದಕ್ಕಾಗಿ ಕೃಷಿ

ವಿಶ್ವವಿದ್ಯಾನಿಲಯಗಳ ಮಾರ್ಗದರ್ಶನದಲ್ಲಿ ಗ್ರಾಮೀಣ ಯುವಕ-ಯುವತಿಯರಿಗೆ ಪಿಯುಸಿ ನಂತರದ ಎರಡು ವರ್ಷದ 'ಕೃಷಿ ಡಿಪ್ಲೊಮಾ' ಕೋರ್ಸ್ ಪ್ರಾರಂಭಿಸಲಾಗುವುದು. ಈ ಕೋರ್ಸ್ ಮಾಡಿದರೆ ತನ್ನ ಹಳ್ಳಿಯ ಕೃಷಿಕರಿಗೆ ಮಾರ್ಗದರ್ಶನ ಮಾಡುತ್ತಾರೆ. ಯಾರಾದರೂ ಉತ್ತಮ ಬೆಳೆ ಬೆಳೆದಲ್ಲಿ, ಉಳಿದವರು ಅದನ್ನು ನೋಡುವುದಕ್ಕೆ ಅನುಕೂಲವಾಗುತ್ತದೆ. ಆ ಕೆಲಸವನ್ನು ಮುಂದಿನ ವರ್ಷದಿಂದ ನಾನು ನಿಶ್ಚಿತವಾಗಿಯೂ ಪ್ರಾರಂಭಿಸುತ್ತೇನೆ.

ಪಂಚಾಯತ್ ರಾಜ್ ಬಲವರ್ಧನೆ: ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತ ಬಲವರ್ಧನೆ ಜೊತೆಗೆ ಈ ಸಂಸ್ಥೆಗಳು ಸಮರ್ಪಕವಾಗಿ, ಪ್ರಾಮಾಣಿಕವಾಗಿ, ಪಾರದರ್ಶಕತೆಯಿಂದ ಕೆಲಸ ಮಾಡುವಂತೆ ನೋಡಿಕೊಳ್ಳಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಪಾರದರ್ಶಕತೆ ಮತ್ತು ಬದ್ಧತೆ ಹೆಚ್ಚಿಸುವ ದೃಷ್ಟಿಯಿಂದ **'ಓಂಬುಡ್ಸ್‌ಮನ್'** ವ್ಯವಸ್ಥೆಯನ್ನು ಶೀಘ್ರವಾಗಿ ಜಾರಿಗೊಳಿಸುತ್ತೇವೆ. ಜೊತೆಗೆ, ಈ ಸಂಸ್ಥೆಗಳು ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದಕ್ಕೆ ಸಹಾಯವಾಗುವಂತೆ ಜಿಲ್ಲಾ ಮಟ್ಟದಲ್ಲಿ ತಜ್ಞರ ಕಾರ್ಯಪಡೆ ರಚಿಸುತ್ತೇವೆ. ಈಗಾಗಲೇ ರಾಜ್ಯಮಟ್ಟದಲ್ಲಿ ಕಾಮಗಾರಿಗಳಲ್ಲಿ ಗುಣಮಟ್ಟಗಳ ಕಾರ್ಯಪಡೆಯನ್ನು ರಚಿಸಿದ್ದೇವೆ. ಅದೇ ರೀತಿ ಜಿಲ್ಲಾ ಮಟ್ಟದಲ್ಲೂ ಸದರಿ ಕಾರ್ಯಪಡೆಯನ್ನು ರಚಿಸುತ್ತೇವೆ. ಈ ಕಾರ್ಯಪಡೆಯು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ, confidential report ನೀಡಿದಲ್ಲಿ ಆಗ ನಾವು ಬಿಗಿಯಾದ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಈ ರೀತಿ ಮಾಡುತ್ತಿದ್ದೇವೆ.

ರಾಜ್ಯಮಟ್ಟದ ಉನ್ನತ ಮಟ್ಟದ ಸಮಿತಿ: ಈ ಮೇಲಿನ ಕಾರ್ಯ ಯೋಜನೆಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ಪರಿಶೀಲಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸುತ್ತೇವೆ. ಇವತ್ತು ನಾವು ಏನೇನು ಭರವಸೆಗಳನ್ನು ನೀಡಿದ್ದೇವೆ. ಇದು ಪ್ರಾಮಿಸ್ ಆಗಬಾರದು. ಇಲ್ಲಿ ಏನೋ ಸುಮ್ಮನೆ ಪ್ರಚಾರಕ್ಕೆ, ಇಷ್ಟು ವರ್ಷ ನಡೆದುಕೊಂಡು ಬಂದಂತೆ ಜನರಿಗೆ ಇನ್ನೇನೋ ಮಾಡುವುದಾಗಬಾರದು. ಇದು ಆಗಬಾರದೆಂಬ ದೃಷ್ಟಿಯಿಂದ ಮುಖ್ಯಮಂತ್ರಿಗಳ

ಅಧ್ಯಕ್ಷತೆಯಲ್ಲಿಯೇ ಒಂದು ಉನ್ನತ ಮಟ್ಟದ ಸಮಿತಿ ರಚಿಸಿ, ಈ ಸಮಿತಿಗೆ ಸಂಬಂಧಪಟ್ಟ ಸಚಿವರು, ಅಧಿಕಾರಿಗಳು ಮತ್ತು ತಜ್ಞರನ್ನು ನೇಮಿಸಿ ಆ ಮೂಲಕ ಒಂದು ಹೊಸ ಬದಲಾವಣೆ ತರಬೇಕೆಂಬ ದಿಸೆಯಲ್ಲಿ ಮಾಡಿದ್ದೇವೆ.

ಮೇಲೆ ಪ್ರಸ್ತಾಪಿಸಿದ ಭವಿಷ್ಯದ ಹೆಜ್ಜೆಗಳನ್ನು ಕಾರ್ಯರೂಪಕ್ಕೆ ತರಲು ನಿಮ್ಮೆಲ್ಲರ ಸಹಕಾರ ನನಗೆ ಬೇಕು. ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ರಾಜಕಾರಣ ಬೆಳೆಸಲು ನಾನು ಪ್ರಯತ್ನಿಸುವುದಿಲ್ಲ. ಈ ಮೂಲಕ ನಮ್ಮ ಗ್ರಾಮೀಣ ಚಿತ್ರಣ ಬದಲಾಗಬೇಕು. ಅಲ್ಲಿನ ಗುಣಮಟ್ಟ ಎತ್ತರಗೊಂಡು ಮಾನವ ಅಭಿವೃದ್ಧಿ ಸೂಚಿ ತ್ವರಿತವಾಗಿ ಹೆಚ್ಚಾಗುವುದಕ್ಕೆ ನಾವೆಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡೋಣ.

ಕಳೆದ ಮೂರು ದಿವಸಗಳಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಸಲಹೆ ನೀಡುವ ಮೂಲಕ ಎಲ್ಲರೂ ಎಲ್ಲಾ ರೀತಿಯ ಸಹಕಾರಗಳನ್ನು ನೀಡಿದ್ದಾರೆ. ಕೊನೆಯದಾಗಿ, ಒಂದೇ ಪ್ರಾರ್ಥನೆ. ಪ್ರಾರಂಭದ ದಿವಸಗಳಲ್ಲಿ ವಿಷಯ ಎಲ್ಲಿದೆ, ಚರ್ಚೆ ಎಲ್ಲಿದೆ ಎಂಬುದು ನಮ್ಮ ಕಣ್ಮುಂದೆ ಇತ್ತು. ಆದರೆ, ಚರ್ಚಿಸುವುದಕ್ಕೆ ಬಹಳ ಪೈಪೋಟಿ ಇತ್ತು. ರಾತ್ರಿ 9.30 ಗಂಟೆವರೆಗೂ ಚರ್ಚಿಸಿದ್ದೀರಿ. ಮುಂಬರುವ ಮಳೆಗಾಲದ ಅಧಿವೇಶನದಲ್ಲಿ ಒಂದೆರಡು ದಿವಸ ವಿದ್ಯುತ್ ಬಗ್ಗೆ, ನಿಮಗೆ ಏನೇನು ಕೊರತೆಗಳು ಕಾಣಿಸುತ್ತವೆ, ಏನೇನು ಸುಧಾರಣೆಗಳನ್ನು ತರಬಹುದೆಂಬುದರ ಕುರಿತು ಸಲಹೆಗಳನ್ನು ಕೊಡಿ. ಇದೇನೂ ಸರ್ವಾಧಿಕಾರಿ ವ್ಯವಸ್ಥೆಯಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆ, ನಿಮ್ಮ ಭಾವನೆಗಳನ್ನು ಹಂಚಿಕೊಂಡರೆ ಒಂದೊಂದು ಕ್ಷೇತ್ರಗಳ ಬಗ್ಗೆಯೂ ಎರಡು ದಿವಸಗಳ ಕಾಲ ಚರ್ಚಿಸಿ ಕೆಲವು ಕ್ಷೇತ್ರಗಳಲ್ಲಾದರೂ ಸುಧಾರಣೆಗಳನ್ನು ಮಾಡಿ ಆಡಳಿತದಲ್ಲಿ ಸುಧಾರಣೆ ತರಬಹುದೆಂಬ ವಿಶ್ವಾಸ ನನಗಿದೆ.

ಮಾನ್ಯ ಸಭಾಧ್ಯಕ್ಷರೆ, ಈ ಸಂದರ್ಭದಲ್ಲಿ ನಮಗೆ ಎಲ್ಲಾ ರೀತಿಯ ಸಹಕಾರಗಳನ್ನು ಕೊಟ್ಟು, ಈ ರೀತಿಯ ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿಕೊಟ್ಟು ಅಭಿಪ್ರಾಯಗಳನ್ನು ಪರಸ್ಪರ ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಗೌರವಾನ್ವಿತ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ ಬರುವ

ದಿವಸಗಳಲ್ಲಿ ಚರ್ಚೆಯ ಗುಣಮಟ್ಟ ಹೆಚ್ಚಾಗುವುದಕ್ಕೆ ಏನೇನು ಪ್ರಯತ್ನಗಳಾಗಬೇಕೋ ಅದನ್ನು ಪ್ರತಿ ಪಕ್ಷ ನಾಯಕರ ಜೊತೆ ಕುಳಿತು ಚರ್ಚಿಸಿ ಅದನ್ನು ಕಾರ್ಯರೂಪಕ್ಕೆ ತರಲು ನನ್ನ ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮೂರು ದಿವಸಗಳ ಕಾಲ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಗಳಿಗೆ ಸೀಮಿತವಾಗಿ ಈ ಸದನದಲ್ಲಿ ಚರ್ಚಿಸುವುದಕ್ಕೆ ಬಹಳ ಕಳಕಳಿಯಿಂದ ನಮ್ಮೆಲ್ಲರ ಅಭಿಪ್ರಾಯ ಬೇಕೆಂದು ಈ ಸದನ ಕರೆದದ್ದು. ಪಾಪ! ಅವರು ಪ್ರಾಸ್ತಾವಿಕ ಮಾತುಗಳನ್ನು ಪ್ರಾರಂಭಿಸುವ ರೈತರು, ಬಡವರು, ಗ್ರಾಮೀಣ ಬದುಕು, ಇದನ್ನು ನೆನೆಸಿಕೊಂಡರೆನೇ ಅಳು ಬರುತ್ತದೆ ಎನ್ನುವ ರೀತಿಯಲ್ಲಿ ಮಾತನಾಡಿದರು. ನೆನೆಸಿಕೊಂಡರೆನೇ ದುಃಖ, ಅಳು, ಪಾಪ! ಗದ್ಗದಿತರಾಗಿಬಿಟ್ಟರು. ಇದು ನಿಜವೇನೋ, ಪ್ರಾಮಾಣಿಕವಾಗಿ ಇದೆಯೇನೋ ಅಂದುಕೊಂಡಿದ್ದೆವು. ಆದರೆ, ಅದು ಸತ್ಯವಲ್ಲವೆಂದು ಅವರ ಉತ್ತರದಿಂದ ಸ್ಪಷ್ಟವಾಗಿ ಗೊತ್ತಾಯಿತು. ಅನೇಕ ಮಾನ್ಯ ಸದಸ್ಯರುಗಳು ಇಲ್ಲಿ ಅತಿ ಉತ್ಸಾಹದಿಂದ ಚರ್ಚೆಯಲ್ಲಿ ಭಾಗವಹಿಸಿ ಆ ಕಡೆ ಈ ಕಡೆ ಇಂದ ಈ ಕಳಕಳಿ ಇದೆಯೆಂದು ನಾವು ಮತ್ತು ಇತರ ಮಾನ್ಯ ಸದಸ್ಯರೆಲ್ಲರೂ ಚರ್ಚೆಯಲ್ಲಿ ಭಾಗವಹಿಸಿ ಅತ್ಯಂತ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದೇವೆ. ಆದರೆ, ಅವರ ಉತ್ತರ ನೋಡಿದ ಮೇಲೆ ಮತ್ತೆ ಅವರು ಇಲ್ಲಿ ಲಿಖಿತ ಮೂಲಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ – ಭವಿಷ್ಯದ ಹೆಜ್ಜೆಗಳು ಎಂದು ಕೊಟ್ಟಿದ್ದಾರೆ. ಇದನ್ನು ನೋಡಿದರೆ ಇದೊಂದು ರೀತಿ ಬಜೆಟ್‌ನಲ್ಲಿ ಭರವಸೆಗಳನ್ನು ಕೊಟ್ಟಾಗ at least ಎಲ್ಲಾ ಭರವಸೆಗಳಿಗೂ ನಾವು ಕಾರ್ಯಕ್ರಮಗಳನ್ನು ಘೋಷಿಸಿದಾಗ most of the programmesನಲ್ಲಿ ಹಣ ಇತ್ತು, ನಾವು ಅದನ್ನು ಬೆಂಬಲಿಸುತ್ತೇವೆ.

ಇಂತಹ ಕಾರ್ಯಕ್ರಮಗಳಿಗೆ ಹಣವನ್ನು ಇಟ್ಟಿದ್ದೇವೆ ಅದನ್ನು ಮಾಡುತ್ತೇವೆ ಎಂದು ಹೇಳುತ್ತೇವೆ. ಇವರು ಹೇಳಿರುವುದು ಹೇಗೆ ಇದೆ ಎಂದರೆ ನೀರಿಗೆ ಅದ್ದಿಬಿಟ್ಟು ಬೆರಳು ಚೀಪಿದರೆ ಏನೂ ರುಚಿ ಸಿಗುವುದಿಲ್ಲ ಆ ರೀತಿ ಇದೆ.

ನಾವು ಏನು ತಿಳಿದುಕೊಂಡಿದ್ದೆವು ಅಂದರೆ ಜೇನುತುಪ್ಪಕ್ಕೆ ಅದ್ದಿದರೆ ಆ ರೀತಿಯಾಗುತ್ತದೆ ಅಂದರೆ ರುಚಿ ಸಿಗುತ್ತದೆ ಆ ತರಹ ಇವರು ಕಳಕಳಿಯಿಂದ ಮಾಡುತ್ತಾರೆಂದು ನಾವು ಅಂದುಕೊಂಡಿದ್ದೆವು. ಇಲ್ಲಿ ನೋಡಿದರೆ ಏನೂ ಇಲ್ಲ. ಇದು ಬರೀ ಭರವಸೆಗಳು ಅಷ್ಟೇ. ನಾವು ಚಪ್ಪಾಳೆಯನ್ನು ತಟ್ಟಿಸಿಕೊಳ್ಳುವುದಕ್ಕೆ ಇಷ್ಟವೇ ಇಲ್ಲ. ನೀವು ಚಪ್ಪಾಳೆಯನ್ನು ತಟ್ಟಿದರೆ ನಮಗೆ ಖುಷಿಯಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಸಿ.ಟಿ. ರವಿ: ಜೇನುತುಪ್ಪವನ್ನು ಇಟ್ಟರೂ ನೀರು ಕಂಡ ಹಾಗೇ ಆಗುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಹೌದಾ? ನಿಮ್ಮ ತರಹದ ನಾಲಿಗೆಯಲ್ಲಾ ನನ್ನದು.

ಶ್ರೀ ಸಿ.ಟಿ. ರವಿ: ಅದಕ್ಕೆ ನಮ್ಮ ತರಹದ ನಾಲಿಗೆಯಲ್ಲಾ, ರುಚಿ ನಿಮಗೆ ಗೊತ್ತಾಗುವುದಿಲ್ಲವೆಂದು ನಾನು ಹೇಳುತ್ತಿರುವುದು.

ಶ್ರೀ ಸಿದ್ದರಾಮಯ್ಯ: ನಮ್ಮ ನಾಲಿಗೆಯು ಸ್ವಲ್ಪ ಶುದ್ಧವಾದಂತಹ ನಾಲಿಗೆಯಾಗಿದೆ. ನಮ್ಮ ನಾಲಿಗೆಯೂ ರುಚಿಯನ್ನು ಸಹ ಪತ್ತೆಹಚ್ಚುತ್ತದೆ. ನಮ್ಮ ಎಲ್ಲಾ ಪಂಚೇಂದ್ರಿಯಗಳು ಕೂಡ ಕೆಲಸವನ್ನು ಮಾಡುತ್ತಿವೆ. ದುರಾದೃಷ್ಟವಶಾತ್ ನಿಮ್ಮ ಪಂಚೇಂದ್ರಿಯಗಳು ಒಂದು ಕೆಲಸವನ್ನು ಮಾಡುತ್ತಿಲ್ಲ ಎನ್ನುವುದೇ ನಮಗೆ ಬಹಳ ನೋವಿನ ಸಂಗತಿಯಾಗಿದೆ.

ಶ್ರೀ ಜಿ. ಕರುಣಾಕರರೆಡ್ಡಿ: ಡಾಕ್ಟರುಗಳು ಬಂದು ನಮ್ಮ ಪಂಚೇಂದ್ರಿಯಗಳನ್ನು ಟೆಸ್ಟ್ ಮಾಡಿದ್ದಾರಾ?

ಶ್ರೀ ಸಿದ್ದರಾಮಯ್ಯ: ಅವರನ್ನು ತಮ್ಮ ಹತ್ತಿರ ಕಳುಹಿಸಿಕೊಡೋಣ. ನಿಮ್ಮ ಪಂಚೇಂದ್ರಿಯಗಳೂ ಸರಿಯಾಗಿ ಕೆಲಸ ಮಾಡುತ್ತಿದೆಯೋ ಇಲ್ಲವೋ ಎಂಬುದನ್ನು ನೋಡಲು ಡಾಕ್ಟರನ್ನು ಕಳುಹಿಸಿಕೊಡೋಣ. ನಾವು ಹೇಳುವುದು ಸರಿಯೋ ಅಥವಾ ಇಲ್ಲವೋ ಎಂಬುದಕ್ಕೆ ನೀವು ಡಾಕ್ಟರ್ ಹತ್ತಿರ ಹೋಗಿ ತೋರಿಸಿಕೊಳ್ಳಿ. ಅಂದರೆ ನಿಮ್ಮ ಸರ್ಕಾರ ಅಂತ, ನೀವಲ್ಲಾ, Government. Not you. You are in the Government. Mr. Yeddyurappa or

Mr. Karunakara Reddy are not the Government. You are all members of the Government, the entire Government. ಆಯಿತು, 1947ನಿಂದಲೂ ಆಗೋಣ. 1952 ಇಂದಲೂ ಮಾಡೋಣ. 1982 ನಿಂದಲೂ ಮಾಡೋಣ. ಈಗ ಕಳೆದ 4 ವರ್ಷದಿಂದ ಇದ್ದಿರಲ್ಲಾ ಅದು ಆಗಲಿ ಏನಂತೆ? ತಾವು 3 ವರ್ಷದಿಂದ ಅಧಿಕಾರದಲ್ಲಿ ಇಲ್ಲವೇ? 20 ತಿಂಗಳೋ ಅದು ನನಗೆ ಗೊತ್ತಿಲ್ಲ. ನೀವು ಅಧಿಕಾರದಲ್ಲಿ ಇದ್ದಿರಲ್ಲಾ, ನಾನು ಏನು ಹೇಳುತ್ತೇನೆಂದರೆ, ಇದರಲ್ಲಿ ಯಾವುದು ಉಪ್ಪು ಇಲ್ಲ. ಹುಳಿಯೂ ಇಲ್ಲ, ಖಾರವೂ ಇಲ್ಲ, ಈ ರಾಜ್ಯಕ್ಕೆ ಅನುಕೂಲವಾಗುವಂತಹದ್ದು ಏನೂ ಇಲ್ಲ. ಈಗ ನಾನು as a Member ಏನು expect ಮಾಡಿದ್ದೇನೆಂದರೆ, not as a leader of the Opposition, not as a Congress man ಸಾಮಾನ್ಯ citizen ಆಗಿ ಏನು expect ಮಾಡಬಹುದಾಗಿತ್ತು. What is the food production today? What is your population? ನಮಗೆ ಎಷ್ಟು ಯೋಗ್ಯವಾದಂತಹ ವ್ಯವಸಾಯ ಮಾಡುವುದಕ್ಕೆ ಭೂಮಿ ಇದೆ. ಈಗ ವ್ಯವಸಾಯ ಮಾಡುವುದಕ್ಕೆ ಇರುವಂತಹ ಭೂಮಿ, ಈಗ ಇರತಕ್ಕಂತಹ ಆಹಾರದ ಉತ್ಪಾದನೆ, ಮುಂದೆ 20 ವರ್ಷಗಳಲ್ಲಿ ನಮ್ಮ ಜನಸಂಖ್ಯೆಯೂ ಏನಾಗುತ್ತದೆ, ನಾವು ಏನು ಮಾಡಬೇಕು ಅಥವಾ ಮುಂದಿನ 5-10 ವರ್ಷಗಳಲ್ಲಿ ಏನು ಮಾಡಬೇಕೆಂದು ಹೇಳಿ ಒಂದು Vision Document ನೀವು ಮಾಡುತ್ತೀರೆಂದರೆ, ಮತ್ತೆ ಬಜೆಟ್‌ನಲ್ಲಿ ಏನೇನು ಹೇಳಿದ್ದೀರಿ. ಅದರಿಂದ ನೀವು ಏನು ವಿಮುಖರಾಗಲೇ ಇಲ್ಲ. I expected, ಈಗ ಕಳೆದ 10 ವರ್ಷಗಳಿಂದ ಇದನ್ನು ನಾನು ಪ್ರಸ್ತಾಪ ಮಾಡಿದ್ದೆ. since ten years, since a decade food production is stagnant. ಮುಂದೆ ಅಪಾಯದ ದಿನಗಳು ಇವೆ. ಅದಕ್ಕೋಸ್ಕರ ಕೃಷಿ ಉತ್ಪನ್ನವನ್ನು ಹೆಚ್ಚು ಮಾಡಲಿ. production and productivity. ಇವೆರಡನ್ನೂ ಹೆಚ್ಚು ಮಾಡಬೇಕಾದರೆ ಏನು ಮಾಡಬೇಕು? ಆ ತರಹದ್ದು ಒಂದು ನಿಮ್ಮ ಉತ್ತರದಲ್ಲಿ ಇದೆಯೇ? ನಾವು ಸಲಹೆಯನ್ನು ಕೊಟ್ಟಿರುವುದಕ್ಕೆ ಏನಾದರೂ ಉತ್ತರವನ್ನು ಕೊಟ್ಟಿದ್ದೀರೋ? In 2006 document, you are also a party. 2006ರಲ್ಲಿ ಕೃಷಿ ನೀತಿ ಮಾಡಿದ್ದೀರಿ. 2006ರಲ್ಲಿ ತಾವು ಏನಂತ ಹೇಳಿಕೊಂಡಿದ್ದೀರಿ. By

2020, We are going to increase the food production or we are going to double the food production of what we are getting today. ಇದರಲ್ಲಿ ಏನಿದೆ? ಇದಕ್ಕೆ ನಿಮಗೆ Agriculture ಬಗ್ಗೆ ಬಹಳ ದೊಡ್ಡ ಕಳಕಳಿ ಇದೆ ಎಂದು ಹೇಳಬೇಕೆ? ಇದಕ್ಕೆ ಯಾವ ಭಾಷೆಯಲ್ಲಿ ಹೇಳಬೇಕು? So, ಅದಕ್ಕೆ ನಿಮ್ಮಲ್ಲಿ ಇದರಲ್ಲಿ ಏನೂ ಉತ್ತರವಿಲ್ಲ. ನಿಮ್ಮ ಒಂದು Action Plan ಕೂಡ ಇಲ್ಲ. ಅದಕ್ಕೆ ಬೇಕಾದಂತಹ resourcesಗೆ ಏನು ಮಾಡಿಕೊಳ್ಳಬೇಕೆಂದು ಕೂಡ ಇಲ್ಲ. ಇದರಲ್ಲಿ ಯಾವುದೂ ಕೂಡ ಇಲ್ಲ. 2007ರಲ್ಲಿ ಕೇಂದ್ರ ಸರ್ಕಾರವು ಒಂದು Agriculture Policy ಮಾಡಿದೆ. ನಮ್ಮ ರಾಜ್ಯವೂ ಮಾಡಿದೆ. ಕೇಂದ್ರ ಸರ್ಕಾರವೂ ಕೂಡ ಮಾಡಿದೆ in which, our Chief Minister is a member of the National Development Council. National Development Councilನವರು ಕೂಡ ಇದನ್ನು approve ಮಾಡಿದ್ದಾರೆ. National Policy ಮಾಡಿದ್ದಾರೆ. ನೀವು ಹೇಳಿರುವ ಉತ್ತರದಲ್ಲಿ ಆ ಬಗ್ಗೆ ಒಂದು ಅಂಶವಾದರೂ ಇದೆಯೇ? ಏನಾದರೂ ಒಂದು ಕೃಷಿಯ ಬಗ್ಗೆ ಇದೆಯೇ? Then what is your commitment? ಇದರಲ್ಲಿ ಏನಾದರೂ ಇದೆಯೇ? 2006ರಲ್ಲಿ ಈ ನೀತಿಯನ್ನು ನೀವೇ ಮಾಡಿಕೊಂಡಿರುವುದು. 2007ರಲ್ಲಿ ಕೇಂದ್ರ ಸರ್ಕಾರವು ಮಾಡಿದೆ. ಅದು ಏನು, 2006ರಲ್ಲಿಯೂ ಮಾಡಿದಾಗಲೂ ಕೂಡ ಶ್ರೀ ಸ್ವಾಮಿನಾಥನ್‌ರವರು ಅವರು ಕೊಟ್ಟಂತಹ ಸಲಹೆಗಳು ಮತ್ತು ಶಿಫಾರಸ್ಸುಗಳು ನೋಡಿ ಮಾಡಿದ್ದೀರಿ. That is No.1 ಇಲ್ಲಿ ಸ್ವಾಮಿನಾಥನ್‌ರವರು ನಮ್ಮ ದೇಶದಲ್ಲಿ, ವ್ಯವಸಾಯದಲ್ಲಿ ಅವರು authority ಎಂದು ಹೇಳಿ ನಾವು ಅಂದುಕೊಂಡಿದ್ದೇವೆ. ನಾವು ಅವರ ಬಗ್ಗೆ ಗೌರವವನ್ನು ಇಟ್ಟುಕೊಂಡಿದ್ದೇವೆ. ಅದು ಆ ಮಟ್ಟದ ಯೋಗ್ಯತೆ ಮತ್ತು ಜ್ಞಾನ ಎಲ್ಲಾ ಇದೆ. ಈ ದೇಶದ ಕೃಷಿಯ ಬಗ್ಗೆ ಅಪಾರವಾದಂತಹ, ಆಳವಾದಂತಹ ಜ್ಞಾನ ಇದೆ. commitment ಇದೆ. ಕೇಂದ್ರ ಸರ್ಕಾರದವರು ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ, ಆ ಕಮಿಟಿಯವರು ಕೊಟ್ಟಂತಹ ವರದಿಯ ಆಧಾರದ ಮೇಲೆ ಒಂದು policy documentನ್ನು ಮಾಡಿದ್ದಾರೆ. ಅದನ್ನು ನೋಡಿಯಾದರೂ ನೀವು ಕೃಷಿಯ ಬಗ್ಗೆ ಒಂದು Action Plan

ಮಾಡಬೇಕೋ ಬೇಡವೋ? ನಿವು ಏನೂ ಮಾಡಿಲ್ಲ. ನಾನು ನಿಮಗೆ ಏತಕ್ಕಾಗಿ ಕಳಕಳಿ ಇಲ್ಲವೆಂದು ಹೇಳುತ್ತಿದ್ದೇನೆಂದರೆ ಈಗ ಮಾನ್ಯ ಮುಖ್ಯಮಂತ್ರಿಗಳು NREGA ಬಗ್ಗೆ ಮಾತನಾಡುತ್ತಾ ಹೇಳುತ್ತಿದ್ದರು. ಈಗ NREGA ಹಣ ಕೃಷಿಗೆ ಅನುಕೂಲವಾಗಲೆಂದು ಗ್ರಾಮೀಣಾಭಿವೃದ್ಧಿಗೆಂದು ಮಾಡಿರುವುದು. ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಉತ್ತರವನ್ನು ಹೇಳಿ ಹೊರಟುಹೋದರು. ನಾವು clarification ಕೇಳೋಣವೆಂದರೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲವಲ್ಲಾ, ಮಾನ್ಯ ಅಧ್ಯಕ್ಷರೆ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು clarification ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ?

ಶ್ರೀ ಬಸವರಾಜ ಬೊಮ್ಮಾಯಿ: ಒಂದು ನಿಮಿಷ. ಇಲ್ಲಿ Agriculture Minister ಇದ್ದಾರೆ. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇದ್ದಾರೆ.

ಶ್ರೀ ಸಿದ್ದರಾಮಯ್ಯ: ನಾವು ಅದೇ ತರಹ ಮೊನ್ನೆ ಮಾಡಬಹುದಾಗಿತ್ತಲ್ಲಾ?

ಶ್ರೀ ಬಸವರಾಜ ಬೊಮ್ಮಾಯಿ: ನಾವು ಉತ್ತರವನ್ನು ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದನ್ನು ಕೇಳದೆ ಹೊರಟು ಹೋಗಬಹುದಿತ್ತಲ್ಲಾ?

ಶ್ರೀ ಬಸವರಾಜ ಬೊಮ್ಮಾಯಿ: ಇಲ್ಲಾ, ನಾವು ಉತ್ತರವನ್ನು ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ: ನೀವು ಉತ್ತರವನ್ನು ಕೊಡುವುದಿದ್ದರೆ ಮುಖ್ಯಮಂತ್ರಿಗಳು ಏತಕ್ಕೆ ಬೇಕಾಗಿತ್ತು?

ಶ್ರೀ ಬಸವರಾಜ ಬೊಮ್ಮಾಯಿ: Agriculture Ministerರವರು ಉತ್ತರವನ್ನು ಕೊಡುತ್ತಾರೆ. ಗ್ರಾಮೀಣಾಭಿವೃದ್ಧಿ ಮಂತ್ರಿಗಳೂ ಸಹ ಉತ್ತರವನ್ನು ಕೊಡುತ್ತಾರೆ. ನೀವು ಕೇಳುತ್ತಿರುವ clarificationಗೆ ಎಲ್ಲಾ ಮಂತ್ರಿಮಂಡಲದ ಸದಸ್ಯರು ಇದ್ದಾರೆ.

ಶ್ರೀ ಸಿದ್ದರಾಮಯ್ಯ: Agriculture Minister ಉತ್ತರವನ್ನು ಕೊಡುವುದಾದರೆ ನಮಗೆ ಬೇಡ. ಹಾಗಾದರೆ ನಾನು ಕುಳಿತುಕೊಳ್ಳುತ್ತೇನೆ. It is not correct. When the Chief Minister has replied on the debate, ಹಾಗಾದರೆ ಅವರ ಆಸಕ್ತಿ ಏನು? ಮಾನ್ಯ ಮುಖ್ಯಮಂತ್ರಿಗಳ commitment ಏನು? Then what commitment he has?

ಶ್ರೀ ಹೆಚ್.ಸಿ. ಬಾಲಕೃಷ್ಣ: ಆಮೇಲೆ ಅವಕಾಶವನ್ನು ಕೊಡುತ್ತೇವೆ. ನೀವು ಆಗ ಚರ್ಚೆ ಮಾಡಿ ಎಂದು ಹೇಳಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಎಲ್ಲಿದ್ದಾರೆ?

ಶ್ರೀ ಸಿದ್ದರಾಮಯ್ಯ: ಬಸವರಾಜ ಬೊಮ್ಮಾಯಿಯವರೆ, No. No.

ಶ್ರೀ ಬಸವರಾಜ ಬೊಮ್ಮಾಯಿ: 5 ನಿಮಿಷದಲ್ಲಿ ಬರುತ್ತಾರೆ. ನಮ್ಮ ನಾಯಕರು ಉತ್ತರವನ್ನು ಕೊಡುತ್ತಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: 5 ನಿಮಿಷದಲ್ಲಿ ಎಲ್ಲಿ ಬರುತ್ತಾರೆ? ಅವರೆಲ್ಲರೂ ಮಾತನಾಡಿದ ಮೇಲೆ ಬರುತ್ತಾರೆಯೇ?

ಶ್ರೀ ಸಿದ್ದರಾಮಯ್ಯ: ಅವರಿಗೆ ಕಳಕಳಿ ಇದೆಯಾ, ಆಸಕ್ತಿ ಇದೆಯಾ, ಬದ್ಧತೆ ಇದೆಯಾ? ಅದು ನಮಗೆ ಗೊತ್ತಾಗಬೇಕಲ್ಲ? It clearly shows that, ಇದು ಸುಮ್ಮನೆ ಬೂಟಾಟಿಕೆ ಮಾಡಿರುವಂತಹದ್ದು ಮತ್ತು ಕಾಟಾಚಾರಕ್ಕೆ ಮಾಡಿರುವುದು ಎಂದು ಆಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ಒಂದು ನಿಮಿಷ ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವು ಅವರನ್ನು ಬರುವುದಕ್ಕೆ ಹೇಳಿ. ಆಮೇಲೆ ಮಾತನಾಡೋಣ. ಈ ಮಾತನ್ನು ಅವರ ಎದುರುಗಡೆಯೇ ಹೇಳೋಣ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಏನು ಹೇಳುವುದೆಂದರೆ, ತಾವು ಸುದೀರ್ಘವಾಗಿ ಯಾವ ಯಾವ ಪಾಲಿಸಿಗಳು ಆಗಿದೆ, ಯಾವ ಯಾವ ಕಮಿಟಿಗಳು ಆಗಿದೆ ಎಂದು ಹೇಳಿದ್ದೀರಿ. ಆ ಎಲ್ಲಾ ಪಾಲಿಸಿಗಳು ಹಿಂದೆ ಆಗಿ, ಕೇಂದ್ರ ಸರ್ಕಾರದಲ್ಲಿಯೂ ಆಗಿದ್ದರೂ ಕೂಡ ಗ್ರಾಮೀಣಾಭಿವೃದ್ಧಿ ಪರಿಸ್ಥಿತಿ,

ರೈತರ ಪರಿಸ್ಥಿತಿ ಹೀಗೆ ಇದೆ ಎಂದು ನಿಮಗೂ ಗೊತ್ತು ನಮಗೂ ಕೂಡ ಗೊತ್ತು. ಆ ಹಿನ್ನೆಲೆಯಲ್ಲಿ ಏನು Action Plan ಮಾಡಬೇಕೆಂದು ತಾವು ಏನು ಹೇಳಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಆ ಎಲ್ಲಾ ಪಾಲಿಸಿಯ ಆಧಾರದ ಮೇಲೆ ಆಗಿದೆ.

(ಗೊಂದಲ)

ಶ್ರಿ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ನೀಡಿದರೆ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ; ಏನು ಮಾಡಲಿಕ್ಕೆ ಹೊರಟಿದ್ದೇವೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಹಿಂದೆ ಆಗಿರುವ ಕೇಂದ್ರ ಮತ್ತು ರಾಜ್ಯಗಳ ಪಾಲಿಸಿಗಳ ಹಿನ್ನೆಲೆಯಲ್ಲೇ ಈ ಉತ್ತರ ಸಿದ್ಧಪಡಿಸಲಾಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅದು ನೀವು ಕೊಟ್ಟಿರುವ ಉತ್ತರದಲ್ಲಿ mention ಮಾಡಿಲ್ಲವೆಂದು ನಾನು ಹೇಳುತ್ತಿದ್ದೇನೆ. There is not even a mention of it.

ಶ್ರೀ ಬಸವರಾಜ ಬೊಮ್ಮಾಯಿ: ಸರ್, ಪಾಲಿಸಿಗಳ ಬಗ್ಗೆ ಬಹಳಷ್ಟು ನಾವು ಚರ್ಚೆಯನ್ನು ಮಾಡುತ್ತೇವೆ. ಆದರೆ action plan ಬೇಕಲ್ಲವೇ? ಅದರ ಆಧಾರದ ಮೇಲೆಯೇ ನಾವು ಇದನ್ನು ....

ಶ್ರೀ ಸಿದ್ದರಾಮಯ್ಯ: ನಾನು ಯೀಲ್ಡ್ ಆಗಿಲ್ಲ. ಹೀಗಿರುವಾಗ ನೀವೇಕೆ ಮಧ್ಯೆ ಎದ್ದು ನಿಂತು ಮಾತನಾಡುತ್ತಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳು ಒಟ್ಟಿಗೆ ಎಲ್ಲದಕ್ಕೂ ಉತ್ತರ ಹೇಳುತ್ತಾರೆ ಬಿಡಿ. ಅವರನ್ನು clarification ಕೇಳಿದರೆ why are you supporting him? He is capable of defending himself. ಮಾನ್ಯ ಅಧ್ಯಕ್ಷರೆ, NREGA ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು,

3 ವರ್ಷಗಳಿಂದ ನಾವೇನೂ ಮಾಡಿಲ್ಲ. ಈ ವರ್ಷ ಮಾಡುತ್ತೇವೆಂದು ಹೇಳುತ್ತಾರೆ. That shows, ಈ ಸರ್ಕಾರಕ್ಕೆ ಬದ್ಧತೆ ಇಲ್ಲ. ಕೇಂದ್ರ ಸರ್ಕಾರದ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಿಕ್ಕೆ ಇವರಿಗೆ ಆಸಕ್ತಿ ಇಲ್ಲವೆಂಬುದು ಇವರ performanceನಿಂದ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. What evidence do you require? 2006–07ರ ಆರಂಭದ ಶಿಲ್ಕು 78 ಕೋಟಿ ರೂ.ಗಳು ಕೇಂದ್ರದ್ದು ಎಲ್ಲವೂ ಸೇರಿಸಿ ಒಟ್ಟು 341 ಕೋಟಿ ರೂ.ಗಳಷ್ಟು ನಿಮ್ಮ ಹತ್ತಿರ ದುಡ್ಡಿದ್ದರೆ, ಆ ವರ್ಷ 93 ಕೋಟಿ ರೂ.ಗಳನ್ನು ಬಾಕಿ ಉಳಿಸಿಕೊಂಡಿದ್ದೀರಿ. 2007–08ನೇ ಸಾಲಿಗೆ 419 ಕೋಟಿ ರೂ.ಗಳು ನಿಮಗೆ ಸಿಗುತ್ತದೆ. ನೀವು action plan ಮಾಡಿಕೊಂಡಿದ್ದರೆ ನಿಮಗೆ ಇನ್ನೂ ಜಾಸ್ತಿ ದುಡ್ಡು ಸಿಗುತ್ತಿತ್ತು. ಈ ದುಡ್ಡಿನಲ್ಲಿ ಕೇವಲ 236 ಕೋಟಿ ರೂ.ಗಳನ್ನು ಉಪಯೋಗಿಸಿಕೊಂಡು ಇನ್ನೂ 182 ಕೋಟಿ ರೂ.ಗಳನ್ನು ಬಾಕಿ ಉಳಿಸಿಕೊಂಡಿರಿ. 2008–09ನೇ ಸಾಲಿನಲ್ಲಿ 642 ಕೋಟಿ ರೂ.ಗಳು ನಿಮಗೆ ಲಭ್ಯವಿದ್ದರೆ, ನೀವು ಖರ್ಚು ಮಾಡಿದ್ದು 357 ಕೋಟಿ ರೂ.ಗಳು ಮಾತ್ರ. ಅದರಲ್ಲಿ ನೀವು 285 ಕೋಟಿ ರೂ.ಗಳ ಬಾಕಿ ಉಳಿಸಿಕೊಂಡಿರಿ. Can we call that Government is sincere and committed in the implementation of the programmes which are purely for the rural development? ಎಲ್ಲಿದೆ ನಿಮಗೆ ಕಾಳಜಿ? ಗ್ರಾಮೀಣಾಭಿವೃದ್ಧಿ ಬಗ್ಗೆ ಕಾಳಜಿ ಇಲ್ಲದೆ ಚರ್ಚೆ ಮಾಡುವುದು ಕಾಟಾಚಾರಕ್ಕಾಗಿ ಚರ್ಚೆ ಮಾಡಿದಂತಾಗುತ್ತದೆ. ಇದು ನನ್ನ ಅಂಕಿ ಅಂಶವಲ್ಲ, ಇದು ಸರ್ಕಾರವೇ ಕೊಟ್ಟಿರತಕ್ಕ ಅಂಕಿ ಅಂಶವಾಗಿದೆ. ..

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವೇನು ಭಾಷಣ ಮಾಡುತ್ತಿದ್ದೀರೋ ಅಥವಾ clarification ಕೇಳುತ್ತಿದ್ದೀರೋ?

ಶ್ರೀ ಸಿದ್ದರಾಮಯ್ಯ: ನಾನು ನಿಮ್ಮಿಂದ clarification ಅನ್ನೇ ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಏಕೆಂದರೆ, ನಾಲ್ಕು ಗಂಟೆಗಳ ಕಾಲ ಮಾತನಾಡಿದ್ದೀರಿ. ನಾನು ಮಾತನಾಡಿದ ಮೇಲೆ ಒಂದಷ್ಟು clarifications ಕೇಳಿದರೆ, ಅದಕ್ಕೆ ನಾನು ಉತ್ತರವನ್ನು ಕೊಡಬಹುದು. ಅದರ ಬದಲಾಗಿ ನೀವು ಇನ್ನೊಂದು ಭಾಷಣ ಮಾಡಿದರೆ ಹೇಗೆ? ಇದ್ಯಾವ ಸಂಪ್ರದಾಯ?

ಶ್ರೀ ಸಿದ್ದರಾಮಯ್ಯ: ಆಗಲೇ ನೀವು ಇರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಬಾತ್‌ರೂಂಗೆ ಹೋಗಿದ್ದೆ.

ಶ್ರೀ ಸಿದ್ದರಾಮಯ್ಯ: ಹೌದಾ?

ಶ್ರೀ ಬಿ.ಎಸ್. ಯಡಿಯೂರಪ್ಪ: ಅದಕ್ಕೂ ನಿಮ್ಮ ಪರ್ಮಿಷನ್ ತೆಗೆದುಕೊಂಡು ಹೋಗಬೇಕೆ?

ಶ್ರೀ ಸಿದ್ದರಾಮಯ್ಯ: ಆಯಿತು ಬಿಡಿ. ನೀವು ಬಾತ್‌ರೂಂಗೆ ಹೋಗುವುದಕ್ಕೆ, ಊಟ ಮಾಡುವುದಕ್ಕೆ ಮತ್ತು ತಿಂಡಿ ಮಾಡುವುದಕ್ಕೆ ನಾವೇನೂ ನಿಮಗೆ ಅಡ್ಡ ಬರುವುದಿಲ್ಲ. ಅದನ್ನು ಮಾಡಿ. ಅಸೆಂಬ್ಲಿಯಲ್ಲಿ ಇರುವಾಗ, ನಾವು ಮಾತನಾಡುವಾಗ ಕೇಳಿ ಎಂದು ನಾನು ಹೇಳುತ್ತಿದ್ದೇನೆ. ನಿಮಗೆ ಬಾತ್‌ರೂಂಗೆ ಹೋಗಬೇಡಿ ಎಂದು ಯಾರು ಹೇಳುತ್ತಾರೆ? ನಾನು clarification ಅನ್ನೇ ಕೇಳುತ್ತಿದ್ದೇನೆ. ಈ ವರ್ಷ ನಾವು ಮಾಡುತ್ತೇವೆ, ಮೂರು ವರ್ಷಗಳಿಂದ ನಾವು ಮಾಡಲಿಲ್ಲ ಎಂದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಏನು ಬೇಕಾದರೂ ಹೇಳಿ, ನಾವು ಕೇಳುತ್ತೇವೆ.

ಶ್ರೀ ಸಿದ್ದರಾಮಯ್ಯ: ಏನು ಬೇಕಾದರೂ ಹೇಗೆ ಹೇಳಲಿಕ್ಕಾಗುತ್ತದೆ? ನಾನು ಸತ್ಯವನ್ನು ಹೇಳುತ್ತಿದ್ದೇನೆ. ನಾನು ಸತ್ಯ ಹೇಳುವುದನ್ನು ಕೇಳುವುದಕ್ಕೆ ನಿಮಗೆ ಇಷ್ಟವಿಲ್ಲ. ಪಶ್ಚಿಮ ಘಟ್ಟಗಳಿಗಾಗಿ ಕೊಟ್ಟಿರುವ ದುಡ್ಡನ್ನು ಖರ್ಚು ಮಾಡಲಿಕ್ಕೆ ನಿಮಗೆ ಆಗಲೇ ಇಲ್ಲ. ನಾನೇಕೆ ಹೇಳುತ್ತಿದ್ದೇನೆ ಎಂದರೆ, ಇವರು at least ಕನಿಷ್ಠ ಪಕ್ಷ ಸರ್ಕಾರದ ಕಾರ್ಯಕ್ರಮಗಳು ಜನರಿಗೆ ತಲುಪಬೇಕು ಎನ್ನುವ ಕಾರಣಕ್ಕೋಸ್ಕರ 100 ದಿವಸಕ್ಕೊಂದು ಸಾರಿ evaluation ಮಾಡುತ್ತೇವೆ,

6 ತಿಂಗಳಿಗೊಂದು ಸಾರಿ evaluation ಮಾಡುತ್ತೇವೆ, ವರ್ಷಕ್ಕೊಮ್ಮೆ evaluation ಮಾಡುತ್ತೇವೆಂದು ಹೇಳಿದ್ದರು. ಕಳೆದ ವರ್ಷದಿಂದ ಏನೇನು ಮಾಡಿದ್ದೀರಿ ಎಂದು ಸಂಬಂಧಪಟ್ಟ ದಾಖಲಾತಿಗಳನ್ನಾದರೂ ನೀವಿಲ್ಲಿ ಇಡಬೇಕಾಗುತ್ತಲ್ಲವೇ? ಅವುಗಳನ್ನೇನೂ ಇಲ್ಲಿ ಇಟ್ಟೇ ಇಲ್ಲ. ನಿಮ್ಮ ಆ evaluation papers ಎಲ್ಲಿವೆ? That is my clarification. ನೀವು ಹೇಳಿದಂತೆ evalution ಮಾಡಿಲ್ಲ. ನಾವು ಇಷ್ಟು ಮನೆಗಳಿಗೆ/ಕುಟೀರಗಳಿಗೆ ವಿದ್ಯುತ್ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ನಿಮಗೆ target ಏನು? ಆ ಕಾರ್ಯಕ್ರಮದ ಉದ್ದೇಶವೇನು? ಎಷ್ಟಾಗಿದೆ? ಎಷ್ಟಾಗಿಲ್ಲ? ನಿಜ ಹೇಳಿ. ನಿಮ್ಮ target ಗೆ ನೀವು reach ಆಗಲಿಕ್ಕಾಗಿಲ್ಲ. ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ ಕೇಂದ್ರ ಸರ್ಕಾರ ಶೇಕಡ 90ರಷ್ಟು ಹಣ ಕೊಡುತ್ತದೆ. ಇನ್ನುಳಿದ ಶೇಕಡ 10ರಷ್ಟು 4% ಬಡ್ಡಿ ದರದಲ್ಲಿ loan ಆಗಿ ಕೊಡಲಾಗುತ್ತದೆ. ಇದು ನಿನ್ನೆ ಮೊನ್ನೆ ಪ್ರಾರಂಭವಾದ ಯೋಜನೆಯಲ್ಲ. ನಾನು ಹಣಕಾಸಿನ ಮಂತ್ರಿಯಾಗಿದ್ದಾಗ, 2005ರಲ್ಲಿ ಇದು ಪ್ರಾರಂಭವಾಯಿತು. ಆವತ್ತಿನಿಂದ ನಿಮ್ಮ ಸರ್ಕಾರ ಅದನ್ನು implement ಮಾಡುವುದರಲ್ಲಿ totally failure ಆಗಿದೆ. ಈ ಬಗ್ಗೆ ನೀವು ಕೊಟ್ಟಂತಹ ಅಂಕಿ ಅಂಶಗಳು ವಾಸ್ತವಿಕ ಅಂಶಗಳಿಗೆ ದೂರವಾದುದು. ಒಳ್ಳೆಯದಾಗಿರುವುದು ಯಾವುದು ಇದೆ ಎಂಬುದನ್ನು ಹೇಳಿ, ಅದರ ಬಗ್ಗೆಯೂ ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಒಂದು ನಿಮಿಷ.

ಶ್ರೀ ಸಿದ್ದರಾಮಯ್ಯ: ನಾವೇನು ನಿಮ್ಮ ತರಹ ಮೊಂಡಾಟ ಮಾಡುವುದಿಲ್ಲ. ನಾನು ಕುಳಿತುಕೊಳ್ಳುತ್ತೇನೆ, ಅದೇನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ವಿಶೇಷವಾದ ಕಾರಣಕ್ಕಾಗಿ ದೆಹಲಿಯಲ್ಲಿ 4.30 ಗಂಟೆಗೆ ನಡೆಯುವ ಸಭೆಯೊಂದರಲ್ಲಿ ಹಾಜರಾಗಬೇಕಾಗಿದೆ. ಕೇಂದ್ರ ಸಚಿವರುಗಳೆಲ್ಲಾ ಆ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ನಾನು 1.45 ಗಂಟೆಯವರೆಗೆ ಮಾತ್ರ ಇಲ್ಲಿರುತ್ತೇನೆ. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, ಮಾನ್ಯ ವಿದ್ಯುತ್ ಸಚಿವರು, ಮಾನ್ಯ

ನೀರಾವರಿ ಸಚಿವರು ಸೇರಿದಂತೆ ನಮ್ಮೆಲ್ಲಾ ಸಚಿವರೂ ನಿಮ್ಮ clarificationsಗೆ ಉತ್ತರವನ್ನು ಕೊಡುತ್ತಾರೆ. ದಯಮಾಡಿ ತಾವು ಅನುಮತಿಯನ್ನು ಕೊಡಬೇಕು. ಸದನದ ಪ್ರಮುಖರು ಅನ್ಯಥಾ ಭಾವಿಸಬಾರದು. ನಿಮಗೆ ಗೊತ್ತಿದೆ, ಕಳೆದ 14 ತಿಂಗಳಿನಿಂದ ನೀವು ನನ್ನನ್ನು ನೋಡುತ್ತಿದ್ದೀರಿ. ಪ್ರತಿಪಕ್ಷದ ನಾಯಕರು ಅಥವಾ ಇತರರು ಯಾರಾದರೂ ಮಾತನಾಡುವಾಗ ಅಥವಾ ಉತ್ತರ ಕೊಡಬೇಕಾದರೆ ತಪ್ಪಿಸಿಕೊಂಡು ಹೋಗುವಂತಹ ವ್ಯಕ್ತಿ ನಾನಲ್ಲ. ದಯಮಾಡಿ, ಸಹಕರಿಸಿ. ನಾನು 1.45 ಗಂಟೆಯವರೆಗೆ ಮಾತ್ರ ಸದನದಲ್ಲಿರುತ್ತೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರಬೇಕು ಎನ್ನುವಂಥದ್ದು ನಮ್ಮೆಲ್ಲರ ಇಚ್ಛೆಯಾಗಿದೆ. ಏಕೆಂದರೆ, ಅವರು ಇವತ್ತು ಅತ್ಯಂತ ಪ್ರಾಮುಖ್ಯವಾದಂತಹ ವಿಚಾರದ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಗ್ರಾಮೀಣ ಬದುಕಿಗೆ ಸಂಬಂಧಪಟ್ಟಂತಹ ಪ್ರಾಮುಖ್ಯ ವಿಷಯದ ಬಗ್ಗೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆಯಾಗಿದೆ. ಬಹಳ ಜನ ಮಾನ್ಯ ಸದಸ್ಯರು ಅಪಾರವಾದಂತಹ ನಿರೀಕ್ಷೆ ಇಟ್ಟುಕೊಂಡು ಕುಳಿತಿದ್ದಾರೆ. ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಬಹಳ ಸಲಹೆಗಳನ್ನು ಕೊಟ್ಟಿದ್ದಾರೆ. ಪಾಪ! ಅವುಗಳೆಲ್ಲದಕ್ಕೂ ಉತ್ತರ ಸಿಗುತ್ತದೆಂದು ಕಾದು ಕುಳಿತಿದ್ದಾರೆ. ಇನ್ನೂ ಬಹಳ ಜನ ಚರ್ಚೆ ಮಾಡುವವರಿದ್ದರು; ಅವರಿಗೆ ಅವಕಾಶ ಸಿಗಲಿಲ್ಲ. ನೀವು ಸ್ವಲ್ಪ ಆತುರ ಮಾಡಿಬಿಟ್ಟಿರಿ. ಮೂರು ದಿನದಲ್ಲೇ ಮುಗಿಯಬೇಕು, ಮೂರು ದಿನದೊಳಗೆ ಉತ್ತರ ಕೊಟ್ಟು ಬಿಡಬೇಕು, 1 ಗಂಟೆಗೇ ಉತ್ತರ ಕೊಟ್ಟು ಬಿಡಬೇಕು, 3 ಗಂಟೆಗೇ ಉತ್ತರ ಕೊಟ್ಟು ಬಿಡಬೇಕು ಎಂದು ಹಠ ಮಾಡಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವು ಒಪ್ಪುವುದಾದರೆ, ನಾನೊಂದು ಸಲಹೆ ಕೊಡುತ್ತೇನೆ. ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಯಡಿಯೂರಪ್ಪನವರು ಹೊರಟು ಹೋದರು ಎಂದು ಅನಿಸಿಕೊಳ್ಳುವುದು ನನಗಿಷ್ಟವಿಲ್ಲ. ಈ ಮನೆ ಒಪ್ಪುವುದಾದರೆ, ಇನ್ನೂ ಅನೇಕ ವಿಷಯಗಳು ಚರ್ಚೆಯಾಗಬೇಕಾಗಿದೆ, ನಾಳೆ ನೀವು clarification ಕೇಳಿ, ನಾನು 1 ಗಂಟೆ ಇಲ್ಲವೇ 2 ಗಂಟೆ ನಿಮ್ಮ ಜೊತೆಗೆ ಕುಳಿತು ಉತ್ತರ ಕೊಡುತ್ತೇನೆ. ದಯಮಾಡಿ ಇವತ್ತು ಬೇರೆ ವಿಷಯಗಳನ್ನಾದರೂ ತೆಗೆದುಕೊಂಡು ಚರ್ಚೆ ಮಾಡಿ. ನಾಳೆ

ನಾನು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳುವುದಿಲ್ಲ. ಸಮಯಕ್ಕೆ ಸರಿಯಾಗಿ ಬಂದು ನಿಮಗೆ ಉತ್ತರ ಕೊಡುತ್ತೇನೆ. ಯಾವುದಾದರೂ ಒಂದನ್ನು ನೀವು ಆಯ್ಕೆ ಮಾಡಿಕೊಳ್ಳಿ.

ಶ್ರೀ ಸಿದ್ದರಾಮಯ್ಯ: ನಾನು ಇವತ್ತೇ clarification ಕೇಳಬೇಕು.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ 1.45 ಗಂಟೆಗೆ ದೆಹಲಿಗೆ ಹೋಗಬೇಕಾಗಿದೆ. ಅದಕ್ಕಾಗಿ ಆ ರೀತಿ ಅವರು ತಮ್ಮಲ್ಲಿ request ಮಾಡಿದರು. ನೀವು clarification ಕೇಳಿ, ಬೇರೆ ಸಚಿವರು ಉತ್ತರ ಕೊಡುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನೀವು ದೆಹಲಿಗೆ ಹೋಗಿ. ಆದರೆ ನಮ್ಮ ಇಚ್ಛೆ ಏನೆಂದರೆ, ನೀವು ಇಲ್ಲೇ ಇರಬೇಕಾಗಿತ್ತು. ಅದು ನಿಮ್ಮ ಜವಾಬ್ದಾರಿ ಎಂದಷ್ಟೇ ನಾನು ಹೇಳಬಯಸುತ್ತೇನೆ. ಅವರು ದೆಹಲಿಗೆ ಹೋಗುವುದಕ್ಕೆ ನಮ್ಮದೇನೂ ತಕರಾರಿಲ್ಲ. ಅವರಿಗೆ ದೆಹಲಿಗೆ ಹೋಗಬೇಡಿ ಎಂದು ಹೇಳುವುದಕ್ಕೆ ನಾವ್ಯಾರು? ನಿಮಗೆ ದೆಹಲಿಗೆ ಹೋಗಲು ನಾವೇನೂ ಬೇಡವೆಂದಿಲ್ಲ. ಮಂಗಳವಾರ ಬೇಡ, ಆವತ್ತು ಚರ್ಚೆ ಮಾಡುವುದಕ್ಕೆ ಬೇರೆ ವಿಷಯಗಳಿವೆ. ಇವತ್ತೇ clarification ಆಗಲಿ. ನೀವು ಹೇಗೆ ದೆಹಲಿಗೆ ಹೋಗುತ್ತಿದ್ದೀರಿ? ನಾಳೆ ನೀವು ಇನ್ಫೋಸಿಸ್‌ಗೆ ಬರುತ್ತಿಲ್ಲವೇ? ನಾಳೆ ಬೆಳಿಗ್ಗೆ ಮೈಸೂರಿನ ಇನ್ಫೋಸಿಸ್‌ನಲ್ಲಿ function ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮ್ಮ ಜೊತೆಗೇ ಬರುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವು ನಮ್ಮ ಜೊತೆಗೇನೂ ಬರುವುದು ಬೇಡ, ನೀವು ಬೇರೆಯಾಗಿಯೇ ಬನ್ನಿ. ನಾಳೆ ಮೈಸೂರಿನ ಇನ್ಫೋಸಿಸ್‌ನಲ್ಲಿ ನಡೆಯುವ functionಗೆ ನೀವು ಬರುತ್ತೀರೋ, ಇಲ್ಲವೋ?

ಶ್ರೀ ಬಿ.ಎಸ್. ಯಡಿಯೂರಪ್ಪ: ಬರುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವು ಇವತ್ತು ದೆಹಲಿಗೆ ಹೋಗಿ ನಾಳೆ ಅಲ್ಲಿಗೆ ಹೇಗೆ ಬರುತ್ತೀರಿ?

ಅಧ್ಯಕ್ಷರು: ಬೇಕಾದಷ್ಟು flights ಇವೆ.

ಶ್ರೀ ಸಿದ್ದರಾಮಯ್ಯ: ಹೋಗುವುದಕ್ಕೆ 3 ಗಂಟೆ, ಬರುವುದಕ್ಕೆ 3 ಗಂಟೆಯಾಗಿ ದಿನವೇ ಮುಗಿದು ಹೋಗುತ್ತದೆ. ಇನ್ನು ಹೇಗೆ ಬರುತ್ತಾರೆ?

ಅಧ್ಯಕ್ಷರು: ಈಗೇನು ಒಂದು ದಿವಸದಲ್ಲಿ ಲಂಡನ್‌ಗೆ ಹೋಗಿ ಬರಬಹುದು.

ಶ್ರೀ ಸಿದ್ದರಾಮಯ್ಯ: ಹೋಗುವುದಕ್ಕೆ 4 ಗಂಟೆ, ಬರುವುದಕ್ಕೆ 4 ಗಂಟೆ ಸೇರಿ ಒಟ್ಟು 8 ಗಂಟೆಯಾಗುತ್ತದೆ. ದಿನದಲ್ಲಿ ಇನ್ನೇನು ಸಮಯ ಉಳಿಯುತ್ತದೆ? ನಾನು ಸುಮ್ಮನೆ ನಿಮಗೆ ಹೇಳುತ್ತಿದ್ದೇನೆ. ನಾನು ನಿಮ್ಮನ್ನು ಪ್ರಶ್ನೆ ಮಾಡುತ್ತಿಲ್ಲ. ನಾಳೆ ಮಾನ್ಯ ಮುಖ್ಯಮಂತ್ರಿಗಳು ಇನ್ಫೋಸಿಸ್‌ಗೆ ಬರುವ ಕಾರ್ಯಕ್ರಮವಿತ್ತು. ಅವರು ಬರುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ನಾರಾಯಣ ಮೂರ್ತಿಯವರು ಅವರನ್ನೂ ಸಹ ಕರೆದಿದ್ದಾರೆ, ನನ್ನನ್ನೂ ಸಹ ಕರೆದಿದ್ದಾರೆ. ಅಲ್ಲಿಗೆ ಮಾನ್ಯ ಸೋನಿಯಾ ಗಾಂಧಿಯವರು ಬರುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಆ ಕಾರ್ಯಕ್ರಮಕ್ಕೆ ಬರಬೇಕೆಂದೇ ನಾನೂ ಸಹ ಹೇಳುತ್ತಿದ್ದೇನೆ. ಇವತ್ತು ಇಲ್ಲೇ ಇರಲಿ, ದೆಹಲಿ programme ಮುಂದಕ್ಕೆ ಹಾಕಿ.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಸಿದ್ದರಾಮಯ್ಯ: Ok, ಮಾನ್ಯ ಅಧ್ಯಕ್ಷರೆ, ನಾನು ಏಕೆ ಇವರಿಗೆ ಕಳಕಳಿ ಇಲ್ಲವೆಂದು ಹೇಳುತ್ತಿದ್ದೇನೆ ಎಂದರೆ, 8 ಅಥವಾ 9ನೇ ತಾರೀಖು ಮಾನ್ಯ ಪ್ರಧಾನ ಮಂತ್ರಿಗಳು NREGA ಬಗ್ಗೆ ಚರ್ಚೆ ಮಾಡುವುದಕ್ಕಾಗಿಯೇ ಎಲ್ಲಾ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರುಗಳ ಸಭೆಯೊಂದನ್ನು ಕರೆದಿದ್ದರು. ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಆ ಸಭೆಗೆ ಹೋಗಿಯೇ ಇಲ್ಲ.

ಕು. ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಅಧಿವೇಶನ ನಡೆಯುತ್ತಿದ್ದರಿಂದ, ಮುಖ್ಯ ಕಾರ್ಯದರ್ಶಿಯವರು ಅಲ್ಲಿ ಅಟೆಂಡ್ ಮಾಡಿದರು.

ಶ್ರೀ ಸಿದ್ದರಾಮಯ್ಯ: ಪರವಾಗಿಲ್ಲ, ಇದಕ್ಕಿಂತ ಅದು ಬಹಳ ಮುಖ್ಯ, ಇಲ್ಲಿ ನಿಮ್ಮ ಯಾರಾದರೂ ಮಂತ್ರಿಗಳು ಕೆಲಸ ಮಾಡುತ್ತಾರೆ, ಚೀಫ್ ಸೆಕ್ರೆಟರಿ ಹೋದರಾಗುವುದಿಲ್ಲ. ಪ್ರಧಾನ ಮಂತ್ರಿಗಳು ಕರೆದಿರುವ ಸಭೆಗೆ ಮಂತ್ರಿಗಳು ಹೋಗಬೇಕಮ್ಮ. ಆಯಿತು, ಆವತ್ತು ಹೋಗದಿರುವ ದಿವಸ ನಿಮ್ಮ ಕೆಲಸವೇನಿತ್ತು ಹೇಳಿ ನೋಡೋಣ. ಆವತ್ತು ಏನೂ ಇರಲಿಲ್ಲ. ರಾಷ್ಟ್ರದ ಪ್ರಧಾನ ಮಂತ್ರಿಗಳು, ಈ ಕಾರ್ಯಕ್ರಮ ಬಹಳ ಯಶಸ್ವಿಯಿಂದ ಜಾರಿಯಾಗಬೇಕು. ಹಳ್ಳಿಗಾಡಿನ, ಸಣ್ಣ ರೈತರು, ಕೂಲಿ ಕಾರ್ಮಿಕರು, ಕೃಷಿ ಅಭಿವೃದ್ಧಿಯಾಗಬೇಕೆಂದು ಅತ್ಯಂತ ಕಳಕಳಿ ಇಟ್ಟುಕೊಂಡು ರಿವ್ಯೂ ಮೀಟಿಂಗ್ ಕರೆದರೆ, ಆಯಿತು ನೀವು ಬೇಡ, ಯಾರಾದರೂ ನಿಮ್ಮ ಮಂತ್ರಿಗಳನ್ನು ಕಳುಹಿಸಬಹುದಾಗಿತ್ತು. ನೀವು ಹೋಗಬಹುದಾಗಿತ್ತು, ಮುಖ್ಯಮಂತ್ರಿಗಳಿದ್ದರು, ನಿಮ್ಮ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು. ಮತ್ತೆ ನಾವು 9ನೇ ತಾರೀಖಿನಿಂದ ಚರ್ಚೆ ಮಾಡುತ್ತಿದ್ದೆವು. ಆವತ್ತೆ ಇವರು ಉತ್ತರ ಕೊಡುವಂಥ ಅಗತ್ಯವಿರಲಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, that shows ನಿಮಗೆ commitment ಇಲ್ಲವೆಂಬುದಕ್ಕೆ ಹೇಳುತ್ತಿದ್ದೇನೆ ಅಷ್ಟೆ. ಗೌರ್ನಮೆಂಟ್‌ಗೆ commitment ಇಲ್ಲ. ಮುಖ್ಯಮಂತ್ರಿಗಳಿಗೂ ಇಲ್ಲ. ಸಂಬಂಧಪಟ್ಟ ಮಂತ್ರಿಗಳಿಗೂ ಇಲ್ಲ. ಮತ್ತೆ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಿ ಸಲಹೆಗಳನ್ನು ಕೊಟ್ಟು ಏನು ಮಾಡುವುದು? ಕೃಷಿ ಬಗ್ಗೆ ನಾವು ಹೇಳಿದ್ದೇವೆ. ನೀರಾವರಿಗೆ ಇನ್ನು 5 ವರ್ಷದಲ್ಲಿ, ಈಶ್ವರಪ್ಪನವರೆ, 116ರಲ್ಲಿ 48 ಕಂಪ್ಲೀಟ್ ಆಗಿದ್ದಾವೆ. ಇನ್ನು 52 ಪ್ಲಸ್ 16 ಸೇರಿ ಒಟ್ಟು 68 ಇದ್ದಾವೆ. ಇನ್ನು 40–50 ಸಾವಿರ ಕೋಟಿ ಖರ್ಚಾಗಬೇಕು. ನೀವು ಇಲ್ಲಿ political will ಅನ್ನು ಪ್ರದರ್ಶನ ಮಾಡಬೇಕಾಗಿದೆ. Here is a Government. ನಾವು ನೀರಾವರಿ ಹೆಚ್ಚು ಮಾಡುತ್ತೇವೆ. ನಮಗೆ 45 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿ ಮಾಡುವುದಕ್ಕೆ ಅವಕಾಶವಿದೆ. ಆದರೆ ಇದುವರೆವಿಗೆ ಆಗಿರುವುದು 31 ಲಕ್ಷ

ಹೆಕ್ಟೇರ್ ಮಾತ್ರ. ಅದನ್ನು ನಾವು ಮಾಡುತ್ತೇವೆಂದು ತಾವು political will ಅನ್ನು ತೋರಿಸಬೇಕು. ನೀವು ತೋರಿಸಲಿಲ್ಲ. This is what we expected from the Chief Minister, from the Government. ಆದರೆ ಅದನ್ನು ಮಾಡಲಿಲ್ಲ. ಇಲ್ಲೆಲ್ಲಾ ಸುವರ್ಣ ಗ್ರಾಮ ಯೋಜನೆಯಲ್ಲಿ lavatories ಕಟ್ಟಿಸಿದ್ದೀರೆಂದು ಪುನಃ ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದು 2006–07ರಲ್ಲಿ ಪ್ರಾರಂಭವಾಗಿದ್ದು, 1204 ಹಳ್ಳಿಗಳನ್ನು select ಮಾಡಿದಿರಿ. ಇವತ್ತಿನವರೆಗೆ ಆ ಹಳ್ಳಿಗಳೆಲ್ಲಾ complete ಆಗಿದ್ದಾವೆಯೇ? ಏಕೆ ಮಾಡಲಿಲ್ಲ. ಅಲ್ಲಿ ಗುಲ್ಬರ್ಗಾದಲ್ಲಿ ಎರಡು ಸಾರಿ ಹೋಗಿ 220 ಹಳ್ಳಿಗಳನ್ನು ತೆಗೆದುಕೊಳ್ಳುತ್ತೇವೆ. ಮತ್ತೆ 200 ಹಳ್ಳಿಗಳನ್ನು ತೆಗೆದುಕೊಳ್ಳುತ್ತೇವೆಂದು ಘೋಷಣೆ ಮಾಡಿದಿರಿ. ಒಂದು ಹಳ್ಳಿಯನ್ನಾದರೂ ತೆಗೆದುಕೊಂಡಿರಾ? ಮತ್ತೆ ಸುಮಾರು ಒಂದು ಸಾವಿರ ಚಿಲ್ಲರೆ ಹಳ್ಳಿಗಳನ್ನು ಮಾಡುತ್ತೇವೆಂದು ಎಲ್ಲಾ ಶಾಸಕರ ಹತ್ತಿರ ಮಾಹಿತಿಗಳನ್ನು ತೆಗೆದುಕೊಂಡಿರಿ. ಒಂದು ರೂಪಾಯಿ ಬಿಡುಗಡೆ ಮಾಡಿದ್ದೀರಾ? ಮೊದಲನೆಯದನ್ನೇ ನೀವು ಮುಗಿಸಲಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಶಾಸಕರಿಂದ ಪಟ್ಟಿ ಕೇಳಿದ ಮೇಲೆ, ಶಾಸಕರ ಪಟ್ಟಿಗೆ ಸ್ವಲ್ಪವಾದರೂ ಗೌರವವನ್ನು ಕೊಡಬೇಕು. ನಮ್ಮ ಹತ್ತಿರ ಪಟ್ಟಿ ತೆಗೆದುಕೊಳ್ಳುವುದು. ಆಮೇಲೆ ಜಿಲ್ಲಾ ಮಂತ್ರಿಗಳು ಅವರಿಗೆ ಇಷ್ಟ ಬಂದ ಗ್ರಾಮಗಳನ್ನು ಆಯ್ಕೆ ಮಾಡುವುದು. ಮುಖ್ಯಮಂತ್ರಿಗಳ ಸಣ್ಣ, ಮಧ್ಯಮ ಪಟ್ಟಣ ಅಭಿವೃದ್ಧಿಗೆ ಹಣ ಕೊಟ್ಟಿದ್ದೀರಿ. ಶಾಸಕರ ಸಲಹೆಗಳನ್ನು ತೆಗೆದುಕೊಂಡು ಮಾಡಿ ಎಂದು ಹೇಳುತ್ತೀರಿ. ಶಾಸಕರು ಸಲಹೆ ಕೊಡುವುದು ಒಂದಾದರೆ, ನಿಮ್ಮ DMAಗೆ ಹೋಗುವ ಪಟ್ಟಿಯೇ ಬೇರೆ. ಈ ತರಹವಾದರೆ ಶಾಸಕರಿಗೆ ಒಂದು ಗೌರವ ಕೊಡುವಂಥ ವ್ಯವಸ್ಥೆ ಹೇಗೆ ಆಗುತ್ತದೆ? ಇಲ್ಲವೆಂದರೆ, ನಮ್ಮ ಸಲಹೆ ಕೇಳದೆ ಸರ್ಕಾರವೆ ತನ್ನ ಇಚ್ಛಾನುಸಾರವಾಗಿ ಮಾಡಿದರೂ ತೊಂದರೆ ಇಲ್ಲ. ನಮ್ಮನ್ನು ಕೇಳಿ. ಆ ಜನಗಳ ಮುಂದೆ ನಮ್ಮನ್ನು ಸುಮ್ಮನೆ ಒಂದು ತರಹ ಇನ್ಸಲ್ಟ್ ಮಾಡುವಂಥ ಪ್ರಯತ್ನ ಸರ್ಕಾರದಿಂದ ಆಗಬಾರದೆಂದು ತಮ್ಮ ಮುಖಾಂತರ ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನಾನು ಈ ವಿಚಾರವನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಅವರನ್ನು ಟೀಕೆ ಮಾಡಬೇಕೆಂದಲ್ಲ. But these are all farce. The Government has lack of commitment for rural development. 1204 ಹಳ್ಳಿಗಳನ್ನು ಮೊದಲನೆ ಹಂತದಲ್ಲಿ ಮಾಡಿದರು. ಅವನ್ನೇ ಇವರು ಇನ್ನು ಕಂಪ್ಲೀಟ್ ಮಾಡಲಾಗಲಿಲ್ಲ. ಅದಕ್ಕೆ ಬೇಕಾದ ಪೂರ್ಣ ಹಣವನ್ನು ಇನ್ನು ಕೊಡುವುದಕ್ಕಾಗಲಿಲ್ಲ. 2008–09ರಲ್ಲಿ 12ನೇ ಹಣಕಾಸಿನ ಹಣ 175 ಕೋಟಿ ರೂಪಾಯಿಗಳು ಬಿಡುಗಡೆಯಾಯಿತು. ಅದನ್ನು 2007–08ಕ್ಕೆ ಖರ್ಚು ಮಾಡಿದರು. 2008–09ಕ್ಕೆ ಒಂದು ರೂಪಾಯಿಯೂ ಇಲ್ಲ. ಮತ್ತೆ 2009ಕ್ಕೆ action plan ಮಾಡುತ್ತೇವೆನ್ನುತ್ತಿದ್ದಾರೆ. Can we call it as a commitment to the rural development? ಹೇಗೆ? ಬಿಪಿಎಲ್ ಕಾರ್ಡ್ ಅನ್ನು ನಾವ್ಯಾರೂ ಕೊಡುವುದಕ್ಕೆ ಹೇಳಲಿಲ್ಲ. ನಿಮ್ಮ ಪಕ್ಷದಲ್ಲಿ ಯಾರಾದರು ಕೇಳಿದ್ದಾರೇನೋ ನನಗೆ ಗೊತ್ತಿಲ್ಲ. 28 ಲಕ್ಷ ಕಾರ್ಡ್‌ಗಳನ್ನು ನೆಮ್ಮದಿ ಕೇಂದ್ರಗಳಿಂದ ಕೊಟ್ಟುಬಿಟ್ಟರಿ. ಇವತ್ತು 80% ಕಿತ್ತು ಹಾಕಿ ಎಂದು ಸರ್ಕಾರ ಡೈರೆಕ್ಷನ್ ಕೊಟ್ಟಿದೆ. ಮಂತ್ರಿಗಳಾದ ಹಾಲಪ್ಪನವರು ಕುಳಿತುಕೊಂಡು ತಲೆ ಅಲ್ಲಾಡಿಸುತ್ತಿದ್ದೀರಿ. If I am not correct, ನಿಮ್ಮ ತುಮಕೂರು ಡಿಸಿ ಮೀಟಿಂಗ್ ಮಾಡಿ ಆದೇಶ ಕೊಟ್ಟಿದ್ದಾರಲ್ಲ? Are you going to take action against him? Without your direction, without the direction of the Government how can a D.C. issue instruction to Food DD? ಫುಡ್ ಡಿಡಿ, ಸಹಶೀಲ್ದಾರ್‌ಗೆ ಹೇಗೆ instructions ಕೊಡಲು ಬರುತ್ತದೆ? Remove 80% ಯಾರಾದರು ಕೇಳಿದ್ದರೇ? ಒಬ್ಬೊಬ್ಬರು 200 ರೂಪಾಯಿ, 500 ರೂಪಾಯಿ ಕೊಟ್ಟು ಅಫಿಡವಿಟ್ ಮಾಡಿಸಿ ನೆಮ್ಮದಿ ಕೇಂದ್ರಗಳಿಗೆ ಕೊಟ್ಟುಬಿಟ್ಟು, ಅವರಿಗೆ ಒಂದು ತಿಂಗಳು ಅಕ್ಕಿ ಕೊಟ್ಟರಿ. ಆಮೇಲೆ ಪುನಃ ನಿಲ್ಲಿಸಿದಿರಿ. ಮತ್ತೆ ಸೀಮೆಎಣ್ಣೆ, ಶುಗರ್ ಕೊಟ್ಟಿದ್ದೇವೆಂದು ಹೇಳಿದಿರಿ. ಅದು ಕೇಂದ್ರ ಸರ್ಕಾರದಿಂದ ಬರುತ್ತದೆ ಕೊಟ್ಟಿದ್ದೀರಿ. ಆಗಸ್ಟ್ ತಿಂಗಳಿನಲ್ಲಿ ಕೊಟ್ಟಿದ್ದೀರಾ ಹೇಳಿ ನೋಡೋಣ.

ಶ್ರೀ ಅಮರೇಗೌಡ ಬಯ್ಯಾಪುರ: ನಾವು ಅಲ್ಲಿ ನೋಡಿದ್ದೇವೆ. ಆ ಆದೇಶವನ್ನು ಬೇಕಾದರೆ ಪ್ರೊಡ್ಯುಸ್ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು: ದಯವಿಟ್ಟು ಸಂಬಂಧಪಟ್ಟ ಮಂತ್ರಿಗಳು ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ: ತುಮಕೂರು ಜಿಲ್ಲಾಧಿಕಾರಿಯಾದ ಸೋಮಶೇಖರ್ ಅವರು ಕೊಟ್ಟಿರಬೇಕು. It is not a fact? ಅವರು ಮೀಟಿಂಗ್ ಮಾಡಿ ಡೈರೆಕ್ಷನ್ ಅನ್ನು ಕೊಟ್ಟಿದ್ದಾರೋ ಇಲ್ಲವೋ?

ಶ್ರೀ ಹೆಚ್. ಹಾಲಪ್ಪ: ಅವರು ರೆಸಲೂಷನ್ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: What do you mean by resolution and direction? What is the difference between a resolution and a direction? ಆ ರೆಸಲೂಷನ್ ಅನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಏಕೆಂದರೆ, food is not given. ನಾನು ಏಕೆ ಹೇಳುತ್ತಿದ್ದೇನೆಂದರೆ, ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೆ ನಿಮಗೆ ಹೇಳಿದವರ್ಯಾರು? ಇವತ್ತು ಕಿತ್ತು ಹಾಕುತ್ತೇವೆಂದರೆ, ಪಾಪ ಅವರಿಗೆಲ್ಲಾ ಏನಾಗುತ್ತದೆ? 500–1000 ರೂಪಾಯಿಗಳನ್ನು ಖರ್ಚು ಮಾಡಿ ಸ್ಟ್ಯಾಂಡ್ ಪೇಪರ್ ಸಿಗದೆ ಅಲೆದು ಅಲೆದು, ಎಲ್ಲೆಲ್ಲೋ ಹೋಗಿ ಜಾಸ್ತಿ ಹಣ ಕೊಟ್ಟು ಸ್ಟ್ಯಾಂಡ್ ಪೇಪರ್ ತೆಗೆದುಕೊಂಡು ಬಂದು ಅಫಿಡವಿಟ್ ಹಾಕಿದರು. 28 ಲಕ್ಷ ಕಾರ್ಡುಗಳನ್ನು ಏತಕ್ಕೆ ಮಾಡಿದಿರಿ? ಮಾಡಿದ ಮೇಲೆ ಎಷ್ಟು ಕೋಟಿಯಾದರೂ ಆಗಲಿ ಬಡವರ ಬಗ್ಗೆ ಕಳಕಳಿ ಇದ್ದರೆ ಸಬ್ಸಿಡಿ ಕೊಟ್ಟು ಅವರಿಗೆ ಮಾಡಬೇಕಾಗಿತ್ತು. Ineligible ತೆಗೆದು ಹಾಕಿ, we have no objection. ಆದರೆ eligibleಗೆ ಕೊಡಿ. 28 ಲಕ್ಷ ಕೊಡುವುದಕ್ಕೆ ಹೇಳಿದವರು ಯಾರು? ಲೋಕಸಭೆ ಚುನಾವಣೆ ಇತ್ತೆಂದು ಕೊಟ್ಟುಬಿಟ್ಟು, ಈಗ ಎಲ್ಲವನ್ನೂ ತೆಗೆದು ಹಾಕುತ್ತೇವೆಂದರೆ, ಇದು ಯಾವ ನ್ಯಾಯ? ಇದು ಬಡವರ ಪರವಾಗಿರುವಂಥ ಮಾತುಗಳಾ? ಬಡವರ ಪರವಾಗಿರುವ ನೀತಿಯೇ? ಬಡವರ ಪರವಾಗಿರುವ ಕಾರ್ಯಕ್ರಮವೇ?

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂ ಅಧಿವೇಶನದಲ್ಲಿ ಬಾಂಡ್ ಯಾರು ಕೊಡುತ್ತಾರೆ, ಅದನ್ನು ತೆಗೆದುಕೊಂಡು ಅಕ್ಕಿ ಕೊಡಿ ಎಂದು ಹೇಳಿದರು.

ಶ್ರೀ ಸಿದ್ದರಾಮಯ್ಯ: ಬಾಂಡ್ ಬರೆದುಕೊಟ್ಟವರಿಗೆಲ್ಲಾ ಕೊಟ್ಟುಬಿಡಿ.

ಶ್ರೀ ಎನ್. ಸಂಪಂಗಿ: ಲ್ಯಾಪ್‌ಟಾಪ್‌ನಲ್ಲಿ ಫೋಟೋ ತೆಗೆಯಲು 45 ರೂಪಾಯಿಗಳೆಂದು ತೆಗೆದುಕೊಂಡು, ಅದು ಬರಲಿಲ್ಲವೆಂದು ಮತ್ತೆ ತೆಗೆಯಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಒಂದು ವರ್ಷಕ್ಕೆ ಮೂರು ಲಕ್ಷ ಬಡವರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದಿರಿ. 2007-08ರಲ್ಲಿ ಒಂದು ಮನೆಯನ್ನಾದರೂ ಕೊಟ್ಟಿದ್ದೀರಾ? ಎಷ್ಟು ಮಂಜೂರು ಮಾಡಿದ್ದೀರಿ ಎಂದು ಹೇಳಿ ನೋಡೋಣ. ಹಿಂದೆ ಇದ್ದ ಹಳೆಯ ಮನೆಗಳು 2004-05, 2005-06, 2006-07, 2007-08, ಆ ಮನೆಗಳನ್ನು ಪೂರ್ತಿ ಮಾಡುವುದಕ್ಕೆ ಪೂರ್ತಿ ಮಾಡುತ್ತಿದ್ದೀರಿ ಅದು ಲೆಕ್ಕ ಕೊಡುತ್ತಿದ್ದೀರಿ ಹೊರತು 2007-08ರಲ್ಲಿ ಒಂದೂ ಮನೆ ಮಂಜೂರು ಮಾಡಿಲ್ಲ. 2008-09ರಲ್ಲಿ 25 ಮನೆ ಕೊಡುತ್ತೇವೆಂದು ಹೇಳಿದ್ದರು. 2009-10ರಲ್ಲಿ ಕೂಡ ಹೋದ ವರ್ಷದ್ದು ಈ ವರ್ಷ ಮಾಡುತ್ತಿದ್ದೀರಿ. 2007-08, 2008-09, 2009-10ಕ್ಕೆ ಒಂದು ಮನೆ ಕಟ್ಟಿಲ್ಲ. ಇವತ್ತಿನವರೆಗೆ ಆಶ್ರಯ ಸಮಿತಿಗಳನ್ನು ಮಾಡಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅರ್ಬನ್ ಆಶ್ರಯ ಕಮಿಟಿ ಮಾಡುವುದಕ್ಕೆ ಬರುತ್ತದೆ. ಇವತ್ತಿನವರೆಗೆ ಒಂದೇ ಒಂದು ಪಟ್ಟಣದಲ್ಲಿ ಒಂದು ಮನೆ ಕೊಟ್ಟಿದ್ದೇವೆಂದು ಹೇಳಲಿ ನೋಡೋಣ. ಯಾವುದಾದರೂ ಒಂದು ಪಟ್ಟಣದಲ್ಲಿ ಒಂದು ಸೈಟ್ ಕೊಟ್ಟಿದ್ದೇವೆ. ಒಂದು ಮನೆ ಕೊಟ್ಟಿದ್ದೇವೆಂದು ಹೇಳಲಿ ನೋಡೋಣ. Absolutely No. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಜಮೀನು ತೆಗೆದು ಕೊಡುತ್ತೇವೆಂದು ಒಂದು ಕಾರ್ಯಕ್ರಮ ಇದೆ. ಇವರು ಬಂದ ಮೇಲೆ ಯಾರಿಗಾದರೂ ಒಬ್ಬರಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ

ಒಂದು ಎಕರೆ ಭೂಮಿ ತೆಗೆದುಕೊಟ್ಟಿದ್ದೇವೆಂದು ಹೇಳಿ ನೋಡೋಣ. ಏಕೆಂದರೆ ಮಾನ್ಯ ಅಶೋಕ್‌ರವರು 55,000 ರೂ. ಎಂದು ನಿಗದಿ ಮಾಡಿದ್ದಾರೆ. ಎಲ್ಲಿಯೂ 50,000 ರೂ.ಗೆ ಭೂಮಿ ಸಿಗುವುದಿಲ್ಲ. ಮಾರ್ಕೆಟ್ ವ್ಯಾಲ್ಯೂ ಜಾಸ್ತಿ ಮಾಡಿ. ಇಲ್ಲಿಯವರೆಗೆ ಏಕೆ ಮಾಡಲಿಲ್ಲ?

ಶ್ರೀ ಎಂ.ಪಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಅದು ನೀವೇ ಮಾಡಿದ್ದು, ಈಗ ನಮ್ಮ ಸರ್ಕಾರ ಎರಡೂವರೆ ಲಕ್ಷ ಮಾಡಿದೆ. 60,000 ರೂ. ನೀವೇ ಮಾಡಿದ್ದು.

ಶ್ರೀ ಸಿದ್ದರಾಮಯ್ಯ: ಮಾನ್ಯ ಕುಮಾರಸ್ವಾಮಿಯವರೆ, ಕುಳಿತುಕೊಳ್ಳಿ. ಈಗ ನೀವು ಮಾಡಿ. ನಾಲ್ಕು ವರ್ಷದಿಂದ ಬಂದಿದ್ದೀರಿ ಮಾಡಿ. It is true. What was the market value in 2004-05? What is the market value in 2009-10?

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಮಾಡಿದವರು ಅವರು, ಆಪಾದನೆ ನಮ್ಮ ಮೇಲೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ನೀವೆಲ್ಲ ಅನುಭವಸ್ಥರು. ಬಹಳ ವರ್ಷಗಳ ಕಾಲ ಅಧಿಕಾರ ನಡೆಸಿದವರು, ಇಷ್ಟೆಲ್ಲಾ ಜ್ಞಾನೋದಯ ಇದ್ದವರು ಏಕೆ ಎರಡು ಲಕ್ಷ ಮಾಡಲಿಲ್ಲ? ಎರಡು ಲಕ್ಷ ಮಾಡಬೇಕಿತ್ತು. 50 – 60 ವರ್ಷ ಅಧಿಕಾರ ನಡೆಸಿ ಅನುಭವವಿರುವವರು. ಅದರ ಬಗ್ಗೆ ಕಾಳಜಿ ಇದ್ದವರಲ್ಲ? ಏಕೆ ಮಾಡಲಿಲ್ಲ? ಮೊಣಕೈಗೆ ತುಪ್ಪ ಸವರಬೇಡಿ.

ಶ್ರೀ ಸಿದ್ದರಾಮಯ್ಯ: Assuming for the argument sake ನಾವು 2004–05ರಲ್ಲಿ 50,000 ರೂ. ಮಾಡಿದ್ದೆವು. ಅದೇ ಮಾರ್ಕೆಟ್ ವ್ಯಾಲ್ಯೂ 2009–10ರಲ್ಲಿ ಇಟ್ಟುಕೊಳ್ಳಬೇಕೆಂದು ಇದೆಯಾ?

ಶ್ರೀ ಎಂ.ಪಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗ ರೂ. 2.50 ಲಕ್ಷ ಆಗಿದೆ. ಕಳೆದ ವರ್ಷ ನಾವೇ ಅನೇಕ ಜನರಿಗೆ ಭೂಮಿ ತೆಗೆದು ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ: ಒಬ್ಬ ದಲಿತನಿಗೆ ಒಂದು ಗುಂಟೆ ಜಮೀನು ತೆಗೆದುಕೊಡುವುದಕ್ಕಾಗುವುದಿಲ್ಲ. ಆ ಕಾರ್ಯಕ್ರಮ ಹಾಗೆಯೇ ಇದೆ. It is not at all implemented since 3-4 years. ಇವತ್ತಿನವರೆಗೆ ಇವರಿಗೆ ಬಗರ್ ಹುಕುಂ ಸಮಿತಿಗಳನ್ನು ಮಾಡುವುದಕ್ಕಾಗಲಿಲ್ಲ. ಬಗರ್ ಹುಕುಂ ಹಾಗೂ ಆರಾಧನಾ ಸಮಿತಿಗಳನ್ನು ಮಾಡದೆ ಹಣ ಲ್ಯಾಪ್ಸ್ ಆಗುತ್ತಿದೆ. ಟ್ರಿಬ್ಯುನಲ್‌ಗಳನ್ನು ಮಾಡಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಏನು ಆಪಾದನೆ ಮಾಡುತ್ತಿದ್ದೀರಿ ಅದು ಸರಿ ಅಲ್ಲ. ಆರಾಧನಾ ಸಮಿತಿ ಮಾಡಿದೆ, ಒಂದೆರಡು ಉಳಿದಿರಬಹುದು. ಆದರೆ ಆಗಿವೆ. ನನ್ನ ಕ್ಷೇತ್ರದಲ್ಲಿ ಆಗಿರುವುದನ್ನು ನಾನು ಹೇಳುತ್ತಿದ್ದೇನೆ. ಸಾರಾಸಗಟು ಹೇಳುವುದು ಸರಿಯಲ್ಲ. ಜಿಲ್ಲೆಯಲ್ಲಿ ಒಂದೋ ಎರಡೋ ಉಳಿದಿರಬಹುದು. ಅಂಥವು ಉಳಿದಿದ್ದರೆ ಅವುಗಳನ್ನು ಮಾಡಿ ಕೊಡುತ್ತೇವೆ. ಕೆಲವು ಕಡೆ ಕಮಿಟಿಗಳನ್ನು ಮಾಡಿದ್ದಾರೆ. ಆರಾಧನಾ ಸಮಿತಿಗಳು ಆಗಿವೆ. ಕಳೆದ ವರ್ಷ ಬಿಡುಗಡೆ ಮಾಡಿದ ಹಣ ಖರ್ಚಾಗಿದೆ.

ಶ್ರೀ ಸಿದ್ದರಾಮಯ್ಯ: ಚಾಮುಂಡಿಬೆಟ್ಟದಲ್ಲಿ ಇವತ್ತಿನವರೆಗೆ ಕಮಿಟಿ ಆಗಿಲ್ಲ. ಮುಜರಾಯಿ ಸಮಿತಿಗಳು ಮಾಡುವುದಕ್ಕಾಗಲಿಲ್ಲ. ಮಹದೇಶ್ವರ ಬೆಟ್ಟದಲ್ಲಿ ಮಾಡಿಲ್ಲ. ನಂಜುಂಡೇಶ್ವರ ದೇವಸ್ಥಾನದಲ್ಲಿ ಮಾಡಿಲ್ಲ. ಮಾನ್ಯ ಕರುಣಾಕರ ರೆಡ್ಡಿಯವರು ಇಲ್ಲಿಯೇ ಇದ್ದಾರೆ. ಬಗರ್ ಹುಕುಂ ಕಮಿಟಿಗಳು ಮತ್ತು ಟ್ರಿಬ್ಯುನಲ್‌ಗಳು ಇವತ್ತಿನವರೆಗೂ ಆಗಿಲ್ಲ. ಮಾಡುವುದು ಬೇರೆ.

ಶ್ರೀ ಜಿ. ಕರುಣಾಕರ ರೆಡ್ಡಿ: ಯಾವುದೇ ಕಡತ ಬಂದರೂ immediate ಆಗಿ clear ಮಾಡಿ ಕಳುಹಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ನೀವು ಮಾಡುವುದಿಲ್ಲ. ಕೆಲಸ ಮಾಡಬೇಕಲ್ಲ. ಕೆಲಸ ಮಾಡುತ್ತಿದ್ದಾವಾ ಹೇಳಿ ನೋಡೋಣ. ನಿಮಗೆ ಕಾನೂನು ಕೂಡ ಪಾಸ್ ಮಾಡಿ ಕೊಟ್ಟಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಲ್ಯಾಂಡ್ ಟ್ರಿಬ್ಯುನಲ್ಸ್ ಆಗಿವೆ. ನನ್ನ ಕ್ಷೇತ್ರದಲ್ಲಿಯೇ ಟ್ರಿಬ್ಯುನಲ್ ಸಿಟ್ಟಿಂಗ್ಸ್ ಆಗಿವೆ. ನನ್ನ ಕ್ಷೇತ್ರದಲ್ಲಿ ಲ್ಯಾಂಡ್ ಟ್ರಿಬ್ಯುನಲ್ ಆಗಿದೆ. ಆರಾಧನಾ ಆಗಿದೆ.

ಶ್ರೀ ಸಿದ್ದರಾಮಯ್ಯ: ನಿಮ್ಮ ತಾಲ್ಲೂಕಿನಲ್ಲಿ ಮಾಡಿಕೊಂಡರೆ, ನಮ್ಮ ತಾಲ್ಲೂಕಿಗೂ ಮಾಡಿ.

ಶ್ರೀ ಅಮರೇಗೌಡ ಬಯ್ಯಾಪುರ: ಮಾನ್ಯ ಅಧ್ಯಕ್ಷರೆ, ಎಲ್ಲಿ BJP ಶಾಸಕರು ಇದ್ದಾರೆ ಅಲ್ಲಿ ಎಲ್ಲಾ ಆಗಿದೆ. ಬೇರೆ ಕಡೆ ಮಾಡಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಕಾರಜೋಳರವರೆ, ನಿಮ್ಮದು ಆಗಿದೆ. ನಮ್ಮಲ್ಲಿ ಆಗಿಲ್ಲ. ಮಾನ್ಯ ಕರುಣಾಕರ ರೆಡ್ಡಿಯವರಿಗೆ ಕೇಳಿ ಆಗಿದೆಯಾ ಎಂದು. ಆಗಿಲ್ಲ. ನಿಮಗೆ ಗೊತ್ತಿಲ್ಲ ಕುಳಿತುಕೊಳ್ಳಿ. ಆಗಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ನೀವು ಆಗಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಎಲ್ಲಾ ಕ್ಷೇತ್ರಗಳನ್ನು ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಒಂದೆರಡು ಉಳಿದಿರಬಹುದು. ಮಾನ್ಯ ಅಮರೇಗೌಡರೆ. ನಾನೇ ನಿಮ್ಮ ಜಿಲ್ಲೆಯ ಉಸ್ತುವಾರಿ ಸಚಿವನಿದ್ದೇನೆ. ನೀವೇಕೆ ಒಂದು ದಿನವೂ ಹೇಳಲಿಲ್ಲ? ಕೊಪ್ಪಳ ಜಿಲ್ಲಾ ಉಸ್ತುವಾರಿ ಮಂತ್ರಿ ನಾನು. ಪ್ರತಿ ತಿಂಗಳು ಒಂದೋ ಎರಡೋ ಸಭೆ ಮಾಡೇ ಮಾಡುತ್ತೇನೆ. ಪ್ರತಿ ಸಭೆಯಲ್ಲಿಯೂ ಇದ್ದೇ ಇರುತ್ತಾರೆ. ಆಗಲಾದರೂ ಹೇಳಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ: ಮಾನ್ಯ ಕಾರಜೋಳರವರೆ, ಕುಳಿತುಕೊಳ್ಳಿ. I am not disputing your statement. What I am disputing is ನಮ್ಮ ಇಲ್ಲಿರತಕ್ಕಂತಹ ಒಬ್ಬ ಶಾಸಕರ ಕ್ಷೇತ್ರದಲ್ಲಿಯೂ ಕೂಡ ಆಗಲಿಲ್ಲ. That

shows how committed they are. ಮಾನ್ಯ ಅಧ್ಯಕ್ಷರೆ, ನಂಜುಂಡಪ್ಪನವರ ವರದಿ...

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ನಾಡಗೌಡರು ಎದ್ದಿದ್ದಾರೆ. ಬಿಜಾಪುರ ಜಿಲ್ಲೆಗೂ ನಾನೇ ಉಸ್ತುವಾರಿ ಮಂತ್ರಿಯಾಗಿದ್ದೇನೆ. ಕೊಪ್ಪಳಕ್ಕೂ ನಾನೇ ಉಸ್ತುವಾರಿ ಮಂತ್ರಿಯಾಗಿದ್ದೇನೆ. ಆಗಿಲ್ಲವೆಂದು ಅವರು ಎದ್ದು ಹೇಳಿಬಿಡಲಿ. ಮಾನ್ಯ ನಾಡಗೌಡರು ಇಲ್ಲವೆಂದು ಹೇಳಲಿ.

ಶ್ರೀ ಸಿದ್ದರಾಮಯ್ಯ: ಆಯಿತು. ಮಾನ್ಯ ನಾಡಗೌಡರು ಒಪ್ಪಿಕೊಳ್ಳುತ್ತಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಯಾರ್ಯಾರು ಅವರ ಪಕ್ಷದ ಕಾರ್ಯಕರ್ತರು ಪಟ್ಟಿ ಕೊಟ್ಟಿದ್ದಾರೆ ಅಲ್ಲಿ ಮಾಡಿದ್ದಾರೆ. ಇನ್ನು ಎಲ್ಲೆಲ್ಲಿಂದ ಪಟ್ಟಿ ಬಂದಿಲ್ಲ ಅಲ್ಲಿ ಪೆಂಡಿಂಗ್ ಇವೆ.

ಶ್ರೀ ಸಿದ್ದರಾಮಯ್ಯ: ನಿಮ್ಮವರದೇ ಮಾಡಿಕೊಳ್ಳಿ. We have no objection. ನೀವು ನಮ್ಮ ಕಾರ್ಯಕರ್ತರನ್ನು ಹಾಕುವುದಿಲ್ಲವೆಂದು ನಮಗೆ ಗೊತ್ತಿದೆ.

ಶ್ರೀ ಬಸವರಾಜ ಬೊಮ್ಮಾಯಿ: ಎಲ್ಲರೂ ಅವರವರು ಇದ್ದಾಗ ಅವರು ಮಾಡಿಕೊಂಡಿದ್ದಾರೆ. ಬಹಳಷ್ಟು ಕಡೆ ಆಗಿದೆ, ಇನ್ನು ಉಳಿದ ಕಡೆ ಆದಷ್ಟು ಬೇಗನೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ: Yes, Your answer is correct. ನಮ್ಮ ಜಿಲ್ಲೆಯಲ್ಲಿ ಮಾಡುವುದು ಯಾರು? ಅವರೋ, ನೀವೋ?

ಶ್ರೀ ಗೋವಿಂದ ಎಂ. ಕಾರಜೋಳ: ನಾನು ಹೇಳುವುದು ಸಾರಾಸಗಟಾಗಿ ಈ ಕಡೆಯವರು ಆಗಿಲ್ಲವೆಂದು ಹೇಳಿದಿರಿ. ಅದಕ್ಕೆ ಮಾನ್ಯ ನಾಡಗೌಡರು ಎದ್ದು ಆಗಿದೆ ಎಂದು ಹೇಳಲಿ ಎಂದು ಹೇಳಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ಪ್ರಸ್ತಾಪ ಮಾಡುತ್ತಾ ತಮಗೆ ತಿಳಿಸಿದೆ. ಬಗರ್ ಹುಕುಂ ಸಮಿತಿ ಇರಬಹುದು. ಆಶ್ರಯ ಸಮಿತಿ ಇರಬಹುದು. ಆರಾಧನಾ ಸಮಿತಿ ಇರಬಹುದು.

ತಹಶೀಲ್ದಾರ್‌ರವರು ಏನು ಮಾಡುತ್ತಾರೆ, ನಾವು ಹೇಳಿದವರಿಗೆ ಮಾಡುವುದಿಲ್ಲ, ನಾವು ಪಟ್ಟಿ ಕೊಡುವುದಿಲ್ಲವೆಂದು ಹೇಳಿದರೂ ಇಲ್ಲ. ನಮಗೆ ರೆವಿನ್ಯೂ ಕಾರ್ಯದರ್ಶಿಯವರು ಕೇಳುತ್ತಾರೆ, ನೀವು ಹೆಸರು ಕೊಡಲೇಬೇಕೆಂದು ಕಡ್ಡಾಯವಾಗಿ ನಮ್ಮ ಹತ್ತಿರ ಹೆಸರು ತೆಗೆದುಕೊಂಡು ಕಳುಹಿಸುತ್ತಾರೆ. ನಾವು ಆ ಲೆಟರ್ ಅನ್ನು ಕಳುಹಿಸುತ್ತೇವೆ. ಗೌರವಕ್ಕಾದರೂ ನಾವು ಕೊಟ್ಟ ಪಟ್ಟಿಯಲ್ಲಿರುವ ಒಂದು ಹೆಸರೂ ಕೂಡ ಇರುವುದಿಲ್ಲ. ಹೀಗಾದರೆ ನಮ್ಮನ್ನು ಹೆಸರು ಕೊಡಿ ಎಂದು ಕೇಳುವುದೇ ಬೇಡ. ಯಾವ ಸರ್ಕಾರವಿರುತ್ತದೋ ಆ ಪಕ್ಷದವರನ್ನೇ ನಾವು ಮಾಡಿಕೊಳ್ಳುತ್ತೇವೆಂದು ಮತ್ತು ಯಾವುದೇ ಶಾಸಕರ ಹತ್ತಿರ ಹೆಸರುಗಳ ಪಟ್ಟಿಯನ್ನು ಕೇಳಬೇಡಿ ಎಂದು ಡಿ.ಸಿ.ಗಳಿಗೆ ನೀವು ಒಂದು ಡೈರಕ್ಷನ್ ಕೊಡಿ. ನಮ್ಮ ಹತ್ತಿರ ಪಟ್ಟಿ ತೆಗೆದುಕೊಂಡು ಆ ಪಟ್ಟಿಯಲ್ಲಿರುವ ಹೆಸರುಗಳಲ್ಲಿ ಒಂದನ್ನೂ ತೆಗೆದುಕೊಳ್ಳದೇ ಇದ್ದರೆ ಪಟ್ಟಿ ಏಕೆ ಕೇಳಬೇಕು?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಹದೇವ ಪ್ರಸಾದ್‌ರವರು ಮಂತ್ರಿಯಾಗಿದ್ದಾಗಲೂ ಮತ್ತು ನಾವು ಶಾಸಕರಾಗಿದ್ದಾಗಲೂ ಕೂಡ ನಮಗೂ ಹೆಸರಿನ ಪಟ್ಟಿ ಕಳುಹಿಸುವಂತೆ ಕೇಳಿದ್ದರು. ನಾವೂ ಕೂಡ ಹೆಸರುಗಳ ಪಟ್ಟಿಯನ್ನು ಕೊಟ್ಟಿದ್ದೆವು. ಯಾವುದೂ ಕೂಡ ಆಗಿಲ್ಲ.

ಶ್ರೀ ಬಿ.ಬಿ. ರಾಮಸ್ವಾಮಿಗೌಡ: ನಾವು ಪಟ್ಟಿ ಕೊಡುವುದಿಲ್ಲವೆಂದರೂ ನಮ್ಮನ್ನು ಬಿಡುವುದಿಲ್ಲ. ಹಿಂಸೆ ಮಾಡಿಯಾದರೂ ನಮ್ಮಿಂದ ಪಟ್ಟಿಯನ್ನು ತಹಶೀಲ್ದಾರ್‌ರವರು ಮತ್ತು ಡಿ.ಸಿ.ಯವರು ತೆಗೆದುಕೊಳ್ಳುತ್ತಾರೆ. ಆದರೆ ಅವರು ಕೊಡುವ ಪಟ್ಟಿಯಲ್ಲಿ ಬೇರೆ ಹೆಸರು ಬಂದಿರುತ್ತದೆ. ಈ ರೀತಿ ನಮಗೆ ಏಕೆ ಅವಮಾನ ಮಾಡುತ್ತೀರಿ? ನಮ್ಮ ಹತ್ತಿರ ಹೆಸರಿನ ಪಟ್ಟಿ ಕೇಳಿ ಕಳುಹಿಸಿ ಎಂದು ನಾವೇನಾದರೂ ನಿಮಗೆ ಹೇಳಿದ್ದವೆ?

ಶ್ರೀ ಸಿ.ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೆ, ನಮ್ಮ ಸಚಿವರಾದ ಕಾರಜೋಳ್ ಸಾಹೇಬರು ಮಾತನಾಡುವಾಗ ಕೆಲವೊಂದು ಜಿಲ್ಲೆಗಳಲ್ಲಿ ಆಗಿದೆ. ಕೆಲವೊಂದು ಜಿಲ್ಲೆಗಳಲ್ಲಿ ಆಗಿಲ್ಲವೆಂದು ಹೇಳಿದರು. ವಿರೋಧ ಪಕ್ಷದ ನಾಯಕರು ಕೂಡ ಅದನ್ನೇ ಹೇಳಿದ್ದು. ಇದೊಂದು ಕಡೆ ಇರಲಿ.

ಎರಡನೆಯದಾಗಿ ಯಾವ ಕಾರಣದಿಂದ ಶಾಸಕರನ್ನು ಅಲ್ಲಿ ಸದಸ್ಯರನ್ನಾಗಿ ತೆಗೆದರು ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಎಲ್ಲಾ ಸರ್ಕಾರಗಳಲ್ಲಿಯೂ ಕೂಡ ಶಾಸಕರು ಲ್ಯಾಂಡ್ ಟ್ರಿಬ್ಯುನಲ್‌ಗೆ ಸದಸ್ಯರುಗಳಾಗಿದ್ದರು. ಈಗ ನೀವು ಅದನ್ನು ತೆಗೆದು ಹಾಕಿದ್ದೀರಿ. ಯಾವ ಕಾರಣಕ್ಕೆ ತೆಗೆದು ಹಾಕಿದಿರೋ ಅದು ನಮಗೂ ಗೊತ್ತಿಲ್ಲ. ಯಾವ ಉದ್ದೇಶದಿಂದ ಶಾಸಕರನ್ನು ತೆಗೆದು ಹಾಕಿದಿರೋ ನಮಗೆ ಗೊತ್ತಿಲ್ಲ. ಶಾಸಕರ್ಯಾರೂ ಕಮಿಟಿಯ ಸದಸ್ಯರಾಗಿ ಎಲ್ಲಿಯೂ ಇಲ್ಲ.

ಶ್ರೀ ಸಿದ್ದು ಸವದಿ: ಹಿಂದೆ ಕೂಡ ಶಾಸಕರು ಇರಲಿಲ್ಲ.

ಶ್ರೀ ಸಿ.ಎಸ್. ನಾಡಗೌಡ: ಮೇಜರ್ ತಾಲ್ಲೂಕಿನಲ್ಲಿ ಯಾರು ರೆಪ್ರೆಸೆಂಟ್ ಮಾಡುತ್ತಿದ್ದರೋ ಅಂಥ ಶಾಸಕರು ಸದಸ್ಯರಾಗಿದ್ದರು. ಸವದಿಯವರೆ, ನಿಮಗೆ ಸಂಪೂರ್ಣವಾಗಿ ಈ ಬಗ್ಗೆ ಗೊತ್ತಿಲ್ಲವೆಂದರೆ ಕೇಳಿ ತಿಳಿದುಕೊಳ್ಳಿ. ಎಲ್ಲಾ ಕಡೆಗಳಲ್ಲಿ ಶಾಸಕರು ಆಗಿರುವುದಿಲ್ಲ. ಆದರೆ ಮೇಜರ್ ತಾಲ್ಲೂಕನ್ನು ಯಾರು ರೆಪ್ರೆಸೆಂಟ್ ಮಾಡಿರುತ್ತಾರೋ ಅವರು ಸದಸ್ಯರಾಗಿರುತ್ತಾರೆ. ಯಾರು ಅಂಥ ಶಾಸಕರಿರುತ್ತಾರೋ ಅವರು ಆ ಕಮಿಟಿಯಲ್ಲಿ ಸದಸ್ಯರಾಗಿರುತ್ತಿದ್ದರು. ನಿಮಗೆ ಗೊತ್ತಿಲ್ಲವೆಂದರೆ ಸ್ವಲ್ಪ ಕೇಳಿ ತಿಳಿದುಕೊಳ್ಳಿ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಆ ರೀತಿ ಇತ್ತು. ಕಂದಾಯ ಮಂತ್ರಿಗಳು ಈ ಬಗ್ಗೆ ಕ್ಲಾರಿಫಿಕೇಶನ್ ಅನ್ನು ಕೊಡಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ: ಕರುಣಾಕರ ರೆಡ್ಡಿಯವರೆ, ಏನು ಹೊರಟು ಹೋಗುತ್ತಿದ್ದೀರಿ? ನಿಮಗೇ ನಾನು ಹೇಳುತ್ತಿರುವುದು.

ಶ್ರೀ ಜಿ. ಕರುಣಾಕರ ರೆಡ್ಡಿ: ನೀವು ಹೇಳಿ. ನಾನು ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವು ಆ ಕಡೆ ಹೋದರೆ ಕೇಳುವುದೇನು? ಮಾನ್ಯ ಅಧ್ಯಕ್ಷರೆ, ಕೂಡಲೇ ಸಮಿತಿ ಮಾಡಿ. ಬಹಳ ಜನರ ಅಪ್ಲಿಕೇಶನ್‌ಗಳು ಇನ್ನೂ ಪೆಂಡಿಂಗ್ ಇವೆ. Lot of applications are pending. ಈಗೇನಾಗಿದೆಯೆಂದರೆ ಅನೇಕ ಕಡೆಗಳಲ್ಲಿ ಇದರ ಬಗ್ಗೆ ಅನೇಕ ವರ್ಷಗಳಿಂದ ಇತ್ಯರ್ಥ ಮಾಡದೇ ಇರುವುದರಿಂದ ಪಟ್ಟಣದ ಸುತ್ತ acquisition ಆಗುತ್ತವೆ.

ಪಾಪ ಇವರ್‍ಯಾರಿಗೂ ಮೂರು ಕಾಸಿನ ಪರಿಹಾರ ಕೂಡ ಸಿಗುತ್ತಿಲ್ಲ. ಏಕೆಂದರೆ ಅವರ ಹತ್ತಿರ ಹಕ್ಕು ಪತ್ರಗಳಿಲ್ಲ. ಅವರ ಜಮೀನಿಗೇ ಅವರು ಲೋನ್‌ನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. 40 ವರ್ಷಗಳಿಂದ ಕೃಷಿ ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಬ್ಬರು ಪಾಪ, 45 ವರ್ಷದಿಂದ ಕೃಷಿ ಮಾಡುತ್ತಿದ್ದಾರೆ. ಅವರು ಈ ಜಮೀನಿನಲ್ಲಿ ಉಳುಮೆ ಮಾಡಿಕೊಂಡು, ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಸುಮಾರು 20 ವರ್ಷದಿಂದ ಅರ್ಜಿಯನ್ನು ಕೊಡುತ್ತಾ ಬಂದಿದ್ದಾರೆ. ಇವತ್ತಿನವರೆವಿಗೆ ಅವರಿಗೆ ಗ್ರ್ಯಾಂಟ್ ಮಾಡಿಕೊಡುವುದಕ್ಕೆ ಆಗಿಲ್ಲ. ನಾವು ಇದ್ದಾಗ ಅವರು ಅರ್ಜಿ ಹಾಕಿಲ್ಲ. ಈಗ ಅರ್ಜಿಯನ್ನು ಹಾಕಿಕೊಂಡು ಬಂದಿದ್ದಾರೆ. ಈಗ ನೋಡಿದರೆ ಈಗ ಇನ್ಯಾವನೋ ಒಬ್ಬ ಒಳಗೆ ನುಗ್ಗಿಬಿಟ್ಟಿದ್ದಾನೆ. ಅಲ್ಲಿ ನಾನು ಕೃಷಿ ಮಾಡುತ್ತಿದ್ದೆ ಎಂದು ಹೇಳಿಕೊಂಡಿದ್ದಾನೆ. ಆ ಪೊಲೀಸ್‌ನವರು ಅಲ್ಲಿಗೆ ನೀನೂ ಹೋಗಬೇಡ ಮತ್ತು ಅವನೂ ಹೋಗುವುದು ಬೇಡವೆಂದು ತೀರ್ಮಾನವನ್ನು ಮಾಡಿಬಿಟ್ಟಿದ್ದಾರೆ. ಪಾಪ 40 ವರ್ಷದಿಂದ ಕೃಷಿ ಮಾಡಿಕೊಂಡು ಬರುತ್ತಿದ್ದವನು ಈ ರೀತಿಯಾದರೆ ಏನು ಮಾಡಬೇಕು ಹೇಳಿ. ನೀವು ಬೇಕಾದರೆ ಈ ರೀತಿಯಾಗಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಮೈಸೂರು ತಾಲ್ಲೂಕು ಪೊಲೀಸ್ ಸ್ಟೇಶನ್‌ಗೆ ಫೋನ್ ಮಾಡಿ ತಿಳಿದುಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ: ನಿಮ್ಮ ಡೈರಕ್ಷನ್ ಏನಾದರೂ ಇರಬೇಕು.

ಶ್ರೀ ಸಿದ್ದರಾಮಯ್ಯ: ಇಲ್ಲಪ್ಪಾ, ನನ್ನ ಡೈರಕ್ಷನ್ ಏನೂ ಇದರಲ್ಲಿ ಇಲ್ಲ. ನಾನು interfere ಆಗುವುದಿಲ್ಲ. ಪೊಲೀಸ್‌ನವರ ಜೊತೆ ಮಾತನಾಡುವುದನ್ನು ನಾನು ಈಗ ಬಿಟ್ಟುಬಿಟ್ಟಿದ್ದೇನೆ. ಇನ್ನು ನಂಜುಂಡಪ್ಪ ವರದಿಯಲ್ಲಿ imbalance ತೆಗೆಯಬೇಕು ಎಂದು ಹೇಳಲಾಗಿದೆ. ಇದಕ್ಕಾಗಿ ಇವರು ಎಷ್ಟು ದುಡ್ಡನ್ನು ಇಟ್ಟಿದ್ದರು ಮತ್ತು ಎಷ್ಟು ದುಡ್ಡನ್ನು ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ಇವರು ಲೆಕ್ಕ ಕೊಡಲಿ. ಇವರು ಪ್ಲಾನ್‌ನೊಳಗೆ ಎಷ್ಟು ಖರ್ಚು ಮಾಡಿದ್ದಾರೆ ಎಂದು ಲೆಕ್ಕ ಕೊಡಲಿ ನೋಡೋಣ. ಗುಲ್ಬರ್ಗಾ ಸೇರಿದಂತೆ 39 most backward ಪ್ರದೇಶಗಳೇನಿವೆ ಅವುಗಳಿಗೆ ಕಳೆದ ಮೂರು ವರ್ಷಗಳಿಂದ ಏನು ಮಾಡಿದ್ದಾರೆ ಎಂಬುದನ್ನು ಹೇಳಲಿ ನೋಡೋಣ. ಅಲ್ಲಿ ಶಿಕ್ಷಣ ಎಷ್ಟು ಇಂಪ್ರೂವ್ ಆಗಿದೆ.

ರೋಡ್‌ಗಳು ಎಷ್ಟು ಇಂಪ್ರೂವ್ ಆಗಿದೆ. ಜನರ ಆರೋಗ್ಯ ಎಷ್ಟು ಇಂಪ್ರೂವ್ ಆಗಿದೆ. ಕುಡಿಯುವ ನೀರಿನ ಸೌಲಭ್ಯ ಎಷ್ಟು ಇಂಪ್ರೂವ್ ಆಗಿದೆ ಎಂಬುದನ್ನು ಇವರು ಹೇಳಲಿ ನೋಡೋಣ.

ಶ್ರೀ ಗೋವಿಂದ ಎಂ. ಕಾರಜೋಳ್: ಮಾನ್ಯ ಅಧ್ಯಕ್ಷರೆ, 114 ಕಿತ್ತೂರು ರಾಣಿ ಚೆನ್ನಮ್ಮ ಹೆಸರಿನಲ್ಲಿ ವಸತಿ ಶಾಲೆಗಳನ್ನು ಮಾಡಿದ್ದೇವೆ. ಇವರು ಏನು ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಇದಕ್ಕೆ ಈಗ 200 ಗ್ರಾಮಗಳನ್ನು ಹೆಚ್ಚುವರಿಯಾಗಿ ಸೇರಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ: ಕಾರಜೋಳ್‌ರವರೆ, ನಿಮಗೆ ಕಳೆದ ವರ್ಷ 750 ಕೋಟಿ ರೂಪಾಯಿಗಳು ಮೈನರ್ ಇರಿಗೇಶನ್ ಇತ್ತು. ಎಷ್ಟು ದುಡ್ಡು ಬಂತು ಹೇಳಿ ನೋಡೋಣ. ಈ ವರ್ಷ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಕೆರೆಗಳನ್ನು ಕಟ್ಟುವುದಕ್ಕೆ ಎಷ್ಟು ದುಡ್ಡಿದೆ ಹೇಳಿ ನೋಡೋಣ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಎಸ್‌ಸಿ/ಎಸ್‌ಟಿ ಲ್ಯಾಂಡ್ ಖರೀದಿಗೆ ಇಟ್ಟಿರುವ 50 ಸಾವಿರ ಹಣ ಹಳೆಯದಿದೆ. ಲ್ಯಾಂಡ್ ಖರೀದಿ ಯಾವುದೂ ಮಾಡುತ್ತಿಲ್ಲವೆಂದು ಹೇಳಲಾಗುತ್ತಿತ್ತು. ಈ ಬಗ್ಗೆ ಮೊನ್ನೆ ನಾವು ಕ್ಯಾಬಿನೆಟ್‌ನಲ್ಲಿ ಡಿಸಿಶನ್ ಮಾಡಿ ಎಸ್‌ಸಿ/ಎಸ್‌ಟಿ ಲ್ಯಾಂಡ್ ಖರೀದಿ ಮಾಡುವುದಕ್ಕೆ ರಿಜಿಸ್ಟ್ರೇಶನ್ ವ್ಯಾಲ್ಯು ಎಷ್ಟಿದೆ ಅಥವಾ ಎರಡೂವರೆ ಲಕ್ಷ ರೂಪಾಯಿಗಳಿಗೆ ಏರಿಸಲಾಗಿದೆ. 50 ಸಾವಿರ ಇದ್ದದ್ದನ್ನು 2.5 ಲಕ್ಷ ರೂಪಾಯಿಗಳಿಗೆ ಏರಿಸಿದ್ದೇವೆ. ಈಗ ಜಿ.ಓ. ಇಶ್ಯೂ ಆಗಿದೆ.

ಶ್ರೀ ಸಿದ್ದರಾಮಯ್ಯ: ಆ ಆರ್ಡರ್ ಕಾಪಿಯನ್ನು ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ: ಖಂಡಿತವಾಗಿ ನಿಮಗೆ ಆ ಆದೇಶದ ಪ್ರತಿಯನ್ನು ಕೊಡಿಸುತ್ತೇನೆ. ಮೊನ್ನೆ ನಾವು ಕ್ಯಾಬಿನೆಟ್‌ನಲ್ಲಿ ಈ ರೀತಿಯ ಡಿಸಿಶನ್ ಮಾಡಿದ್ದೇವೆ. ಇದೊಂದು important announcement ಆಗಿದೆ. ಎಸ್‌ಸಿ/ಎಸ್‌ಟಿ ಲ್ಯಾಂಡ್ ಖರೀದಿಗೆ 50 ಸಾವಿರ ಇದ್ದದ್ದನ್ನು ಹೆಚ್ಚು ಮಾಡಬೇಕೆಂದು ಏನು ಕೇಳಿದ್ದೀರಿ ಆ ಬಗ್ಗೆ ನಮ್ಮ ಸರ್ಕಾರ ಪರಿಶೀಲಿಸಿ

50 ಸಾವಿರ ಇದ್ದದ್ದನ್ನು as per the registration value, unit cost or Rs. 2.5 lakh which is maximum ಎಂದು ಮಾಡಲಾಗಿದೆ.

ಶ್ರೀ ಸಿದ್ದರಾಮಯ್ಯ: ನಾನು ಏನು ಹೇಳುತ್ತೇನೆಂದರೆ, ಇವತ್ತಿನವರೆವಿಗೆ ನನಗೆ ಬಂದಿರುವ information ಪ್ರಕಾರ ಇಲ್ಲಿಯವರೆವಿಗೆ ಆ ರೀತಿಯ ಆದೇಶ ಇಶ್ಯೂ ಆಗಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಮೊನ್ನೆ ದಿವಸ ಆಗಿದೆ.

ಶ್ರೀ ಸಿದ್ದರಾಮಯ್ಯ: ಆಯಿತು. ಆದರೆ ನನಗೆ ಬಂದಿರುವ information ಪ್ರಕಾರ ನಾನು ಹೇಳಬೇಕೋ ಬೇಡವೋ ಹೇಳಿ. ಈ ಗಳಿಗೆಯವರೆವಿಗೆ ನನಗೆ ನೀವು ಹೇಳಿದ information ಬಗ್ಗೆ ಜಿ.ಓ. ನನಗೆ ದೊರೆತಿಲ್ಲ. ನೀವು ತೀರ್ಮಾನ ಮಾಡಿಕೊಂಡು ಆ ಫೈಲನ್ನು ನೀವೇ ಇಟ್ಟುಕೊಂಡು ಬಿಟ್ಟರೆ ನಮಗೆ ಹೇಗೆ ಗೊತ್ತಾಗಬೇಕು?

ಶ್ರೀ ಬಸವರಾಜ ಬೊಮ್ಮಾಯಿ: ಈ ರೀತಿಯವುಗಳು ಬಹಳ ಇವೆ. ಹಿಂದೆ ಯಾವ ಯಾವ ಕಾಲದಲ್ಲಿ ಮಾಡುವುದಕ್ಕೆ ಆಗಿಲ್ಲವೋ ಅಂಥವುಗಳನ್ನು ಈಗ ಮಾಡುತ್ತಿದ್ದೇವೆ. ಅದಕ್ಕಾಗಿ ನೀವು ಅಭಿನಂದನೆಯನ್ನು ಸಲ್ಲಿಸಬೇಕು.

ಶ್ರೀ ಅಮರೇಗೌಡ ಬಯ್ಯಾಪುರ: ಹಿಂದೆ ನೀವು ಮಾಡಿದ್ದನ್ನೇ ನಾವು ಈಗ ಮಾಡುತ್ತಿದ್ದೇವೆ ಎಂದರೆ ಅಭಿನಂದನೆ ಸಲ್ಲಿಸುವುದು ಹೇಗೆ ಬರುತ್ತದೆ.

ಶ್ರೀ ಸಿದ್ದರಾಮಯ್ಯ: ಬೆಂಗಳೂರಿನಲ್ಲಿ ಈಗ ಇರುವ Inter National Airport ಬರುವ ಮೊದಲು ಅಲ್ಲಿ ಒಂದು ಎಕರೆ ಜಮೀನು 30 ಲಕ್ಷ, 20 ಲಕ್ಷಕ್ಕೆ ಸಿಗುತ್ತಿತ್ತು. ಈಗ 2 ಕೋಟಿಯಾಗಿದೆ. ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಅದೇ ಏರ್‌ಪೋರ್ಟ್‌ಗಾಗಿ ಒಂದು ಎಕರೆಗೆ 4 ಲಕ್ಷ ರೂಪಾಯಿ, 5 ಲಕ್ಷ ರೂಪಾಯಿ ಕೊಟ್ಟು ಜಮೀನನ್ನು ಪಡೆದುಕೊಳ್ಳಲಾಗಿದೆ. ಅದೂ ಕೂಡ ರೈತರ ಜಮೀನೆ ಆಗಿದೆ.

ಶ್ರೀ ಸಿದ್ದರಾಮಯ್ಯ: ಹೌದು, ಅದು ನಿಜ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇರುವ ಸತ್ಯವಾದ ವಿಚಾರವನ್ನೇ ಹೇಳಿದೆ.

ಶ್ರೀ ಸಿದ್ದರಾಮಯ್ಯ: ಹೌದು ಮತ್ತೆ, ಸತ್ಯವನ್ನೇ ಹೇಳಬೇಕು. ಇರುವ ವಿಚಾರ ಬಿಟ್ಟು ಬೇರೆ ಹೇಳುವುದಕ್ಕೆ ಆಗುತ್ತದೆಯೆ? 4 ಲಕ್ಷಕ್ಕೂ ಮಾಡಿದ್ದಾರೆ, 5 ಲಕ್ಷಕ್ಕೂ ಕೂಡ ಖರೀದಿ ಮಾಡಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಎಷ್ಟೆಷ್ಟು ಪರಿಹಾರ ಕೊಟ್ಟಿದ್ದೇವೆ ಎಂಬ ಬಗ್ಗೆ ಲೆಕ್ಕವಿದೆಯೆಂದು ನಾನು ಹೇಳಿದೆ.

ಶ್ರೀ ಸಿದ್ದರಾಮಯ್ಯ: ರೈತರ ಜಮೀನು ತೆಗೆದುಕೊಳ್ಳುವಾಗ ಮಾರ್ಕೆಟ್ ವ್ಯಾಲ್ಯೂ ಏನಿದೆ ಅದನ್ನು ಕೊಟ್ಟು ತೆಗೆದುಕೊಳ್ಳಬೇಕು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು; ಆ ಪ್ರಕಾರವೇ ಖರೀದಿ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ಆವತ್ತು ಏನು ಮಾರ್ಕೆಟ್ ಬೆಲೆ ಇತ್ತು ಆ ಪ್ರಕಾರ ಮಾಡಿದ್ದಾರೆ. ನೀವು ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇವತ್ತು ನೀವು ಅಲ್ಲಿ 2 ಕೋಟಿ ರೂ. ಇದೆ ಎಂದು ಹೇಳಿದಿರಲ್ಲಾ. 2 ಕೋಟಿ ರೂ. ಕೊಡುತ್ತಿಲ್ಲವಲ್ಲ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ಎಷ್ಟು ಕೊಡುತ್ತಿದ್ದಾರೆ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: 40, 50, 60 ಲಕ್ಷ ರೂಪಾಯಿ.

ಶ್ರೀ ಸಿದ್ದರಾಮಯ್ಯ: ಕೆ.ಐ.ಎ.ಡಿ.ಬಿ. ಇನ್‌ಛಾರ್ಜ್ ಇದ್ದೀರಲ್ಲಾ; ಎಷ್ಟು ಕೊಡುತ್ತಾರೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆವತ್ತಿನ ಬೆಲೆ ಏನಿತ್ತೋ ಅದಕ್ಕೆ ತಕ್ಕಂತೆ ಕೊಟ್ಟಿದ್ದೇವೆ.

ಶ್ರೀ ಆರ್. ಅಶೋಕ್: ರಿಯಲ್ ಎಸ್ಟೇಟ್ ಬಗ್ಗೆ ಹೇಳಿದಂತಾಗಿದೆ.

ಶ್ರೀ ಸಿದ್ದರಾಮಯ್ಯ: ರಿಯಲ್ ಎಸ್ಟೇಟ್ ಬಗ್ಗೆ ನನಗೆ ಗೊತ್ತೇ ಇಲ್ಲ. I do not know, What is it.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆದರೆ ನಿಮ್ಮವರೇ ಡಬ್ಬಲ್ ಸಂಖ್ಯೆಯಲ್ಲಿ ಇದ್ದಾರೆ.

ಶ್ರೀ ಸಿದ್ದರಾಮಯ್ಯ: ನಮ್ಮವರು ಇರಬಹುದು, ನಾನು ಹೇಳುತ್ತಿದ್ದೇನೆ. ನಿಮ್ಮವರೂ ಇದ್ದಾರೆ, ನಮ್ಮವರೂ ಇದ್ದಾರೆ, ನಿಮ್ಮವರು ಇಲ್ಲವೋ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಿಮ್ಮವರು ನಮ್ಮವರಿಗಿಂತ ಡಬ್ಬಲ್ ಸಂಖ್ಯೆಯಲ್ಲಿ ಇದ್ದಾರೆ. 800 ಕೋಟಿ ರೂ. 900 ಕೋಟಿ ರೂ. ಇರುವವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ: ಆ ರೀತಿ ಯಾರು ಇದ್ದಾರೋ ಅವರಿಗೆ ನೀವು ಹೇಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: 800 ಕೋಟಿ ರೂ. 900 ಕೋಟಿ ರೂ. ಇರುವವರು, 20 ಸಾವಿರ, 30 ಸಾವಿರ ಎಕರೆ ತೆಗೆದುಕೊಂಡಿರುವವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ: ನಿಮ್ಮದನ್ನು ಅವರಿಗೆ ಹೇಳಿಕೊಳ್ಳಿ. ಅವರು ನಿಮ್ಮದನ್ನು ಹೇಳಿಕೊಳ್ಳಲಿ, ನಮಗೇನು? ಏರ್‌ಪೋರ್ಟ್ ರೋಡ್‌ನಲ್ಲಿ ನಮ್ಮದಿದೆಯೇ ಹೇಳಿ. ಹಾಗೇನಾದರೂ ಇದ್ದರೆ ಈಗಲೇ ನಾನು ಬರೆದುಕೊಟ್ಟು ಬಿಡುತ್ತೇನೆ. ತೆಗೆದುಕೊಳ್ಳಿ. ಒಂದು ಗುಂಟೆ ಇದೆ ಎಂದು ತೋರಿಸಿದರೂ ಕೂಡ ನಾನು ಈಗಲೇ ಬರದುಕೊಟ್ಟು ಬಿಡುತ್ತೇನೆ. ತೋರಿಸಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಅಲ್ಲಿ ಯಾರು ಯಾರದ್ದು ಇದೆ ಎಂಬುದು ತಮಗೂ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ: ಯಾರಿಗೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ತಮ್ಮ ಸದಸ್ಯರದ್ದು ಯಾರ ಯಾರದ್ದು ಇದೆ ಎಂದು...

ಶ್ರೀ ಸಿದ್ದರಾಮಯ್ಯ: ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹಾಗಲ್ಲ. ನಮ್ಮ ಸದಸ್ಯರದ್ದು ಯಾರ ಯಾರದ್ದು ಎಷ್ಟೆಷ್ಟು ಇದೆ. ಅವರು ಶಾಸಕರಾದಾಗ ಎಷ್ಟು ಆಸ್ತಿಯನ್ನು ಡಿಕ್ಲೇರ್ ಮಾಡಿದ್ದಾರೆ. ಆ ಆಸ್ತಿ ಹೇಗೆ ಬಂತು, ಎಷ್ಟು ಸಾವಿರ ಎಕರೆಗಳ ವ್ಯವಹಾರವಾಗಿದೆ. ಇವೆಲ್ಲವೂ ತಮಗೂ ಗೊತ್ತಿದೆ. ನಾನು ಹೊಸದಾಗಿ ಏನೂ ಹೇಳುವ ಅವಶ್ಯಕತೆ ಇಲ್ಲ. ತಾವು ಈ ಬಗ್ಗೆ ಸಮಗ್ರವಾಗಿ ಎಲ್ಲ ವಿಚಾರಗಳನ್ನೂ ತಿಳಿದುಕೊಂಡಿದ್ದೀರಿ. ನಾನು ತಮಗೆ ಪಾಠ ಹೇಳುವುದಕ್ಕೆ ಬರುವುದಿಲ್ಲ.

2.00 P.M.

ಶ್ರೀ ಸಿದ್ದರಾಮಯ್ಯ: ನಾನೇನು ಬೃಹಸ್ಪತಿ ಎಂದು ಯಾರಿಗೂ ಹೇಳುತ್ತಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ತಮ್ಮ ಎಲ್ಲಾ ಸದಸ್ಯರುಗಳದು ಏನೇನು ವಹಿವಾಟು ಇವೆ, ಎಷ್ಟೆಷ್ಟು ಸಾವಿರ ಎಕರೆಗಳಿವೆ ಎಂದು ತಮಗೂ ಗೊತ್ತಿದೆ.

(ಗೊಂದಲ)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರು ಅಲ್ಲ, ಸುಮ್ಮನೇ ಹೇಳುವುದಲ್ಲ, ಜವಾಬ್ದಾರಿಯಾಗಿ ಮಾತನಾಡಬೇಕು. ಎಲ್ಲಾ ಸದಸ್ಯರು ಎಂದರೆ ಅರ್ಥವೇನು? ಯಾರು ಕೆಲವರಿದ್ದಾರೆ ಅವರ ಬಗ್ಗೆ ಮಾತನಾಡಿ. ಎಲ್ಲರಿಗೂ ಅದೇ ರೀತಿ ಮಾತನಾಡುವುದಲ್ಲ. ಸುಮ್ಮನೆ ಬಾಯಿಗೆ ಬಂದ ಹಾಗೆ ಮಾತನಾಡುವುದಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಯಾರ್‍ಯಾರು ಶಾಸಕರಾದ ಮೇಲೆ ಇವತ್ತಿನವರೆಗೆ ಎಷ್ಟೆಷ್ಟು ಆಸ್ತಿ ಮಾಡಿದ್ದಾರೆಂದು ಚರ್ಚೆ ಮಾಡೋಣ, ತನಿಖೆ ಮಾಡಿಸಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಈಗ ಒಂದು ಲೈನ್ ರೆಸಲ್ಯೂಷನ್ ಮಾಡಿಬಿಡೋಣ. ಮಾನ್ಯ ಕಟ್ಟಾರವರು ಮೂವ್ ಮಾಡಲಿ. ಅದಕ್ಕೆ ನಾವೆಲ್ಲ agree ಆಗುತ್ತೇವೆ. ಯಾರ್‍ಯಾರ ಬೇನಾಮಿ ಹೆಸರಿನಲ್ಲಿ ಏನಿದೆ

ಎಂದು ಎಲ್ಲಾ ಸಿಬಿಐ ಎನ್‌ಕ್ವೈರಿಗೆ ಕಳುಹಿಸಿಕೊಡೋಣ. ಅವರು ಆಗಬಹುದು ಎಂದು ಹೇಳುತ್ತಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆಗಬಹುದು, ಇದಕ್ಕೆ ತಯಾರು ಇದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ: ಅವರು ಮೂವ್ ಮಾಡುತ್ತಾರೆ, ನಾನು ಮತ್ತು ಮಾನ್ಯ ಸಿದ್ದರಾಮಯ್ಯನವರು....

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆಯಿತು, ಒಬ್ಬರ ಮೇಲೆ ಹೇಳಿ ಬಿಟ್ಟು ಅವರು ಮಾಡಿದ್ದೆಲ್ಲ ಮುಚ್ಚಿಕೊಳ್ಳುವುದು ಬೇಡ. ಮೊದಲಿನಿಂದ ಬರಲಿ, ಎಲ್ಲದಕ್ಕೂ ಕೂಡ ತಯಾರು. ಇದು ಆಗಬೇಕು. ಇದನ್ನು ಒಂದು ಬಾರಿ ತೊಳೆದು ಬಿಡಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಅದಕ್ಕೆ ಸಿಬಿಐಗೆ ಕಳುಹಿಸಿ ಸ್ವಾಮಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ರೆಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, Cabinet Minister agree ಆದ ಮೇಲೆ ಅದರ ಬಗ್ಗೆ ದಯವಿಟ್ಟು ಅಧ್ಯಕ್ಷರು ಸದನದಲ್ಲಿ ರೂಲಿಂಗ್ ಕೊಡಬೇಕಾಗುತ್ತದೆ. ಅವರೇ ಹೇಳಿದ್ದಾರಲ್ಲ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇನ್ನೂ ಹಲವಾರು ವಿಷಯಗಳು ಹೇಳುವುದಿದೆ. ಅವೆಲ್ಲವೂ ಕೂಡ ಆಗಬೇಕು. ಒಂದಲ್ಲ ಎಷ್ಟು ಹೇಳುತ್ತೇವೋ ಅವೆಲ್ಲವೂ ಆಗಬೇಕು. ಏನೇನು ಇವೆ, ಅವೆಲ್ಲವೂ ಹೇಳುತ್ತೇವೆ. ಲೋಕಾಯುಕ್ತದಿಂದ ತನಿಖೆ ಏನಾಯಿತು? ಲೋಕಾಯುಕ್ತದಿಂದ ಯಾರಿಗೆ ತನಿಖೆಯಾಯಿತು? ಏನೇನಾಯಿತು? ಎಲ್ಲವೂ ಆಗಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಅದು ಅವರಿಗೂ ಗೊತ್ತಾಗಬೇಕು. ಇದು ಎನ್‌ಕ್ವೈರಿ ಆಗಲಿ.

ಒಬ್ಬ ಮಾನ್ಯ ಸದಸ್ಯರು: ಇದು ಸಿಬಿಐ ತನಿಖೆಯಾಗಲಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಏನಿದು?

ಅಧ್ಯಕ್ಷರು: ನಾನು ಏನು ಮಾಡಬೇಕೆಂದು ಹೇಳಿ? ನನಗೆ ಅರ್ಥವಾಗುತ್ತಿಲ್ಲ. ನಾನು ಬೆಳಿಗ್ಗೆಯಿಂದಲೂ ಹೇಳುತ್ತಿದ್ದೇನೆ. ನೀವು ನೀವೇ ಪರಸ್ಪರ ಮಾತನಾಡಿದರೆ ಅದಕ್ಕೆ ಅರ್ಥವಿಲ್ಲ. ಯಾರಾದರಾಗಲಿ ಪರ್ಮಿಷನ್ ತೆಗೆದುಕೊಂಡು ಮಾತನಾಡಿ ಎಂದರೆ ಯಾರೂ ಗೌರವ ಕೂಡ ಕೊಡುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಾವು ಬಂದು ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಈ ರೀತಿಯಾದರೆ ನಾವು ಸದನಕ್ಕೆ ಬರಬಾರದು ಎಂದೆ? ಯಾವ ವಿಷಯ ಗಂಭೀರವಾಗಿ ಇದೆ ಅದರ ಬಗ್ಗೆ ಚರ್ಚೆಯಾಗಲಿ.

ಶ್ರೀ ಸಿ.ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೆ, ಒಂದು ಅವರು ಹೇಳಿದ್ದನ್ನು ಕಡತದಿಂದ ತೆಗೆಸಿ, ಇಲ್ಲ ಎನ್‌ಕ್ವೈರಿ ಮಾಡಿಸಿ, ಎರಡರಲ್ಲಿ ಒಂದು ಮಾಡಿ. ಸಿಬಿಐಗೆ....

(ಗೊಂದಲ)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಕ್ಯಾಬಿನೆಟ್ ಮಂತ್ರಿಯಾಗಿ ಇವರು ಹೇಳಿರುವುದು ಹೊರಗಡೆ ಮೆಸೇಜ್ ಏನು ಹೋಗುತ್ತದೆ? ಎನ್‌ಕ್ವೈರಿ ಆಗಲಿ ಹೇಳಿ ಅದು.

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ: ಇಲ್ಲಿ ನಿಂತು ಏನಾದರೂ ಮಾತನಾಡಿ ಹೋಗಬಹುದು ಎಂದರೆ ಅದು ಪಂಚಾಯಿತಿ ಆಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ: 50 ವರ್ಷದಿಂದ ಯಾವ್ಯಾವ ರಾಜಕಾರಣಿಗಳದು ಇದೆ ಇಲ್ಲಿ ಮಾತನಾಡಿ. ನಾವು ಬೇಡ ಎಂದು ಹೇಳಿದೆವೇ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಇಲ್ಲಿ ಶಿಸ್ತು ಇಲ್ಲ. ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಿ ಸಾಕು.

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

3.00 P.M.

(ಸದನವು ತನ್ನ ಕಲಾಪವನ್ನು 2.00 ಗಂಟೆ 4 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತೆ 3.00 ಗಂಟೆಗೆ ಸೇರಲು ನಿಃಶ್ಚಯಿಸಿತು)

(ಭೋಜನ ವಿರಾಮದ ಬಳಿಕ ಸದನವು ಮಧ್ಯಾಹ್ನ 3.18ಕ್ಕೆ ಸಮಾವೇಶಗೊಂಡಿತು)

(ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು: ಈಗ ವಿರೋಧ ಪಕ್ಷದ ನಾಯಕರು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇನ್ನೂ 2-3 clarification ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅವಕ್ಕೆಲ್ಲ ಉತ್ತರ ಕೊಡುತ್ತಾರೆ ಎಂದು ನಾನು ಆಸೆ ಇಟ್ಟುಕೊಂಡಿದ್ದೇನೆ. ಆಗಲೆ ನಾನು ಡಾ: ನಂಜುಂಡಪ್ಪನವರ ವರದಿ ಬಗ್ಗೆ ಮಾತನಾಡುತ್ತಿದ್ದಾಗ, ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಮಧ್ಯೆ ಪ್ರವೇಶ ಮಾಡಿ, real estate business ಬಗ್ಗೆ ಮಾತನಾಡುವ ಹಾಗೆ ಮಾಡಿದರು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಮಾತನಾಡಲಿಲ್ಲ, ತಾವೇ ಮಾತನಾಡಿದಿರಿ, ತಾವೇ ಪ್ರಸ್ತಾಪ ಮಾಡಿದಿರಿ. ತಾವು ಹೇಳಿದ್ದಕ್ಕೆ ನಾನು ಹೇಳಿದೆ ಅಷ್ಟೇ. ನಾನಾಗಿ ನಾನು ಮಧ್ಯೆ ಪ್ರವೇಶ ಮಾಡಲಿಲ್ಲ. ತಾವು ಪ್ರಸ್ತಾಪ ಮಾಡಿದಂಥದ್ದಕ್ಕೆ ನಾನು clarification ಹೇಳಿದೆ ಅಷ್ಟೇ.

ಶ್ರೀ ಸಿದ್ದರಾಮಯ್ಯ: ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು clarification ಕೊಟ್ಟರು, ಆಯಿತೆ? ಆದರೆ ನೀವು ಮಾತನಾಡುತ್ತಾ real estate businessನಲ್ಲಿ ಆ ಕಡೆಯವರೆಲ್ಲ ಇದ್ದಾರೆ ಎಂದು ಹೇಳಿದಿರಿ.

ಜವಾಬ್ದಾರಿಯಿರತಕ್ಕ ಒಬ್ಬ ಮಂತ್ರಿಗಳು C.B.I. enquiry ಆಗಲಿ ಎಂದು ಹೇಳುತ್ತಾರೆ. ಅವರು C.B.I. enquiryಗೆ ಒಪ್ಪಿಗೆ ಕೊಟ್ಟಿದ್ದಾರೆ. ದಯಮಾಡಿ ಅದಕ್ಕೆ ಅವರೂ ಬದ್ಧರಾಗಬೇಕು, ನಾವೂ ಬದ್ಧರಾಗೋಣ. ಇಲ್ಲದಿದ್ದರೆ ಅವರು ಅದನ್ನು ವಾಪಸ್ಸು ತೆಗೆದುಕೊಳ್ಳಲಿ.

ಶ್ರೀ ಹೆಚ್.ಡಿ. ರೇವಣ್ಣ: ಅದಕ್ಕೆ ನಾನು propose ಮಾಡುತ್ತಿದ್ದೇನೆ. ಏಕೆಂದರೆ, ಮಂತ್ರಿಗಳು ಹೇಳಿಕೆ ಕೊಟ್ಟ ಮೇಲೆ ಅದರಂತೆ ಆಗಬೇಕು, ಈ ಸದನದ ಗೌರವ ಹೋಗಬಾರದು. ಇದಕ್ಕೆ ತಾವು ಈಗ Ruling ಕೊಡಬೇಕು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಸರ್ಕಾರವೇ ಒಪ್ಪಿಕೊಂಡ ಮೇಲೆ ತಾವು ಅದನ್ನು C.B.I. enquiryಗೆ ಕಳುಹಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಅಧ್ಯಕ್ಷರೆ, ಈ ಬಗ್ಗೆ ತಾವು Ruling ಕೊಡಬೇಕಾಗುತ್ತದೆ.

ಅಧ್ಯಕ್ಷರು: ಅದನ್ನು C.B.I.ಗೆ ಕಳುಹಿಸುವಂಥ ಅವಶ್ಯಕತೆ ಇಲ್ಲ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಅವರು ಮಾತನಾಡುತ್ತಾ, ಎಲ್ಲರದ್ದೂ ಇದೆ ಎಂದು ಹೇಳಿದ್ದಾರೆ. ಅವರ ಬಾಯಿಗೆ ಏನೂ ಲಗಾಮು ಇಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ: ಒಬ್ಬ cabinet ಸಚಿವರು ಹೇಳಿದ ಮೇಲೆ, ತಾವು ದಯಮಾಡಿ ಅದನ್ನು C.B.I. enquiryಗೆ ಕೊಡಿ.

ಅಧ್ಯಕ್ಷರು: ಯಾವುದು refer ಮಾಡಬೇಕು ಎನ್ನುವುದನ್ನೆಲ್ಲ detail ಕೊಡಿ. ನಂತರ, I will take a decision.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಅವರು ಹೇಳಿರುವುದು recordಗೆ ಹೋಗಿದೆ.

ಅಧ್ಯಕ್ಷರು: ಅದು recordಗೆ ಹೋಗಿರುತ್ತದೆ ಸರಿ. ಇನ್ನೂ ಬಹಳಷ್ಟು recordಗೆ ಹೋಗಿರುತ್ತದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಎಲ್ಲರದ್ದೂ ಇದೆ ಎಂದರೆ ನಾವು ಸುಮ್ಮನೆ ಇರಬೇಕೇ?

ಶ್ರೀ ಹೆಚ್.ಡಿ. ರೇವಣ್ಣ: Cabinet ministerರವರೇ ಹೇಳಿದ್ದಾರೆ. ನಾನು ಇವತ್ತೂ ಒಪ್ಪಿಕೊಂಡಿದ್ದೇನೆ ಎಂದು ಹೇಳುತ್ತಾರೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಹೇಳುವುದಕ್ಕೂ ಒಂದು ಇತಿಮಿತಿ ಇರುತ್ತದೆ. ಆದರೆ ಅವರು ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಎಂದು ಹೊರಡಿಸಿರುವ G.O. ಅನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರೆಲ್ಲವನ್ನೂ ಕೇಳುತ್ತಿದ್ದಾರೆ. ನೀವೆಲ್ಲರೂ ಎದ್ದು ನಿಂತು ಕೇಳಿದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಂತ್ರಿಗಳು ಏನು ಹೇಳಿದರು ಎನ್ನುವುದು ಕೇಳಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: I want to know from the Hon'ble Minister, Will he stand by his statement or not? ಅವರು ಆ standಗೆ ಅಂಟಿಕೊಂಡರೆ, if he agrees, let us all agree for that. ಅವರು ಏನು ಹೇಳುತ್ತಾರೋ ಅದನ್ನೆಲ್ಲವನ್ನು ಮಾಡುವುದಕ್ಕೆ ಒಪ್ಪಿಕೊಳ್ಳೋಣ, ಅವರೂ ಒಪ್ಪಿಕೊಳ್ಳಬೇಕು, ಎಲ್ಲರೂ ಒಪ್ಪಿಕೊಳ್ಳಬೇಕು. ಅದು Houseನಲ್ಲಿಯೇ ತೀರ್ಮಾನವಾಗಲಿ. ಇದಕ್ಕೆ ಮಂತ್ರಿಗಳು ಏನು ಹೇಳುತ್ತಾರೋ ಗೊತ್ತಿಲ್ಲ.

ಶ್ರೀ ಸಿ.ಟಿ. ರವಿ: ಮೊದಲು ಆಗಿದ್ದರೆ CBI enquiry ಮಾಡಿದರೆ ಸಾಕಾಗುತ್ತಿತ್ತು. ಈಗ FBIಗೇ ವಹಿಸಬೇಕಾಗುತ್ತದೆ. ಏಕೆಂದರೆ, ಬರೀ ದೇಶದೊಳಗೇ invest ಮಾಡಿದ್ದಾರೆಂದಲ್ಲ, ಬೇರೆ ಬೇರೆ ಕಡೆಯೂ invest ಮಾಡಿರುವ chances ಇರುವುದರಿಂದ ಅದನ್ನು FBIಗೇ ವಹಿಸಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಜಮೀನು ಖರೀದಿ ಬಗ್ಗೆ ಹೊಸ ಆದೇಶವನ್ನು ಸರ್ಕಾರದಿಂದ ಏನು ಹೊರಡಿಸಿದ್ದೀರಿ ಎಂದು ಕೇಳಿದ್ದಾರೆ. ಅದಕ್ಕೆ ಸರ್ಕಾರಿ ಆದೇಶ ಸಂ. 80 ಎಸ್‌ಟಿಸಿ ದಿನಾಂಕ: 5.8.2009ರಂದು ಭೂ ಒಡೆತನದ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಮುಖಾಂತರ ಭೂಮಿ ಖರೀದಿಸುವ ಘಟಕದ ವೆಚ್ಚವನ್ನು ನೋಂದಾಯಿತ ಬೆಲೆಯ ಎರಡು ಪಟ್ಟುವರೆಗೆ ಏರಿಸಿ ಘಟಕದ ವೆಚ್ಚ ಗರಿಷ್ಠ ಮಿತಿ ಎರಡೂವರೆ ಲಕ್ಷ ರೂ.ಗಳನ್ನು ಮೀರದಂತೆ ಖರೀದಿಸಲು ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ. ಈ G.O. ಅನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಇದೇ ರೀತಿ ಬೇರೆಯವರಿಗೂ ಅಂದರೆ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ದಲಿತರಿಗೆ ಅವರಿಗೂ ಕೂಡ ಜಮೀನು ಕೊಂಡುಕೊಳ್ಳುವುದು ಬಂದಾಗ ಅದನ್ನೂ ಕೂಡ ಸೇರಿಸಿ ಮಾಡಬೇಕು. ಇದರಲ್ಲಿ ಎರಡು ಪಟ್ಟು ಅಂದರೆ 50 ಸಾವಿರ ರೂ.ಗಳಿಂದ 1 ಲಕ್ಷ ಮಾಡುತ್ತೇವೆ. maximum ಎರಡೂವರೆ ಲಕ್ಷ ರೂ. ಎಂದು ಮಾಡುತ್ತೇವೆಂದು ಇದೆ. Alright, maximum 2.5 ಲಕ್ಷ ರೂ. ಇರಲಿ.

ಶ್ರೀ ಬಸವರಾಜ ಬೊಮ್ಮಾಯಿ: ಇದಕ್ಕೆ ನೀವು ಅಭಿನಂದನೆ ಸಲ್ಲಿಸುತ್ತೀರಿ ಎಂದು ಭಾವಿಸಿದ್ದೆ. ಒಂದು ಲಕ್ಷ ರೂ. ಮಾಡಿ ಎಂದು ಹೇಳಿದ್ದೀರಿ. ನಾವು ಗರಿಷ್ಠ ಮಿತಿಯನ್ನು 2.5 ಲಕ್ಷ ರೂ.ಗಳಿಗೆ ಮಾಡಿದ್ದೇವೆ. ನೀವು ಏನು ಚಿಂತನೆ ಮಾಡುತ್ತಿದ್ದೀರಿ ಅದನ್ನು ನಾವು ಈಗಾಗಲೇ actionಗೆ ತಂದಿದ್ದೇವೆ. ನಾವು ಹೇಗೆ ಟೀಕೆಯನ್ನು ಸ್ವೀಕಾರ ಮಾಡುತ್ತೇವೆ ಹಾಗೆಯೇ ನೀವು ಕೂಡ ಒಳ್ಳೆಯ

ಕೆಲಸವನ್ನು ಸ್ವೀಕಾರ ಮಾಡಿ. ಇದರಿಂದ ಜನರಿಗೆ ಒಳ್ಳೆಯ ಸಂದೇಶ ಹೋಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಂಜೂರು ಮಾಡುವುದು ಮುಖ್ಯವಲ್ಲ. ಅದಕ್ಕೆ ಹಣ ಸಹ ಬೇಕು. ಒಂದೊಂದು ಎಕರೆ ಜಾಗವನ್ನು ಒಂದೊಂದು ಜಿಲ್ಲೆಗೆ ಇಟ್ಟರೆ ಅಲ್ಲಿ ಏನು ಮಾಡುವುದು? ಅದನ್ನು ಯಾರಿಗೆ ಕೊಡುವುದು? ಒಳ್ಳೆಯ ನಿರ್ಧಾರ ತೆಗೆದುಕೊಂಡಿದ್ದೀರಿ. ಅದರಲ್ಲಿ ಸರ್ಕಾರದ ಗುರಿ ಎಷ್ಟು? ಎಷ್ಟು ಹಣ ನಿಗದಿ ಮಾಡಿದ್ದೀರಿ?

(ಗೊಂದಲ)

ಅಧ್ಯಕ್ಷರು: ಈಗ ಏರಿಕೆ ಮಾಡಿದ್ದಾರೆ. ಆನಂತರ ನೀವು ಕೇಳಿ. ಶಿವಲಿಂಗೇಗೌಡರೆ, please, ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಇದೆಲ್ಲ ಪುಕ್ಕಟೆ ವ್ಯವಹಾರವಲ್ಲ.

ಶ್ರೀ ಸಿದ್ದರಾಮಯ್ಯ: ಇದರ ಜೊತೆಗೆ ಹಿಂದುಳಿದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಜಮೀನು ತೆಗೆದುಕೊಡುವ ಕಾರ್ಯಕ್ರಮ ಕೂಡ ಇದೆ. ಅವರಿಗೂ ಕೂಡ ಇದೇ ರೀತಿ ಅವರನ್ನೂ ಸೇರಿಸಿ ಮಾಡಬೇಕು. ಆಸಕ್ತಿ ಇಟ್ಟು ಹೊರಡಿಸಿರುವ ಆದೇಶವನ್ನು ಇಲ್ಲಿ ಓದಿದ್ದಕ್ಕೆ ಬಸವರಾಜ ಬೊಮ್ಮಾಯಿಯವರಿಗೆ, ಸರ್ಕಾರಕ್ಕೆ ಧನ್ಯವಾದಗಳು. ಕಟ್ಟಾಸುಬ್ರಹ್ಮಣ್ಯರವರ ಬಗೆಗಿನ ಚರ್ಚೆ ಬೇಡವೇ?

ಶ್ರೀ ಹೆಚ್.ಡಿ. ರೇವಣ್ಣ: ಈಗ ಸದನದಲ್ಲಿ record ಆಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರು ಹೇಳಿರುವುದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಗೆ ಆಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ: ಸಚಿವ ಸಂಪುಟದ ಸದಸ್ಯರಾಗಿರತಕ್ಕಂಥವರು ನಾವು CBI enquiryಗೆ ತಯಾರಾಗಿದ್ದೇವೆಂದು ಹೇಳಿದ ಮೇಲೆ ಅದನ್ನು

ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆ ಎಲ್ಲಿದೆ? ಇಲ್ಲ. ಜಾಸ್ತಿ ಎಂದರೆ Assurances Committee ಮುಂದೆ ಕಳುಹಿಸಬೇಕಷ್ಟೆ. ಅದು ಬಿಟ್ಟರೆ ನೀವು ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ. ಅದನ್ನು ಅವರು ವಾಪಸ್ಸು ತೆಗೆದುಕೊಳ್ಳುವುದಕ್ಕೂ ತಯಾರಿಲ್ಲ. ನನಗೆ ಗೊತ್ತಿದೆ. ಏಕೆಂದರೆ, ಸತ್ಯಾಂಶ ಏನು ಎನ್ನುವುದು ಸಾರ್ವಜನಿಕರಿಗೆ ಗೊತ್ತಾಗಬೇಕು. ಏಕೆಂದರೆ ಆಸ್ತಿ ಅಕ್ರಮವಾಗಿ ಮಾಡಿರತಕ್ಕಂಥವರು ಆ ಕಡೆಯೂ ಇರಬಹುದು, ಈ ಕಡೆಯೂ ಇರಬಹುದು ಎಂದು ಹೇಳಿದರು. ಆಯಿತು, ಎಲ್ಲರದೂ ತನಿಖೆಯಾಗಲಿ, ಅದರಲ್ಲಿ ತಪ್ಪೇನಾಗುತ್ತದೆ?

ಶ್ರೀ ಕಿಮ್ಮನೆ ರತ್ನಾಕರ್: ಲೂಟಿ ಮಾಡಿದವರು ಬೇಕಾದರೆ ಆ ಆಪಾದನೆಯನ್ನು ಸ್ವೀಕರಿಸಲಿ. ಎಲ್ಲರಿಗೂ ಅದೇ ರೀತಿಯ ಆಪಾದನೆ ಮಾಡುವುದಕ್ಕಾಗುವುದಿಲ್ಲ. He should withdraw his allegations. ಎಲ್ಲರೂ ಲೂಟಿ ಹೊಡೆದಿದ್ದಾರೆಂದರೆ, ಏನರ್ಥ? ಎಲ್ಲರೂ ವ್ಯವಹಾರ ಮಾಡುತ್ತಾರೆಂದರೆ, ನಾವು ನಮ್ಮ ಬದುಕಿನಲ್ಲಿ real estate business ಮಾಡಿಲ್ಲ. ಅವರು ಯಾರಿಗೆ allegations ಮಾಡುವುದು?

(ಗೊಂದಲ)

ಶ್ರೀ ಬಿ. ರಾಮಾನಾಥ ರೈ: CBI enquiry ಮಾಡಬೇಕೆಂದು ಏನು ಹೇಳಿದ್ದಾರೆ ಆ ಮಾತಿನಿಂದ ಅವರು ಹಿಂದೆ ಸರಿಯಬಾರದು. ನಾವು ಅದಕ್ಕೆ ರೆಡಿ ಇದ್ದೇವೆ. ಯಾವ ರೀತಿಯ ತನಿಖೆಗಾದರೂ ನಾವು ರೆಡಿ ಇದ್ದೇವೆ. ಅವರು ಆ ದಂಧೆ ಮಾಡುತ್ತಾರೆಂದು ಅದಕ್ಕೆ ಎಲ್ಲರನ್ನೂ ತೋರಿಸಬಾರದು.

(ಗೊಂದಲ)

ಅಧ್ಯಕ್ಷರು: ಯಾರಾದರೂ ಒಬ್ಬರು ಮಾತನಾಡಿ. ಎಲ್ಲರೂ ಮಾತನಾಡಿದರೆ ಯಾರ ಮಾತನ್ನು ಅವರು ಕೇಳಬೇಕು?

(ಗೊಂದಲ)

ಶ್ರೀ ಯು.ಟಿ. ಖಾದರ್: ಸಮಾಜದಲ್ಲಿ ನಮ್ಮ ಗೌರವ ಉಳಿಸಿಕೊಳ್ಳಲಿಕ್ಕೆ ನಾವು ಹಗಲಿರುಳು ಪೇಚಾಡಿ ನಮ್ಮ ಮಾನಮರ್ಯಾದೆಯನ್ನು ಉಳಿಸಿಕೊಂಡು ಬರುವುದು. ಇಲ್ಲಿಗೆ ಬಂದಾಗ ಇಂಥ ಮಾತನ್ನು ನಾವು ಕೇಳುವುದಾದರೆ ನಮಗೆ ಯಾವ ರೀತಿಯ ಗೌರವ ಇಲ್ಲಿ ಸಿಗಬಹುದು? ನಾವು ಶ್ರಮ ಪಟ್ಟಿದ್ದಕ್ಕೆ, ನಾವು ತ್ಯಾಗ ಮಾಡಿದ್ದಕ್ಕೆ ಬೆಲೆ ಇಲ್ಲದ ರೀತಿಯಲ್ಲಿ ಸದನದಲ್ಲಿಯೇ ಅದೂ ಕೂಡ responsibility ಇರುವ ಮಂತ್ರಿಗಳು ಮಾತನಾಡಿದರೆ ನಮ್ಮ ಪರಿಸ್ಥಿತಿ ಏನು? ಹಾಗಾದರೆ, ನಾವು ಇವತ್ತಿನ ದಿವಸ ಸಮಾಜದಲ್ಲಿ ನಿಯತ್ತಿನಿಂದ ಏಕೆ ದುಡಿಯಬೇಕು? ಇವತ್ತು ಇದಕ್ಕೆ ಉತ್ತರ ಹೇಳುವವರು ಯಾರು? ಇದಕ್ಕೆ ಅವರು ಸ್ಪಷ್ಟನೆ ಕೊಡಲಿ. ಮಾನ್ಯ ಅಧ್ಯಕ್ಷರೆ, ನಮಗೆಲ್ಲರಿಗೂ ತಾವೇ ರಕ್ಷಣೆ ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಸರ್ಕಾರದ ಸಚಿವ ಸಂಪುಟದಲ್ಲಿ ನಿರ್ಣಯ ಮಾಡಿ ಅವರಿಗೆ ಹೇಳಿರಬೇಕು. ಏಕೆಂದರೆ, ಅವರು Cabinetನ ಒಬ್ಬ ಸಚಿವರಾಗಿ ವಿಧಾನಸಭೆಯೊಳಗೆ ಬಹಿರಂಗವಾರಿ CBIಗೆ refer ಮಾಡುವುದಕ್ಕೆ ಸರ್ಕಾರ, ನಾವು ರೆಡಿ ಇದ್ದೇವೆ, ವಿರೋಧ ಪಕ್ಷದವರು ರೆಡಿ ಇದ್ದೀರಾ ಎಂದು ನಮ್ಮ ವಿರೋಧ ಪಕ್ಷದ ಎಲ್ಲಾ ಶಾಸಕರಿಗೆ ಒಂದು challenging issue ಮಾಡಿದ್ದಾರೆ. ಆದ್ದರಿಂದ, ಇದನ್ನು CBIಗೆ ಕಳುಹಿಸಬೇಕು. ಇಲ್ಲದಿದ್ದರೆ ಶ್ರೀ ಜಯಚಂದ್ರರವರು ಹೇಳಿದ ಹಾಗೆ ಅವರು ಇಲ್ಲಿಯ Assurances Committeeಗಾದರೂ ಕಳುಹಿಸಬೇಕು. ಇಲ್ಲಿ Cabinet ಸಚಿವರು ಹೇಳಿರುವುದರಿಂದ ಸಚಿವರು ಹೇಳುವುದು ಒಂದೇ, ಸರ್ಕಾರ ಹೇಳುವುದೂ ಒಂದೇ ಅಂದರೆ ಎರಡೂ ಒಂದೇ, ಮುಖ್ಯಮಂತ್ರಿಗಳು ಹೇಳುವುದು ಒಂದೇ, Cabinet ಸಚಿವರು ಎಂದರೆ ಮುಖ್ಯಮಂತ್ರಿಯವರು ಅವರಿಗೆ ಪೂರ್ಣ ಅಧಿಕಾರ ಕೊಟ್ಟಿದ್ದಾರೆ. ಹಾಗಾಗಿ, ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು, ನಾವು ರೆಡಿ ಇದ್ದೇವೆ CBI enquiryಗೆ ಕೊಡಿ ಎಂದು ಹೇಳಿದ್ದಾರೆ. ಅಂತೆಯೇ ನಾವೂ ಕೂಡ ನಮ್ಮ ಪಕ್ಷದಿಂದ ರೆಡಿ ಇದ್ದೇವೆ. ವಿರೋಧ ಪಕ್ಷದ ಶಾಸಕರೆಲ್ಲರೂ ಇವತ್ತು ಭ್ರಷ್ಟರು ಎನ್ನುವ ಮಾತನ್ನು ಒಬ್ಬ ಸಚಿವ ಸಂಪುಟದ ಮಂತ್ರಿ ಹೇಳಿದಾಗ ಅದನ್ನು ಪ್ರೂವ್ ಮಾಡಿ

ತೋರಿಸಬೇಕು. ಏಕೆಂದರೆ, ಇವರು ಕಳ್ಳರೇ, ಹೇಗೆ ಎನ್ನುವ ರೀತಿ ರಾಜ್ಯದ 5 ಕೋಟಿ ಜನ ನಮ್ಮನ್ನು ನೋಡುತ್ತಿದ್ದಾರೆ. ಹಾಗಾಗಿ, CBI enquiry ಆಗಲಿ, ಯಾರ್‍ಯಾರದು ಏನೇನು ಎನ್ನುವುದು ಈಚೆಗೆ ಬರಲಿ. ಏಕೆಂದರೆ, ನಾವು ಆಡಳಿತ ಪಕ್ಷದ ಸದಸ್ಯರ ಬಗ್ಗೆ ಹೇಳುತ್ತಿಲ್ಲ. ಅವರ ಪಕ್ಷದಲ್ಲಿರುವವರೆಲ್ಲ ಪ್ರಾಮಾಣಿಕರು, ವಿರೋಧ ಪಕ್ಷದಲ್ಲಿ ಯಾವ ಸದಸ್ಯರು ಇದ್ದಾರೆ ಅಷ್ಟೂ ಜನರದ್ದು ಬೇಕಾದರೆ ತನಿಖೆ ನಡೆಯಲಿ, ಮಂತ್ರಿಯವರು ಕೂಡ including ನಾನೂ ರೆಡಿ ಇದ್ದೇನೆಂದು ಹೇಳಿ CBIಗೆ refer ಮಾಡಬೇಕೆಂದು ಹೇಳಿದ್ದಾರೆ. ಸಚಿವ ಸಂಪುಟದ ಎಲ್ಲಾ ಸದಸ್ಯರದು ಮತ್ತು ಅವರದ್ದೂ ಸೇರಿಸಿ ಒಪ್ಪಿಕೊಂಡಿದ್ದಾರೆ. ಅದಕ್ಕೆ CBI enquiry ಮಾಡುವುದಕ್ಕೆ ತಾವು ruling ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ.

ಶ್ರೀ ಬಿ. ರಮಾನಾಥ ರೈ: ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು, ಆ ಕಡೆ, ಈ ಕಡೆ ದಂಧೆ ಮಾಡುತ್ತಾರೆಂದು ಹೇಳಿರುವುದರಿಂದ ಆಡಳಿತ ಪಕ್ಷದ ಸದಸ್ಯರ ಸ್ವಾಭಿಮಾನಕ್ಕೂ ಪೆಟ್ಟು ಬಿದ್ದಿದೆ. ಇದನ್ನು ನಾವು ಎಲ್ಲರೂ ಸೇರಿ CBI enquiry ಆಗಬೇಕೆಂದು ಒತ್ತಾಯ ಮಾಡೋಣ.

(ಗೊಂದಲ)

ಅಧ್ಯಕ್ಷರು: ಸಿದ್ದು ಸವದಿಯವರೆ, ಒಬ್ಬೊಬ್ಬರು ಮಾತನಾಡಿ ಎಂದು ಹೇಳಿದ್ದೇನೆ. ಏಕೆ ಪರಸ್ಪರ ಕಚ್ಚಾಡುತ್ತೀರಿ? ಅವರು ಮಾತನಾಡುತ್ತಿದ್ದಾರಲ್ಲ? ಬೇಕಾದರೆ ಆಮೇಲೆ ನೀವು ಮಾತನಾಡಿ.

ಶ್ರೀ ಬಿ. ರಮಾನಾಥ ರೈ: ನೀವೊಬ್ಬ ಕ್ಯಾಬಿನೆಟ್ ದರ್ಜೆಯ ಸಚಿವರಾಗಿ ಇಷ್ಟು ಲಘುವಾಗಿ ಎಲ್ಲವನ್ನೂ ಮಾತನಾಡುತ್ತಾ ಹೋದರೆ ಈ ಸದನದ ಗೌರವ ಎಲ್ಲಿಗೆ ಹೋಗಬೇಕು? ಆಡಳಿತ ಪಕ್ಷದಲ್ಲಿರುವ ತಾವೂ ಕೂಡ ಅದನ್ನು ಗಂಭೀರವಾಗಿ ಪರಿಗಣಿಸಬೇಕು. ಅವರು ವಿರೋಧ ಪಕ್ಷಕ್ಕೆ ಸೀಮಿತವಾಗಿ ಮಾತನಾಡಿಲ್ಲ. ಆ ಕಡೆ ಈ ಕಡೆ ಎಲ್ಲರೂ ದಂಧೆ ಮಾಡುತ್ತಾರೆಂದು ಹೇಳಿದ್ದಾರೆ. ದಂಧೆ ಮಾಡುವವರು ಇರಬಹುದು. ಪ್ರಾಮಾಣಿಕವಾಗಿ ಬದುಕಿಕೊಂಡು ಬಂದಂಥವರು ಬಹಳಷ್ಟು ಮಂದಿ ಇದ್ದಾರೆ. ಎಲ್ಲರೂ

ಹಾಗೆಯೇ ಇದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಹಾಗಾಗಿ, ಇದರಿಂದ ಮನಸ್ಸಿಗೆ ನೋವಾಗುತ್ತದೆ. ಅವರು ಏನು ಹೇಳಿದ್ದಾರೆ ಬಹುಶಃ ಅದಕ್ಕೆ ಅವರು ಬದ್ಧರಾಗಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ಬಹುಶಃ Cabinet ದರ್ಜೆಯ ಮಂತ್ರಿಯಾಗಿ ಈ ಮಾತನ್ನು ಹೇಳಿದ್ದಾರೆ. ಅದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಈ ಕಡೆಯವರೂ, ಆ ಕಡೆಯವರೂ ಒಪ್ಪಿಕೊಂಡ ಮೇಲೆ CBI ತನಿಖೆ ಮಾಡಬೇಕೆಂದು ಏನು ಹೇಳಿದ್ದಾರೆ ಅದನ್ನು ಮಾಡಬೇಕು. ಅದಕ್ಕೆ ಅವರು ತಯಾರಾಗಬೇಕೆಂದು ಖಂಡಿತವಾಗಿ ಹೇಳಬೇಕಾಗುತ್ತದೆ. ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು. ನಮ್ಮ ಮಾನ ಮರ್ಯಾದೆ ಉಳಿಸುವ ಜವಾಬ್ದಾರಿ ನಿಮ್ಮದೂ ಕೂಡ. ಅದನ್ನು ತಾವು ಕಾಪಾಡಿಕೊಂಡು ಬರಬೇಕೆಂದು ನಮ್ಮ ವಿನಂತಿ ಇದೆ.

ಶ್ರಿ ಸಿದ್ದು ಸವದಿ: ವಿರೋಧ ಪಕ್ಷದವರು ಈ ಮಾತುಗಳನ್ನು ತಿರುಚಿ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಆಮೇಲೆ ತಾವು ಏನಾದರೂ ಹೇಳುವುದಿದ್ದರೆ ಹೇಳಿ. ಈಗ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅದು ದಾಖಲಾತಿ ಆಗಿದೆ. ಅದನ್ನು ತರಿಸಿ.

(ಗೊಂದಲ)

3.30 P.M.

ಅಧ್ಯಕ್ಷರು: ನೀವು ಆಮೇಲೆ ಮಾತನಾಡಿ. ಅವರು ಮಾತನಾಡಿದ ನಂತರ ನಿಮಗೆ ಅವಕಾಶ ಕೊಡುತ್ತೇನೆ. ಒಬ್ಬೊಬ್ಬರೇ ಮಾತನಾಡಿ. ಯಾರಾದರೂ ಒಬ್ಬರು ಮಾತನಾಡುವಾಗ ಎಲ್ಲರೂ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ಇದರಿಂದ ಯಾರು ಏನು ಮಾತನಾಡುತ್ತಿದ್ದಾರೆನ್ನುವುದು ಗೊತ್ತಾಗುವುದಿಲ್ಲ.

ಶ್ರೀ ಸಿದ್ದು ಸವದಿ: ಅವರು ಮಾತುಗಳನ್ನು ತಿರುಚಿ ಮಾತನಾಡುವ ಪದ್ಧತಿ ಇದೆ. ಯಾರ್ಯಾರು ಜಮೀನು ಹೊಂದಿದ್ದಾರೆ ಅವರೆಲ್ಲರದ್ದೂ ತನಿಖೆ ಮಾಡಿ ಎಂದು ಅಷ್ಟೇ ಅವರು ಹೇಳಿರುವುದು. ಅವರು ಎಲ್ಲಾ ಶಾಸಕರು ಎಂದು ಹೇಳಲಿಲ್ಲ. ಆ ಕಡೆ ಈ ಕಡೆ ಯಾರ್ಯಾರು ಅವ್ಯವಹಾರ ಮಾಡಿದ್ದಾರೆ. ಯಾರ್ಯಾರು ಭೂಮಿ ಹೊಂದಿದ್ದಾರೆ. ಅವರದ್ದು ಮಾತ್ರ ತನಿಖೆ ಮಾಡಿ ಎಂದು ಹೇಳಿದ್ದಾರೆ. ಎಲ್ಲಾ ಶಾಸಕರು ಮಾಡಿದ್ದಾರೆಂದು ಅವರು ಹೇಳಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಇವರೆಲ್ಲರೂ ಶಾಸಕರಲ್ಲವೇ? ಈ ಕಡೆಯವರು ಆ ಕಡೆಯವರು ಯಾರು ಎಂದು ಹೇಳಲಿ.

(ಗೊಂದಲ)

ಶ್ರೀ ಸಿದ್ದು ಸವದಿ: ಯಾರು ಮಾಡಿದ್ದಾರೆ ಆ ಶಾಶಕರಿಗೆ ಮಾತ್ರ 224 ಶಾಸಕರೂ ಎಂದು ಅವರು ಹೇಳಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಹಾಗಾದರೆ, ಅವರು ಯಾರು ಎಂದಾದರೂ ಹೇಳಿ. ಅದನ್ನು ತನಿಖೆಗೆ ಒಪ್ಪಿಸಿ.

(ಗೊಂದಲ)

ಅಧ್ಯಕ್ಷರು: ಸದಸ್ಯರು ಪರಸ್ಪರ ವಾದ ಮಾಡಬೇಡಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಸತ್ಯಹರಿಶ್ಚಂದ್ರರು ಇಲ್ಲಿ ಮಾತ್ರ ಅಲ್ಲ ಆ ಕಡೆಯೂ ಇದ್ದಾರೆಂದು ಅವರು ಹೇಳಿದ್ದಾರೆ. ಇದಕ್ಕೆ ಏಕೆ ನೀವು ಬೇಜಾರು ಮಾಡಿಕೊಳ್ಳುತ್ತೀರಿ?

(ಗೊಂದಲ)

ಶ್ರೀ ಕಿಮ್ಮನೆ ರತ್ನಾಕರ್: ನನಗೆ ನೋವಾಗುತ್ತಿದೆ. ಅವರು ಹಿರಿಯ ಸದಸ್ಯರಿದ್ದಾರೆ. ನಾವು ಇತ್ತೀಚೆಗೆ ಶಾಸನ ಸಭೆಗೆ ಆರಿಸಿ ಬಂದವರು. ನಾನು ಇಲ್ಲಿಗೆ ಬಂದ ದಿನದಿಂದ ನೋಡುತ್ತಿದ್ದೇನೆ. ಯಾರೇ ಮಾತನಾಡಲಿ, ಸಚಿವರು ಮಾತನಾಡಲಿ, ಮುಖ್ಯಮಂತ್ರಿಯವರು ಮಾತನಾಡಲಿ, ವಿರೋಧ ಪಕ್ಷದವರು ಮಾತನಾಡಲಿ, ಅನೇಕ ಸಲ interfere ಆಗಿ ಮಾತನಾಡುತ್ತಾರೆ. ಇದರಿಂದ ನಮಗೆ ನೋವಾಗುತ್ತದೆ. ಈ ರೀತಿಯಾದರೆ ಸಭೆಯ ಸಮಯ ಹಾಳಾಗುತ್ತದೆ. ನಾವು ಅಲ್ಲಿಂದ ಇಲ್ಲಿಗೆ ಬಂದಿದ್ದೇವೆ. ಈ ರೀತಿ ಅನಾವಶ್ಯಕವಾಗಿ ಸದಸ್ಯರು ಎದುರುಗಡೆ ಇದ್ದಾರೆ. ಸೂರ್ಯ ಪೂರ್ವದಲ್ಲಿ ಹುಟ್ಟುತ್ತಾನೆ ಎಂಬುದು ಇಡೀ ಪ್ರಪಂಚಕ್ಕೆ ಗೊತ್ತು. ಅದನ್ನು ಸಾಬೀತು ಮಾಡುವುದಕ್ಕೆ ನಾವ್ಯಾರು? It is accepted ಇಡೀ ಪ್ರಪಂಚ ಒಪ್ಪಿಕೊಂಡಿದೆ. ಎಲ್ಲರೂ ಮಾಡಿದ್ದಾರೆ. ಎಲ್ಲರೂ business ಮಾಡುತ್ತಿದ್ದಾರೆ ಎಂದು ಹಿರಿಯ ಸಚಿವರೊಬ್ಬರು ಹೇಳಿದ್ದಾರೆ. 5 ಸಾರಿ elect ಆದವರೊಬ್ಬರು ನಮ್ಮ ಮುಂದೆ ಕುಳಿತಿದ್ದಾರೆ. ಅವರಿಗೆ ತಾವು ಸಮರ್ಥನೆ ಮಾಡಿಕೊಳ್ಳಲು ಇನ್ನೊಬ್ಬರ support ಬೇಕಾಗಿಲ್ಲ. Let him answer it. ಆದರೆ, he should substantiate it. ಯಾರೂ ಅಪಾರ್ಥ ಮಾಡಿಕೊಳ್ಳಬಾರದು. ಆಡಳಿತ ಪಕ್ಷ, ವಿರೋಧ ಪಕ್ಷದವರು ಮಾತನಾಡುವ ಸಮಯದಲ್ಲಿ 3–4 ಜನ ಹಿರಿಯರು, treasury bench ನಲ್ಲಿರುವ ಹಿರಿಯರು ಈ ರೀತಿ ಅನಾವಶ್ಯಕವಾಗಿ ಪ್ರಶ್ನೆ ಮಾಡುವುದು ಅದಕ್ಕೆ ಸಂಬಂಧವೇ ಇರುವುದಿಲ್ಲ. There was no connection for it. ಅನಾವಶ್ಯಕವಾಗಿ interfere ಆಗಿ ಸಮಯ ಹಾಳು ಮಾಡುತ್ತಾರೆ. ಅದರಲ್ಲೂ he is the highest person. ನಮಗೆ ನೋವಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ಯಾರು ಯಾವಾಗ interfere ಆಗುತ್ತಾರೆ, ಸದನ ಸಮಯ ಹಾಳಾಗುತ್ತದೆ ಎನ್ನುವ ಬಗ್ಗೆ ಹೇಳಬೇಡಿ. ನೀವು ವಿಷಯದ ಬಗ್ಗೆ ಮಾತನಾಡಿ, ನಮ್ಮದು ತಕರಾರಿಲ್ಲ.

(ಗೊಂದಲ)

ಶ್ರೀ ಕಿಮ್ಮನೆ ರತ್ನಾಕರ್: ನಿಮ್ಮ ಹತ್ತಿರ ಪಾಠ ಕಲಿಯಬೇಕಾದ ಅಗತ್ಯ ನನಗಿಲ್ಲ. Let him answer it.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನೀವು ವಿಷಯದ ಬಗ್ಗೆ ಮಾತನಾಡಿದರೆ ನಮ್ಮ ತಕರಾರು ಇಲ್ಲ. ಎಲ್ಲರೂ interfere ಆಗುತ್ತಾರೆಂದರೆ ಅರ್ಥವೇನು?

(ಗೊಂದಲ)

ಶ್ರೀ ಕಿಮ್ಮನೆ ರತ್ನಾಕರ್: ನೀವು ಕಡತ ತೆಗೆದು ನೋಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಅವರು ಮಾತನಾಡುವುದಕ್ಕೆ ಅವರಿಗೆ ಅಧಿಕಾರವಿದೆ. ಅವರು ಮಾತನಾಡುತ್ತಾರೆ. ಯಾವಾಗ ಮಾತನಾಡಬೇಕೆಂಬುದು ಅವರಿಗೆ ಗೊತ್ತಿದೆ, ಅವರು ನಿಮ್ಮಿಂದ ಪಾಠ ಕಲಿಯಬೇಕೆ?

(ಗೊಂದಲ)

ಶ್ರೀ ಎನ್. ಸಂಪಂಗಿ: Real Estate ದಂಧೆ ಮಾಡುತ್ತಾರೆಂದು ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಅವರು ನನಗೆ ಬುದ್ಧಿವಾದ ಹೇಳುವುದಕ್ಕೆ ಬಂದಿದ್ದಾರೆ. ಮೊದಲು ಸರಿಯಾಗಿ ಮಾತನಾಡುವುದನ್ನು ಕಲಿಯಿರಿ. ಸ್ವಲ್ಪ ಅನುಭವ ಆಗಲಿ, ಗೊತ್ತಾಗುತ್ತದೆ.

(ಗೊಂದಲ)

ಅಧ್ಯಕ್ಷರು: ನಾಯ್ಡುರವರೆ, address to me. ನನಗೆ address ಮಾಡಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಎಲ್ಲಾ ಸದಸ್ಯರನ್ನು ಉದ್ದೇಶಿಸಿ ಹೇಳಲಿಲ್ಲ. ಸನ್ಮಾನ್ಯ ರೇವಣ್ಣನವರು, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಮಾತನಾಡುವಾಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. KIADB ವಿಚಾರವನ್ನು ಪ್ರಸ್ತಾಪ ಮಾಡುವಾಗ ಕೆಲವು ಉಲ್ಲೇಖ ಮಾಡಿದ ಸಂದರ್ಭದಲ್ಲಿ International Airport ವಿಚಾರವನ್ನು ಪ್ರಸ್ತಾಪಿಸಿದರು. ಅದರ ಬಗ್ಗೆ ನಾನು ಉಲ್ಲೇಖ ಮಾಡುತ್ತಾ ಹೇಳಿದಾಗ, ಅವರು ಆಗ ವಿಚಾರವನ್ನು Real Estateಗೆ ತಿರುಗಿಸಿದರು. ಆಗ ನಾನು ಆ ಕಡೆಯ ಕೆಲವರು ಇದ್ದಾರೆ, ಈ ಕಡೆಯ ಕೆಲವರಿದ್ದಾರೆ ಎಂದು ಹೇಳಿದೆ. ಹಾಗಿದ್ದರೆ, ರೇವಣ್ಣನವರು ಇದು CBI ತನಿಖೆ ಆಗಲಿ ಎಂದು ಹೇಳಿದರು. ಆಗುವುದು ಆಗಲಿ ಎಂದು ನಾನು ಹೇಳಿದೆ. ಇಷ್ಟೆ ನಾನು ಹೇಳಿದ್ದು, ನಾನು ಎಲ್ಲರನ್ನೂ ಕುರಿತು ಮಾತನಾಡಿಲ್ಲ. ಕೃಷ್ಣ ಬೈರೇಗೌಡರು ಹೀಗೆ ಮಾಡುತ್ತಿದ್ದಾರೆಂದು ನಾನು ಹೇಳಲಿಲ್ಲ. ಎಲ್ಲಾ ಸದಸ್ಯರಿಗೂ ಅನ್ವಯವಾಗುವಂತೆ ಹೇಳಲಿಲ್ಲ. ಆದರೆ, ಕೆಲವರು ಮಾಡಿದ್ದಾರೆಂದು ಹೇಳಿದ್ದು ನಿಜ. ಅದರಲ್ಲಿ ಏನೂ ಅನುಮಾನವಿಲ್ಲ. ನಾನು ಕೆಲವರು ಎಂದು ಹೇಳಿದ್ದೇನೆ. ಕೆಲವರು ಯಾರು ಎಂದು ಸಿದ್ದರಾಮಯ್ಯನವರಿಗೆ ಗೊತ್ತು ಎಂದೂ ಹೇಳಿದ್ದೇನೆ. ಹಾಗಾಗಿ, ಬೇರೆ ಸದಸ್ಯರಿಗೆ ಏನಾದರೂ ನೋವಾಗಿದ್ದರೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಅವರು ನೋವು ಪಟ್ಟುಕೊಳ್ಳುವುದು ಬೇಡ.

ಶ್ರೀ ಹೆಚ್.ಡಿ. ರೇವಣ್ಣ: CBIಗೆ ಒಪ್ಪಿಸುವ ವಿಷಯ ಹೇಳಿ.

ಅಧ್ಯಕ್ಷರು: CBI ವಿಷಯ ಮುಗಿಯಿತು. ಅವರು ಹೇಳಿದರು. ಆ ವಿಷಯ ಮುಗಿಯಿತು. ಈಗ ಈ subject ಅನ್ನು close ಮಾಡೋಣ. ಮಾನ್ಯ ವಿರೋಧ ಪಕ್ಷದ ನಾಯಕರೆ, continue ಮಾಡಿ.

ಶ್ರೀ ಡಿ.ಎನ್. ಜೀವರಾಜ್: ರೇವಣ್ಣನವರು ಎಲ್ಲಾ ವಿಷಯಕ್ಕೂ interfere ಆಗದಿದ್ದ ಹಾಗೆ ಮಾಡಬೇಕಲ್ಲಾ? ನೀವು ಬಹಳ senior Member ಆಗಿದ್ದೀರಿ. ನೀವು ಎಲ್ಲಾ ವಿಷಯಕ್ಕೆ interfere ಆದರೆ ಚೆನ್ನಾಗಿರುವುದಿಲ್ಲ. ಯಾವುದೇ

ಸಂದರ್ಭದಲ್ಲಿ ರೇವಣ್ಣ ಏಳಬಾರದು, ಅವರು ನಮಗೆಲ್ಲ ಮಾರ್ಗದರ್ಶಕರು ಆಗಬೇಕು.

ಶ್ರೀ ವೆಂಕಟರಾವ್ ನಾಡಗೌಡ: ನೀವು ಸುಮ್ಮ ಸುಮ್ಮನೆ ರೇವಣ್ಣನವರು ಎಂದು ಹೇಳುತ್ತೀರಿ, ಆಗ ಅವರು ಎದ್ದು ಮಾತನಾಡಬೇಕಾಗುತ್ತದೆ. ನೀವು ಅವರ ಹೆಸರು ಪ್ರಸ್ತಾಪ ಮಾಡದಿದ್ದರೆ ಆಗ ಅವರು ಮಾತನಾಡುವುದಿಲ್ಲ.

ಶ್ರೀ ಡಿ.ಎನ್. ಜೀವರಾಜ್: ರೇವಣ್ಣನವರ seniority ಇಲ್ಲಿರುವವರಿಗೆಲ್ಲ ಮಾರ್ಗದರ್ಶನವಾಗಬೇಕು. ರೇವಣ್ಣನಂಥವರು ಎಲ್ಲದಕ್ಕೂ ಎದ್ದು ನಿಂತು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ರೇವಣ್ಣನವರು ಎದ್ದು ನಿಂತುಕೊಂಡ ಹಾಗೆ ನಿಲ್ಲಬೇಡ ಎಂದು ಹೇಳುವುದಕ್ಕೆ ಶುರು ಮಾಡುತ್ತಾರೆ. ರೇವಣ್ಣನವರು ಯಾವಾಗಲೂ ಒಂದು ಸಾರಿ ಭಾಷಣ ಪ್ರಾರಂಭ ಮಾಡಿದರೆ ಎಲ್ಲರೂ ಆಲಿಸುವ ಹಾಗೆ ಇರಬೇಕೆಂದು ಹೇಳುತ್ತಿದ್ದೇನೆ. ರೇವಣ್ಣನವರ ಬಗ್ಗೆ ನಮಗೆಲ್ಲ ಬಹಳ ಗೌರವವಿದೆ. ಅದರು ಹಿರಿಯರು. ನಿಮ್ಮನ್ನು ನಾವು follow ಮಾಡುತ್ತೇವೆ. ನೀವು ಪದೇ ಪದೇ ಏಳಬಾರದೆಂಬುದು ನನ್ನ ಸಲಹೆ.

ಶ್ರೀ ಸಿದ್ದರಾಮಯ್ಯ: ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ವಿಷಾದ ವ್ಯಕ್ತಪಡಿಸಿದ್ದಾರೆ. ಈ ವಿಷಯವನ್ನು ಇಲ್ಲಿಗೇ ಬಿಡೋಣ. ಇಲ್ಲಿ ಬಹಳ ಜನ ಸದಸ್ಯರು ಪ್ರಾಮಾಣಿಕರಿದ್ದಾರೆ. ಆ ಕಡೆಯೂ ಪ್ರಾಮಾಣಿಕರಿದ್ದಾರೆ. ಇಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲರೂ ಭ್ರಷ್ಟರೆಂದು ನಾನು ಹೇಳುವುದಿಲ್ಲ. ಎಲ್ಲರೂ ಪ್ರಾಮಾಣಿಕರೆಂದು ಹೇಳುವುದೂ ಕಷ್ಟವಾಗುತ್ತದೆ. ಆದರೆ, ಮಂತ್ರಿಗಳು ಮಾತನಾಡುವಾಗ ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. Any way ಅವರು ಈಗ ವಿಷಾದ ವ್ಯಕ್ತಪಡಿಸಿದ್ದಾರೆ. ಬಹಳ ಜನ ಪ್ರಾಮಾಣಿಕ ಸದಸ್ಯರಿಗೆಲ್ಲ ಅವರ ಮಾತಿನಿಂದ ನೋವಾಗುತ್ತದೆ. ಸಾರ್ವಜನಿಕವಾಗಿ ಸಾರಾಸಗಟಾಗಿ ಹೇಳಿದರೆ ಎಲ್ಲಾ MLAಗಳೂ ಭ್ರಷ್ಟರೆಂದು ಜನರು ತಪ್ಪು ತಿಳಿದುಕೊಳ್ಳುತ್ತಾರೆ. ಆ ರೀತಿ ಹೇಳಬಾರದು. ಅದು ಸರಿಯಾದುದಲ್ಲ. ಇವರು ಒಂದು ಕಡೆ ನಂಜುಂಡಪ್ಪ ವರದಿಯ ಪ್ರಕಾರ Regional Imbalance ತೆಗೆಯಬೇಕೆಂದು ಹೇಳುತ್ತಾರೆ. ಇನ್ನೊಂದು ಕಡೆ regional imbalance ಸರಿಪಡಿಸಲಿಕ್ಕೆ ಎಲ್ಲಾ ಪ್ರಯತ್ನ

ಮಾಡುತ್ತೇವೆಂದು ಹೇಳುತ್ತಾರೆ. ಎಲ್ಲಾ ರೀತಿಯಿಂದ ಇವರ actionಗಳ ಮೂಲಕ ಮಾಡುತ್ತಾರೆ. I want to know. ಈ ಸದನದ ಮುಂದಿಡಲಿ. ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ನಂಜುಂಡಪ್ಪ ವರದಿಯಲ್ಲಿ ಹೇಳಿರುವ 114 ತಾಲ್ಲೂಕು ಬಿಟ್ಟು ಬೇರೆಯವರಿಗೆ ವಿಶೇಷ ಅನುದಾನವನ್ನು ಎಷ್ಟು ಕೊಟ್ಟಿದ್ದಾರೆ? ನಂಜುಂಡಪ್ಪನವರ ವರದಿಯಲ್ಲಿ ಬಾರದೇ ಇರುವ ತಾಲ್ಲೂಕುಗಳಿಗೆ ಎಷ್ಟು ಹಣ ಹೆಚ್ಚಾಗಿ ಕೊಟ್ಟಿದ್ದಾರೆ? ಈ ಕಡೆಯವರಿಗೆ ಏಕೆ ಕೊಡಲಿಲ್ಲ? ಇದನ್ನು ಕೂಡ ಇಟ್ಟರೆ ಒಳ್ಳೆಯದು. ಇಲ್ಲದೆ ಹೋದರೆ ಇವರು ನಂಜುಂಡಪ್ಪನವರ ವರದಿ ಎಂದು ಅವರ ಹೆಸರು ಮಾತ್ರ ಹೇಳುವುದು, ಅಲ್ಲಿ ಗುಲ್ಬರ್ಗಾಕ್ಕೆ ಹೋಗಿ ಕ್ಯಾಬಿನೆಟ್ ಮೀಟಿಂಗ್ ಮಾಡಿ ಮೂಗಿಗೆ ತುಪ್ಪ ಹಚ್ಚುವುದು, 220 ಹಳ್ಳಿಗಳನ್ನು ಸುವರ್ಣ ಗ್ರಾಮವನ್ನಾಗಿ ಮಾಡುತ್ತೇವೆಂದು ಹೇಳುವುದು, ಅದರಲ್ಲಿ ಒಂದು ಹಳ್ಳಿಯನ್ನೂ ತೆಗೆದುಕೊಳ್ಳುವುದಿಲ್ಲ. ನಂಜುಂಡಪ್ಪನವರ ವರದಿ ಜಾರಿ ಮಾಡುತ್ತೇವೆಂದು ಹೇಳುವುದು. ಆದರೆ ಅಲ್ಲಿಗೆ ಒಂದು ರೂಪಾಯಿ ಕೊಡುವುದಿಲ್ಲ. ಈ ತರಹ ಆಗುತ್ತದೆ. ಇದರಿಂದಾಗಿ inbalance further widen ಆಗುತ್ತದೆ. ದೊಡ್ಡ ವೈಡನಿಂಗ್‌ಗೆ ಇವರೇ ಕಾರಣರಾಗುತ್ತಾರೆ. ಈಗ ಶಿಕಾರಿಪುರ, it is not coming under most backward area. ಅಲ್ಲಿಗೆ ಎಲ್ಲಾ ದುಡ್ಡು ತೆಗೆದುಕೊಂಡು ಹೋಗಿ ಹಾಕಿದರೆ, ಇವರು ಗ್ಯಾಪ್ ಹೇಗೆ ಫಿಲ್‌ಅಪ್ ಮಾಡುತ್ತಾರೆ? ಹೇಳುವುದು ಮತ್ತು ಕೃತಿ ಇವೆರಡು ಒಂದಕ್ಕೊಂದು ಸಂಬಂಧ ಇರಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ತರಹ ತಾರತಮ್ಯ ಮಾಡುವುದನ್ನು ನಿಲ್ಲಿಸಬೇಕೆಂದು ನನ್ನ ಸೂಚನೆ. ಏಕೆಂದರೆ, ಹಳ್ಳಿಗಳ ಅಭಿವೃದ್ಧಿಯ ಜೊತೆಗೆ ಇವೆಲ್ಲಾ ಆಗಬೇಕಾಗುತ್ತದೆ. ನಮ್ಮ ಕಾರಜೋಳರವರು ಎಲ್ಲಿಗೆ ಹೊರಟು ಹೋದರು? ಪಾಪ! ಅವರು ಮೈನರ್ ಇರಿಗೇಷನ್‌ಗೆ ನಾವು ಕೆರೆ ಕಟ್ಟೆಗಳನ್ನು ಮಾಡಲಿಕ್ಕೆ ಬದ್ಧವಾಗಿದ್ದೇವೆ. ಎಷ್ಟು ದುಡ್ಡು ಬೇಕಾದರೂ ಕೊಡುತ್ತೇವೆಂದು ಹೇಳಿದರು ಕಳೆದ ವರ್ಷ ಕೊಟ್ಟಿರುವ ದುಡ್ಡನ್ನೇ ಇವರು ಬಿಡುಗಡೆ ಮಾಡಿಲ್ಲ. ಈ ವರ್ಷ ಕೊಟ್ಟಿರುವ ದುಡ್ಡನ್ನು ಕೂಡ ಅದರಲ್ಲಿ ಎಲ್ಲಾ ಕಡಿಮೆ ಮಾಡಿಟ್ಟಿದ್ದಾರೆ. ರಿವೈಸ್ಡ್ ಎಸ್ಟಿಮೇಟ್ ಮಾಡಿ ಮಾಡಿ ಕಡಿಮೆ

ಮಾಡಿಟ್ಟಿದ್ದಾರೆ. ಹೀಗಿರುವಾಗ ಕೆರೆ ಕಟ್ಟೆಗಳನ್ನು ಇವರು ಹೇಗೆ ಡಿಸಿಲ್ಟ್ ಮಾಡುವುದು? ಅದಕ್ಕೆ ನೀರು ಬರುವ ರೀತಿ ಮಾಡುವುದು, ಅದಕ್ಕೆ ಕೆನಾಲ್‌ಗಳನ್ನು ಮಾಡುವುದು, ಆ ಮೂಲಕ ಅಂತರ್ಜಲವನ್ನು ಹೆಚ್ಚು ಮಾಡುವುದು, ಇವು ಯಾವುದೂ ಕೂಡ ಆಗುತ್ತಿಲ್ಲ. ಏನಾದರೂ ಹೇಳಲಿ, ಅದನ್ನು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗೆ ನಮ್ಮ ಎಲ್ಲಾ ಸದಸ್ಯರು ಕೂಡ ಬಹಳ ಮೇಜು ಕುಟ್ಟಿ ಸಂತೋಷ ವ್ಯಕ್ತಪಡಿಸಿದ್ದಾರೆ. ಒಬ್ಬ ಶಾಸಕರಿಗೆ ಅವರ ಮತಕ್ಷೇತ್ರಕ್ಕೆ 50 ಕಿ.ಮೀ.ಗೆ ಅದನ್ನು PMGSYನಲ್ಲಿ ಹೇಳಿದ್ದಾರೋ, ಇಲ್ಲಾ ಅಡಿಷನಲ್ಲಾಗಿ ಹೇಳಿದ್ದಾರೋ ತಿಳಿಸಬೇಕು. PMGSY ಅದು ಪೂರಾ ಕೇಂದ್ರ ಸರ್ಕಾರದ ದುಡ್ಡು. ಅಡಿಷನಲ್ಲಾಗಿ ಕೊಟ್ಟಿದ್ದಾರೇನಮ್ಮಾ?

ಕು: ಶೋಭಾ ಕರಂದ್ಲಾಜೆ: Annuity ಬೇಸಿಸ್ ಮೇಲೆ ಕೊಡಲಾಗುವುದು.

ಅಧ್ಯಕ್ಷರು: Annuity ಬೇಸಿಸ್ ಮೇಲೆ ಕೊಡಲಾಗುವುದು ಎಂದು ಅದರಲ್ಲಿ ಬರೆದಿದ್ದಾರಂತೆ.

ಶ್ರೀ ಸಿದ್ದರಾಮಯ್ಯ: ಉತ್ತರ ಹೇಳುವಾಗ ಅವರು ಹೇಳಲಿ. ಏನಾಗಿದೆ ಎಂದರೆ, 50 ಕಿ.ಮೀ. ಪ್ರತಿ ಮತಕ್ಷೇತ್ರದಲ್ಲಿ ಕೊಡುತ್ತೇವೆಂದರೆ ಕನಿಷ್ಠ 20 ರಿಂದ 25 ಕೋಟಿ ರೂಪಾಯಿ ಬೇಕು. 200 ಮತಕ್ಷೇತ್ರಗಳಿಗೂ ಕೊಟ್ಟರೆ ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿ ಬೇಕು. ಕನಿಷ್ಠ ನಾಲ್ಕು ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಈಗ ನೀವು ಘೋಷಣೆ ಮಾಡುವುದು ಸುಲಭ. ಅದರಲ್ಲಿ ನೀವು ಹೇಳುವಾಗ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಎಲ್ಲಿಂದ ಕೊಡುತ್ತೇವೆಂದು ಹೇಳಬೇಕಲ್ಲವೆ? How is it backed up by grants?

ಶ್ರೀ ಹೆಚ್.ಸಿ. ಬಾಲಕೃಷ್ಣ: Annuity ಬೇಸಿಸ್ ಮೇಲೆ ಎಂದರೆ ಏನು?

ಶ್ರೀ ಸಿದ್ದರಾಮಯ್ಯ: Annuity ಎಂದರೆ ಏನು?

ಶ್ರೀ ಬಸವರಾಜ ಬೊಮ್ಮಾಯಿ: ಈಗ private participationನಲ್ಲಿ ಮೂರು ನಾಲ್ಕು ತರಹ ಇರುವುದು ತಮಗೆಲ್ಲ ಗೊತ್ತಿದೆ.

ಅಧ್ಯಕ್ಷರು: ಮೊದಲ ಪುಟದಲ್ಲಿ ಎರಡನೇ ಐಟಂ: ಗ್ರಾಮೀಣ ರಸ್ತೆ, ಇದರಲ್ಲಿ ಕೊಟ್ಟಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ರೇವಣ್ಣನವರಿಗೆ ಗೊತ್ತಿದೆ. ಒಂದು PP System, Boot system ಇವೆಲ್ಲದರ ಜೊತೆಗೆ Annuity System ಕೂಡ ಇದೆ.

ಶ್ರೀ ಹೆಚ್.ಡಿ. ರೇವಣ್ಣ: ಪತ್ರಿಕೆಯಲ್ಲಿ ಕೊಟ್ಟ ಮೇಲೆ ಈ Annuity ಬೇಸಿಸ್ ಮೇಲೆ ಎಷ್ಟು ಬಂದಿವೆ? ಹತ್ತು ಸಾವಿರ ಕಿ.ಮೀ. ರಸ್ತೆ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. Annuity ಬೇಸಿಸ್ ಮೇಲೆ ಎಂದರೇನು?

ಅಧ್ಯಕ್ಷರು: ಅವರು ಹೇಳುತ್ತಾರೆ, ಸ್ವಲ್ಪ ತಾಳಿ.

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನೇ ಹೇಳುತ್ತಿದ್ದೇನೆ. ಈಗ private participationನಲ್ಲಿ Boot system, private participation, joint venture ಜೊತೆಗೆ annuity ಎಂದು ಈಗ Government of India ದಿಂದ ಹಿಡಿದು ಎಲ್ಲಾ ಸರ್ಕಾರಗಳು annuity ಮಾಡುತ್ತಿವೆ. ನನಗೆ 60 ಸೆಕೆಂಡ್ಸ್ ಟೈಮ್ ಕೊಟ್ಟರೆ ಹೇಳುತ್ತೇನೆ. ಈ private participation ನಲ್ಲಿ ಬೇರೆ ಬೇರೆ ಫಾರಂದಲ್ಲಿ ಹೊಸದಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು annuity ಮೇಲೆ ಮಾಡುತ್ತವೆ. ಅಂದರೆ ಉದಾಹರಣೆ ಹೇಳುವುದಾದರೆ, ಎರಡು ವರ್ಷದಲ್ಲಿ ಹತ್ತು ಸಾವಿರ ಕಿ.ಮೀ.ಗೆ ನಾಲ್ಕು ಸಾವಿರ ಕೋಟಿ ರೂಪಾಯಿ ಬೇಕು. ಇದನ್ನು ಸುಮಾರು 20 ರಿಂದ 30 ಜನ ಕಂಟ್ರಾಕ್ಟ್ ತೆಗೆದುಕೊಂಡಿದ್ದಾರೆಂದು ಇಟ್ಟುಕೊಳ್ಳಿ. ಅವರೇ ಬಂಡವಾಳ ಹಾಕಬೇಕು. ಅವರೇ ರಸ್ತೆಗಳನ್ನು ಮಾಡಬೇಕು.

ಶ್ರೀ ಕೆ. ಅಭಯಚಂದ್ರ ಜೈನ್: ಗ್ರಾಮೀಣ ಭಾಗದ ರಸ್ತೆಗಳನ್ನು ಮಾಡುವುದಕ್ಕೆ ಯಾರೂ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಏನು ಹೇಳುತ್ತಾರೆ ಮೊದಲು ಕೇಳಿ.

ಶ್ರೀ ಸಿ.ಎಸ್. ಪುಟ್ಟೇಗೌಡ: ಮುಖ್ಯರಸ್ತೆಗಳಿಗೆ ಯಾರೂ ಬರುವುದಿಲ್ಲ. ಹೀಗಿರುವಾಗ ಹಳ್ಳಿಗಳ ರಸ್ತೆಗಳಿಗೆ ಯಾರು ಬರುತ್ತಾರೆ?

ಅಧ್ಯಕ್ಷರು: ಪುಟ್ಟೇಗೌಡರವರೆ, ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ಬಿ. ರಮಾನಾಥ ರೈ: ಪಟ್ಟಣ ರಸ್ತೆಗಳಿಗೆ ಬರುವುದಿಲ್ಲ. ಹಳ್ಳಿಗಳ ರಸ್ತೆಗೆ ಯಾರು ಬರುತ್ತಾರೆ?

ಶ್ರೀ ಅಮರೇಗೌಡ ಬಯ್ಯಾಪುರ: ಗ್ರಾಮೀಣ ರಸ್ತೆಗಳನ್ನು ಯಾರು ಕೇಳುತ್ತಾರೆ?

ಅಧ್ಯಕ್ಷರು: ಅವರು ಉತ್ತರ ಮುಗಿಸಲಿ, ನಂತರ ನೀವು ಹೇಳಿ. ಬಾಲಕೃಷ್ಣರವರೆ, ಕುಳಿತುಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ: ಯಾವುದಾದರೂ ಪ್ರಾಜೆಕ್ಟ್‌ನ್ನು annuity ಬೇಸಿಸ್ ಮೇಲೆ ಕೊಟ್ಟ ಮೇಲೆ ಐದು ವರ್ಷದಲ್ಲಿ repayment ಎಂದು ಇರುತ್ತದೆ. ಪ್ರತಿ ವರ್ಷ 1/5th of amount ಅವರಿಗೆ ನಾವು ಕೊಡುತ್ತೇವೆ. ಒಂದು ಕೋಟಿ ರೂಪಾಯಿಯ ಕಂಟ್ರಾಕ್ಟ್‌ನ್ನು annuity ಮೇಲೆ ಕೊಟ್ಟರು ಎಂದು ಇಟ್ಟುಕೊಳ್ಳಿ. ಅದು ಐದು ವರ್ಷದಲ್ಲಿ repayment ಆಗುತ್ತದೆ ಎಂದು agreement. ಅದರಲ್ಲಿ ಪ್ರತಿ ವರ್ಷ 1/5th amount ಅನ್ನು ಆ ಕಂಟ್ರಾಕ್ಟ್‌ದಾರರಿಗೆ ಕೊಡುತ್ತೇವೆ. ಉದಾಹರಣೆಗೆ ಹೇಳುವುದಾದರೆ, ಒಂದು ಸಾವಿರ ಕೋಟಿ ರೂಪಾಯಿ ರಸ್ತೆಗೆ ಕೊಟ್ಟರೆ ಐದು ವರ್ಷ repayment ಇರುತ್ತದೆ, ಒಂದೇ ವರ್ಷಕ್ಕೆ ಅಷ್ಟು ಕೊಡುವುದಿಲ್ಲ. ಆದರೆ 1/5th of amount ಅಂದರೆ 100 ಕೋಟಿ ಇದ್ದರೆ ಅದರ 1/5th of amount ಎಂದರೆ 20 ಕೋಟಿ ಈ ವರ್ಷ ಕೊಡುತ್ತೇವೆ. ಅದರ ಮುಂದಿನ ವರ್ಷ 20 ಕೋಟಿ ಕೊಡುತ್ತೇವೆ. ಆ ತರಹ ಇರುವುದರಿಂದ ಇದು ಖಂಡಿತವಾಗಿ ಫೀಸಿಬಲ್ ಇದೆ, ಆಗುತ್ತದೆ. ನೀವು ಎಲ್ಲರೂ ಕೂಡ actually ಮೆಚ್ಚುಗೆ ವ್ಯಕ್ತಪಡಿಸಬೇಕು. 50 ಕಿ.ಮೀ. PMGSY ಅಲ್ಲದೆ ಇತರೆ ಕಾರ್ಯಕ್ರಮ ಅಲ್ಲದೆ rural roads ಗೆ 50 ಕಿ.ಮೀ. ನಿಮಗೆ ಸರ್ಕಾರ ಘೋಷಣೆ ಮಾಡಿದ್ದಕ್ಕೆ ನೀವು ಎಲ್ಲರೂ ಸರ್ಕಾರವನ್ನು ಅಭಿನಂದಿಸಬೇಕು.

ಶ್ರೀ ಅಮರೇಗೌಡ ಬಯ್ಯಾಪುರ: ನೋಡಿ ಇದರಲ್ಲಿ ನೀವು ಹತ್ತು ಕಿ.ಮೀ. ಇಂಪ್ಲಿಮೆಂಟ್ ಮಾಡಿದರೆ ನಾವು ಶರಣಾಗತರಾಗುತ್ತೇವೆ. ಹಳ್ಳಿಯಲ್ಲಿ ಹತ್ತು ಕಿ.ಮೀ. ಮಾಡುವುದಕ್ಕೆ ಯಾರು ಬರುತ್ತಾರೆ?

ಶ್ರೀ ಬಸವರಾಜ ಬೊಮ್ಮಾಯಿ: ಈ ಯೋಜನೆಯ ಬಗ್ಗೆ ಹಣಕಾಸಿನ ಇಲಾಖೆಯ ಜೊತೆಗೆ ಸಮಗ್ರವಾಗಿ ಚರ್ಚೆ ಮಾಡಿ ಈ ವರ್ಷ DPR ರೆಡಿ ಮಾಡಿ ಇದೇ ವರ್ಷ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿ ಖಂಡಿತವಾಗಿ ಪೂರ್ಣ ಮಾಡುತ್ತೇವೆ. ಆಗ ನೀವು ಶರಣಾಗತರಾಗುವಿರಂತೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಮಾಡುವುದಾಗಿದ್ದರೆ ಖಂಡಿತವಾಗಿ ನಾವು ವೆಲ್‌ಕಂ ಮಾಡುತ್ತೇವೆ. ಆಗದೇ ಇದ್ದರೆ ಏನು ಮಾಡುವುದು?

ಶ್ರೀ ಬಸವರಾಜ ಬೊಮ್ಮಾಯಿ: ಎರಡು ವರ್ಷದಲ್ಲಿ 200 ಕ್ಷೇತ್ರದಲ್ಲಿ 50 ಕಿ.ಮೀ. ಎಲ್ಲಾ ಯೋಜನೆಗಳನ್ನು ಹೊರತುಪಡಿಸಿ ಇವತ್ತು rural roadsನ್ನು ಮಾಡುವುದಕ್ಕೆ ತೀರ್ಮಾನಿಸಿದ್ದೇವೆ. ಅದನ್ನು ಖಂಡಿತವಾಗಿ ಮಾಡುತ್ತೇವೆ.

ಶ್ರೀ ಅಮರೇಗೌಡ ಬಯ್ಯಾಪುರ: ಆಗಲಾರದ್ದನ್ನು ಮಾಡುವುದಕ್ಕೆ ಹೊರಟಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ: ಆಗಲಾರದನ್ನು ಮಾಡುವುದಕ್ಕೆ ಜನ ಇಲ್ಲಿ ತಂದು ನಮ್ಮನ್ನು ಕೂರಿಸಿರುವುದು. ಅದನ್ನು ನಾವು ಮಾಡುತ್ತೇವೆ.

ಶ್ರೀ ಅಮರೇಗೌಡ ಬಯ್ಯಾಪುರ: ಜನರಿಗೆ ಬರೀ ನೀವು ಸುಳ್ಳು ಹೇಳುತ್ತಿದ್ದಿರಿ.

ಶ್ರೀ ಬಸವರಾಜ ಬೊಮ್ಮಾಯಿ: ಸುಳ್ಳಲ್ಲ ಖಂಡಿತವಾಗಿ ನಾವು ಎರಡು ವರ್ಷದಲ್ಲಿ ಮಾಡುತ್ತೇವೆ. ಖಂಡಿತವಾಗಿ ಮಾಡುತ್ತೇವೆ.

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ: ಇದರಲ್ಲಿ ಬಹಳ ಸ್ಪಷ್ಟವಾಗಿ ನೀವು annuity ಬೇಸಿಸ್ ಎಂದು ಹೇಳಿ ನಂತರ ಕನ್ನಡದಲ್ಲಿಯೂ ಕೂಡ ನೀವು ತರ್ಜುಮೆ ಮಾಡಿಸಿದಿರಿ. ವಾರ್ಷಿಕ ಪಾವತಿಯ fixed sum of amount

which is going to be allocated for completion of 50 k.m. per year. ಎಂದು ಹೇಳಿದ ಹಾಗೆ ಆಯಿತು. ಪ್ರತಿ ವರ್ಷ 50 ಕಿ.ಮೀ. ಎಂದರೆ...

ಶ್ರೀ ಬಸವರಾಜ ಬೊಮ್ಮಾಯಿ: ಪ್ರತಿ ವರ್ಷ ಅಲ್ಲಾರಿ, ಎರಡು ವರ್ಷದಲ್ಲಿ 50 ಕಿ.ಮೀ.

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ: Fixed sum of amount for that year ಎಂದರೆ, ನೀವೇ ಹೇಳಿದಿರಿ, ಅದನ್ನು ಸ್ವಲ್ಪ ಬದಲಾವಣೆ ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ: ನಾವು ಹೇಳಿದ್ದು ಸ್ವಲ್ಪ ತಿಳಿದುಕೊಳ್ಳಿ. ಎರಡು ವರ್ಷದಲ್ಲಿ 50 ಕಿ.ಮೀ. ರಸ್ತೆ ಮಾಡುತ್ತೇವೆ. ಈ contractದು ಐದು ವರ್ಷ repayment period ಇರುತ್ತದೆ. This contractual repayment period is 5 years.

ಶ್ರೀ ಯು.ಟಿ. ಖಾದರ್: ಮುಖ್ಯಮಂತ್ರಿಗಳ statementನಲ್ಲಿ ಇದೆ.

ಶ್ರೀ ಬಸವರಾಜ ಬೊಮ್ಮಾಯಿ: Repayment period is five years. Repaymentಗೆ 1/5th ಎಂದು ನಾನು ಹೇಳಿದ್ದೆನಲ್ಲ?

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ: ನೀವು ಅದನ್ನು ಹೇಳಲಿಲ್ಲ. ಬೇಕಾದರೆ ತಮಗೆ ಡಿಕ್ಷನರಿ ಕಳುಹಿಸಿ ಕೊಡುತ್ತೇನೆ. ತಾವು ಓದಿ ನೋಡಿ.

ಶ್ರೀ ಬಸವರಾಜ ಬೊಮ್ಮಾಯಿ: ಓದಿದ್ದೇನೆ ಬಿಡಿ, ಓದಿ ಈ ಕಡೆ ಬಂದಿರುವುದು.

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ: 50 ಕಿ.ಮೀ. ಪ್ರತಿ ವರ್ಷ ಎನ್ನುವ ಅರ್ಥದಲ್ಲಿ ಹೇಳುತ್ತಿದ್ದೀರಿ. ಐದು ವರ್ಷದ ಪ್ರೋಗ್ರಾಮ್ ಎಂದು ಹೇಳುತ್ತಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ತಾವು ಸರಿಯಾಗಿ ಓದಿ. ಎರಡು ವರ್ಷದಲ್ಲಿ ಒಂದು ಕ್ಷೇತ್ರದಲ್ಲಿ 50 ಕಿ.ಮೀ. ಎಂದು ನಮ್ಮ ಕಮಿಟ್‌ಮೆಂಟ್ ಇದೆ.

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ: ಹಾಗಾದರೆ ಸದನಕ್ಕೆ ಹೇಳಿಬಿಡಿ.

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನೇ ಹೇಳಿರುವುದು. ಅದನ್ನು ಬರೆದು ಕೊಟ್ಟಿರುವುದು. ನೀವು ತಿಳಿದುಕೊಳ್ಳಲಿಲ್ಲ ಎಂದರೆ ನಾನೇನು ಮಾಡಲಿ?

ಅಧ್ಯಕ್ಷರು: ಹೋಗಲಿ ಬಿಡಿ, ನೀವು ಮುಂದುವರೆಸಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, PWD ಮಿನಿಸ್ಟರ್ ಆಗಿರುವ ಮಾನ್ಯ ಉದಾಸಿಯವರು ಈಗಾಗಲೇ 10 ಸಾವಿರ ಕಿ.ಮೀ. ಜಿಲ್ಲಾ ಮತ್ತು ತಾಲ್ಲೂಕು ರಸ್ತೆಗಳ ಕೆಲಸವನ್ನು ಆನ್ಯುಯಟಿ ಮೇಲೆ ಕರೆದಿದ್ದಾರೆ. ಇದರಲ್ಲಿ ಹಳ್ಳಿಗಳ ರಸ್ತೆಗಳು ಎಷ್ಟಿವೆ ಎಂದು ಹೇಳಿ. ಎಂ.ಡಿ.ಆರ್. ಮತ್ತು ಸ್ಟೇಟ್ ಹೈವೇ ರಸ್ತೆಗಳನ್ನು ಆನ್ಯುಯಿಟಿ ಮೇಲೆ ಕರೆದಿದ್ದಾರೆ. ಅದರಲ್ಲಿ ಎಷ್ಟು ಬಂದಿದೆ ಹೇಳಿ?

ಶ್ರೀ ಬಸವರಾಜ ಬೊಮ್ಮಾಯಿ: PWD ಯಲ್ಲಿ private participation ಮೇಲೆ ಕರೆಯಲಾಗಿದೆ. ಆದರೆ, ಇಲ್ಲಿ ಆನ್ಯುಯಿಟಿ ಮೇಲೆ ಮಾಡಲಾಗುತ್ತದೆ. ಇದರಲ್ಲಿ ಇಷ್ಟೆಂದು ಫಿಕ್ಸ್‌ಡ್ ಹಣವನ್ನು ಕೊಡುವುದರಿಂದ ಗುತ್ತಿಗೆದಾರರು ಖಂಡಿತವಾಗಿ ಮುಂದೆ ಬರುತ್ತಾರೆ. ಅದಕ್ಕೂ ಇದಕ್ಕೂ ಇರುವ ವ್ಯತ್ಯಾಸ ಏನೆಂದರೆ, PWD ಯಲ್ಲಿ ಟೋಲ್‌ನಲ್ಲಿ ದುಡ್ಡು ವಸೂಲ್ಮಾಡುವುದರಿಂದ ಅವರು ಹೂಡಿಕೆ ಮಾಡಿರುವ ಬಂಡವಾಳವನ್ನು ಸುಮಾರು ಏಳೆಂಟು ವರ್ಷಗಳಲ್ಲಿ ಪಡೆದುಕೊಳ್ಳಬೇಕಾಗುತ್ತದೆ. ಅದು ಕಷ್ಟ ಸಾಧ್ಯ. ಆದರೆ, ಇಲ್ಲಿ ಸರ್ಕಾರ ಪ್ರತಿ ವರ್ಷ ಐದನೇ ಒಂದಂಶದ ಭಾಗದ ದುಡ್ಡನ್ನು ಕೊಡುವುದರಿಂದ ಖಂಡಿತವಾಗಿ ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬರುತ್ತದೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಹೊಸದಾಗಿ ಇವರೇ ಪ್ರಾರಂಭ ಮಾಡುತ್ತಿರುವುದರಿಂದ ಕರ್ನಾಟಕ ರಾಜ್ಯದಲ್ಲಿ ಆನ್ಯುಯಿಟಿ ಬೇಸಿಸ್ ಮೇಲೆ ಎಷ್ಟು ರಸ್ತೆಗಳನ್ನು ಇದುವರೆಗೆ ಮಾಡಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಇಡೀ ದೇಶದಲ್ಲಿ ಬೇರೆ ಬೇರೆ ರಾಜ್ಯದಲ್ಲಿ ಇದು ಈಗಾಗಲೇ ಪ್ರಾರಂಭವಾಗಿದೆ. ನಮ್ಮಲ್ಲಿ ರೂರಲ್ ರಸ್ತೆಗಳಿಗೆ ಮೊದಲ ಬಾರಿಗೆ ಈ ಸಿಸ್ಟಂ ಅನ್ನು ನಮ್ಮ ಸರ್ಕಾರ ಪ್ರಾರಂಭ ಮಾಡಿದೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಹಿಂದೆ ಯಾವುದಾದರೂ ಸರ್ಕಾರ ಈ ಬೇಸಿಸ್ ಮೇಲೆ ಕೊಟ್ಟಿತ್ತೆ ಅಥವಾ ನೀವೇ ಹೊಸದಾಗಿ ಪ್ರಾರಂಭ ಮಾಡಿದ್ದೀರಾ?

ಶ್ರೀ ಬಸವರಾಜ ಬೊಮ್ಮಾಯಿ: ಇದು ಇತ್ತೀಚಿನ ದಿನಗಳಲ್ಲಿ ಬಂದಿದೆ. ಬೇರೆ ಬೇರೆ ರಾಜ್ಯಗಳು ಈಗಾಗಲೇ ಕೊಟ್ಟಿದ್ದಾರೆ. ನಮ್ಮ ಸರ್ಕಾರ ಇಲ್ಲಿ ಮೊದಲ ಬಾರಿಗೆ ರೂರಲ್ ರಸ್ತೆಗಳಿಗೆ ಕೊಡುತ್ತಿದೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಇವರ ಹತ್ತಿರ ಹಣ ಇಲ್ಲದೆ ಇರುವುದರಿಂದ ಬಂಡವಾಳ ತಂದು ಹಾಕಲೆಂದು ಮಾಡುತ್ತಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಏನಾಗಬೇಕು?

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಇದಕ್ಕೋಸ್ಕರ ಸಾವಿರಾರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಈ ರೀತಿಯಾದರೆ ರಾಜ್ಯದ ಪರಿಸ್ಥಿತಿ ಏನಾಗುತ್ತದೆ ಹೇಳಿ? ಸಂಪನ್ಮೂಲ ಕ್ರೋಢೀಕರಣ ಮಾಡುವುದನ್ನು ಬಿಟ್ಟು ಈ ರೀತಿ ಹೇಳುವುದು ಸರಿಯೇ? ರಾಜ್ಯದ ಹಣವನ್ನು ಲೂಟಿ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಬಸವರಾಜ ಬೊಮ್ಮಾಯಿರವರೆ, ಅವರು ಹೇಳಿದ್ದಾರೆ ತಾವು ಸುಮ್ಮನಿರಿ.

ಶ್ರೀ ಬಸವರಾಜ ಬೊಮ್ಮಾಯಿ: ಎಲ್ಲಾ ಸರ್ಕಾರಗಳು ದುಡ್ಡು ಇಟ್ಟುಕೊಂಡು ಸ್ಕೀಂ ಮಾಡುತ್ತವೆಯೇ? ನಿಮ್ಮ ಪ್ರಕಾರ ಹೋದರೆ ಕರ್ನಾಟಕ ರಾಜ್ಯ 100 ವರ್ಷಗಳಾದರೂ ಅಭಿವೃದ್ಧಿಯಾಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಅವರು ಏನು ಮಾಡುತ್ತಾರೆಂಬುದನ್ನು ಸ್ಪಷ್ಟವಾಗಿ ಕ್ಲಾರಿಫೈ ಮಾಡಬೇಕು. ಏಕೆಂದರೆ, ಇಲ್ಲಿ ಬಹಳ confusion create ಆಗುತ್ತಿದೆ. ಆದ್ದರಿಂದ, ಈ confusion ಅನ್ನು ಹೋಗಲಾಡಿಸಬೇಕು. ಎರಡನೆಯದು ಏನೆಂದರೆ, ಇಷ್ಟು ರಸ್ತೆಗಳನ್ನು ಮಾಡುತ್ತೇವೆಂದು ಹೇಳಿದ ಮೇಲೆ ಅಷ್ಟಕ್ಕೆ action plan ಮಾಡಿ ಅದಕ್ಕೆ ಸಂಪನ್ಮೂಲಗಳನ್ನು ಮಾಡಬೇಕು. ಇಲ್ಲದಿದ್ದರೆ ಅದು ಕೇವಲ ಕಾಗದದ ಮೇಲೆ ಉಳಿಯುತ್ತದೆ. 3054 ಹೆಡ್‌ನಲ್ಲಿ ಕೆಲಸ ಮಾಡಬಾರದೆಂದು ಈಗಾಗಲೇ ಜಿಲ್ಲಾ ಪಂಚಾಯತ್‌ಗಳಿಗೆ ಸೂಚನಾ ಪತ್ರ ಹೋಗಿವೆ. 3055 ಹೆಡ್‌ನಲ್ಲಿ ಎಲ್ಲಿಯೂ ಕೆಲಸ ತೆಗೆದುಕೊಳ್ಳಬಾರದೆಂದು ಸೂಚನೆ ಕೊಟ್ಟು ಮತ್ತೆ ಹೊಸದಾಗಿ ರಸ್ತೆ ಮಾಡುತ್ತೇವೆಂದರೆ, ಇವರ ಹತ್ತಿರ ಹಣ ಎಲ್ಲಿದೆ? ಹಣ ಇವರ ಹತ್ತಿರ ಇಲ್ಲ. ಇದೊಂದು ಸುಳ್ಳು ಭರವಸೆ ಆಗುತ್ತದೆ. 3054 ಹೆಡ್‌ನಲ್ಲಿ ಕಳೆದ 5 ವರ್ಷಗಳಿಂದ ಎಲ್‌ಓಸಿ ಬಿಡುಗಡೆಯಾಗಿಲ್ಲ. ಸುಮಾರು 2000 ಕೋಟಿ ರೂಪಾಯಿ ಹಾಗೆಯೇ ನಿಂತಿದೆ. ಮಾನ್ಯ ಉದಾಸಿಯವರಿಗೆ ಕೇಳಿದರೆ ದುಡ್ಡು ಬಂದಿಲ್ಲ ನಾನೇನು ಮಾಡಲಿ ಎಂದು ಹೇಳುತ್ತಾರೆ. ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ. ಕಡತ ಅಲ್ಲಿಯೇ ಓಡಾಡುತ್ತದೆ ಎಂದು ಹೇಳುತ್ತಾರೆ. ಇವತ್ತಿನ ದಿವಸ 3054 ಹೆಡ್‌ನ ಕೆಲಸ ಸಂಪೂರ್ಣವಾಗಿ ಸ್ಥಗಿತವಾಗಿದೆ. ಅದಕ್ಕೆ ಹಣ ಕೊಡುವುದಕ್ಕೆ ಇವರ ಹತ್ತಿರ ಒಂದು ರೂಪಾಯಿ ಕೂಡ ಇಲ್ಲ. ಮತ್ತೆ ಇದೂ ಕೂಡ ಅದೇ ರೀತಿಯ ಒಂದು ಕಾರ್ಯಕ್ರಮವಾಗುತ್ತದೆ. ಸಾವಯವ ಕೃಷಿ ಬಗ್ಗೆ ಬಹಳ ಮಾತನಾಡಿದ್ದಾರೆ. ಇದರ ಬಗ್ಗೆ ಮಾನ್ಯ ಜಯಚಂದ್ರರವರು ಕೂಡ ಹೇಳಿದ್ದಾರೆ. ಸಾವಯವ ಕೃಷಿ ಮಾಡುವುದಕ್ಕೆ ನಮ್ಮದೇನು ವಿರೋಧ ಇಲ್ಲ. ಆ ಕಾರ್ಯಕ್ರಮವನ್ನು ನಾವೂ ಕೂಡ ಸ್ವಾಗತ ಮಾಡಿದ್ದೇವೆ. ಆದರೆ, ನೀವು ಮಾಡುತ್ತಿರುವ ರೀತಿ ಸರಿಯಾಗಿಲ್ಲವೆಂದು ನಾವು ಹೇಳುತ್ತಿದ್ದೇವೆ. ಇದರಲ್ಲಿ ಏನಾಗಿದೆಯೆಂದರೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಸಮಿತಿಯನ್ನು ಮಾಡಿ ಈ ಕೆಲಸವನ್ನು ಎನ್‌ಜಿಓ ಗಳಿಗೆ ಕೊಟ್ಟಿದ್ದಾರೆ. ಸಮಿತಿಯಲ್ಲಿ ಪ್ರೇರಕರೆಂದು ಸುಮಾರು 15 ಜನ ಸದಸ್ಯರುಗಳನ್ನು ಮಾಡಿದ್ದಾರೆ.

ನಂಜನಗೂಡು ಮತ್ತು ಮೈಸೂರಿನಲ್ಲಿರುವಂತವುಗಳನ್ನು ನಾನು ಮತ್ತು ಶ್ರೀನಿವಾಸ್ ಪ್ರಸಾದ್‌ರವರು ಹೋಗಿ ನೋಡಿದ್ದೇವೆ. ಅಲ್ಲಿರತಕ್ಕಂಥ ಎಲ್ಲಾ ಪ್ರೇರಕರು ನಿಮ್ಮ ಪಕ್ಷದ ಕಾರ್ಯಕರ್ತರಾಗಿದ್ದಾರೆ. ಒಂದು ತಿಂಗಳಿಗೆ ಅವರಿಗೆ ಟಿಎ ಮತ್ತು ಡಿಎ ಎಂದು ಒಂದೂವರೆ ಸಾವಿರ ರೂಪಾಯಿ ಕೊಡಲಾಗುತ್ತದೆ. ಇಬ್ಬರಿಗೆ 7 ಸಾವಿರ ರೂಪಾಯಿ ಕೊಡುತ್ತಾರೆ. ಇವರು ಕೊಡುವ 24 ಲಕ್ಷ ರೂಪಾಯಿಯಲ್ಲಿ 4.60 ಲಕ್ಷ ರೂಪಾಯಿ ಇದಕ್ಕಾಗಿ ಹೋಗುತ್ತದೆ. ಇವರೆಲ್ಲಾ ನಿಮ್ಮ ಪಾರ್ಟಿಯವರಾಗಿದ್ದಾರೆ. ಸಾವಯವ ಎನ್ನುವುದು ನಿಮ್ಮ ಪಾರ್ಟಿ ಕಾರ್ಯಕ್ರಮವೇ? ನೀವು ಈಗ ಮಾಡಿರುವುದರಲ್ಲಿ Scheduled Caste, Backward Class and Minorities ಮತ್ತು ಬೇರೆ ವರ್ಗದವರು ಎಷ್ಟಿದ್ದಾರೆಂಬುದರ ಬಗ್ಗೆ ಒಂದು ಪಟ್ಟಿ ಕೊಡಿ. ಏಕೆಂದರೆ, Social Justice ಆಗಬೇಕಲ್ಲವೇ? ಅಂದರೆ, ಸರ್ಕಾರದ ಹಣವನ್ನು ನಾವು ಖರ್ಚು ಮಾಡುವಾಗ ಅದು ದಲಿತರಿಗೆ, ಹಿಂದುಳಿದ ವರ್ಗದವರಿಗೆ ಮತ್ತು ಬೇರೆಯವರಿಗೆ ಹೋಗುತ್ತಿದೆಯೇ ಅಥವಾ ನಿಮ್ಮ ಪಕ್ಷದ ಕಾರ್ಯಕರ್ತರಿಗೆ ಹೋಗುತ್ತಿದೆಯೇ ಅಥವಾ ಮುಂದುವರೆದ ವರ್ಗದವರಿಗೆ ಹೋಗುತ್ತಿದೆಯೇ ಎಂಬುದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ನನ್ನ ಪ್ರಕಾರ 176 ತಾಲ್ಲೂಕುಗಳಲ್ಲಿಯೂ ಕೂಡ they are all BJP workers. ಇದರಲ್ಲಿ ದಲಿತರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು ಯಾರೂ ಇಲ್ಲ. ಆದ್ದರಿಂದ, ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ನಿಮಗೆ ಸಾವಯವ ಕೃಷಿಯಲ್ಲಿ ನಂಬಿಕೆ ಇಲ್ಲ. ನಿಮ್ಮವರಿಗೆ accommodate ಮಾಡುವುದಕ್ಕೋಸ್ಕರ ಮಾಡಿರುವ ಒಂದು ಕಾರ್ಯಕ್ರಮವೆಂದು ಹೇಳುವುದಕ್ಕೆ ಬಯಸುತ್ತೇನೆ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಭವಿಷ್ಯದ ಹೆಜ್ಜೆಗಳು-ಎಂದು ಹೇಳಿರುವುದರಲ್ಲಿ......

ಶ್ರೀ ಸಿ.ಟಿ. ರವಿ: ಮಾನ್ಯ ವಿರೋಧ ಪಕ್ಷದ ನಾಯಕರೆ ಒಂದು ನಿಮಿಷ ನಾನು ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನನ್ನ ಹತ್ತಿರ ಎಲ್ಲಾ ಮಾಹಿತಿಗಳು ಚೆನ್ನಾಗಿವೆ. I have got all the information.

ಶ್ರೀ ಸಿ.ಟಿ. ರವಿ: ಕಾಂಗ್ರೆಸ್ ಹೋಬಳಿಯ ಅಧ್ಯಕ್ಷರಾಗಿರುವ ಮಾಡ್ಲ್ ಪ್ರಕಾಶ್ ಎಂಬುವವರು ನನ್ನ ತಾಲ್ಲೂಕಿನಲ್ಲಿ ಅಧ್ಯಕ್ಷರಾಗಿದ್ದಾರೆ. ಅವರು ಸರ್ಕಾರ ಇದ್ದಾಗ ಬೇರೆಯವರನ್ನು ಮಾಡುತ್ತಿರಲಿಲ್ಲ. ಆದ್ದರಿಂದ, ಅವರನ್ನು ಏಕೆ ಮಾಡಿದ್ದೀರಾ ಎಂದು ನಾನು ಕೇಳಿದ್ದೇನೆ. ಈ ಮಾಹಿತಿ ನಿಮ್ಮ ಹತ್ತಿರ ಇಲ್ಲ. ಆದ್ದರಿಂದ, ಈ ವಿಷಯ ಹೇಳಿದೆ.

ಶ್ರೀ ಸಿದ್ದರಾಮಯ್ಯ: Scheduled Casteನವರು ಯಾರು ಇರಲಿಲ್ಲವೇ?

ಶ್ರೀ ಸಿ.ಟಿ. ರವಿ: ಅವರೂ ಕೂಡ ಇದ್ದಾರೆ.

ಶ್ರೀ ಸಿದ್ದರಾಮಯ್ಯ: ಎಲ್ಲಿದ್ದಾರೆ ಹೇಳಿ? Scheduled casteನವರು ಎಷ್ಟು ಜನರಿದ್ದಾರೆ? ಅವರ ಹೆಸರುಗಳನ್ನು ಓದಿ. 176 ತಾಲ್ಲೂಕುಗಳಲ್ಲಿ Scheduled casteನವರು ಎಷ್ಟು ಜನರಿದ್ದಾರೆಂಬುದರ ಬಗ್ಗೆ ದಾಖಲೆ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ: ದಾಖಲೆ ಒದಗಿಸಿಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಆ ಮಾಹಿತಿಯನ್ನು ಒದಗಿಸಿ.

ಶ್ರೀ ಬಿ. ರಮಾನಾಥ್ ರೈ: ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಬಹುದಲ್ಲವೆ?

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟೀಕರಣ ಕೇಳುತ್ತೀರಾ ಅಥವಾ ಪ್ರತಿಯೊಬ್ಬ ಶಾಸಕರು ಪ್ರತಿ ಹಂತದಲ್ಲಿ ಎದ್ದು ನಿಂತು ಮಾತನಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ನೀವು ಸ್ವಲ್ಪ ಲಿಬರಲ್ ಆಗಿದ್ದೀರಿ ಎಂದು ಎಲ್ಲರೂ ಎದ್ದು ನಿಂತುಕೊಳ್ಳುತ್ತಾರಷ್ಟೆ. ನಾನೇನು ಬಹಳ ಕೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಭವಿಷ್ಯದ ಹೆಜ್ಜೆಗಳೆಂದು ಇವರು ಕೊಟ್ಟಿರುವ ಉತ್ತರ ಕೃಷಿಗೆ ಭವಿಷ್ಯ ರೂಪಿಸತಕ್ಕಂಥದಲ್ಲ ಮತ್ತು ಗ್ರಾಮೀಣಾಭಿವೃದ್ಧಿ ಕೂಡ ಮಾಡತಕ್ಕಂಥದ್ದಲ್ಲ. ಹಗರಣಗಳ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರ ಸಭೆ ಕರೆಯುತ್ತೇವೆಂದು ಇವರು ಹೇಳಿದರು. ಅದನ್ನು ಮಾಡುವುದಕ್ಕೆ ಆಗಲಿಲ್ಲ. ಆ ಕಾರಣಕ್ಕೋಸ್ಕರವಾಗಿ

ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿ ಎಂದು ತೆಗೆದುಕೊಂಡು ಬಂದು ಇವರು ಕಾಟಾಚಾರಕ್ಕೆ ಮಾಡಿರುವುದೇ ಹೊರತು ಇದರಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬಗ್ಗೆ ಕೂಡ ಇವರಿಗೆ ಬದ್ಧತೆ ಇಲ್ಲ. ಕೇಂದ್ರ ಸರ್ಕಾರ ಅನೇಕ ಕಾರ್ಯಕ್ರಮಗಳಿಗೆ ಕೊಟ್ಟಿರುವ ಹಣವನ್ನು ಇವರಿಗೆ ಬಳಸಿಕೊಳ್ಳುವುದಕ್ಕೆ ಆಗಿಲ್ಲವೆಂದರೆ ಇವರಿಗೆ ಯಾವ ಬದ್ಧತೆ ಇದೆ ಎಂಬುದನ್ನು ಜನ ಇವರನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಗದ್ಗದಿತರಾಗಿ ಹೇಳಿದರು. ಆದರೆ, ಆ ರೀತಿಯ ಪ್ರಾಮಾಣಿಕತೆಯಾಗಲಿ, ಕಳಕಳಿಯಾಗಲಿ ಇವರ ಉತ್ತರದಲ್ಲಿ ಸ್ವಲ್ಪವೂ ಕೂಡ ಕಾಣಿಸುತ್ತಿಲ್ಲ. ಮೂರು ದಿನಗಳ ಕಾಲ ನಾವು ಇಲ್ಲಿ ಏನೇನು ಸಲಹೆಗಳನ್ನು ಕೊಟ್ಟೆವು, ಅವುಗಳೆಲ್ಲವು ವ್ಯರ್ಥ ಕಸರತ್ತೆಂದು ನನಗನ್ನಿಸುತ್ತದೆ. ನಮ್ಮ ಯಾವ ಸಲಹೆಗೂ ಸಹ ಇವರಿಂದ ಸರಿಯಾದಂಥ ಉತ್ತರ ಕೊಡುವುದಕ್ಕೆ ಆಗಿಲ್ಲ. ಮತ್ತೆ ಇವರ ಹತ್ತಿರ ಹಣ ಇಲ್ಲ ಹಾಗೂ ಸಪ್ಲಿಮೆಂಟರಿ ಬಜೆಟ್ ಮಾಡುವುದಕ್ಕೂ ಇವರ ಹತ್ತಿರ ದುಡ್ಡು ಇಲ್ಲ. ಹಾಗೆಯೇ ಈಗ ಇರತಕ್ಕಂಥ ಕಾರ್ಯಕ್ರಮಗಳಿಗೆ ಕೊಡುವುದಕ್ಕೆ ಇವರ ಹತ್ತಿರ ದುಡ್ಡು ಇಲ್ಲ. ಆದ್ದರಿಂದ, ಈ ಕಾರ್ಯಕ್ರಮ ಕೇವಲ ತೋರಿಕೆಗೆ ಮತ್ತು ಜನರನ್ನು ತಪ್ಪು ದಾರಿಗೆ ಎಳೆಯತಕ್ಕಂಥ ಒಂದು ವ್ಯರ್ಥ ಪ್ರಯತ್ನ ಎನ್ನತಕ್ಕಂಥದ್ದನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಸಭಾನಾಯಕರೂ ಆಗಿರುವ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕಾಡಬೇಡಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಲು 3 ದಿವಸಗಳವರೆಗೆ ಸಭೆಯನ್ನು ಕರೆಯಲಾಗಿದೆ ಎಂದು ಹೇಳಿದರು. ಮಾನ್ಯ ಸಭಾನಾಯಕರು ಹೇಳುವಾಗ ಅವರಿಗೆ ಸ್ವಲ್ಪ ಅಳು ಬಂತು. ಆದರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಅಳಲಿಲ್ಲ. ಯಾವ ಉದ್ದೇಶಕ್ಕಾಗಿ ಮೂರು ದಿನಗಳು ಅತ್ತರೆಂಬುದು ನನಗೆ ಗೊತ್ತಿಲ್ಲ. ಇವರು ಕೊಟ್ಟಿರುವ ಪುಸ್ತಕದಲ್ಲಿನ ಯಾವುದಾದರೊಂದು ವಿಷಯಕ್ಕೆ

4.00 P.M.

ಸಂಬಂಧಪಟ್ಟಂತೆ ಒಂದು ಉತ್ತರ ಕೂಡ ಇವರು ನೀಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬಗ್ಗೆ ವಿಧಾನಮಂಡಲದ ಅಧಿವೇಶನದಲ್ಲಿ ನೀಡಿರುವ ಹೇಳಿಕೆಗೆ ಸಂಬಂಧಪಟ್ಟಂತೆ ಒಂದಾದರೂ ಉತ್ತರ ಈ ಪಟ್ಟಿಯಲ್ಲಿ ಇದ್ದರೆ ಅವರು ಏನು ಹೇಳುತ್ತಾರೆಯೋ ಅದಕ್ಕೆ ನಾನು ಭಾಗಿಯಾಗುತ್ತೇನೆ. ಇವತ್ತು ಭವಿಷ್ಯದ ಹೆಜ್ಜೆಗಳು ಅಂದರೆ ಏನು? ಈಗ ಉದಾಹರಣೆಗೆ ಹೇಳುವುದಾದರೆ ನಾವು ಕೇಳಿದ್ದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಎರಡು ವಿಷಯಕ್ಕೆ ಮಾತ್ರ ಚರ್ಚೆ ಸೀಮಿತವಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಿಗೆ ಇವತ್ತು ಬೆಳಿಗ್ಗೆ ಬಂದ ಕ್ಷಣವೇ ಚರ್ಚೆ ಏನಾಯಿತು ಎಂದರೆ ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ 2006 ಇಡೀ ರಾಷ್ಟ್ರದಲ್ಲಿ first time ಕೃಷಿ ನೀತಿಯನ್ನು ಜಾರಿಗೆ ತಂದಿರುವವರು ಯಾರಾದರೂ ಇದ್ದರೆ ಅದು ನಮ್ಮ ಬಂಡೆಪ್ಪ ಕಾಶಂಪೂರ್‌ರವರ ಕಾಲದಲ್ಲಿ ಆಗಿದೆ. ಈ ಪುಸ್ತಕದಲ್ಲಿ ಈ ಕೃಷಿ ನೀತಿಯ ಬಗ್ಗೆ ಏನಾದರೂ ಇದೆಯೇ? ಇದರಲ್ಲಿ ಆ ಬಗ್ಗೆ ಒಂದಾದರೂ ಪ್ರಸ್ತಾಪವಿದೆಯೇ? ಇದರ ಬಗ್ಗೆ ಇಲ್ಲ. ಇನು ಎರಡನೆಯದಾಗಿ ಹೇಳುವುದಾದರೆ, ಹಣಕಾಸು ಇಲಾಖೆಯ ಕಾರ್ಯದರ್ಶಿ ಇಲ್ಲಿಗೆ ಇನ್ನೂ ಬಂದಿಲ್ಲ. ಏಕೆಂದರೆ ಅವರೂ ಸಹ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಹೋಗಿರಬಹುದು. ಅದರ ಬಗ್ಗೆ ಏನೂ ಗೊತ್ತಿಲ್ಲ. ಆಮೇಲೆ ಹೇಳುತ್ತೇನೆ. ಈಗ ಇದು "farmer, conditions" ಅವರು 27ನೇ ತಾರೀಖು 14 ಜುಲೈ 2007 ಅದರಲ್ಲಿ ಎಲ್ಲಾ all Secretaries ರಾಜ್ಯದ ಎಲ್ಲಾ ಹಿರಿಯ ಇಲಾಖೆ, ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ, ರೈತರಿಗೆ ಸಂಬಂಧಪಟ್ಟಂತೆ ಎಲ್ಲಾ ಸಂಘ ಸಂಸ್ಥೆಗಳನ್ನು ಕರೆಸಿ ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಈ ರಾಜ್ಯದ ರೈತರ condition ಏನು ಅನ್ನುವುದರ ಬಗ್ಗೆ ಚರ್ಚಿಸಿದರ ಬಗ್ಗೆ ಇಲ್ಲಿ ಚಕಾರವಿಲ್ಲ. ವಿದ್ಯುತ್ತನ್ನು 30% ನಿಂದ 20% ಲಾಸ್ ಇಳಿಸಿಬಿಟ್ಟಿದ್ದೇನೆ ಅಂದರು. ಯಾವ ಲಾಸ್ ಇಳಿಸಿದ್ದಾರೆ? ಅದು ನಿಜ ಒಪ್ಪಿಕೊಳ್ಳುತ್ತೇನೆ. 5 ಕಂಪನಿಯ ಪರಿಸ್ಥಿತಿ ಏನಾಗಿದೆ ಎನ್ನುವ ಬಗ್ಗೆ ಇವತ್ತು ನಾನಲ್ಲ ಹೇಳುತ್ತಿರುವುದು ಇವರು ಹೇಳುತ್ತಿದ್ದಾರೆ. ಇವತ್ತು 5 ಕಂಪನಿಯ ಬಂಡವಾಳ ಏನಾಗಿದೆ ಎಂದರೆ ಲಾಸ್,

ಏಕೆಂದರೆ ಕಳೆದ ವಿಧಾನ ಸಭೆಯಲ್ಲಿ ಇದರಲ್ಲಿ ಮುಖ್ಯಮಂತ್ರಿಗಳು ಹಗರಣಗಳ ಬಗ್ಗೆ ಚರ್ಚೆ ಮಾಡೋಣವೆಂದರೆ ಬೇಡ ಹಗರಣಗಳ ಬಗ್ಗೆ ಇರಲಿ ಆಮೇಲೆ ಮಾಡೋಣ ಎಂದು ಹೇಳಿದರು. ಈ ಬಗ್ಗೆ ನಾನು ಉದಾಹರಣೆಯನ್ನು ಕೊಡುತ್ತೇನೆ. ಹಗರಣಗಳ ಬಗ್ಗೆ ಎಂದು ಹೇಳಿ, Loss of Electricity – Bangalore Company ಇವತ್ತು 1694 ಕೋಟಿ ರೂಪಾಯಿಗಳು ಲಾಸ್ ಆಗಿದೆ. ಅದೇ ರೀತಿಯಾಗಿ ಮಂಗಳೂರು ಕಂಪನಿ ಇದನ್ನು ಕೆಇಆರ್‌ಸಿಗೆ ಅರ್ಜಿ ಹಾಕಿರುವುದು ನಾನಲ್ಲ. ಇದು ಕೆಇಆರ್‌ಸಿ ಮುಂದೆ ನಮ್ಮ ಇಂಧನ ಸಚಿವರ ಗಮನಕ್ಕೆ ಬಂದಿದೆಯಾ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಅವರೇನಾದರೂ ಹಾಕಿಬಿಟ್ಟರೆ ಅದರ ಬಗ್ಗೆ ನನಗೇನೂ ಗೊತ್ತಿಲ್ಲ. ಮಂಗಳೂರು ಕಂಪನಿ, ಬೆಂಗಳೂರು ಕಂಪನಿ ನಾನು ಇದ್ದಾಗ 480 ಕೋಟಿ ರೂಪಾಯಿಗಳನ್ನು ಎಫ್‌ಡಿಯನ್ನು ಇಟ್ಟಿದ್ದೆವು. ಇವತ್ತು 2008–09ರಲ್ಲಿ 1020 ಕೋಟಿ ರೂಪಾಯಿಗಳು ನಷ್ಟವಾಗಿದೆ. 2009–10ಕ್ಕೆ ಸಂಭಾವಿತ ನಷ್ಟ 1096 ಕೋಟಿ ರೂಪಾಯಿಗಳು ಎಂದು ಇದೆ. ಅದೇ ರೀತಿಯಾಗಿ ಮಂಗಳೂರು ಕಂಪನಿ 2007–08ರಲ್ಲಿ 14 ಕೋಟಿ ರೂಪಾಯಿಗಳು ನಷ್ಟ. 2008–09ರಲ್ಲಿ 52 ಕೋಟಿ ರೂಪಾಯಿಗಳು ನಷ್ಟ 2009ರಲ್ಲಿ ಸಂಭಾವಿತ ನಷ್ಟ 417 ಕೋಟಿ ರೂಪಾಯಿಗಳು, ಗುಲ್ಬರ್ಗಾ ಕಂಪನಿ 2007ರಲ್ಲಿ 15 ಕೋಟಿ ರೂಪಾಯಿಗಳು ನಷ್ಟ. 2008–09ರಲ್ಲಿ 349 ಕೋಟಿ ರೂಪಾಯಿಗಳು ನಷ್ಟ. ಅದೇ ರೀತಿಯಾಗಿ 2009–10ರಲ್ಲಿ 412 ಕೋಟಿ ರೂಪಾಯಿಗಳು ಸಂಭಾವಿತ ನಷ್ಟವೆಂದು ಹೇಳುತ್ತಾರೆ. ಚಾಮುಂಡೇಶ್ವರಿ ಕಂಪನಿ 2007ರಲ್ಲಿ 5 ಕೋಟಿ ರೂಪಾಯಿಗಳು ನಷ್ಟ. 2008–09ರಲ್ಲಿ 181 ಕೋಟಿ ರೂಪಾಯಿಗಳ ನಷ್ಟ. 2009–10ರಲ್ಲಿ ಸಂಭಾವಿತ ನಷ್ಟ 259 ಕೋಟಿ ರೂಪಾಯಿಗಳು. ಹುಬ್ಬಳ್ಳಿ ಕಂಪನಿ 2007–08ರಲ್ಲಿ 247 ಕೋಟಿ ರೂಪಾಯಿಗಳ ನಷ್ಟ. 2008–09ರಲ್ಲಿ 766 ಕೋಟಿ ರೂಪಾಯಿಗಳು ನಷ್ಟ. 2009–10ಕ್ಕೆ ಸಂಭಾವಿತ ನಷ್ಟ 707 ಕೋಟಿ ರೂಪಾಯಿಗಳು. ಒಟ್ಟು 5 ಕಂಪನಿಗಳಿಂದ ಸಂಭಾವಿತ ನಷ್ಟ 2008–09ಕ್ಕೆ 2,348 ಕೋಟಿ ರೂಪಾಯಿಗಳು. ಈಗ 2009–10ಕ್ಕೆ 5 ಕಂಪನಿಗಳ ನಷ್ಟ 5,837 ಕೋಟಿ ರೂಪಾಯಿಗಳು ಸಂಭಾವಿತ ನಷ್ಟ ಎಂದು

ಹೇಳಿ ಕೆಇಆರ್‌ಸಿಯ ಮುಂದೆ ಅರ್ಜಿಯನ್ನು ಹಾಕಿದ್ದಾರೆ. ನಾನು last year ಹಾಗೂ ಈ ವರ್ಷದ್ದು ಸಹ ಹೇಳಿದ್ದೇನೆ. ಇದಲ್ಲದೆಯೇ ಸುಮಾರು 2,587 ಕೋಟಿ ರೂಪಾಯಿಗಳು high cost currentನ್ನು ಇವತ್ತು ಖರೀದಿ ಮಾಡಿದ್ದಾರೆ. ಏಕೆಂದರೆ ಇವತ್ತು ಇದು ಅವರ ಇಲಾಖೆಯವರು ಕೊಟ್ಟಿರುವಂತಹ ಮಾಹಿತಿಯ ಬಗ್ಗೆಯೇ ನಾನು ಹೇಳುತ್ತಿರುವುದು. ನಾನು separate ಆಗಿ ಮಾಹಿತಿಯನ್ನು ಹೇಳುತ್ತಿಲ್ಲ. ಅವರ ಇಲಾಖೆಯಲ್ಲಿ ಏನು ಮಾಹಿತಿಯನ್ನು ಕೊಟ್ಟಿದ್ದಾರೆ? ಇವತ್ತು ಲಿಂಗನಮಕ್ಕಿ 2004-05ರಲ್ಲಿ 14,869 cases ಒಳಹರಿವು ಇದೆ. ಇವತ್ತು 2008-09ಕ್ಕೆ 16,839 cases ಒಳಹರಿವು, ಇನ್ನು 2000 ಜಾಸ್ತಿ ಇದೆ. ಎಲ್ಲಾ ಡ್ಯಾಂಗಳಲ್ಲಿ ಒಳಹರಿವು ಜಾಸ್ತಿ ಇದ್ದರೂ ಕೂಡ ಇವತ್ತು 2004ಕ್ಕೂ ಮತ್ತು 2008ಕ್ಕೂ differenceನ್ನು ತೆಗೆದುಕೊಂಡರೆ ಇದರ ಬಗ್ಗೆ ಮಾನ್ಯ ಇಂಧನ ಮಂತ್ರಿಗಳು ಹೇಳಬೇಕಾಗುತ್ತದೆ. ವಿದ್ಯುತ್ ಬೇಡಿಕೆ ಇರುವುದು 2007ಕ್ಕೆ ಬೇಡಿಕೆ ಇರುವುದು 24.92, ಇವತ್ತು 2008-09ಕ್ಕೆ 26.57 ಅಂದರೆ ಬರೀ 1.6 ಮಾತ್ರ. ಇದರ ಬಗ್ಗೆ ಉದಾಹರಣೆ ಹೇಳುವುದಾದರೆ ಈ ಬಗ್ಗೆ ಅವರೇ ಹೇಳಿದ್ದಾರೆ. ನಾವು ಹಿಂದೆ 2500 ಜುಲೈ, ಜೂನ್ 5ರವರೆಗೆ ರೂರಲ್ ಏರಿಯಾದಲ್ಲಿ 9.5 ಸಿಂಗಲ್ ಫೇಸ್ ವಿದ್ಯುತ್ ಕೊಡುತ್ತಿದ್ದೆವು 8 ಪಾಯಿಂಟ್ 3 ಫೇಸ್ ಕೊಡುತ್ತಿದ್ದೆವು. 8.5 ಎಂದು 8 ಗಂಟೆ 5 ನಿಮಿಷ. 8.30 ಗಂಟೆ 3 ಪಾಯಿಂಟ್ ಫೇಸ್ ಕೊಡುತ್ತಿದ್ದೆವು. ಅವರ ಹೇಳಿಕೆ ಇದು. ಇದು ನನ್ನ ಹೇಳಿಕೆಯಲ್ಲ. ಈಗ 6-6 ಗಂಟೆ ಎಂದು ಹೇಳುತ್ತಾರೆ. ಅರ್ಬನ್ ಏರಿಯಾದಲ್ಲಿ 24 ಗಂಟೆ ಕೊಡುತ್ತೇವೆಂದು ಹೇಳುತ್ತಾರೆ. ಅರ್ಬನ್ ಏರಿಯಾದಲ್ಲಿ 24 ಗಂಟೆ ಕರೆಂಟ್ ಕೊಟ್ಟಿದ್ದೇವೆಂದರೆ ಅವರು ಏನು ಹೇಳುತ್ತಾರೆ ಅದಕ್ಕೆ ನಾನು ಶರಣಾಗುತ್ತೇನೆ. 24 ಗಂಟೆಗಳ ಕಾಲ ವಿದ್ಯುತ್ ಕೊಟ್ಟಿದ್ದೇವೆಂದು ಅವರು ಹೇಳಿಕೆಯಲ್ಲಿ ಹೇಳಿದ್ದಾರೆ ಈ ಬಗ್ಗೆ ಇಲ್ಲಿಯೇ ಇದೆ. ಅವರ ಒಂದು statement ಇದೆ. ಅವರು ಇಲಾಖೆಯ statementನ್ನು review ಮಾಡುವಂತಹ ಸಂದರ್ಭದಲ್ಲಿ ಕೊಟ್ಟಿರುವುದು ಇವತ್ತು ನಮ್ಮ ಕಾಲದಲ್ಲಿ high cost currentನ್ನು ಖರೀದಿ ಮಾಡಿರುವುದು 2006-07ರಲ್ಲಿ 16 ಕೋಟಿ ರೂಪಾಯಿಗಳು. ಅದೇ 2007-08ರಲ್ಲಿ 40.28 ಕೋಟಿ ರೂಪಾಯಿಗಳು,

ಒಟ್ಟು 40 ಕೋಟಿ ರೂಪಾಯಿಗಳ high cost current. ಇವತ್ತು ಯಾರ್ಯಾರಿಂದ ಎಷ್ಟೆಷ್ಟು ಕರೆಂಟ್ ಖರೀದಿಯಾಗಿದೆ? ಅದನ್ನೂ ಸಹ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮುಖ್ಯಮಂತ್ರಿಗಳು 30% ಲಾಸ್ ಆಗಿದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದಾಗ ನಾವು ಆ ಬಗ್ಗೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ಏಕೆಂದರೆ ಇವತ್ತಿನ ದಿವಸ ಉದಾಹರಣೆಗೆ ಹೇಳುವುದಾದರೆ GMR ತಣ್ಣೀರುಬಾವಿ, ಇದರಲ್ಲಿ ಒಂದರಲ್ಲಿಯೇ 434 ಕೋಟಿ ರೂಪಾಯಿಗಳ high cost currentನ್ನು ಖರೀದಿ ಮಾಡಿದ್ದಾರೆ. ಅದೇ ರೀತಿಯಾಗಿ co-generationನಲ್ಲಿ 503 ಕೋಟಿ ರೂಪಾಯಿಗಳ ಕರೆಂಟ್ ಖರೀದಿಯಾಗಿದೆ. ಸುಮಾರು 146 ಕೋಟಿ ರೂಪಾಯಿಗಳ purchase ಆಗಿರುವುದು. JWS, Jindalನಿಂದ ಸುಮಾರು 488 ಕೋಟಿ ರೂಪಾಯಿಗಳು, ಅದೇ ರೀತಿಯಾಗಿ ಟಾಟಾ 1.6 ಕೋಟಿ ರೂಪಾಯಿಗಳು, ಎನರ್ಜಿ ಎಕ್ಸ್ಚೇಂಜ್‌ನಿಂದ 28 ಕೋಟಿ ರೂಪಾಯಿಗಳು, NIPTC VSNನಲ್ಲಿ 32 ಕೋಟಿ ರೂಪಾಯಿಗಳು ಇದು ಅಲ್ಲದೆಯೇ ಛತ್ತೀಸ್‌ಘಡ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. 9.5 ರೂಪಾಯಿಯ ಕರೆಂಟ್. ಅವರು ಪುಕ್ಕಟೆಯಾಗಿ ಕರೆಂಟ್‌ನ್ನು ಕೊಟ್ಟಿರುವುದಿಲ್ಲ. ಛತ್ತೀಸ್‌ಘಡ್‌ನಿಂದ ರಾಜ್ಯಕ್ಕೆ 9 ರೂಪಾಯಿ 5 ಪೈಸೆಯದು 296 ಕೋಟಿ ರೂಪಾಯಿಗಳು ಕರೆಂಟ್‌ನ್ನು ಖರೀದಿ ಮಾಡಿದ್ದಾರೆ. ಛತ್ತೀಸ್‌ಘಡ್‌ದು ಏಕೆಂದರೆ ಅಲ್ಲಿ ಬಿಜೆಪಿ ಗೌರ್ನಮೆಂಟ್, ಬಾಕಿಯದು 6.5 ರೂಪಾಯಿಗಳು ಇದ್ದರೆ ಛತ್ತೀಸ್‌ಘಡ್‌ದು 9 ರೂಪಾಯಿ 5 ಪೈಸೆ ಕೊಟ್ಟಿದ್ದಾರೆ. ಇದು ಅಲ್ಲದೆಯೇ GVNLಗೆ ಇವೆಲ್ಲವೂ ಸೇರಿ ಒಟ್ಟು 2598 ಕೋಟಿ ರೂಪಾಯಿಗಳ ಕರೆಂಟ್ ಖರೀದಿಯಾಗಿರುವುದು. ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. Co-generationಗೆ 2 ರೂ. 8 ಪೈಸೆಗೆ agreement ಆಗಿ 10 ವರ್ಷಕ್ಕೆ, ಅದೇ ನಮ್ಮ ಮಂತ್ರಿಗಳೇ ಸಬ್‌ಕಮಿಟಿ ಮೀಟಿಂಗ್‌ನಲ್ಲಿ ಒಂದು ಆದೇಶವನ್ನು ಕೊಡುತ್ತಾರೆ. ಅಲ್ಲಿ ಏನು ಆದೇಶವನ್ನು ಕೊಟ್ಟಿದ್ದಾರೆಂಬ ಬಗ್ಗೆ ದಯಮಾಡಿ ಮಂತ್ರಿಗಳೇ ಹೇಳಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಇಷ್ಟೊಂದು details ಬೇಕಾಗಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಇದರ ಬಗ್ಗೆ clarification ಬೇಕಲ್ಲಾ? ಏಕೆಂದರೆ ನಾನು ಹೇಳುವುದು. ಮಾನ್ಯ ಮಂತ್ರಿಗಳೇ ಸಬ್ ಕಮಿಟಿ ಮೀಟಿಂಗ್‌ನಲ್ಲಿ ಅವರೇ ಹೇಳುತ್ತಾರೆ. ಇದು ಇದ್ದರೆ ಯಾವುದು energyದು ಬೇಕಾಗಿಲ್ಲ. ನಿಮ್ಮ ಕೆಇಆರ್‌ಸಿದು ಪರ್ಮಿಶನ್ ಬೇಕಾಗಿಲ್ಲ. 2 ರೂಪಾಯಿ ಇರುವುದು 7 ರೂಪಾಯಿ ಮಾಡಿ ಎಂದು ಅವರೇ permission ಕೊಡುತ್ತಾರೆ. ಇದರಲ್ಲಿ ಯಾರ್‍ಯಾರು ಇದ್ದಾರೆ, ಎಲ್ಲವು ಖಾಸಗಿ ಸಕ್ಕರೆ ಕಾರ್ಖಾನೆಯಿಂದ co-generation ಬರುವುದು. ಯಾರ್‍ಯಾರು ನಿಮ್ಮ ಮಂತ್ರಿಗಳ ಹೊಡೆತ ಬಂತಾ? ಈಗ ಅದರ ಜೊತೆಗೆ ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ಆಗ ಏನು ನಿಲುವಳಿ ಸೂಚನೆ ಕೊಟ್ಟಿದ್ದೆ, ಸನ್ಮಾನ್ಯ ಮುಖ್ಯಮಂತ್ರಿಗಳ ಮೇಲೆ ನೇರವಾಗಿ ನಾನು ಇವತ್ತಿನ ದಿವಸ ಬೆಳಿಗ್ಗೆ ಏನು ಕಲ್ಲಿದ್ದಲು ಇದೆ ಅಧರ ಬಗ್ಗೆ ಒಂದು ಸವಿಸ್ತಾರವಾದಂತಹ ಚರ್ಚೆ ಮಾಡುವುದಕ್ಕೆ ರೂಲ್ 60ರಲ್ಲಿ ಅವಕಾಶ ಕೊಡಬೇಕೆಂದು ನಾನು ಇವತ್ತು ಬೆಳಿಗ್ಗೆ ಕೇಳಿದ್ದೆ. ಸನ್ಮಾನ್ಯ ಮುಖ್ಯಮಂತ್ರಿಗಳು... ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಒಂದು ಲೆಟರ್ ಕೊಡುತ್ತೇನೆ. ಈಗ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆಯೋ ಅಥವಾ ಮುಖ್ಯಮಂತ್ರಿಗಳೇ ಚರ್ಚೆ ಇಲ್ಲದೆಯೇ ಇವತ್ತಿನ ಸಭೆಯಲ್ಲಿ ಅನೌನ್ಸ್ ಮಾಡಿದ್ದಾರೆ. 2002ರಿಂದ ಇಲ್ಲಿಯವರೆಗೆ ಸಂಪೂರ್ಣವಾಗಿ Retired Judgeನಿಂದ ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಆದರೆ 3ನೇ ತಾರೀಖು ಜುಲೈಯಲ್ಲಿ 2009ರಲ್ಲಿ ಹೈಕೋರ್ಟಿನಲ್ಲಿ ಒಂದು ಆದೇಶವಾಗಿದೆ. ಆ ಆದೇಶದಲ್ಲಿ 3 ಜನ ಅಧಿಕಾರಿಗಳಿಗೆ ತಲಾ 25,000 ರೂಪಾಯಿಗಳ ದಂಡವನ್ನು ಹಾಕಿದ್ದಾರೆ. ಮತ್ತೆ ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳ ಮೇಲೂ ಅದರಲ್ಲಿ ಹೈಕೋರ್ಟಿನ ಆರ್ಡರ್‌ನಲ್ಲಿ ಹೇಳಿದ್ದಾರೆ. ಅಂತಹ ಸನ್ನಿವೇಶ ಇರುವಾಗ Retired Judge ರವರಿಂದ enquiryಯನ್ನು ಮಾಡುವುದಕ್ಕಾಗುತ್ತದೆಯೇ? ಹೈಕೋರ್ಟ್ ಆದೇಶ Single Bench, Division bench ಆದೇಶದ ಮೇಲೆ Retired Judge ಏನಾದರೂ ಮಾಡುತ್ತಾರೆಯೇ? ಅದರ ಜೊತೆಗೆ ನೇರವಾಗಿ ಮುಖ್ಯಮಂತ್ರಿಗಳೇ ಇದರಲ್ಲಿ ನೇರವಾಗಿ involve ಆಗಿದ್ದಾರೆ. KPCL Finance Director ಬರೆಯುತ್ತಾರೆ.

ಆ ಪತ್ರವನ್ನು ತಮಗೆ ಕಳುಹಿಸಿಕೊಡುತ್ತೇನೆ. KPCL MDಯವರೂ ಸಹ ಬರೆಯುತ್ತಾರೆ. ಅದರ ವಿರುದ್ಧ ಮಾನ್ಯ ಮುಖ್ಯಮಂತ್ರಿಗಳು 22ನೇ ತಾರೀಖು 8 ಗಂಟೆ 11 ನಿಮಿಷಕ್ಕೆ ಅವರ ಮನೆಯಿಂದ faxನ್ನು ಕಳುಹಿಸುತ್ತಾರೆ. ನೇರವಾಗಿ ಭಾಟಿಯಾ ಕಂಪನಿಯವರು ಇದು...

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಮಾನ್ಯ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಅದಕ್ಕೆ ನಾನು ನಿಲುವಳಿ ಸೂಚನೆಯನ್ನು ಕೊಡುತ್ತೇನೆಂದು ತಾವು ಹೇಳಿದರೆ ನನ್ನದೇನೂ ಇಲ್ಲ. ಅದರ ಬಗ್ಗೆ ಬೆಳಕನ್ನು ಚೆಲ್ಲಬೇಕಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿರುವ ಬಗ್ಗೆಯೇ ಚರ್ಚೆ ಮಾಡುತ್ತಿರುವುದು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಮುಖ್ಯಮಂತ್ರಿಗಳು ಅವರು ಕೊಟ್ಟಿರುವ ಉತ್ತರದ ಬಗ್ಗೆಯೇ ಚರ್ಚೆ ಮಾಡುತ್ತಿರುವುದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮುಖ್ಯಮಂತ್ರಿಗಳೇ ಆದೇಶವನ್ನು ಕೊಟ್ಟಿರುವುದು.

ಶ್ರೀ ವೆಂಕಟರಾವ್ ನಾಡಗೌಡ: ಅವರು ಅಂದಿರುವುದನ್ನೇ ಹೇಳುತ್ತಿರುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅವರು ಉತ್ತರವನ್ನು ಕೊಟ್ಟಿರುವ ಬಗ್ಗೆಯೇ clarification ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಏಕೆಂದರೆ, ...

ಶ್ರೀ ಹೆಚ್.ಸಿ. ಬಾಲಕೃಷ್ಣ: ನೀವು ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡುತ್ತೇನೆಂದರೆ ನಾವು ಚರ್ಚೆಯನ್ನೇ ಮಾಡುವುದಿಲ್ಲ.

ಅಧ್ಯಕ್ಷರು: ಮಾನ್ಯ ಬಾಲಕೃಷ್ಣರವರೆ, ...

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಇದರಲ್ಲಿ ನೇರವಾಗಿ ಮುಖ್ಯಮಂತ್ರಿಗಳೇ No.1 ಅಪರಾಧಿ. ಇಲ್ಲಿ ದಾಖಲೆ ಇಲ್ಲ. ಅವರು ಲೆಟರನ್ನು ಬರೆದಿದ್ದಾರೆ. ಭಾಟಿಯಾ ಕಂಪನಿಯ ಜೊತೆಯಲ್ಲಿ ಶಾಮೀಲಾಗಿರುವುದಕ್ಕೆ direct letter ಇದೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ನಿಲುವಳಿ ಸೂಚನೆ ನಿಮ್ಮದೂ ಒಂದು ಬಂದಿದೆ. ಮಾನ್ಯ ವಿರೋಧ ಪಕ್ಷದ ನಾಯಕರದೂ ಸಹ ಬಂದಿದೆ.

ಶ್ರೀ ಹೆಚ್.ಡಿ. ರೇವಣ್ಣ: ದಾಖಲಾತಿ ಇದೆಯಲ್ಲಾ? ನನ್ನ ಹತ್ತಿರ ಲೆಟರ್ ಇದೆ. ಮಾನ್ಯ ಮುಖ್ಯಮಂತ್ರಿಗಳ ಲೆಟರ್ ಇದೆ.

ಶ್ರೀ ಶಿವಣ್ಣ: ರೇವಣ್ಣನವರು ಅಪರಾಧಿ ಎಂದು ಹೇಳುವುದು ಸರಿಯಲ್ಲ. ಆರೋಪಿ ಎಂದು ಬೇಕಾದರೆ ಹೇಳಲಿ. ಅಪರಾಧಿ ಎಂದು ಹೇಳಿದರೆ ಏನೋ ಅರ್ಥ ಬರುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: Finance Director ರವರ ಟಿಪ್ಪಣಿ ಇದೆ.

ಅಧ್ಯಕ್ಷರು: ನಿಲುವಳಿ ಸೂಚನೆಯಲ್ಲಿ ಈ ಬಗ್ಗೆ ಪ್ರತ್ಯೇಕವಾಗಿ ಚರ್ಚೆಯನ್ನು ಮಾಡುವಿರಂತೆ.

ಶ್ರೀ ಹೆಚ್.ಡಿ. ರೇವಣ್ಣ: ಆ ಮೇಲೆ ಇದು ಬರುವುದಿಲ್ಲ. ಚರ್ಚೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ರೇವಣ್ಣನವರು ಪ್ರಸ್ತಾಪವನ್ನು ಮಾಡುತ್ತಿದ್ದಾರೆ. ತಾವು ಹೇಗಿದ್ದರೂ ನಿಲುವಳಿ ಸೂಚನೆಯನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿದ್ದೀರಿ. ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಾಗ ಖಂಡಿತವಾಗಿಯೂ ಚರ್ಚೆಯನ್ನು ಮಾಡಿ. ಇನ್ನು ಎರಡನೆಯದು ಖರೀದಿಯ ಬಗ್ಗೆಯೂ ಕೂಡ ನೀವು

ಪ್ರಸ್ತಾಪವನ್ನು ಮಾಡಿದ್ದೀರಿ. ವಿದ್ಯುತ್ ಖರೀದಿಯ ಬಗ್ಗೆ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಡಬೇಕೆಂದು ಎಂದರೆ ನಾನು ನಾಳೆ ಬೆಳಿಗ್ಗೆ ಸೂಕ್ತವಾದಂತಹ ಉತ್ತರವನ್ನು ಕೊಡುತ್ತೇನೆ. ವಿಶೇಷವಾಗಿ ತಾವು 20 ದಿನಗಳ ಕಾಲ ಅಧಿವೇಶನವನ್ನು ಕರೆಯುತ್ತಿದ್ದೀರಿ. ನಿಮ್ಮಲ್ಲಿ ನಾನು ದಯವಿಟ್ಟು ಮತ್ತೆಮತ್ತೆ ಮನವಿಯನ್ನು ಮಾಡುತ್ತೇನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈಗ ಉಳಿಯುವುದು ಇನ್ನು ಒಂದೂವರೆ ದಿನಗಳು, ನಾಳೆ ನಾನು ಈ ಬಗ್ಗೆ ಉತ್ತರವನ್ನು ಕೊಡುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತಿರುವುದು. Extend ಮಾಡುವುದರ ಬಗ್ಗೆ ಹೇಳುವುದು ಬಹಳ ಸುಲಭ. ನಾನು ಇದರ ಬಗ್ಗೆ ಬೆಳಕನ್ನು ಚೆಲ್ಲುವುದರ ಬಗ್ಗೆಯೂ ಕೂಡ ಕಳೆದ ಬಾರಿಯೂ ಕೂಡ ತಮ್ಮಲ್ಲಿ ಪ್ರಾರ್ಥನೆಯನ್ನೂ ಕೂಡ ಮಾಡಿದ್ದೆ. ಮುಂದೆ ನವೆಂಬರ್ ತಿಂಗಳಲ್ಲಿ ಕರೆಯುವಂತಹ ಅಧಿವೇಶನದಲ್ಲಿ ಇದಕ್ಕೋಸ್ಕರ ಎರಡು ಅಥವಾ ಮೂರು ದಿನಗಳು ಇದಕ್ಕೆಂದು ನಿಯುಕ್ತಿ ಮಾಡಿದರೆ ಒಳ್ಳೆಯದು. ಇದು ಬರೀ ಖರೀದಿ ಒಂದಕ್ಕೆ ಸೀಮಿತವಲ್ಲ. ಏನೇನು ತಮಗೆ ಬೇಕು ಎಂಬುದನ್ನು ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ನಮ್ಮ ಕಛೇರಿಗೆ ಏನೇನು ಅವಶ್ಯಕತೆ ಇದೆ ಎಂದು ತಾವು ಕಳುಹಿಸಿದ್ದೀರಿ. ಅದಕ್ಕೆ ಉತ್ತರವನ್ನೂ ಸಹ ನಾವು ಕಳುಹಿಸಿದ್ದೇವೆ. ಇನ್ನು ಏನೇನು ಬೇಕೆಂದು ತಾವು ಮುಂಚಿತವಾಗಿ ಕೇಳಿಕೊಂಡರೆ ಆದಷ್ಟು ಕಳುಹಿಸಿಕೊಡುತ್ತೇವೆ. ಇದಕ್ಕೆ ಎರಡು ದಿನ ತಾವು ಬೆಳಕು ಚೆಲ್ಲಿದರೆ ಆಗುತ್ತದೆ. ಈಗ ಏನಾಗುತ್ತದೆ ಎಂದರೆ ನೀವು ಏನೋ ಒಂದು ಆಪಾದನೆಯನ್ನು ಮಾಡಿದ್ದೀರಿ. ಅದಕ್ಕೆ ನಾವು ಉತ್ತರವನ್ನು ಕೊಟ್ಟುಕೊಂಡು ತಪ್ಪಿಸಿಕೊಂಡು ಹೋಗುವುದಷ್ಟೇ ನಮ್ಮ ಕೆಲಸವಲ್ಲ. ನಿಮ್ಮ ಇಷ್ಟು ವರ್ಷಗಳ ಅನುಭವ. ಇದನ್ನು ಚರ್ಚೆ ಮಾಡಿದಾಗ ನಿಜಕ್ಕೂ ಕೂಡ ಇದರಲ್ಲಿ ತಪ್ಪಾಗಿದ್ದರೆ, ನೇರವಾಗಿ ತಪ್ಪಾಗಿದೆ ಎಂದು ಒಪ್ಪಿಕೊಳ್ಳುತ್ತೇವೆ. ನೀವು ತಪ್ಪು ತಿಳಿದುಕೊಂಡಿದ್ದರೆ, ನಿಮ್ಮ ತಪ್ಪು ತಿಳುವಳಿಕೆಯನ್ನೂ ಸಹ ನಾವು ದೂರ ಮಾಡುತ್ತೇವೆ. ಎರಡೂ ಬೇರೆ ಬೇರೆ. ಈ ಸಭೆ ಖಂಡಿತ ತುಂಬಾ ಪವಿತ್ರವಾದುದು. ಈ ಸಭೆಯಲ್ಲಿ ರಾಜ್ಯದ ಜನಕ್ಕೆ ಏನೇನು ಆಗುತ್ತದೆ ಎಂಬುದೂ ಸಹ ಗೊತ್ತಾಗಬೇಕು. ಏನಾದರೂ ತಪ್ಪಾಗಿದ್ದರೆ ಅದನ್ನು

ತಿದ್ದಿಕೊಳ್ಳಬೇಕಾಗುತ್ತದೆ. ಇಲ್ಲಿ ಎರಡು ಅಂಶ ಇರುವುದರಿಂದ ನಾನು ನಿಮಗೆ ಮನವಿಯನ್ನು ಮಾಡುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಇರುವಂತಹ ಸಂದರ್ಭದಲ್ಲಿ ತಾವು ಕಲ್ಲಿದ್ದಲಿನ ಬಗ್ಗೆ ಪ್ರಸ್ತಾಪವನ್ನು ಮಾಡುತ್ತಿದ್ದೀರಿ. ಹಾಗಾಗಿ ನಾಳೆ ಮುಖ್ಯಮಂತ್ರಿಗಳು ಸದನದಲ್ಲಿ ಇರುತ್ತಾರೋ ಇಲ್ಲವೋ ಅದು ತಮಗೆ ಬಿಟ್ಟಿರುವುದು. ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಉತ್ತರವನ್ನು ಕೊಡಬೇಕಾಗುತ್ತದೆ. KPCL ಛೇರ್ಮನ್ ಅವರೇ ಆಗಿದ್ದಾರೆ. ಹಾಗಾಗಿ ನಾನು ಹೇಳುತ್ತಿರುವುದು, ಅವರು ಇರುವಂತಹ ಸಂದರ್ಭದಲ್ಲಿ ಇದನ್ನು ತೆಗೆದುಕೊಳ್ಳಿ. ಆಗ ಇದನ್ನು ಪ್ರಸ್ತಾಪ ಮಾಡಿ. 'ಮುಖ್ಯಮಂತ್ರಿಗಳೇ ನಂಬರ್-1 ಅಪರಾಧಿಗಳು' ಈ ರೀತಿಯಾಗಿ ನೇರವಾಗಿ ಚಾರ್ಜ್ ಮಾಡುವುದು ಇದೆಯಲ್ಲಾ ಒಬ್ಬ ವಿರೋಧಪಕ್ಷದ ನಾಯಕರಾಗಿ ಅದು ಸರಿಯಲ್ಲ. ಅದಕ್ಕೆ ನಾನು ದಯವಿಟ್ಟು ಮನವಿಯನ್ನು ಮಾಡುತ್ತೇನೆ. ನೀವು ತುಂಬಾ ತೂಕದವರು ಇದ್ದೀರಿ. ನಿಮಗೂ ತುಂಬಾ ಬೆಲೆ ಇದೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಇರುವಂತಹ ಸಂದರ್ಭದಲ್ಲಿ ಸಭಾಧ್ಯಕ್ಷರು ತಮಗೆ ಅವಕಾಶವನ್ನು ಕೊಟ್ಟಾಗ ಅದನ್ನು ದಯವಿಟ್ಟು ಪ್ರಸ್ತಾಪ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಇಂಧನ ಮಂತ್ರಿಗಳು ಒಂದು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಅವರ ಉದ್ದೇಶವೇನೆಂದರೆ ರಾಜ್ಯದ ಜನತೆಗೆ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂಬ ಉದ್ದೇಶವಿದೆ. ಅದರ ಬಗ್ಗೆ ಏನೂ ಹೇಳುವುದಿಲ್ಲ. ನಾನು ಆವತ್ತಿನಿಂದ ಹೇಳುತ್ತಿದ್ದೇನೆ. ಯಾವ ಪಕ್ಷವೇ ಇರಲಿ, ಅದಕ್ಕೂ ಯಾವ ಸಂಬಂಧ ಇಲ್ಲ. ರಾಜ್ಯದ ಜನತೆಗೆ ಬೇಕಾಗಿರುವುದು ವಿದ್ಯುತ್ ಬಗ್ಗೆ ನಾನು ಖಡಾಖಂಡಿತವಾಗಿ ಮಂತ್ರಿಯಾಗಿದ್ದಾಗಲೂ ಹೇಳಿದ್ದೇವೆ. ನೀವು ಮಂತ್ರಿಯಾದ ಮೇಲೂ 2 ದಿವಸ ಸಭೆ ಮಾಡಿ ಎಂದು ಹೇಳಿದ್ದೇನೆ. ಇಂಧನ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನೀವಲ್ಲ ಛೇರ್ಮನ್, ನೀವು ಕಳ್ಳತನ ಮಾಡಿದ್ದೀರೆಂದು ಹೇಳುತ್ತಿಲ್ಲ. KPCL ಅಧ್ಯಕ್ಷರು ಮುಖ್ಯಮಂತ್ರಿಗಳು ಇದ್ದಾರೆ. ಮುಖ್ಯಮಂತ್ರಿಗಳೇ ನೇರವಾಗಿ ಲೆಟರ್ ಬರೆದಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಒಂದು ನಿಮಿಷ ಇರಿ. Detail ಹೇಳುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಕೊಟ್ಟಾಗ ತಾವು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ: ನನಗೆ ನಿಲುವಳಿ ಸೂಚನೆಯ ಬಗ್ಗೆ ಮಾತನಾಡುವುದಕ್ಕೆ ಅದರ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ಅವಕಾಶವನ್ನು ಕೊಡುತ್ತೀರಾ? ಅಂದರೆ ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ನಾನು ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಮಂತ್ರಿಗಳು ನಿಲುವಳಿ ಸೂಚನೆಯ ಬಗ್ಗೆ ಒಪ್ಪಿಕೊಂಡಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ಮಾನ್ಯ ಮಂತ್ರಿಗಳು ಒಪ್ಪಿಕೊಂಡ ಮೇಲೆ ಬೆಳಕನ್ನು ಚೆಲ್ಲುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು: ನನಗೆ ಕನ್‌ವಿನ್ಸ್ ಆಗಬೇಕು. ಅವರು ಒಪ್ಪಿಕೊಂಡ ತಕ್ಷಣ ಅದಕ್ಕೆ ಅವಕಾಶವನ್ನು ಕೊಡುವುದಕ್ಕೆ ಆಗುತ್ತದೆಯೇ? ಈ ಬಗ್ಗೆ ನನಗೆ ಕನ್‌ವಿನ್ಸ್ ಆಗಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಅದರ ಬಗ್ಗೆ ಹೇಳಬೇಕಲ್ಲ?

ಅಧ್ಯಕ್ಷರು: ಆ ಟೈಮ್ ಬಂದಾಗ, ಅದು ಡಿಸ್‌ಕಷನ್ ಬಂದಾಗ, I will take a decision.

ಶ್ರೀ ಹೆಚ್.ಡಿ. ರೇವಣ್ಣ: ಈ ಬಗ್ಗೆ ಬೆಳಕನ್ನು ಚೆಲ್ಲಬೇಕಲ್ಲ?

ಅಧ್ಯಕ್ಷರು: ಅದನ್ನು ನಾನು ಹೇಳುತ್ತೇನೆ. ಎರಡು ನಿಲುವಳಿ ಸೂಚನೆ ಇದೆ. ನೀವು ನಿಲುವಳಿ ಸೂಚನೆಯ ಮೇಲೆ...

ಶ್ರೀ ಶಿವಣ್ಣ: ಮಾನ್ಯ ರೇವಣ್ಣನವರು ಬೆಳಕು ಚೆಲ್ಲಿ ಸಾಕಾಗಿಹೋಗಿದೆ. ಇಡೀ ದೇಶದ ತುಂಬಾ ಬೆಳಕನ್ನು ಚೆಲ್ಲಿ ಸಾಕಾಗಿಹೋಗಿದೆ. ಈಗ ಚೆಲ್ಲುತ್ತಿದ್ದಾರೆ? ದಾನ ಮಾಡಿಕೊಳ್ಳೋಣ ನಾವೆಲ್ಲ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ ಒಂದು ನಿಮಿಷ. ಈಗ ನಿಲುವಳಿ ಸೂಚನೆಯ ಬಗ್ಗೆ ದಯವಿಟ್ಟು ತಾವು ಮಾತನಾಡುವುದಕ್ಕೆ ಹೋಗಬೇಡಿ. ಏಕೆಂದರೆ ಎರಡು ನಿಲುವಳಿ ಸೂಚನೆಗಳು ಇವೆ. ಒಂದು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಜಯಚಂದ್ರರವರು ಕೊಟ್ಟಿರುವಂತಹ ಒಂದು ನಿಲುವಳಿ ಸೂಚನೆ ಇದೆ. ತಮ್ಮದು ಒಂದು ನಿಲುವಳಿ ಸೂಚನೆ ಇದೆ. ಅದರಲ್ಲಿ ಯಾವುದು ತೆಗೆದುಕೊಳ್ಳಬೇಕು ಎಂಬ ನಿರ್ಣಯವನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನೀವು ಪ್ರಸ್ತಾಪ ಮಾಡಿದ ಮೇಲೆ ತೆಗೆದುಕೊಳ್ಳುತ್ತೇನೆ. ಈಗ ಆ subject matterಗೆ ನಾವು touch ಮಾಡುವುದು ಬೇಡ. ಗ್ರಾಮೀಣಾಭಿವೃದ್ಧಿಯ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ತಾವು ಸ್ಪಷ್ಟೀಕರಣವನ್ನು ಕೇಳಿ. ಈ subjectನ್ನು close ಮಾಡೋಣ. ನಾವು ಮುಂದಿನ ವಿಷಯಕ್ಕೆ ಹೋಗೋಣ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಆಪಾದನೆಯನ್ನು ಮಾಡುವುದು ನಿಮ್ಮ ನಿಲುವಳಿ ಸೂಚನೆಯಲ್ಲಿ specific ಆಗಿ ಏನಾದರೂ mention ಮಾಡಿದ್ದರೆ ಆ ಬಗ್ಗೆ ತಾವು ಪ್ರಸ್ತಾಪ ಮಾಡಿ. ಅದನ್ನು ಬಿಟ್ಟು ನೇರವಾಗಿ ಮುಖ್ಯಮಂತ್ರಿಗಳು No.1 ಎಂದು ಈ ರೀತಿಯಾಗಿ ಮಾಡುವುದು ಸರಿಯಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮುಖ್ಯಮಂತ್ರಿಗಳೆ suo motu ಮಾಡಬಹುದು ಎಂದು ಆದೇಶವನ್ನು ಕೊಟ್ಟಿದ್ದಾರಲ್ಲಾ?

ಅಧ್ಯಕ್ಷರು: ಅದರ ಬಗ್ಗೆ ನೀವು interpretation ಮಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಆ ಬಗ್ಗೆ ತನಿಖೆಯನ್ನು ಮಾಡುವ ಬಗ್ಗೆ ಆದೇಶವನ್ನು ಕೊಟ್ಟಿದ್ದಾರಲ್ಲ? ಅವರು ಇಲ್ಲಿ ಚರ್ಚೆ ಮಾಡದೇ ಇದ್ದರೆ ಆ ವಿಷಯವೇ ಬರುತ್ತಿರಲಿಲ್ಲ.

ಅಧ್ಯಕ್ಷರು: ಬಿಡಿ ಅದನ್ನು interpretation ಮಾಡಿ. ನೋಡಿ ಈ ನಿಲುವಳಿ ಸೂಚನೆಯು ಬಂದಾಗ ಅದರ ಬಗ್ಗೆ detail ಆಗಿ ಚರ್ಚೆ ಮಾಡುವಿರಂತೆ. ಎಲ್ಲಿಂದ ಎಲ್ಲಿಗೋ ಹೋಗುವುದು ಬೇಡ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ನಾನು ಎರಡು clarificationನ್ನು ಇಂಧನ ಮಂತ್ರಿಗಳಿಂದ ತಮ್ಮ ಮುಖೇನ ಬಯಸುತ್ತೇನೆ. ಇವತ್ತು ಬೆಳಿಗ್ಗೆ ನಿಲುವಳಿ ಸೂಚನೆಯನ್ನು 9.30 ಗಂಟೆಗೆ ಕೊಟ್ಟಿದ್ದೇನೆ. ಕಲ್ಲಿದ್ದಲಿನಲ್ಲಿ ಭಾಟಿಯಾ ಕಂಪನಿ ಮತ್ತು MMTC ಕೊಟ್ಟಿರುವಂತಹದ್ದು ಇದೆ. ನಾನು ಅವರ ಗಮನಕ್ಕೆ ತರಬೇಕಲ್ಲವೇ? ಇದನ್ನು ಅವರು ಹೇಳಿದ್ದಾರಲ್ಲ?

ಶ್ರೀ ಕೆ.ಎಸ್. ಈಶ್ವರಪ್ಪ: ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ನಿಲುವಳಿ ಸೂಚನೆ ಇದ್ದ ಮೇಲೆ ಅವರು ಹೇಗೆ ಮಾತನಾಡಿದರು?

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಸಭಾಧ್ಯಕ್ಷರಿಗೆ ಕನ್‌ವಿನ್ಸ್ ಆದ ಮೇಲೆ ನಿಲುವಳಿ ಸೂಚನೆಯನ್ನು ಕೊಡುವುದು ಬಿಡುವುದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಅವರು ಹೇಳುತ್ತಿದ್ದಾರೆ. ದಯವಿಟ್ಟು ಈ ಸಂದರ್ಭದಲ್ಲಿ ಆ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಹೆಚ್.ಡಿ. ರೇವಣ್ಣ: ಈಗ ನಾನು ಇಂಧನ ಮಂತ್ರಿಗಳಲ್ಲಿ ಮನವಿಯನ್ನು ಮಾಡುವುದು ಇಷ್ಟೆ. ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟ ಮೇಲೆ ಮುಖ್ಯಮಂತ್ರಿಗಳು ಹೆದರಿ, ಅವರಿಗೆ ಏನಾಗುತ್ತದೆ ಎಂದರೆ ಎಲ್ಲಿ ನನ್ನ ಮೇಲೆ enquiry ಎಲ್ಲಾ ಆಗುತ್ತದೆ ಎಂದು ತಿಳಿದಿದ್ದಾರೆ. ಅಂತ ಹೇಳುವಂತಹ ಪ್ರಮೇಯ ಏನಿತ್ತು? ನಿಲುವಳಿ ಸೂಚನೆಯ ಮೇಲೆ ಬೆಳಕನ್ನು ಚೆಲ್ಲಬಹುದಾಗಿತ್ತಲ್ಲ?

ಶ್ರೀ ಕೆ.ಎಸ್. ಈಶ್ವರಪ್ಪ: ಹೆದರಿ ಎಂದರೆ 2002ನೇ ಇಸವಿಯಿಂದಲೂ ಎಂದರಲ್ಲಾ ಅದಕ್ಕೆ ಹೇಳಿರುವುದು. ನೀವು ಹೆದರುತ್ತಿದ್ದೀರಾ, ಅವರು ಹೆದರುತ್ತಿದ್ದಾರಾ? ದಯವಿಟ್ಟು ಆ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಹೆಚ್.ಡಿ. ರೇವಣ್ಣ: ಕೆಂಗಲ್ ಹನುಮಂತಯ್ಯನವರ ಕಾಲದಿಂದಲೂ ಮಾಡಿ. ನಾನು ಏನೂ ಹಿಡಿದುಕೊಂಡಿಲ್ಲ. ನನ್ನ ಕಾಲದಿಂದಲೂ ಅಲ್ಲಾ, ಕೆಂಗಲ್ ಹನುಮಂತಯ್ಯನವರ ಕಾಲದಿಂದಲೂ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಕೊಡುತ್ತೇನೆಂದು ಹೇಳುತ್ತಿದ್ದಾರೆ. ಹೆದರಿ ಓಡಿಹೋಗುವಂತಹ ಅವಶ್ಯಕತೆ ಏನೂ ಇಲ್ಲ. 2002ರಿಂದಲೂ ಮಾಡುತ್ತೇವೆಂದರೆ, ನೀವು ಹೆದರಿದ್ದರೇನೋ ಎಂದು ನನಗೆ ಅನುಮಾನ ಬರುತ್ತಿದೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಹೆದರಿಲ್ಲ. ಇವತ್ತು ಹೆದರುವುದಿಲ್ಲ. ಮುಂದೆಯೂ ಕೂಡ ಹೆದರುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಆ ಹೆದರುವಂತಹ ಕುಲ ನಮ್ಮ ಮುಖ್ಯಮಂತ್ರಿಯದೂ ಅಲ್ಲ. ಅದಕ್ಕೆ ಬೇಡ. ಅವರು ಬಂದಾಗ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಲೋಕಾಯುಕ್ತದವರ ಮೇಲೆ ನಿಮಗೆ ನಂಬಿಕೆ ಇದೆಯೇ? Retired Judge ಕೈಯಲ್ಲಿ enquiry ಮಾಡಿಸುತ್ತೇನೆಂದು ಹೇಳುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ: ಎಲ್ಲಿಂದ ಎಲ್ಲಿಗೋ ಹೋದರೆ ನಾನು ಏನು ಹೇಳಲಿ? ಇದರ ಬಗ್ಗೆ ಹೇಗೆ ಉತ್ತರ ಕೊಡುವುದು. ಇದು ಒಳ್ಳೆಯದು ಅಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರು ತಾವು ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡುತ್ತೀರೆಂದ ಮೇಲೆ ಬೆಳಕನ್ನು ಚೆಲ್ಲುವುದಕ್ಕೆ ಅವಕಾಶವಿದೆ ಎಂದು ನಾನು ಭಾವಿಸಿ ಬೇರೆ ವಿಷಯ ಮಾತನಾಡುತ್ತೇನೆ. ಇವರು ಒಂದೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಏಕೆಂದರೆ ಒಂದರಿಂದ ಸುಮಾರು 37 ಭವಿಷ್ಯದ ಹೆಜ್ಜೆಗಳು ಎಂದು ಕೊಟ್ಟಿದ್ದಾರೆ. ಅದಕ್ಕೇನಾದರೂ ಹಣಕಾಸು

ಇಲಾಖೆಯವರು ಅನುಮತಿಯನ್ನು ಕೊಟ್ಟಿದ್ದಾರೋ? ಅಥವಾ ಸುಮ್ಮನೆ ಈ ಸರ್ಕಾರದ ಕಳೆದ ಒಂದುಕಾಲು ವರ್ಷದಲ್ಲಿ ನಡೆದಿರುವುದನ್ನು ಮುಚ್ಚಿಕೊಳ್ಳಬೇಕೆಂದು ಹೇಳಿ ಏಕೆಂದರೆ ಹಗರಣಗಳಿವೆ, ಇನ್ನೂ ಚರ್ಚೆಗೆ ಬರುತ್ತವೆ, ಸಿದ್ದರಾಮಯ್ಯನವರು ಹಿಡಿದುಕೊಳ್ಳುತ್ತಾರೆ, ಜಯಚಂದ್ರರವರು ಹಿಡಿದುಕೊಳ್ಳುತ್ತಾರೆ, ರೇವಣ್ಣ, ಬಾಲಕೃಷ್ಣ ಹಿಡಿದುಕೊಳ್ಳುತ್ತಾರೆಂಬ ಅಂಜಿಕೆಗೆ ಇದನ್ನು ಏನಾದರೂ ಬಿಟ್ಟುಬಿಟ್ಟಿದ್ದಾರೋ ಅಥವಾ ಇದಕ್ಕೇನಾದರೂ ಹಣಕಾಸು ಇಟ್ಟಿದ್ದಾರೋ ದಯವಿಟ್ಟು ಹೇಳಿ, ಹಣಕಾಸು ಇದ್ದರೆ ದಯಮಾಡಿ ಈ 37 ಭವಿಷ್ಯದ ಹೆಜ್ಜೆಗಳಿಗೆ ನಾವು ಹಣ ಇಟ್ಟಿದ್ದೇವೆಂದು ಹೇಳಿದರೆ ನಾವು ವಿರೋಧ ಪಕ್ಷದವರೆಲ್ಲಾ ಸರ್ಕಾರಕ್ಕೆ ತಲೆಬಾಗುತ್ತೇವೆ. ಈಗ ಒಂದು ಉದಾಹರಣೆಗೆ ಹೇಳುವುದಾದರೆ, ಇದು ಒಂದು ಸಪ್ಲಿಮೆಂಟರಿ ಬಜೆಟ್ ಏನೋ ಗೊತ್ತಿಲ್ಲ. ಏಕೆಂದರೆ ಒಂದು ಕಡೆ 750 ಕೋಟಿ ರೂ.ಗಳ ಸಾಲ ತೆಗೆದುಕೊಳ್ಳಬೇಕೆಂಬ ಅರ್ಜಿ ಹಾಕಿದ್ದೇವೆಂದು ಮೊನ್ನೆ ಹಣಕಾಸು ಕಾರ್ಯದರ್ಶಿಯವರು ಒಂದು statement ಮಾಡಿದ್ದಾರೆ. ಇನ್ನೊಂದು ಕಡೆ ಬೆಂಗಳೂರು ನಗರಕ್ಕೆ 22,000 ಕೋಟಿ ರೂ.ಗಳು ಇವೆ ಎಮದು ಹೇಳುತ್ತಾರೆ. ಅದರಲ್ಲಿ 10,000–00 ಕೋಟಿ ರೂ.ಗಳನ್ನು ತೆಗೆದು ಹಾಕಿ ಗ್ರಾಮೀಣ ಪ್ರದೇಶಕ್ಕೆ extra finance ಅನ್ನು ಈ 37 itemsಗೆ ಏನಾದರೂ ಇಟ್ಟಿದ್ದೇವೆಂದು ಹೇಳಲಿ. ಏಕೆಂದರೆ ಸಿದ್ದರಾಮಯ್ಯನವರು 5 ವರ್ಷ ಹಣಕಾಸು ಸಚಿವರಾಗಿದ್ದರು. ಅವರು ಈಗ ಸೊನ್ನೆಗೆ ತಿರುಗಿಸುತ್ತಿದ್ದಾರೆ. ಈಗ ಯಾವುದಾದರೂ ಒಂದಕ್ಕಾದರೂ ಗೊತ್ತು ಗುರಿ ಇದೆಯೇ ಸ್ವಾಮಿ? ಅಧ್ಯಕ್ಷರೆ, ಈ 37 items ನಲ್ಲಿ ಯಾವುದಕ್ಕಾದರೂ ಒಂದಕ್ಕೆ ಸ್ಪಷ್ಟವಾದ ಗೊತ್ತುಗುರಿ ಇದೆಯೇ? ಮೂರು ದಿನ 224 ಕ್ಷೇತ್ರದ ವಿಧಾನ ಸಭಾ ಸದಸ್ಯರು ರಾತ್ರ 8–9 ಗಂಟೆಯವರೆಗೆ ಚರ್ಚೆ ನಡೆಸಿದ್ದಾರೆ. ಅಧಿಕಾರಿಗಳು ಬರೆದುಕೊಟ್ಟ ಸ್ಟೇಟ್‌ಮೆಂಟ್ ಅನ್ನು ಮುಖ್ಯಮಂತ್ರಿಗಳು ಓದಿದರು. ಹಣಕಾಸು, ಯೋಜನಾ ಇಲಾಖೆಯದು ಇಲ್ಲ. ಅಧಿಕಾರಿಗಳು ಬರೆದುಕೊಟ್ಟ ಸ್ಟೇಟ್‌ಮೆಂಟ್ ಅನ್ನು ಓದಿ ಬಿಟ್ಟು ನಾನು ದೆಹಲಿಗೆ ಹೋಗಬೇಕು ಎಂದರು. ರಾಜ್ಯದ ಐದು ಕೋಟಿ ರೈತರು ಮುಖ್ಯವೋ, ದೆಹಲಿಯಲ್ಲಿ ಯಾವುದೋ ಒಂದು ಪ್ರಶಸ್ತಿ ಕೊಡುತ್ತಾರಲ್ಲಾ, ಆ ಪ್ರಶಸ್ತಿ

ಮುಖ್ಯವೋ ಅದರ ಬಗ್ಗೆ ಹೇಳಲಿ. ಒಂದು ಕಡೆ ರೈತರ ಬಗ್ಗೆ ಪ್ರಮಾಣ ವಚನ ಸ್ವೀಕಾರ ಮಾಡುತ್ತಾರೆ. ಇನ್ನೊಂದು ಕಡೆ ರೈತರ ಹೆಸರಿನಲ್ಲಿ ನಿಮ್ಮ ಗ್ರಾಮೀಣಾಭಿವೃದ್ಧಿ, ಕೃಷಿ ಅಭಿವೃದ್ಧಿ ಎಲ್ಲಾ ಮಾಡುತ್ತೇವೆಂದು ಹೇಳಿ, ವಿರೋಧ ಪಕ್ಷದವರು ಕೈ, ಕಾಲು ಕಟ್ಟಿ ಒಪ್ಪಿಸಿದ್ದೇನೆ ಎಂದು ಹೇಳುತ್ತಾರೆ. ಎಲ್ಲಾ ಮಾಡಿ, ಪುಸ್ತಕ ಪ್ರಿಂಟ್ ಮಾಡಿಸಿ ನೀವು ಕಳುಹಿಸಿದಿರಲ್ಲಾ, ಏನಾಯಿತು ಸ್ವಾಮಿ? ನಿಮ್ಮ ಶ್ರೀನಿವಾಸಮೂರ್ತಿಯವರ ಪುಸ್ತಕ ಏನಾಯಿತು? ಜುಲೈ 14ರಂದು ನಿಮ್ಮ ಶ್ರೀನಿವಾಸಮೂರ್ತಿಯವರು, ಹಣಕಾಸಿನ ಕಾರ್ಯದರ್ಶಿಯವರು ಪುಸ್ತಕವನ್ನು ಪ್ರಿಂಟ್ ಮಾಡಿಸಿ ತಂದರು. ಅದು ಏನಾಯಿತು ಎಂದು ಹಣಕಾಸು ಕಾರ್ಯದರ್ಶಿಯವರನ್ನೇ ನಾವು ಹೇಳುತ್ತೇವೆ. ಇವೆರಡಕ್ಕೂ ಹಣಕಾಸು ಕಾರ್ಯದರ್ಶಿಯವರು, ಹಣಕಾಸು ಸಚಿವರು ಏನು ಉತ್ತರ ಹೇಳುತ್ತಾರೆ? ಅಥವಾ ಸುಳ್ಳು ಹೇಳುವುದಾದರೆ ಸುಳ್ಳು ಹೇಳಿದ್ದೇವೆಂದು ಹೇಳಲಿ. ಇನ್ನೊಂದು ನಮ್ಮ agriculture policy ಅದನ್ನು ತೆಗೆದುಕೊಂಡು ಹೋಗಿ ಪುಸ್ತಕದಲ್ಲಿ ಹಾಕಿದ್ದಾರೆ. ಈ ಅಗ್ರಿಕಲ್ಚರ್ ಪಾಲಿಸಿ ಬಗ್ಗೆ ಏನೂ ಇಲ್ಲವೇ ಇಲ್ಲ. ಇದಕ್ಕೇನಾದರೂ ಇಷ್ಟು ಹಣವನ್ನು ಇಡುತ್ತೇವೆಂದು ಹೇಳಿದ್ದೀರಾ? ಕೃಷಿ ಇಲಾಖೆಯಲ್ಲಿ ಇವತ್ತು ಮೂರು ಸಾವಿರ ಹುದ್ದೆಗಳು ಖಾಲಿ ಇವೆ, ತೋಟಗಾರಿಕೆ ಇಲಾಖೆಯಲ್ಲಿ ಒಂದೂವರೆ ಸಾವಿರ ಹುದ್ದೆಗಳು ಖಾಲಿ ಇವೆ. ಅದಕ್ಕೆನಾದರೂ ಆರು ತಿಂಗಳಲ್ಲಿ ನೇಮಕಾತಿ ಮಾಡಿ ನಮ್ಮ ರೈತಾಪಿ ಜನಕ್ಕೆ ಸರಿಯಾದ ರೀತಿಯಲ್ಲಿ ತಿಳುವಳಿಕೆ ಕೊಡುತ್ತೇವೆಂದು ಏನಾದರೂ ಕಾರ್ಯಕ್ರಮ ಇದರಲ್ಲಿ ಹೇಳಿದ್ದಾರೆಯೇ? ಯಾವುದೂ ಇಲ್ಲ. ತರಬೇತಿ ಪಡೆದು ಈ ಹುದ್ದೆಗೆ ಬರುವ ವೇಳೆಗೆ ಇನ್ನೂ ಮೂರು ವರ್ಷಕ್ಕೆ ಈ ಸರ್ಕಾರ ಇರುತ್ತದೋ ಇಲ್ಲವೋ ಗೊತ್ತಿಲ್ಲವೆಂದು ಅವರೇ ಹೇಳಿದರು. ಇವತ್ತು ರೈತರ ಹೆಸರಿನಲ್ಲಿ ಮುಖ್ಯಮಂತ್ರಿಗಳು ಪ್ರಮಾಣ ವಚನವನ್ನು ತೆಗೆದುಕೊಂಡು, ಮೂರು ದಿವಸ ಸದನ ಕರೆದು ರೈತರ ಹೆಸರಿನಲ್ಲಿ ಎಲ್ಲಾ ಸದಸ್ಯರು ಸಲಹೆಗಳನ್ನು ಕೊಟ್ಟು ಪಾಪ ಅವರು ನಮ್ಮ ಆಡಳಿತ ಪಕ್ಷದವರಿರಬಹುದು, ವಿರೋಧ ಪಕ್ಷದವರಿರಬಹುದು, ಎಲ್ಲರೂ ಏನೋ ನಮ್ಮ ಮುಖ್ಯಮಂತ್ರಿಗಳು ನಮ್ಮ ರೈತಾಪಿ ಜನಕ್ಕೆ ಒಂದು ಕೊಡುಗೆಯನ್ನು ಕೊಡುತ್ತಾರೆ ಅಂದರೆ ಅವರು 2002 ರಿಂದ ಕೆ.ಇ.ಬಿ. ಬಗ್ಗೆ

ತನಿಖೆ ಮಾಡಿಸುತ್ತೇನೆ ಎಂದು ಹೇಳುತ್ತಾರೆ ಮಾಡಿಕೊಳ್ಳಲಿ, ನಾನೇನೂ ಬೇಡವೆನ್ನುವುದಿಲ್ಲ. ಕೆಂಗಲ್ ಹನುಮಂತಯ್ಯನವರ ಕಾಲದಿಂದಲೇ ಮಾಡಲಿ. ಆಮೇಲೆ ಈ energy loss 30-20%. ಏಕೆಂದರೆ 5,000 ಕೋಟಿ ರೂ.ಗಳನ್ನು ಸಾಲ ಮಾಡಿದರಲ್ಲ ಈ ಐದು ಕಂಪನಿಯದು; ಅದು ಒಂದು ಮಾತು ಹೇಳಿದರೆ ಸಾಕಾಗಿತ್ತು. ಇಲ್ಲವೆಂದು ಹೇಳಲಿ. 5,900 ಕೋಟಿ ರೂ.ಗಳಷ್ಟು ಈ ಐದು ಕಂಪನಿಯಿಂದ ನಷ್ಟವಾಗಿಲ್ಲವೆಂದು ಅವರು ಹೇಳಿಬಿಟ್ಟರೆ ಅವರೇನು ಹೇಳುತ್ತಾರೆ ಅದಕ್ಕೆ ನಾನು ಭಾಗಿಯಾಗುತ್ತೇನೆ. ಏಕೆಂದರೆ ಇವತ್ತು ಇದು ಭವಿಷ್ಯದ ಹೆಜ್ಜೆಗಳಲ್ಲ. ಇಡೀ ರಾಜ್ಯದ ಒಂದೂಕಾಲು ವರ್ಷದ ಬಿಜೆಪಿಯ ಆಡಳಿತದ ಬೋಗಸ್ ಹೆಜ್ಜೆಗಳು. ಈ ಒಂದೂಕಾಲು ವರ್ಷದಲ್ಲಿ ಇವರು ಮಾಡಿರುವಂಥ ಹಗರಣಗಳನ್ನು ಮುಚ್ಚಿಹಾಕಲಿಕ್ಕೆ ಇದು. ಮೂರು ದಿವಸ ಏನೋ ವಿರೋಧ ಪಕ್ಷದವರು ಆರೋಪ ಮಾಡುತ್ತಾರೆಂದು ಚರ್ಚೆಯಾಗಿದೆ. ಇವರಿಗೆ ನಿಜವಾದಂಥ ಕಾಳಜಿ ಇದ್ದರೆ ಸದನವನ್ನು ಇನ್ನೂ ಮೂರು ದಿವಸ ಹೆಚ್ಚಿಗೆ ಮಾಡಲಿ, ಪಾಪ ನಮ್ಮ ಇಂಧನ ಸಚಿವರಾದ ಈಶ್ವರಪ್ಪನವರಿಗೆ ಕೆಲಸ ಮಾಡಬೇಕೆಂಬ ಮನಸ್ಸಿದೆ, ಕೆಲಸ ಮಾಡಲಿಕ್ಕೆ ಬಿಡುತ್ತಿಲ್ಲ. ಕೈ ಆಡಿಸುತ್ತಿದ್ದಾರೆ. ಇಂಧನ ಇಲಾಖೆಯ ಸಚಿವರಿಗೆ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು: ನೀವೇ ಒಬ್ಬೊಬ್ಬರನ್ನು ಎಬ್ಬಿಸಿ, ಆಗಲೇ ಕಟ್ಟಾರವರ ಕಡೆ ಕೈಮಾಡಿದಿರಿ. ಅವರು ಏಳಲಿಲ್ಲ. ಈಗ ಈಶ್ವರಪ್ಪನವರ ಕಡೆ ಕೈ ಮಾಡುತ್ತಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ: 20–20 ತಿಂಗಳು ಎಂದು ನಾವು ಲೆಕ್ಕ ಹಾಕಿಕೊಂಡಿದ್ದೆವು. 20–0 ಆಯಿತು. ಆ 20 ತಿಂಗಳಿನಲ್ಲಿ ಜನತಾ ದಳದ ಒಬ್ಬ ಶಾಸಕರಿಗೂ ಕೂಡ ಅಧಿಕಾರ ಮಾಡಲು ಅವಕಾಶ ಕೊಡದೇನೇ ಅಣ್ಣ ತಮ್ಮಂದಿರು ಇಬ್ಬರೇ ನಡೆಸಿ ಅದನ್ನೇ ಇವತ್ತು ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆಂದು ಅಭಿಪ್ರಾಯವನ್ನು ತರುತ್ತಿದ್ದೀರಲ್ಲಾ ದಯವಿಟ್ಟು ನೀವು ಈ ರಾಜ್ಯದ ಜನತೆಯ ಕ್ಷಮೆ ಕೇಳಲಿಕ್ಕೆ ನೀವು ಯೋಗ್ಯರು. ನೀವು ಕೇಳುತ್ತೀರೋ, ಬಿಡುತ್ತೀರೋ ನಿಮಗೆ ಬಿಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಆ 20–20 ಇದೆಯಲ್ಲಾ, ಆ 20–20 ಇಲ್ಲಿದೆ ನೋಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಪಾರ್ಲಿಮೆಂಟ್ ಚುನಾವಣೆಯಲ್ಲಿ ಜನ ಏನು ಎಂದು ನಿಮಗೆ ತಿಳಿಸಿದ್ದಾರೆ. ಅಸೆಂಬ್ಲಿ ಬೈ ಎಲೆಕ್ಷನ್‌ನಲ್ಲಿ ಏನು ತೀರ್ಮಾನವೆಂದು ತಿಳಿಸಿದ್ದಾರೆ. ಎಲ್ಲಾ ಕಡೆ ಯಾರ್‍ಯಾರ ಯೋಗ್ಯತೆ ಏನು ಎಂದು ಎಲ್ಲರೂ ತಿಳಿಸಿದ್ದಾರೆ. ಈ ರಾಜ್ಯದ ಜನತೆ ತೀರ್ಮಾನಿಸಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಅಧ್ಯಕ್ಷರೆ, ಈಗ ಚನ್ನಪಟ್ಟಣದಲ್ಲಿ 5.30 ಗಂಟೆ ಆದ ಮೇಲೆ ಏನು ಮಾಡುತ್ತಾರೆ ಕೇಳಿ ಸ್ವಾಮಿ? ಇವರ ತರಹ ಮಾಡಿದರೆ 50–60 ಸೀಟುಗಳು ಬರುತ್ತವೆ.

(ಗೊಂದಲ)

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: ನಿಮ್ಮ ತರಹ ದುಂಡಾವರ್ತಿ ಮಾಡುವುದಿಲ್ಲ. ನೀವು ಅಲ್ಲೇ ಇದ್ದಿರಿ. ನಿಮ್ಮ ಕಾರ್ಯಕರ್ತರಿಗೆ ಬೇರೆಯವರ ಮೇಲೆ ಹಲ್ಲೆ ಮಾಡಿ ಎಂದು ಹೇಳಿದಿರಾ? ಇದೇನೇ ನಿಮ್ಮ ಕಾರ್ಯಕರ್ತರಿಗೆ ಕಲಿಸುವುದು? ಇದೇನಾ ನಿಮ್ಮ ರಾಜಕೀಯ? ನಿಮ್ಮ ನಡವಳಿಕೆ ಇದೇನಾ? ನಡೆಯಬೇಕಾಗಿರುವ ವಿಚಾರ ಇದೆ ಏನು? ಇವತ್ತು ಉಪ ಚುನಾವಣೆಗಳಲ್ಲಿ ಯಾರ್‍ಯಾರಿಗೆ ಏನೇನು ಪಾಠ ಕಲಿಸಬೇಕು, ಎಲ್ಲಾ ಕಲಿಸಿದ್ದಾರೆ. ಇದರಿಂದ 15 ತಿಂಗಳಿನಲ್ಲಿ ಏನೂ ಮಾಡಲಿಲ್ಲ. ಎಲ್ಲಾ ನಾಶವಾಗಿ ಹೋಗಿದೆ. ರಾಜ್ಯ ಛಿದ್ರ, ಛಿದ್ರವಾಗಿ ಹೋಗಿದೆ. ಏನು ವರದಿ ಮಾಡುತ್ತಿರುವುದು ನೋಡಿದರೆ, ಯಾರೋ ಹೊತ್ತುಕೊಂಡು ಆ ಕಡೆ ಹಾಸನಕ್ಕೆ ಹೊರಟು ಹೋಗಿಬಿಟ್ಟಿದ್ದಾರೆಂದು ಅನ್ನಿಸುತ್ತಿದೆ. ಸ್ವಾಮಿ, ಹಾಸನಕ್ಕೂ ಹೋಗಲಿಲ್ಲ. ಶಿಕಾರಿಪುರಕ್ಕೂ ಹೋಗಲಿಲ್ಲ. ರಾಜ್ಯದ ಜನತೆ ಸುಖವಾಗಿದ್ದಾರೆ. ಚೆನ್ನಾಗಿ ಆಡಳಿತ ನಡೆಯುತ್ತಿದೆ. ಹಾಗಾಗಿ ರೇವಣ್ಣನವರು ಏನೂ ಆತಂಕಪಡಬೇಕಾದ ಅವಶ್ಯಕತೆ ಇಲ್ಲ.

ಅಧ್ಯಕ್ಷರು: ರೇವಣ್ಣನವರು ಒಬ್ಬೊಬ್ಬರನ್ನೇ ಎಬ್ಬಿಸುತ್ತಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಈಗ 20 ತಿಂಗಳೂ ಆಪರೇಷನ್ ಕಮಲ ಮಾಡಿದರು. ಸೋಮಣ್ಣ, ಯೋಗೀಶ್‌ರವರು ಆ ಕಥೆ ಮಾಡಲಿಕ್ಕೆ ದಯಮಾಡಿ ಹೋಗಬೇಡಿ, ನೀವು ಅದನ್ನು ನಿಲ್ಲಿಸಿ, ಜನ ಚೆನ್ನಾಗಿ ತೀರ್ಮಾನ ಮಾಡಿದ್ದಾರೆ. ಆಪ್ಪರೇಷನ್ ಕಮಲಕ್ಕೆ ಏನು ಬುದ್ಧಿ ಕಲಿಸಬೇಕೆಂದು ಜನ ತೀರ್ಮಾನ ಮಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು: ಸೋಮಣ್ಣನವರ ಕ್ಷೇತ್ರದಲ್ಲಿ ಒಳ ಒಪ್ಪಂದ ಆಗಿದೆ.

ಶ್ರೀ ಹೆಚ್.ಡಿ. ರೇವಣ್ಣ: ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಎರಡು ವಿಷಯಗಳನ್ನು ಬಹಳ ಗಂಭೀರವಾಗಿ ಚರ್ಚೆ ಮಾಡಿದ್ದಾರೆ, ಏಕೆಂದರೆ ಬೂಕನಕೆರೆಯದು ರಾಜ್ಯದಲ್ಲಿ quote ಮಾಡಿದರು. ಸರ್ ಕ್ಲಾರಿಫಿಕೇಷನ್ ಕೇಳಬೇಕಲ್ಲವೇ? ಅಲ್ಲಿ ಮೂವತ್ತನಾಲ್ಕು ಕೋಟಿ ರೂ.ಗಳಷ್ಟು ಹಣವನ್ನು ಕೊಟ್ಟಿದ್ದಾರೆ....

ಶ್ರೀ ಕೆ.ಎಸ್. ಈಶ್ವರಪ್ಪ: ಇವರಿಗೆ ಇನ್ನೂ ಮೂರು ದಿವಸಗಳನ್ನು ಕೊಟ್ಟರೂ ಮತ್ತೆ ಕ್ಲಾರಿಫಿಕೇಷನ್ ಕೇಳುತ್ತಾರೆ. ಇಂಥ ವ್ಯವಸ್ಥೆ ಆದರೆ ಹೇಗೆ? ಬಹಳ ಜನ ಹೊಸ ಶಾಸಕರು ಬಂದಿದ್ದಾರೆ, ಅವರು ಮಾತನಾಡಲಿ, ಕ್ಲಾರಿಫಿಕೇಷನ್ ಅನ್ನು ಹೀಗಾ ಕೇಳುವುದು? ಗಂಟೆ ಗಟ್ಟಲೆ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಬೂಕನಕೆರೆಗೆ ನೀವು ದುಡ್ಡೇ ಕೊಟ್ಟಿಲ್ಲವೇ? ಅದರ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಮೂರು ಮೂರು ದಿವಸ ಇಷ್ಟೊತ್ತು ಮಾತನಾಡುತ್ತಾ ಇದ್ದರೆ ಹೇಗೆ? ಸಿದ್ದರಾಮಯ್ಯನವರು ಎಷ್ಟು ಚೆನ್ನಾಗಿ ಪ್ರಸ್ತಾಪ ಮಾಡಿದರು.

ಶ್ರೀ ಹೆಚ್.ಡಿ. ರೇವಣ್ಣ: ಸಿದ್ದರಾಮಯ್ಯನವರು ಮಾತನಾಡಿದಾಗ ನೀವು. ಹೊರಗಡೆ ಇದ್ದಿರಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಈಗ ಸಮಗ್ರವಾಗಿ ಚರ್ಚೆ ಮಾಡಿ ಎಂದು ನೀವೇ ಅಧಿವೇಶನವನ್ನು ಕರೆದಿರುವುದು, ನಾವು ಅಧಿವೇಶನ ಕರೆದಿಲ್ಲ. ಇನ್ನು ಚರ್ಚೆ ಸಮಗ್ರವಾಗಿ ಆಗಿಲ್ಲ. ಸಮಗ್ರವಾಗಿ ಆಗಲಿ ಎಂದು ಚರ್ಚೆ ಮಾಡುತ್ತಿದ್ದೇವೆ. ನಾವು ಅಧಿವೇಶನವನ್ನು ಕರೆದೆವೆ? ನೀವೇ ಅಧಿವೇಶನ ಕರೆದದ್ದು, ಈ ರಾಜ್ಯದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ ಎಂದು. ಬೂಕನಕೆರೆಯಿಂದ ಹಿಡಿದು ಶಿಕಾರಿಪುರದವರೆಗೆ ಏನೇನು ಗ್ರಾಮೀಣಾಭಿವೃದ್ಧಿ ಆಗಿದೆ ಎಂಬ ವಿಚಾರಗಳನ್ನು ವಿಸ್ತಾರವಾಗಿ ಅವರು ಹೇಳಲಿ ಬಿಡಿ. ಸಿದ್ದರಾಮಯ್ಯನವರು ಬೇರೆ ಧಾಟಿಯಲ್ಲಿ ಹೇಳಿದರು. ಇವರು ಅವರ ಧಾಟಿಯಲ್ಲಿ ಸ್ವಲ್ಪ ಮಾತನಾಡಲಿಕ್ಕೆ ಅವಕಾಶ ಕೊಡಿ. ಆಗಲೇ ಮುಖ್ಯಮಂತ್ರಿಗಳು ಮಾತನಾಡುವಾಗ ಏನು ಹೇಳಿದಿರಿ, ಮಧ್ಯೆ ಮಾತನಾಡಬೇಡಿ ಎಂದಿರಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ ಎಂದು ಹೇಳಿಬಿಟ್ಟು ನೀವು ಈಗಲೂ ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ ಸ್ವಾಮಿ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಈಗ ಬಹಳ ಜನ ಹೊಸ ಶಾಸಕರು ಇದ್ದಾರೆ. ತಾವೆಲ್ಲರೂ ಕೂಡ ಎರಡೂ ಮೂರು ದಿವಸ ತುಂಬಾ ವ್ಯವಸ್ಥಿತವಾಗಿ, ವಿವರವಾಗಿ ಮಾತನಾಡಿದಿರಿ. ತುಂಬಾ ಚೆನ್ನಾಗಿಯೂ ಮಾತನಾಡಿದ್ದೀರಿ ಎಂದು ಮುಖ್ಯಮಂತ್ರಿಗಳೇ ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಕ್ಲಾರಿಫಿಕೇಷನ್ ದೃಷ್ಟಿಯಿಂದ ವಿರೋಧ ಪಕ್ಷದ ನಾಯಕರು ನಿಜಕ್ಕೂ ಚೆನ್ನಾಗಿ ಬೆಳಕು ಚೆಲ್ಲಿದ್ದಾರೆ. ರೇವಣ್ಣನವರೂ ಸಹ ಹಿರಿಯರು, ಅನೇಕ ವರ್ಷಗಳಿಂದ ಈ ಸದನದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ತಮ್ಮ ಕ್ಲಾರಿಫಿಕೇಷನ್ ಏನು ಎಂದು ಕೇಳುವಂಥ ಅಭ್ಯಾಸವನ್ನು ನಮ್ಮ ಹೊಸ ಶಾಸಕರಿಗೂ ತೋರಿಸಿಕೊಟ್ಟರೆ ಅವರೂ ಕಲಿಯುತ್ತಾರೆ. ಅದು ಬಿಟ್ಟು ನೀವು ಮತ್ತೆ ಮೂರು ದಿವಸ ಭಾಷಣ ಮಾಡುತ್ತಾ ಇದ್ದರೆ ಅದು ಕ್ಲಾರಿಫಿಕೇಷನ್ ಆಗುತ್ತದೆಯೇ? ಬಾಲಕೃಷ್ಣರವರೆ, ಇದೇ ಸರಿ ಎಂದು ನೀವು ವಾದ ಮಾಡಿದರೆ ನಾವೇನೂ ಮಾಡಲಿಕ್ಕಾಗುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ನೈಸ್ ಕಂಪನಿ ಬಗ್ಗೆ ಮಾತನಾಡಿದರು.

ಶ್ರೀ ಕೆ.ಎಸ್. ಈಶ್ವರಪ್ಪ: ಥೇ, ಅವರು ಹಾಗೆ ಮಾತನಾಡಿದರು ಎಂದು ನೀವು ಈಗ ಹೀಗೆ ಮಾತನಾಡುತ್ತೀರಾ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಎಲ್ಲ ನೀವೇ ಮಾತನಾಡಿದರೆ ಹೇಗೆ ಸ್ವಾಮಿ?

ಶ್ರೀ ಕೆ.ಎಸ್. ಈಶ್ವರಪ್ಪ: ನಾನೇನೂ ಹೇಳುವುದಿಲ್ಲ. ನೀವೆಲ್ಲಾ ಹಿರಿಯರಿದ್ದೀರಿ. ನಾನು ರೇವಣ್ಣನವರಲ್ಲಿ ಪ್ರಾರ್ಥಿಸುವುದು ಇಷ್ಟೆ. ಕ್ಲಾರಿಫಿಕೇಷನ್ ಕೇಳುವಾಗ ಒಂದೊಂದು ವಿಷಯಕ್ಕೆ ಕ್ಲಾರಿಫಿಕೇಷನ್ ಎಂದು ಕೇಳಿದರೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ. ದಯವಿಟ್ಟು ಮೂರು ದಿವಸಗಳವರೆಗೆ ಭಾಷಣ ಮಾಡಬೇಡಿ.

ಶ್ರೀ ಹೆಚ್.ಡಿ. ರೇವಣ್ಣ: ಆಯಿತು ಸರ್, ಅಧ್ಯಕ್ಷರೆ, ಬೂಕನಕೆರೆ ಏನೂ ದುಡ್ಡೇ ಕೊಟ್ಟಿಲ್ಲವೆಂದರು. ಮೂವತ್ತೊಂಬತ್ತು ಕೋಟಿ ರೂ.ಗಳ ಟೆಂಡರ್ ಆಗಿದೆಯೆಂದು ನಾನು ಮೊನ್ನೆ ಪತ್ರಿಕೆಯಲ್ಲಿ ನೋಡಿದೆ. ಅದನ್ನು ನಾನು ಅವರಿಗೆ ನೆನಪಿಸುತ್ತಿದ್ದೇನೆ. ಸದನಕ್ಕೆ ಸುಳ್ಳು ಹೇಳಬೇಡಿ. ಮೂವತ್ತೊಂಬತ್ತು ಕೋಟಿ ರೂಪಾಯಿಗಳಷ್ಟು ಟೆಂಡರ್ ಆಗಿದೆಯೇ ಇಲ್ಲವೇ ಎನ್ನುವುದನ್ನು ದಯಮಾಡಿ ಸದನಕ್ಕೆ ಒಂದು ಕ್ಲಾರಿಫಿಕೇಷನ್ ಕೊಡಿ. ಎರಡನೆಯದಾಗಿ, ಹಾಸನ 11ನೇ ಸ್ಥಾನದಲ್ಲಿದೆ ಹಾಗೂ ಶಿವಮೊಗ್ಗ 5ನೇ ಸ್ಥಾನದಲ್ಲಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಮ್ಮದನ್ನು red ink ಹಾಕಿದಿರಿ. ಒಳ್ಳೆಯದು ಆಯಿತು. ನಾವು ಏನೂ ತಲೆಕೆಡಿಸಿಕೊಳ್ಳುವುದಿಲ್ಲ ಬಿಡಿ. ನಾನು ಅದಕ್ಕೆ clarification ಕೇಳುತ್ತಿದ್ದೇನೆ. ಹಾಸನ 11ನೇ ಸ್ಥಾನದಲ್ಲಿದೆ, ಶಿವಮೊಗ್ಗ 5ನೇ ಸ್ಥಾನದಲ್ಲಿದೆ. ಶಿಕಾರಿಪುರ ಹಾಗೂ ಹೊಳೆನರಸೀಪುರ ಎಷ್ಟನೇ ಸ್ಥಾನದಲ್ಲಿದೆ? ದಯಮಾಡಿ ತಿಳಿಸಬೇಕು ಎಂದು ನಾನು ಮನವಿ ಮಾಡುತ್ತೇನೆ. ಅದಕ್ಕೆ clarification ಬೇಡ ಎನ್ನುವುದಾದರೆ, ಹೊಳೆನರಸೀಪುರದ್ದನ್ನು

ಹೊಡೆದುಕೊಂಡು ಹೋಗುತ್ತೇನೆ ಎನ್ನುವುದಾದರೆ ಅದು ಬೇಡ. ಶಿಕಾರಿಪುರ ಅದೂ ಬೇಡ. ಶಿರಾಡಿಕೊಪ್ಪಲು, ಹೋಬಳಿ heaf-quarters ಅಲ್ಲಿಗೆ ಎಷ್ಟು

4.30 P.M.

ಖರ್ಚು ಮಾಡಿದ್ದೀರಿ? ಹೊಳೆನರಸೀಪುರಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ಎಂದು ಹೇಳಿ. ಏಕೆಂದರೆ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಅಣ್ಣ-ತಮ್ಮಂದಿರು ಇಬ್ಬರೂ ಸೇರಿ ರಾಮನಗರ ಹಾಗೂ ನನ್ನ ಕ್ಷೇತ್ರಕ್ಕೆ ಹೊಡೆದುಕೊಂಡು ಹೋದರು ಎನ್ನುವುದು ಬೇಡ. ಈಗ ಹಸಿರು ಕಾರ್ಡ್ ಬಗ್ಗೆ ಹೇಳುವುದಾದರೆ, ಮಾನ್ಯ ಸಿದ್ದರಾಮಯ್ಯನವರು order copy ಕೊಡುತ್ತೇನೆ ಎಂದು ಹೇಳಿದ್ದಾರೆ. ಕೊಟ್ಟ ನಂತರ ತಮಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಹಾಲಪ್ಪನವರೆ, ನೀವು ವಿದ್ಯಾಮಂತ್ರಿಗಳ ಜೊತೆ ಆಮೇಲೆ ಮಾತನಾಡಿ. ಈಗ ನಾನು ಹೇಳುವುದನ್ನು ಕೇಳಿ. ಜಿಲ್ಲಾಧಿಕಾರಿಗಳು, ಪ್ರಥಮ ಹಂತದ ಅಕ್ಷಯ ಯೋಜನೆಯಡಿಯಲ್ಲಿ ವಿತರಿಸಲಾದ ಬಿ.ಪಿ.ಎಲ್. ಶೇಕಡಾ. ...

(ಗೊಂದಲ)

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ನೀವು ಮುಂದುವರೆಸಿರಿ. ಒಂದು ನಿಮಿಷ ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು. ಎಲ್ಲರೂ ಮಾತನಾಡಿದರು. ನನಗೆ ಅರ್ಥವಾಗುತ್ತಿಲ್ಲ. I am not understanding. 4–5 ಬಾರಿ ಇದೇ ವಿಷಯವನ್ನು repeat ಮಾಡುತ್ತಿದ್ದೀರಿ. ತುಮಕೂರಿನ ವಿಷಯಕ್ಕೆ ಸಂಬಂಧಪಟ್ಟಂತೆ ನಾಲ್ಕು-ಐದು ಬಾರಿ repeat ಮಾಡುತ್ತಿದ್ದೀರಿ. Statement ಕೊಡುತ್ತೇನೆ ಎಂದು ಅವರು ಹೇಳಿದ್ದಾರೆ. ನೀವು ಈ ಮೊದಲು 2 ತಾಸು ಭಾಷಣ ಮಾಡಿದ್ದೀರಿ. ಈಗ ಒಂದು ತಾಸು ಭಾಷಣ ಮಾಡಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಈ ಒಂದು clarification ಕೇಳಬೇಕು. 80% ಕಾರ್ಡ್ ತೆಗೆದು ಹಾಕಿದ್ದಾರೆ. ತುಮಕೂರು ಜಿಲ್ಲೆಯಲ್ಲಿ 80% ಅಗ್ರಿ ಕಾರ್ಡ್‌ಗಳನ್ನು ತೆಗೆದು ಹಾಕಿದ್ದಾರೆ. ಇವತ್ತು ತುಮಕೂರು ಜಿಲ್ಲೆಯಲ್ಲಿ ಬರಗಾಲವಿದೆ. ಅವರು ಹೇಳಲಿ. ಆ ಜಿಲ್ಲಾಧಿಕಾರಿಗಳನ್ನು ನೀವು ಸಸ್ಪೆಂಡ್ ಮಾಡುತ್ತೀರಿ ಏನು?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಅವರ ಮನವಿ ಏನೆಂದರೆ, ಜಿಲ್ಲಾಧಿಕಾರಿಗಳು ದಾರಿ ತಪ್ಪಿಸಿದ್ದಾರೆ ಎನ್ನುವುದನ್ನು ಹೇಳುತ್ತಿದ್ದಾರೆ. ನೀವು ಇದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ? ಎಲ್ಲಾ ಜಿಲ್ಲಾಧಿಕಾರಿಗಳದ್ದೂ ಇದೇ ಕಥೆಯಾದರೆ ಹೇಗೆ ಸ್ವಾಮಿ?

(ಗೊಂದಲ)

ಅಧ್ಯಕ್ಷರು: ನಿಮ್ಮ ಭಾಷಣದ ರೆಕಾರ್ಡ್ ಅನ್ನು ಬೇಕಾದರೆ ತೆಗೆದು ತೋರಿಸುತ್ತೇನೆ. ಅದೇ ವಿಷಯ ಮತ್ತೆ repeat ಆಗುತ್ತಿದೆ. ಹಾಗೆಯೇ ಆಗಲಿ. ಇನ್ನೂ ಒಂದು ತಾಸು ಮಾತನಾಡಿ. ಎಲ್ಲರಿಗೂ free ಬಿಡುತ್ತೇನೆ. ಬೇರೆ ವಿಷಯ ಚರ್ಚೆ ಮಾಡುವುದು ಬೇಡ. ಮಾತನಾಡಿಬಿಡಿ. ನೀವು ಮೊದಲು ಏನು ಭಾಷಣ ಮಾಡಿದ್ದೀರಿ, ಅದೇ ವಿಷಯ ಮತ್ತೆ repeat ಆಗುತ್ತಿದೆ. ಹೊಸದು ಏನಾದರೂ ಇದ್ದರೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಇವತ್ತು ಮೂರು ದಿನಗಳ ಅಧಿವೇಶನ ಏನು ನಡೆದಿದೆ ಎಂದರೆ, ನಮ್ಮ ಜನಸಾಮಾನ್ಯರಿಗೆ, ಹಳ್ಳಿಯ ರೈತರಿಗೆ ಏನಾಗಿದೆ ಎಂದರೆ ಇದು ನಿಮ್ಮ ಭವಿಷ್ಯದ ಹೆಜ್ಜೆಗಳಲ್ಲ. ಬೋಗಸ್ ಹೆಜ್ಜೆಗಳಲ್ಲಿ ರೈತಾಪಿ ಜನರನ್ನು ಮುಗಿಸುತ್ತೇವೆ ಎನ್ನುವ ಒಂದೇ ಒಂದು ಆಶ್ವಾಸನೆ ಕೊಟ್ಟಿದ್ದಾರೆಯೇ ಹೊರತು, ಹಗರಣಗಳನ್ನು ಮುಚ್ಚಿ ಹಾಕುವುದಕ್ಕೋಸ್ಕರ ಈ ಬೋಗಸ್ ಭವಿಷ್ಯದ ಹೆಜ್ಜೆಗಳನ್ನು ನಾವು ರಾಜ್ಯದ ಜನತೆಗೆ 37 itemನಲ್ಲಿ ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ರೈತಾಪಿ ಜನರ ಹೆಸರಿನಲ್ಲಿ ಪ್ರಮಾಣ ವಚನ

ಸ್ವೀಕಾರ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು 5 ಬಾರಿ ಹಣಕಾಸಿನ ಮಂತ್ರಿಗಳಾಗಿದ್ದಾರೆ. ಅವರು ಏನು ಸಲಹೆ ಕೊಡುತ್ತಾರೆ ಹಾಗೂ ಸದಸ್ಯರು ಏನು ಸಲಹೆ ಕೊಡುತ್ತಾರೆ ಎನ್ನುವುದನ್ನು ಕುಳಿತು ಕೇಲುವ ತಾಳ್ಮೆ ಇಲ್ಲದೇ ರೈತರು ಮುಖ್ಯವಲ್ಲ ಎಂದು ಹೇಳುವುದು ಇದೆ. ಇವತ್ತು ಪತ್ರಿಕೆಯಲ್ಲಿ ಕೆಲವರು ಬರೆದಿದ್ದಾರೆ. ಏನೋ ಪ್ರಶಸ್ತಿ ಕೊಡುತ್ತೇವೆ ಎಂದು ಬರೆದಿದ್ದಾರೆ. ಏತಕ್ಕೆ ಪ್ರಶಸ್ತಿ ಕೊಡುತ್ತಾರೋ ಗೊತ್ತಿಲ್ಲ. ಹಗರಣಗಳಿಗೆ ಪ್ರಶಸ್ತಿ ಕೊಡುತ್ತಾರಾ? ಅಥವಾ ಯಾವುದಕ್ಕೆ ಡಾಕ್ಟರೇಟ್ ಕೊಟ್ಟಿದ್ದಾರೆ ಎನ್ನುವುದು ಗೊತ್ತಿಲ್ಲ. 50 ವರ್ಷಗಳಲ್ಲಿ ಮಾಡದೇ ಇರುವ ಭ್ರಷ್ಟಾಚಾರವನ್ನು ಒಂದೂಕಾಲು ವರ್ಷದಲ್ಲಿ ಈ ಸರ್ಕಾರ ಮಾಡಿದೆ ಎಂದು ಡಾಕ್ಟರೇಟ್ ಕೊಡುತ್ತಿದ್ದಾರೋ ಅಥವಾ ಯಾವ ಉದ್ದೇಶ ಇಟ್ಟುಕೊಂಡು ಡಾಕ್ಟರೇಟ್ ಕೊಡುತ್ತಿದ್ದಾರೋ ಗೊತ್ತಿಲ್ಲ. ಅದನ್ನು ಸದನವೇ ತೀರ್ಮಾನ ಮಾಡಬೇಕು. ಇದು ಬೋಗಸ್ ಹೆಜ್ಜೆಗಳ ಒಂದು ಆಶ್ವಾಸನೆ ಎಂದು ಹೇಳಿ, ಸದನದ ಮಾನ್ಯ ಅಧ್ಯಕ್ಷರು ಇದಕ್ಕೆ clarification ಕೊಡಬೇಕು ಎಂದು ಹೇಳಿ ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು: ಈ ವಿಷಯವನ್ನು ಮುಗಿಸಿ. ಎಲ್ಲಾ ಅದನ್ನೇ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಹೇಳಿಕೆ ಮೇಲೆ clarification ಕೇಳುವುದಕ್ಕಿಂತ ಮುಖ್ಯವಾಗಿ ಅವರ ಉದ್ದೇಶವೇನು ಎನ್ನುವುದನ್ನು ನಾನು ಪ್ರಶ್ನೆ ಮಾಡುತ್ತೇನೆ. ಬಹುಶಃ ಇದು ವಿಶೇಷವಾಗಿ ರೈತರಿಗೋಸ್ಕರ ಮಾಡಿರುವುದು. ಗ್ರಾಮೀಣ ಪ್ರದೇಶಗಳಿಂದ ರೈತರು ಪಟ್ಟಣಕ್ಕೆ ವಲಸೆ ಬರುತ್ತಾರೆ. ಅದನ್ನು ತಪ್ಪಿಸುವುದಕ್ಕೋಸ್ಕರ ಮೂರು ದಿವಸಗಳ ಅಧಿವೇಶನ ಕರೆಯಬೇಕು. ಶಾಸಕರ ಸಲಹೆಗಳನ್ನು ಪಡೆಯಬೇಕು. ಅದರ ಜೊತೆಗೆ ಬೇರೆ ಬೇರೆ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಒಂದು ಒಳ್ಳೆಯ ಕಾರ್ಯಕ್ರಮ ಕೊಡುತ್ತಾರೆ ಎನ್ನುವ

ದೃಷ್ಟಿಯಿಂದ ನಾವು ಏನು ಮಾಡಿದ್ದೇವೆ. ಬಹುಶಃ ನಮ್ಮ ಯಾವ ಭಾಷಣದಲ್ಲಿಯೂ ಕೂಡ ಸರ್ಕಾರದ ಕಾರ್ಯಕ್ರಮಗಳನ್ನು ಟೀಕೆ ಮಾಡದೇ ಸಲಹೆಗಳನ್ನು ಕೊಟ್ಟೆವು ಮಾನ್ಯ ಮುಖ್ಯಮಂತ್ರಿಗಳು ಮೊದಲು ಏನು ಮಾತನಾಡಿದ್ದರು? ಪ್ರಾರಂಭದಲ್ಲಿ ಏನು ಮಾತನಾಡಿದ್ದರು? ಬರಗಾಲದ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೊರಟಾಗ ಸಭಾಧ್ಯಕ್ಷರ ಕೊಠಡಿಯಲ್ಲಿ ಏನು ಮಾತನಾಡಿದ್ದೀರಿ ಎಂದರೆ ವಿಶೇಷವಾದ ವಿಚಾರಗಳನ್ನು ಚರ್ಚೆ ಮಾಡುವುದಕ್ಕೋಸ್ಕರ ಅಧಿವೇಶನ ಕರೆದಿದ್ದೇವೆ. ಬೇರೆ ವಿಚಾರವನ್ನು ನೀವು ಎತ್ತಿದರೆ ಅದಕ್ಕೆ ಘನತೆ ಹೊರಟು ಹೋಗುತ್ತದೆ ಎನ್ನುವ ಮಾತನ್ನು ಹೇಳಿದ್ದೀರಿ. ಆ ಹಿನ್ನೆಲೆಯಲ್ಲಿ ನಾವು ಒಂದು ಸಂಧಾನಕ್ಕೆ ಬಂದೆವು. ಆಯಿತು ಬರದ ಬಗ್ಗೆ ನಿಲುವಳಿ ಸೂಚನೆ ಕೊಡುತ್ತೇವೆ, ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿದೆವು. ಆಮೇಲೆ ನೀವು ಹೇಳಿದ ಹಾಗೆ ನಾವು ಮಾತನಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ನಿಮ್ಮ ಉದ್ದೇಶಕ್ಕೆ ಧಕ್ಕೆಯಾಗಬಾರದು ಎನ್ನುವ ಮಾತನ್ನು ನೀವು ಹೇಳಿದ್ದೀರಿ. ಆದರೆ, ಇಲ್ಲಿ ಬಂದು ಏನು ಹೇಳಿದಿರಿ ಎಂದರೆ ನಾನು ಕಾಡಿ–ಬೇಡಿ ನಿಮ್ಮನ್ನು ಒಪ್ಪಿಸಿಕೊಳ್ಳಬೇಕಾಯಿತು ಎಂದು ಹೇಳಿದಿರಿ. ಈ ಮಾತು ಮಾನ್ಯ ಮುಖ್ಯಮಂತ್ರಿಗಳಾಗಿ, ಸಭಾನಾಯಕರಾಗಿ ಹೇಳುವ ಮಾತೇ ಎಂದು ನಾನು ಕೇಳುತ್ತೇನೆ? ನಿಮ್ಮ ಉತ್ತರದಲ್ಲಿ, ನೀವು ಮಾತನಾಡುವ ಸಂದರ್ಭದಲ್ಲಿ, ನೀವು ಕೂಡ ನಿಯಮಾವಳಿಯ ಚೌಕಟ್ಟನ್ನು ಮೀರಬಾರದಿತ್ತು. ನೀವು ಮಾತನಾಡಿದ್ದು ಕಲ್ಲಿದ್ದಲಿನ ಬಗ್ಗೆ. ಆದರೆ, ಬೇರೆ ಬೇರೆ ವಿಚಾರಗಳನ್ನು ಮಾತನಾಡಿ, ರಾಜಕೀಯವಾಗಿರತಕ್ಕಂಥ ಭಾಷಣವನ್ನು ಮಾಡಿ, ಪ್ರಿಂಟ್ ಮಾಡಿದಂಥ, ಅಧಿಕಾರಿಗಳು ತಯಾರು ಮಾಡಿದ್ದನ್ನು ಇಲ್ಲಿ ಕೊಟ್ಟು ಹೋಗಿದ್ದೀರಿ ಅಷ್ಟೆ. ಇದರಲ್ಲಿ ಏನಾದರೂ ಅರ್ಥವಿದೆಯೇ? ರೈತರ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾದ ರಾಜಕಾರಣವನ್ನು ಮಾಡುತ್ತಾರೆ ಎಂದು ನಾವು ನಂಬಿರಲಿಲ್ಲ. ಏನೋ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ರೈತರ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದಾರೆ, ರೈತರ ಬಗ್ಗೆ ಬಹಳಷ್ಟು ರೀತಿಯಲ್ಲಿ ಮಾತನಾಡುತ್ತಾರೆ. ಅವರು ಮಾತನಾಡುವಾಗ

ಅವರ ಭಾಷಣದಲ್ಲಿ ಬಂಧಂಥ ಕಣ್ಣೀರು ಹೇಗೆ ಎಂದರೆ ಒಂದು ಬಾರಿ ಕಣ್ಣೀರು ಬರಲಿಲ್ಲ. ಗಂಟೆಗಟ್ಟಲೆ ಕಣ್ಣೀರು ಬಂತು. ಅವರು ಅಳುತ್ತಿದ್ದನ್ನು ನೋಡಿದರೆ ನಮ್ಮ ಮನಸ್ಸಿನಲ್ಲಿ ಅನಿಸಿತು. ಏನೋ ಮನಸ್ಸಿನಲ್ಲಿ ಬಹಳ ಕಳಕಳಿಯಿದೆ. ಏನೋ ಪರಿಹಾರ ಕೊಡುತ್ತಾರೆ ಎಂದು ನಾವು ತಿಳಿದುಕೊಂಡರೆ ಇವರು ಪರಿಹಾರ ಕೊಟ್ಟಿದ್ದು ಇದು. ನಾನು ಇದರ ಬಗ್ಗೆ ಪ್ರತಿಯೊಂದನ್ನೂ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ, ಮಾನ್ಯ ರೇವಣ್ಣನವರು ಮಾತನಾಡಿದ್ದಾರೆ. ಇದರಲ್ಲಿ ಇರುವ ಕಾರ್ಯಕ್ರಮಗಳನ್ನು ನೋಡಿದರೆ, ನೀವು ಹಿಂದಿನ 10 ಬಜೆಟ್ ಪುಸ್ತಕಗಳನ್ನು ತೆಗೆಯಿರಿ; ಆ ಪುಸ್ತಕಗಳಲ್ಲಿ ಇರುವ ಕಾರ್ಯಕ್ರಮಗಳನ್ನು ಬಿಟ್ಟರೆ ಬೇರೆ ಯಾವುದೇ ಹೊಸ ಕಾರ್ಯಕ್ರಮಗಳನ್ನು ಮಾಡಿಲ್ಲ. Old wine in a new bottle ಎನ್ನುವ ರೀತಿಯಲ್ಲಿ ಕಾಣುತ್ತದೆ. ಇಂತಹ ಉತ್ತರಗಳನ್ನು ಕೇಳುವುದಕ್ಕೆ ಮೂರು ದಿನಗಳ ಅಧಿವೇಶನವನ್ನು ಮಾಡಬೇಕಾಗಿತ್ತೇ, ನಾವು ಇದಕ್ಕೆ ಬರಬೇಕಾಗಿತ್ತೇ? ಯಾವ ಉದ್ದೇಶಕ್ಕೋಸ್ಕರ ರೈತರ ಹೆಸರನ್ನು ತೆಗೆದುಕೊಂಡು ಈ ರೀತಿಯ ರಾಜಕಾರಣವನ್ನು ಮಾಡುವುದಕ್ಕೆ ಹೊರಟಿರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಪ್ರತಿಯೊಂದೂ ಕಾರ್ಯಕ್ರಮಗಳ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಅನೇಕ ಸಲಹೆಗಳನ್ನು ಕೊಟ್ಟೆವು. ನಾವು ಕೊಟ್ಟಿರುವ ಸಲಹೆಗಳಲ್ಲಿ ನೀವು ಎರಡು–ಮೂರು ಸಲಹೆಗಳನ್ನೂ ಸಹ ಪರಿಗಣನೆ ಮಾಡಲಿಲ್ಲ. ಇವತ್ತು ಬಹಳ ಮುಖ್ಯವಾಗಿರುವುದು ಏನೆಂದರೆ, ರೈತರ ಬಗ್ಗೆ ಕೇಂದ್ರ ಸರ್ಕಾರ ತಂದಂಥ ಕೃಷಿ ನೀತಿಗಳಿವೆ, ರಾಜ್ಯ ಸರ್ಕಾರ ತಂದಂಥ ಕೃಷಿ ನೀತಿಗಳಿವೆ, ಇವೆಲ್ಲಾ ನೀತಿಗಳನ್ನು ತಂದರೂ ಸಹ ರೈತರ ಪರಿಸ್ಥಿತಿ ಬಗೆಹರಿಯುವುದಕ್ಕೆ ಸಾಧ್ಯವಾಗಿಲ್ಲ. ರೈತನ ಜೀವನ ಮಟ್ಟ ಮೇಲೆ ಬರುವುದಕ್ಕೆ ಸಾಧ್ಯವಾಗಿಲ್ಲ. ರೈತರು ಪ್ರತಿನಿತ್ಯ ಎದುರಿಸುತ್ತಿರುವಂಥ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯವನ್ನು ನಾವು ತುಂಬಿಸುವುದಕ್ಕೆ ಇವತ್ತು ಸಾಧ್ಯವಾಗಿಲ್ಲ. ನಾವು ಅರ್ಥ ಮಾಡಿಕೊಳ್ಳಬೇಕಾಗಿರುವುದು ಏನೆಂದರೆ, ನಾವು ಕೇವಲ agriculture policy

ಮಾಡುವುದರಿಂದ ಅಥವಾ ಈ ರೀತಿಯಾದ ಭಾಷಣ ಮಾಡುವುದರಿಂದ, ಈ ರೀತಿಯ ಕಾರ್ಯಕ್ರಮಗಳನ್ನು ಘೋಷಣೆ ಮಾಡುವುದರಿಂದ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಅದನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕವಾಗಿರುವಂಥ ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದರೆ ಮಾತ್ರ ಅದಕ್ಕೆ ಒಂದು ರೂಪ ಬರುತ್ತದೆ ಹಾಗೂ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ನಾನು ಇದನ್ನು ಓದಿದರೆ ಇವರಲ್ಲಿ ನಿಜವಾಗಿಯೂ ಸಹ ಅನುಷ್ಠಾನ ಮಾಡುವ ಕಳಕಳಿಯಿದೆಯೇ ಎನ್ನುವ ಪ್ರಶ್ನೆ ನನಗೆ ಬರುತ್ತದೆ. ಇವರ ಕಾರ್ಯಕ್ರಮಗಳು, ಇವರು ಹೇಳಿರತಕ್ಕಂಥ ಮಾತು, ಇದಕ್ಕೆ ಒಂದು ಬಜೆಟ್ ಸಹ ಇಲ್ಲ. ಪರ್ಯಾಯವಾಗಿರುವ ಒಂದು ಬಜೆಟ್ ಅಧಿವೇಶನ ಎನ್ನುವ ರೀತಿಯಲ್ಲಿ ಬಜೆಟ್ ರೂಪದಲ್ಲಿ ಇವತ್ತು ಇವರು ಭಾಷಣ ಮಾಡಿದ್ದಾರೆ. ಇದನ್ನು ಎಷ್ಟರಮಟ್ಟಿಗೆ ಜಾರಿಗೆ ತರುತ್ತಾರೆ ಎನ್ನುವುದನ್ನು ನೋಡಬೇಕಾಗುತ್ತದೆ. ಇವೆಲ್ಲವನ್ನೂ ಮಾಡಬೇಕಾದಾಗ ಸ್ವಲ್ಪ ಮಟ್ಟಿನ ಹಣಕಾಸು ಬೇಕಾಗುತ್ತದೆ ಎಂದರೆ, ಹಣಕಾಸನ್ನು ಯಾವಾಗ ಕೊಡುತ್ತೀರಿ ಎಂದು ಕೇಳಿದರೆ ಮುಂದಿನ ವರ್ಷ ಕೊಡುತ್ತೇವೆ ಎನ್ನುವುದನ್ನು ಮೊದಲೇ ಹೇಳಿದ್ದಾರೆ. ಇದಕ್ಕೆ ಅಷ್ಟೊಂದು ಕಿಮ್ಮತ್ತಿಲ್ಲ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇವರ ಮಾತನ್ನು ನೋಡಿದರೆ ಇದು ಕೇವಲ ರಾಜಕೀಯನಾಗಿ ಮಾಡಿರತಕ್ಕಂಥ ಭಾಷಣವೇ ವಿನ ಎಲ್ಲೋ ಒಂದು ಕಡೆ ಜನರನ್ನು ನಂಬಿಸುವ ರೀತಿಯಲ್ಲಿ, ವಿರೋಧ ಪಕ್ಷದವರು ನಮಗೆ ಸಹಕಾರ ಕೊಡುತ್ತಿಲ್ಲ ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ತಂದಿರುವುದು ಯಾವ ಉದ್ದೇಶಕ್ಕಾಗಿಯೇ ತಂದಿರಲಿ ನಾವು ಸಹಕಾರ ಕೊಡಬೇಕು, ಸಲಹೆಗಳನ್ನು ಕೊಡಬೇಕು, ರೈತನಿಗೆ ಒಳ್ಳೆಯದಾದರೆ ಬಹಳ ಸಹಾಯವಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಸಹಕಾರ ಕೊಟ್ಟೆವು. ಆದರೆ ಅವರು ಯಾವ ಉದ್ದೇಶಕ್ಕೋಸ್ಕರ ಈ ಸದನವನ್ನು ಕರೆದಿದ್ದಾರೋ ಅದನ್ನೇ ಇವತ್ತು ರಾಜಕೀಯ ಮಾಡಿ ಹೊರಟು ಹೋದರು. ನಾನು ಇವತ್ತು ಈ ಉದ್ದೇಶ ಸಾರ್ಥಕವಾಗಿಲ್ಲ ಎಂದು ಹೇಳುವುದರ ಜೊತೆಗೆ ಬಹುಶ: ಇವರು ಕಣ್ಣೀರನ್ನು ಹಾಕಿದ್ದನ್ನು ನೋಡಿದಾಗ ನನಗೆ ಏನು ಅನಿಸಿತು ಎಂದರೆ ಏನಪ್ಪ

ಯಾರಿಗಾದರೂ ಕಣ್ಣೀರು ಬಂತೆಂದರೆ ಬಹುಶ: 2–5 ನಿಮಿಷ ಅಳುತ್ತಾರೆ. ಆದರೆ, ಗಂಟಗಟ್ಟಲೆ ಅಳುತ್ತಲೇ ಓದಿದ್ದನ್ನು ನೋಡಿದರೆ ನನಗೆ ಜ್ಞಾಪಕಕ್ಕೆ ಬರುವುದು ಏನೆಂದರೆ, ನಾನು ತಮಿಳುನಾಡಿನಲ್ಲಿ ಯಾರದ್ದೋ ಮಣ್ಣಿಗೆ ಹೋಗಿದ್ದೆ, ಅಲ್ಲಿ ನಾನು ನೋಡಿದೆ. ಅಂದು ಮಣ್ಣಿನ ದಿವಸ ಯಾರೂ ಅಳಲಿಲ್ಲ. ನನಗೆ ಒಂದು ಜ್ಞಾಪಕ ಬರುತ್ತದೆ. ನಾನು ತಮಿಳುನಾಡಿನಲ್ಲಿ ಯಾರೋ ಒಬ್ಬರ ಮಣ್ಣಿಗೆ ಹೋಗಿದ್ದೆ. ಮಣ್ಣಿನ ದಿವಸ ಯಾರೂ ಸಹ ಅಳಲಿಲ್ಲ. ಅದೇ ರೀತಿಯಾಗಿ ಅವರ ತಿಥಿಗೆ ಹೋಗಿದ್ದೆ. ತಿಥಿ ದಿವಸ ಎಲ್ಲಾ ಅಳುತ್ತಿದ್ದರು.

ಶ್ರೀ ಬಸವರಾಜ ಬೊಮ್ಮಾಯಿ: Clarification ಕೇಳಿ ಎಂದು ಹೇಳಿದರೆ, ನೀವು ಸಾವುಗೆ ಹೋಗಿದ್ದು, ಅದು ಇದು ಎಂದು ಮಾತನಾಡುತ್ತಿದ್ದೀರಿ, ಇದು ಏನು ಸ್ವಾಮಿ? ನೀವು ಸೀನಿಯರ್ ಆಗಿ, ಹಿಂದೆ ಕೃಷಿ ಸಚಿವರಾಗಿದ್ದವರು.

ಶ್ರೀ ಟಿ.ಬಿ. ಜಯಚಂದ್ರ: ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನು yield ಆಗಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಕೃಷಿಯಲ್ಲಿ ಸಮಸ್ಯೆಗಳಿದ್ದುದಕ್ಕೆ ನಿಮ್ಮದೂ contribution ಇದೆ. ಅದನ್ನು ಅರ್ಥ ಮಾಡಿಕೊಳ್ಳಿ ಸ್ವಲ್ಪ. ಮುಖ್ಯಮಂತ್ರಿಗಳ ಬಗ್ಗೆ ಅಷ್ಟು ಹಗುರವಾಗಿ ಮಾತನಾಡಬಾರದು.

ಶ್ರೀ ಟಿ.ಬಿ.ಜಯಚಂದ್ರ: ನಾನೂ ಕೃಷಿ ಸಚಿವನಾಗಿದ್ದೆ. ನನಗೂ ರೈತರ ಸಮಸ್ಯೆ ಗೊತ್ತಿದೆ. ಒಂದಲ್ಲ ನೂರು ಸಲಹೆಗಳನ್ನು ಕೊಟ್ಟಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಸೀನಿಯರ್ ಇದ್ದೀರಿ. ದಯವಿಟ್ಟು ಅಷ್ಟು ಹಗುರವಾಗಿ ಮಾತನಾಡಬೇಡಿ.

ಶ್ರೀ ಟಿ.ಬಿ. ಜಯಚಂದ್ರ: ನಾನೂ ಹೇಳುವುದನ್ನು ಸ್ವಲ್ಪ ಕೇಳಿ. ಏಕೆ ಹೀಗೆಲ್ಲಾ ಮಾತನಾಡುತ್ತೀರಿ? ಮುಖ್ಯಮಂತ್ರಿಗಳನ್ನು ತುಂಬಾ ಓಲೈಸಿಕೊಳ್ಳುವುದು ಬೇಡ. ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ: ಯಾರ್‍ಯಾರು ಯಾವಾಗ ಕಣ್ಣೀರು ಸುರಿಸಿದ್ದರು ಎನ್ನುವುದು ಈ ರಾಜ್ಯದ ಜನತೆಗೆ ಗೊತ್ತಿದೆ. ವೈಯಕ್ತಿಕವಾಗಿ ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಿ. ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳದೇ ಅಪಹಾಸ್ಯ ಮಾಡುವುದೆಂದರೆ ಹೇಗೆ? ಎಲ್ಲದ್ದಕ್ಕೂ limit ಇದೆ.

ಶ್ರೀ ಟಿ.ಬಿ. ಜಯಚಂದ್ರ: ಕೇಳಿ. ನಾನು ಹೇಳುವುದನ್ನು ನೀವು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ನಾನು ನಿಮ್ಮ ಮಾತನ್ನು ಕೇಳಲಿಕ್ಕೆ ತಯಾರಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ನಿಮ್ಮಿಷ್ಟ. ನೀವು ಹೇಳುವುದನ್ನು ಜನರು ಒಪ್ಪಿಕೊಳ್ಳುವುದಿಲ್ಲ. ನೀವು ಹೇಳಿದ ತಕ್ಷಣ ಜನರು ಒಪ್ಪಿಕೊಳ್ಳುವುದಿಲ್ಲ. ಜನರು ಒಪ್ಪಿಕೊಳ್ಳುವ ರೀತಿಯಲ್ಲಿ ಜವಾಬ್ದಾರಿಯಿಂದ ಮಾತನಾಡಿ. ಅವರು ಪ್ರಾಮಾಣಿಕವಾಗಿ ಆ ಕಳಕಳಿಯನ್ನು ವ್ಯಕ್ತಪಡಿಸಿದರೆ ಅಪಹಾಸ್ಯ ಮಾಡುತ್ತೀರೆಂದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ: ಏನು ಪ್ರಾಮಾಣಿಕತೆ?

ಶ್ರೀ ಬಸವರಾಜ್ ಬೊಮ್ಮಾಯಿ: ಏನು ಬೇಕು ನಿಮಗೆ? ನಿಮಗೆ ಏನು clarification ಬೇಕು ಕೇಳಿ. ಉತ್ತರವನ್ನು ಕೊಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ: ಅಧಿವೇಶನವನ್ನು ಕರೆಯುವ ಉದ್ದೇಶವೇನಾದರೂ ಇತ್ತೇ? ಏತಕ್ಕೆ ಬೇಕಾಗಿತ್ತು? ಮುಂದಿನ ಅಧಿವೇಶನದಲ್ಲಿ ಇಡುತ್ತೇವೆಂದರೆ ಏಕೆ ಕರೆಯಬೇಕಾಗಿತ್ತು? Supplementary budgetನಲ್ಲಿ ಘೋಷಣೆ ಮಾಡುತ್ತೇವೆಂದು ನೀವು ಹೇಳಬೇಕಾಗಿತ್ತು. ಏಕೆ ಈ ತರಹ ಮಾಡುತ್ತೀರಿ?

ಶ್ರೀ ಬಸವರಾಜ ಬೊಮ್ಮಾಯಿ: ಕೃಷಿ ಈಗ ಸ್ಥಗಿತವಾಗಿರುವುದಕ್ಕೆ who is responsible? ನಿನ್ನೆ ಮೊನ್ನೆ ಬಂದವರು ನಾವಾ ಅಥವಾ ಹಿಂದೆ ಆಡಳಿತ ಮಾಡಿ ಅದನ್ನು ಸ್ಥಗಿತಗೊಳಿಸಿದವರು ಯಾರು? ಇವತ್ತು ಇಲ್ಲಿ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸಭಾಧ್ಯಕ್ಷರೆ, ನಾನು ಇದರಲ್ಲಿ yield ಆಗಿಲ್ಲ. ಆದರೆ, ನಾನು ಹೇಳತಕ್ಕಂಥದ್ದು ಇಷ್ಟೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸಭಾಧ್ಯಕ್ಷರೆ, ನಾನು ಹೇಳುವುದೇನೆಂದರೆ, ಅವರು clarification ಕೇಳಲಿ. ಅದನ್ನು ಬಿಟ್ಟು ಮುಖ್ಯಮಂತ್ರಿಗಳ ಭಾವನೆಯನ್ನು ಅಪಹಾಸ್ಯ ಮಾಡುವುದು ಸರಿಯಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಈ ಮೊಸಳೆ ಕಣ್ಣೀರು ಯಾವುದಕ್ಕೆ? Clarification ಅಲ್ಲ ನಿಮ್ಮ ಉದ್ದೇಶವನ್ನು ಪ್ರಶ್ನೆ ಮಾಡುತ್ತೇನೆ. ರಾಜಕಾರಣ ಮಾಡುತ್ತಿದ್ದೀರಿ ಎನ್ನುವುದನ್ನು ಹೇಳಬೇಕಾಗುತ್ತದೆ. ಇವತ್ತು ನಿಮ್ಮ ಉದ್ದೇಶವೇನಿದೆ? ಇದರಲ್ಲಿ clarification ಕೇಳುವಂಥದ್ದು ಏನಿದೆ?

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಜಯಚಂದ್ರರವರೆ, ನೀವು ಕೋಪ ಮಾಡಿಕೊಂಡರೆ ಏನೂ ಪ್ರಯೋಜನವಿಲ್ಲ. ಇದು ನಿಮ್ಮ ಘನತೆಗೆ ತಕ್ಕದ್ದು ಅಲ್ಲ. I am sorry. ನಿಮ್ಮ ಘನತೆಗೆ ತಕ್ಕಂತೆ ಮಾತನಾಡಿ. ನಿಮ್ಮ ಬಗ್ಗೆ ನನಗೆ ಗೌರವವಿದೆ. ಈ ರೀತಿ ಹಗುರವಾಗಿ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಟಿ.ಬಿ. ಜಯಚಂದ್ರ: ಉತ್ತರ ಕೊಡುತ್ತಾರಲ್ಲಾ ಆಗ ಹೇಳಲಿ.

ಶ್ರೀ ಬಸವರಾಜ ಬೊಮ್ಮಾಯಿ: ಜನ ಒಪ್ಪುವುದಿಲ್ಲ. ವಿಷಯವನ್ನು ಬಿಟ್ಟು ನೀವು ಕಣ್ಣೀರಿನ ಕಥೆ ಹೇಳುತ್ತೀರಲ್ಲ? ಯಾರ್‍ಯಾರು ಯಾವಾಗ ಕಣ್ಣೀರು ಹಾಕಿದ್ದಾರೆ ಎನ್ನುವುದು ಗೊತ್ತಿದೆ. ಕಣ್ಣೀರಿನ ಬಗ್ಗೆ ನೀವು ಮಾತನಾಡುವಂಥ ಹಕ್ಕಿಲ್ಲ. ಅವರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಕಣ್ಣೀರಿನ ಬಗ್ಗೆ ನೀವೇಕೆ ಮಾತನಾಡುತ್ತೀರಿ? ನೀವೇಕೆ ಅಪಹಾಸ್ಯ ಮಾಡುತ್ತೀರಿ?

ಶ್ರೀ ಟಿ.ಬಿ ಜಯಚಂದ್ರ: ನಾನು ಇದರಲ್ಲಿ yield ಆಗಿಲ್ಲ. ಮೊಸಳೆ ಕಣ್ಣೀರನ್ನು ಹಾಕಿದಾಕ್ಷಣಕ್ಕೆ ರೈತರಿಗೆ ಸಮಾಧಾನವಾಗುತ್ತದೆಯೇ? ನಿಮ್ಮ ಉದ್ದೇಶವೇನು? (ಗೊಂದಲ) ರೈತರಿಗೆ ಅಪಮಾನವನ್ನು ಮಾಡಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ: 60 ವರ್ಷ ಮೊಸಳೆ ಕಣ್ಣೀರನ್ನು ಸುರಿಸಿದವರು ನೀವು. ನಮ್ಮ ದೇಶದ ಇತಿಹಾಸದಲ್ಲಿ ಮೊಸಳೆ ಕಣ್ಣೀರಿನ patent

ಯಾರಿಗೆ ಎಂದರೆ, ಅದು ಕಾಂಗ್ರೆಸ್‌ಗೆ ಮೊಸಳೆ ಕಣ್ಣೀರಿನ patent ನಿಮಗಿದೆ. ಕಣ್ಣೀರಿನ ಬಗ್ಗೆ ನೀವೇನು ಮಾತನಾಡುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ: ಒಬ್ಬ ಮಂತ್ರಿಗಳು ನಡೆದುಕೊಳ್ಳುವ ರೀತಿಯೇ ಇದು?

ಶ್ರೀ ಬಸವರಾಜ ಬೊಮ್ಮಾಯಿ: ಮೊಸಳೆ ಕಣ್ಣೀರಿನ ಬಗ್ಗೆ ಮಾತನಾಡುತ್ತಿದ್ದೇವೆ. ನೀವು clarification ಕೇಳಿ ಎಂದರೆ, ಕಣ್ಣೀರಿನ ಕಥೆ ಹೇಳುತೀರಲ್ಲಾ, ಒಳ್ಳೆಯ ಸಮಾಚಾರವಾಯಿತಲ್ಲ? ಗೌರವ ಉಳಿಸಿಕೊಳ್ಳುವ ರೀತಿಯಲ್ಲಿ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, 60 ವರ್ಷದ ಅವಧಿಯಲ್ಲಿ ಅವರ ತಂದೆಯವರು ಮುಖ್ಯಮಂತ್ರಿಗಳಾಗಿದ್ದರು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಏನೇನೋ ಹೇಳಿದರೆ ನಾವು ಈ ಕಡೆ ಸುಮ್ಮನೆ ಕುಳಿತು ಕೇಳಬೇಕಾ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: Irrelevant ರೀತಿಯಲ್ಲಿ ಮಾತನಾಡುವುದನ್ನು ಕೇಳಬೇಕಾ? ನಿಮ್ಮ ಗೌರವವನ್ನು ಉಳಿಸಿಕೊಂಡು ಮಾತನಾಡಿ ಎಂದಷ್ಟೆ ವಿನಂತಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: Waste bodyಗಳು ಎನ್ನತಕ್ಕ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ದಯವಿಟ್ಟು ಆ ಮಾತನ್ನು ತಾವು ವಾಪಸ್ಸು ತೆಗೆದುಕೊಳ್ಳಿ. Waste body ಯಾರು ಎನ್ನುವುದು ಜನರಿಗೂ ಗೊತ್ತಿದೆ. Please take back your word. ಏನ್ರಿ waste body ಎನ್ನುವುದರ ಅರ್ಥ?

ಶ್ರೀ ಟಿ.ಬಿ. ಜಯಚಂದ್ರ: ಏನಿದೆ ಇದರಲ್ಲಿ? ರೈತರ ಬಗ್ಗೆ ಕಳಕಳಿ ಇಲ್ಲ. ಇದರಲ್ಲಿ ಯಾವುದೇ ವಿಚಾರವಿಲ್ಲ. ಏನಿದೆ ಇದರಲ್ಲಿ.

ಶ್ರೀ ಬಸವರಾಜ ಬೊಮ್ಮಾಯಿ: ಇದು ನಿಮ್ಮ ಸಂಸ್ಕೃತಿಯನ್ನು ತೋರಿಸುತ್ತದೆ. ನೀವು ನಿಮ್ಮ ಮೇಲಿನ ಹಿಡಿತವನ್ನು ತಪ್ಪಿ ಮಾತನಾಡುತ್ತಿದ್ದೀರಿ. ನಿಮ್ಮ ಬಗ್ಗೆ ಗೌರವದಿಂದ ನಾನು ಮಾತನಾಡುತ್ತಿದ್ದರೆ, ನಿಮ್ಮ ಮೇಲೆ ನಿಮಗೆ ಹಿಡಿತವಿಲ್ಲ. ಆದುದರಿಂದ ಹಾಗೆ ಮಾತನಾಡುತ್ತಿದ್ದೀರಿ. ನಾವು ನಿಮಗೆ waste body ಎಂದು ಹೇಳಿದರೆ ನೀವು ಸುಮ್ಮನೆ ಇರುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ: ನೀವು ಉತ್ತರ ಕೊಡಬೇಕಾದರೆ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಎಲ್ಲರಿಗೂ ಗೌರವ ಅಷ್ಟೇ ಇದೆ. ನಿಮ್ಮೊಬರಿಗೇ ಅಲ್ಲ. ವಿರೋಧ ಪಕ್ಷದ ಉಪನಾಯಕರಾಗಿ ಆ ಸ್ಥಾನಕ್ಕೆ ಗೌರವ ಕೊಟ್ಟು ಮಾತನಾಡಿ. ಎಲ್ಲರಿಗೂ ಗೊತ್ತಿದೆ. ಬಾಯಿಗೆ ಬಂದಂತೆ ಮಾತನಾಡಿದರೆ ಏನರ್ಥ? ಬಾಯಿಗೆ ಬಂದಂತೆ ಮಾತನಾಡುವುದನ್ನು ಬಿಟ್ಟು ಆ Chairಗೆ ಗೌರವ ಕೊಟ್ಟು ಮಾತನಾಡಿ. ಇಷ್ಟು ಹಿರಿಯರಿದ್ದೀರಿ ಅದು ನಿಮಗೆ ತಿಳಿಯುವುದಿಲ್ಲವೆ?

ಶ್ರೀ ಟಿ.ಬಿ. ಜಯಚಂದ್ರ: ನಾನು ಈ Chairಗೆ ಗೌರವ ಕೊಟ್ಟು ಮಾತನಾಡಬೇಕಾದದ್ದು ನಿಮ್ಮಿಂದ ಕಲಿಯಬೇಕಾಗಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಮತ್ತೆ ಬಾಯಿಗೆ ಬಂದಂತೆ ಮಾತನಾಡುತ್ತೀರಿ. ಇದು ನಿಮ್ಮ ಸಂಸ್ಕೃತಿಯನ್ನು ತೋರಿಸುತ್ತದೆ. This shows your culture. ನೀವು ನಿಯಂತ್ರಣ ತಪ್ಪಿ ಮಾತನಾಡುತ್ತಿದ್ದೀರಿ. ಯಾರು waste bodyಗಳು ಎನ್ನುವುದನ್ನು ತೋರಿಸುತ್ತೇವೆ. ಜನತೆಗೆ ಗೊತ್ತಿದೆ. ನಿಮ್ಮೊಬ್ಬರಿಗೇ ಮಾತನಾಡುವುದಕ್ಕೆ ಬರುವುದು?

(ಗೊಂದಲ)

ಅಧ್ಯಕ್ಷರು: ನೋಡಿ, ನಾವು ಎಲ್ಲಿಯವರೆಗೆ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿದೆ? ಈ ರೀತಿ seniors ಪರಸ್ಪರ ಮಾತನಾಡಿದರೆ ನಾನು ಏನು

ಮಾಡುವುದಕ್ಕೆ ಆಗುತ್ತದೆ? ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಯಾವ ರೀತಿ ಮಾತನಾಡಬೇಕು ಎಂದು ಅರ್ಥಮಾಡಿಕೊಳ್ಳಬೇಕು. ಯಾವಾಗಲೂ ಈ ರೀತಿ ಮಾಡುತ್ತಾ ಕುಳಿತರೆ ಇದು ಕೆಸರಾಟವಾಗುತ್ತದೆ ಅಷ್ಟೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಹೇಳಿದ್ದೆಲ್ಲಾ ವೇದ ವಾಕ್ಯವೇ? ನೀವೇನು ಸರ್ವಜ್ಞರೇ? ನೀವು ಕೃಷಿ ಸಚಿವರಾಗಿ fail ಆಗಿದ್ದಕ್ಕೆ ಇವತ್ತು ಕೃಷಿ ಇಲಾಖೆ ಬಂದಿದೆ. ನೀವು ಕೃಷಿ ಸಚಿವರಾಗಿ ಏನು ಮಾಡಿದ್ದೀರೆಂದು ಗೊತ್ತಿದೆ. ಈ ರೀತಿ ಮಾತನಾಡುತ್ತೀರಲ್ಲ? ನೀವು ಕೃಷಿ ಸಚಿವರಾಗಿ ಕೃಷಿಯಲ್ಲಿ ಏನು ಸಾಧನೆ ಮಾಡಿದ್ದೀರೆಂದು ಎಲ್ಲರಿಗೂ ಗೊತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಮ್ಮ ಅಭಿಪ್ರಾಯಗಳನ್ನು ಹೇಳಬಾರದೆಂದು ಹೇಳಿದರೆ ಹೇಗೆ?

ಶ್ರೀ ಬಸವರಾಜ ಬೊಮ್ಮಾಯಿ: Clarification ಇದ್ದರೆ ಕೇಳಲಿ. ಅದನ್ನು ಬಿಟ್ಟು ನಾನು ಸಾವಿಗೆ ಹೋಗಿದ್ದೆ. ಅವರ ಕಣ್ಣೀರು ಹಾಗೆ ಎಂದು ಹೇಳಿದರೆ ಹೇಗೆ.

ಶ್ರೀ ಟಿ.ಬಿ. ಜಯಚಂದ್ರ: ಏನು ಉತ್ತರ ಹೇಳಬೇಕೋ ಆಮೇಲೆ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ: ಇವರು individual ಆಗಿ ಒಬ್ಬರಿಗೊಬ್ಬರು ಹೋಗುತ್ತಿದ್ದಾರೆ. ನೀವು ದಯವಿಟ್ಟು ಹೇಳಿ.

ಶ್ರೀ ಸಿದ್ದರಾಮಯ್ಯ: ಮೊದಲು ಮಾನ್ಯ ಮಂತ್ರಿಗಳು ಕುಳಿತುಕೊಳ್ಳಲಿ. ಅವರು ಹೇಳುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಹೇಳಿ ಸಾರ್, ನೀವೇ ನ್ಯಾಯ ಹೇಳಿಬಿಡಿ. ನೀವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ....

(ಗೊಂದಲ)

ಶ್ರೀ ಸಿದ್ದರಾಮಯ್ಯ: You have got every right. ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ಇದರಲ್ಲಿ clarification ಕೇಳುವಂಥದ್ದು ಏನಿದೆ? ಮುಖ್ಯಮಂತ್ರಿಗಳ ಉದ್ದೇಶವೇನಿದೆ? ರೈತರ ಪರವಾಗಿ ಮೊಸಳೆ ಕಣ್ಣೀರನ್ನು ಹಾಕಿದ್ದಾರೆಯೇ ವಿನಾ ರೈತರಿಗೆ ಯಾವ ರೀತಿಯಲ್ಲೂ ಪ್ರಯೋಜನವಾಗುವುದಿಲ್ಲ. ಈಗಾಗಲೇ ಇದರಿಂದ ಯಾವುದೇ ಪ್ರಯೋಜನವಾಗಿಲ್ಲ. ಯಾವ ಕಾರ್ಯಕ್ರಮವನ್ನೂ ಕೊಟ್ಟಿಲ್ಲ. ಇವತ್ತು ರೈತರಿಗೆ ಅಪಮಾನ ಮಾಡಿದ್ದಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಸಾಕು ಇದನ್ನು ಮುಗಿಸಿ. ಮತ್ತೆ ಅದೇ plate repeat ಆಗುತ್ತದೆ ಅಷ್ಟೆ. ಬೇರೆ ಏನೂ ಆಗುವುದಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ: ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಎಲ್ಲರೂ ಮತ್ತೆ ಅದೇ ಮಾತನಾಡುತ್ತೀರಿ. ಇದರ ಬಗ್ಗೆ ಭಾಷಣ ಶುರುವಾಗುತ್ತದೆ. ಮತ್ತೆ ಅದೇ ಪ್ರಶ್ನೆ. ಅದೇ ವಿಷಯ, ಇಲ್ಲಿ ಏನಾಗುತ್ತಿದೆ? ಸ್ಪಷ್ಟೀಕರಣಕ್ಕೆ ಏನಾದರೂ ಅರ್ಥವಿದೆಯೇ? ಇದು ಸ್ಪಷ್ಟೀಕರಣ ಅಷ್ಟೆ. ಮತ್ತೊಮ್ಮೆ ಭಾಷಣ ಮಾಡಲು ಅವಕಾಶ ಕೊಟ್ಟಿಲ್ಲ. ಸಾಕು ಇಲ್ಲಿಗೆ ನಿಲ್ಲಿಸಿ.

ಶ್ರೀ ಸಿ.ಟಿ. ರವಿ: ಸನ್ಮಾನ್ಯ ಅಧ್ಯಕ್ಷರೆ, ಇದು ಭಾಷಣವಾಗುತ್ತಿದೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಭಾಷಣವಲ್ಲ, clarification ಕೇಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಮೂರು ದಿವಸ ವಿಶೇಷ ಅಧಿವೇಶನವನ್ನು ಕರೆದಾಗ, ಈ ರಾಜ್ಯದ ರೈತರು ಬಹಳ ನಿರೀಕ್ಷೆಯನ್ನಿಟ್ಟುಕೊಂಡಿದ್ದರು. ಕೊನೆಯಲ್ಲಿ ರೈತ ಸಮುದಾಯಕ್ಕೆ ಒಂದು ಬಹು ದೊಡ್ಡ ಕೊಡುಗೆಯನ್ನು ಕೊಡಬಹುದು ಎನ್ನುವ ನಿರೀಕ್ಷೆಯಲ್ಲಿ ನಾವಾದರೂ ಇದ್ದೆವು. ರಾಜ್ಯದ ರೈತ ಕೂಡ ಇದ್ದ. ರೈತ ಬಯಸುವುದು ಮೂರನ್ನೇ, assured water, quality current and remunerative price. ಆ ಮೂರು ಅಂಶಕ್ಕೆ ಅವರ ಉತ್ತರದಲ್ಲಿ ಏನೂ ಇಲ್ಲ. ಏನಾದರೂ ಬೆಲೆ ನಿಗದಿಗೆ

ಪ್ರಯತ್ನವನ್ನು ಮಾಡುತ್ತಾರೆ, ರೈತ ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಈ ಸದನದ ಮೂಲಕ ಸಿಗಬಹುದೇನೋ ಎಂಬ ನಿರೀಕ್ಷೆಯಲ್ಲಿ ಈ ರಾಜ್ಯದ ರೈತ ಇದ್ದ. ಅದರ ಬಗ್ಗೆ ಒಂದು ಮಾತೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಇಲ್ಲ. Quality current ಬಗ್ಗೆ ಒಂದು ಪ್ರಶ್ನೆಯನ್ನೂ ಇದರಲ್ಲಿ ಮಾತನಾಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಕೆಲವು ರೈತರ, ಹಿರಿಯ ಸಲಹೆಗಳು, ಪತ್ರಗಳು ಬಂದಿವೆ ಎನ್ನುವುದನ್ನು ಓದಿದರು. ಅವರ ಯಾವ ಸಲಹೆಗಳನ್ನೂ ಕೂಡ ಗಣನೆಗೆ ತೆಗೆದುಕೊಂಡಿಲ್ಲ. ಈ ಸದನದಲ್ಲಿ ಚರ್ಚೆಯಾದ ವಿಷಯಗಳನ್ನೂ ಗಣನೆಗೆ ತೆಗೆದುಕೊಳ್ಳದೇ vague ಆಗಿ ಒಂದು ಪತ್ರವನ್ನು ಕೈಯಲ್ಲಿ ಕೊಟ್ಟಿದ್ದಾರೆ. ಇದರಿಂದ ಇವತ್ತು ರೈತ ಉದ್ಧಾರವಾಗುತ್ತಾನೆಂದು ನಾವು ಭಾವಿಸುವುದಕ್ಕಾಗುವುದಿಲ್ಲ. ಬಹಳಷ್ಟು ಆಯೋಗಗಳ ವರದಿಗಳೂ ಕೂಡ ಸರ್ಕಾರದ ಮುಂದೆ ಇದ್ದವು. ಬೆಲೆ ನಿಗದಿ ಬಗ್ಗೆ ಹಿಂದಿನ ಸರ್ಕಾರದಲ್ಲಿ ಡಾ. ಎಸ್. ಬಿಸಲಯ್ಯನವರ ನೇತೃತ್ವದಲ್ಲಿ....

ಅಧ್ಯಕ್ಷರು: ನಿಮ್ಮ ನಾಯಕರು ಮಾತನಾಡಿದ್ದಾರೆ. ಮತ್ತೆ ಮತ್ತೆ ಅವಕಾಶ ಕೊಡುವುದಿಲ್ಲ. ಸಾಕು ಈ ವಿಷಯವನ್ನು close ಮಾಡೋಣ. ಮತ್ತೆ ಅದೇ ಮಾತನಾಡುವುದು ಬೇಡ. ನಾಡಗೌಡರೆ, ಮತ್ತೆ ಅದೇ ಡಾ. ಬಿಸಲಯ್ಯ Committee, ಇವೆಲ್ಲದರ ಬಗ್ಗೆ ಮೊದಲು ನೀವು ಮಾತನಾಡಿದ್ದೀರಿ. ನೀವು 20 ನಿಮಿಷ ಮಾತನಾಡಿದ್ದೀರಿ.

ಶ್ರೀ ವೆಂಕಟರಾವ್ ನಾಡಗೌಡ: ನಾನೆಲ್ಲಿ ಮಾತನಾಡಿದ್ದೇನೆ. ಸರ್?

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು: ಮಾನ್ಯ ಬಾಲಕೃಷ್ಣನವರೆ, ನೀವು ಮಾತನಾಡಿದ್ದೀರಲ್ಲವೇ?

ಶ್ರೀ ಹೆಚ್.ಸಿ. ಬಾಲಕೃಷ್ಣ: ನಾನು ಮಾತನಾಡಿದ್ದೇನೆ. ಒಂದು clarification ಕೇಳಿಬಿಡುತ್ತಾರೆ. ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ಇವರಿಗೆ ಅವಕಾಶ ಕೊಟ್ಟರೆ, ಮತ್ತೆ ಯಾರಿಗೆ ಅವಕಾಶ ಸಿಕ್ಕಿಲ್ಲ ಅವರು ಕೇಳುತ್ತಾರೆ. ಮತ್ತೆ ಅದೇ chapter ಶುರುವಾಗುತ್ತದೆ.

ಶ್ರೀ ವೆಂಕಟರಾವ್ ನಾಡಗೌಡ: ಇದರಲ್ಲಿ ರಸ್ತೆ ಬಗ್ಗೆ ಪ್ರಸ್ತಾಪಿಸುವಾಗ....

ಅಧ್ಯಕ್ಷರು: ಮತ್ತೆ ಅದೇ ಪ್ಲೇಟ್ ರಿಪೀಟ್ ಆಗುತ್ತದೆಯಲ್ಲ? ಬೇರೇನೂ ಬದಲಾವಣೆಯಾಗುವುದಿಲ್ಲ. ನನಗೆ ಗೊತ್ತಿದೆ. ಅದೇ ವಿಷಯ. ಅದನ್ನೇ ಮಾತನಾಡುವುದು. ಏನಾದರೂ ಹೊಸ ವಿಷಯಗಳಿದ್ದರೆ ಮಾತನಾಡಿ. ನಿಮ್ಮ ನಾಯಕರು ಮಾತನಾಡಿರುವುದನ್ನೇ ಪುನಃ ನೀವು ಹೇಳುತ್ತೀರಿ.

ಶ್ರೀ ವೆಂಕಟರಾವ್ ನಾಡಗೌಡ: ಬೆಲೆ ನಿಗದಿ ಬಗ್ಗೆ ಯಾರು ಹೇಳಿದ್ದಾರೆ, ಸರ್?

ಅಧ್ಯಕ್ಷರು: (ಆಡಳಿತ ಪಕ್ಷದತ್ತ ತಿರುಗಿ) ನೀವು ಸರ್ಕಾರದ ವತಿಯಿಂದ ಉತ್ತರ ಕೊಡುತ್ತೀರೇನು?

ಶ್ರೀ ವೆಂಕಟರಾವ್ ನಾಡಗೌಡ: ನಾನು ಮಾತನಾಡಿದ್ದೇನೆ. ಅದರ ಬಗ್ಗೆ ಇದರಲ್ಲಿ ಉತ್ತರವಿಲ್ಲವೆಂದು ಕೇಳುತ್ತಿದ್ದೇನೆ. ಬೆಲೆ ನಿಗದಿ ಬಗ್ಗೆ ಇದರಲ್ಲಿ ಉತ್ತರವಿಲ್ಲ.

ಅಧ್ಯಕ್ಷರು: ಮತ್ತೆ ಹೊಸದಾಗಿ ಎಲ್ಲರೂ ಮಾತನಾಡುವುದಕ್ಕೆ ಹೊಸ ಲಿಸ್ಟ್ ಅನ್ನು ನಾನು ಚಾಲೂ ಮಾಡುವುದಿಲ್ಲ. ಅದು ಅಲ್ಲಿಗೇ ಮುಗಿಯಿತು. ನಿಮ್ಮ ನಾಯಕರು ಮಾತನಾಡಿದ್ದಾರೆ. ಮತ್ತು ಅದಕ್ಕೆ ಸ್ಪಷ್ಟೀಕರಣವನ್ನೂ ಕೇಳಿದ್ದಾರೆ. ಅಷ್ಟಕ್ಕೆ ಮುಗಿಯಿತು. ಈಗ ಸರ್ಕಾರದಿಂದ ಯಾರಾದರೂ ಉತ್ತರ ಕೊಡುತ್ತೀರಾ? ಸರ್ಕಾರದಿಂದ ಉತ್ತರ ಕೊಡಿ. ಈಗ ವಿಷಯವನ್ನು ಇಲ್ಲಿಗೆ ಮುಗಿಸೋಣ.

(ಕೆಲವು ಮಾನ್ಯ ಸದಸ್ಯರುಗಳು ತಮಗೆ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೋರುತ್ತಿದ್ದರು)

ಅಧ್ಯಕ್ಷರು: ಆಗುವುದಿಲ್ಲ, ಅವಕಾಶ ಕೊಟ್ಟರೆ ಮತ್ತೆ ಭಾಷಣ ಚಾಲೂ ಮಾಡುತ್ತೀರಿ.

ಶ್ರೀ ಬಸವರಾಜ ಬೊಮ್ಮಾಯಿ: ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು....

ಅಧ್ಯಕ್ಷರು: ನೋಡಿ, ಒಂದೊಂದೇ ಸ್ಪಷ್ಟೀಕರಣ ಕೇಳಿದರೆ ಅಡ್ಡಿಯಿಲ್ಲ. ಬೊಮ್ಮಾಯಿಯವರೆ, ಒಂದು ನಿಮಿಷ ತಡೆಯಿರಿ. ನಾಡಗೌಡರೆ, ನೀವು ಭಾಷಣ ಮಾಡಬೇಡಿ. ಏನಾದರೂ ಸ್ಪಷ್ಟೀಕರಣವಿದ್ದರೆ, ಕೇಳಿ.

ಶ್ರೀ ವೆಂಕಟರಾವ್ ನಾಡಗೌಡ: ಸ್ಪಷ್ಟೀಕರಣವನ್ನೇ ಕೇಳುತ್ತಿದ್ದೇನೆ. ಬೆಲೆ ನಿಗದಿ ಬಗ್ಗೆ ಇದರಲ್ಲಿ ಉತ್ತರವಿಲ್ಲವೆಂದರೆ, ಅದು ಸ್ಪಷ್ಟೀಕರಣ ಅಲ್ಲವೇ?

ಅಧ್ಯಕ್ಷರು: ನೀವು ಮಾತನಾಡಿದ್ದೀರಿ. ಹಾಗಾದರೆ, ಪುನಃ ಸ್ಪಷ್ಟೀಕರಣ ಏಕೆ ಕೇಳುತ್ತಿದ್ದೀರಿ? ಯಾರು ಇಲ್ಲಿ ಮಾತನಾಡಿಲ್ಲವೋ, ಅವರು ಮಾತನಾಡಿ ಸ್ಪಷ್ಟೀಕರಣ ಪಡೆದುಕೊಳ್ಳಬೇಕು. ನೀವು ಭಾಷಣವನ್ನೇ ಮಾಡಿಲ್ಲವಲ್ಲ? ನೀವು ಹೇಗೆ ಸ್ಪಷ್ಟೀಕರಣ ಪಡೆದುಕೊಳ್ಳುತ್ತಿದ್ದೀರಿ? ಮಾತನಾಡಿ.

ಶ್ರೀ ವೆಂಕಟರಾವ್ ನಾಡಗೌಡ: ರಸ್ತೆ ಬಗ್ಗೆ ಒಂದು ಸ್ಪಷ್ಟೀಕರಣ ನೀಡಿದರು. ರಸ್ತೆ ಬಗ್ಗೆ ಅವರು ಏನು ಹೇಳುತ್ತಿದ್ದಾರೆಂದರೆ, 50 ಕಿಲೋಮೀಟರ್ ರಸ್ತೆಯನ್ನು ಎರಡು ವರ್ಷಗಳಲ್ಲಿ ಪೂರ್ತಿಗೊಳಿಸುತ್ತೇವೆಂದರು. ಮಾನ್ಯ ಬಸವರಾಜ ಬೊಮ್ಮಾಯಿಯವರು ಮಾತನಾಡುವಾಗ ಏನು ಹೇಳಿದರು ಎಂದರೆ, ಐದು ವರ್ಷಗಳಲ್ಲಿ ಆ ಗುತ್ತಿಗೆದಾರರಿಗೆ ವರ್ಷಕ್ಕೆ ಇಂತಿಷ್ಟು ಪೇಮೆಂಟ್ ಮಾಡುತ್ತೇವೆಂದು ಹೇಳಿದರು. ನೀವು ಹಾಗೇನಾದರೂ ತಲೆಯಲ್ಲಿಟ್ಟುಕೊಂಡು ಮಾಡಿದರೆ ಇವತ್ತು ಒಂದು ಲಕ್ಷ ರೂ. ಆಗುವ ರಸ್ತೆಗೆ ಅವರು ಎರಡು ಲಕ್ಷ ರೂ. quote ಮಾಡಿ ಮಾಡಬೇಕಾಗುತ್ತದೆ. ನೀವು 40,000 ರೂ. ಖರ್ಚು ಮಾಡಿದರೆ ಕೆಲಸ ಆಗುತ್ತದೆಂಬ ಭಾವನೆ ಇವತ್ತು ಇಟ್ಟುಕೊಂಡಿದ್ದೀರಲ್ಲ? ಮೂರು ಪಟ್ಟು ಜಾಸ್ತಿ ಬೆಲೆಗೆ ಗುತ್ತಿಗೆದಾರರು ಬರಬೇಕಾಗುತ್ತದೆ. ಏಕೆಂದರೆ, ಅವರಿಗೆ ಐದು ವರ್ಷಗಳಿಗೆ ಸಿಗುತ್ತದೆ. ಹಾಗಾದರೆ, ನೀವು ಇಷ್ಟು ಖರ್ಚು ಮಾಡಿ ಕೆಲಸ ಮಾಡುತ್ತೀರಿ? ಐದೂ ವರ್ಷಗಳದ್ದು ಪೇಮೆಂಟ್ ಮಾಡುತ್ತೇವೆಂದರೆ ಇವತ್ತಿನ DSRಗೆ ಅವರು ಕೆಲಸ ಮಾಡುತ್ತಾರೆಯೇ? ಮಾಡಲು ಸಾಧ್ಯವಿದೆಯೇ? ಐದು ವರ್ಷಗಳಿಗೆ ನೀವು ದುಡ್ಡು ಕೊಡುತ್ತೇವೆಂದರೆ, ಮುಂದಿನ ಐದು ವರ್ಷಗಳ ಆಲೋಚನೆ ಮಾಡಿ ಮೂರು ಪಟ್ಟು ದುಡ್ಡು ಹೆಚ್ಚಿಸುತ್ತಾರೆ. ಹಾಗಾದರೆ, ನೀವು ಹೇಗೆ ಮಾಡಲು ಸಾಧ್ಯ?

ಮೂರು ಪಟ್ಟು ಹೆಚ್ಚಿಗೆ ಹಣ ಖರ್ಚು ಮಾಡಿ ಈ ರಸ್ತೆಗಳನ್ನು ನಿರ್ಮಿಸುತ್ತೀರಾ? ಇದರ ಬಗ್ಗೆ ಕ್ಲಾರಿಫೈ ಮಾಡಬೇಕಲ್ಲ? ನೀವು ಹೇಳಿಬಿಟ್ಟರೆ ನಾವು ಇವತ್ತೇ ತೆಗೆದುಕೊಳ್ಳುತ್ತೇವೆ. ಐದು ವರ್ಷಗಳದ್ದು ಪೇಮೆಂಟ್ ಮಾಡುತ್ತೇವೆಂದರೆ, ಅವರು ಇವತ್ತಿನ DSRಗೆ ಮಾಡಿಬಿಡುತ್ತಾರೆಯೇ? ಅಷ್ಟು ಜಾಸ್ತಿ ದುಡ್ಡು ಖರ್ಚು ಮಾಡಿ ಕೆಲಸ ಮಾಡುವುದಕ್ಕಾಗುತ್ತದೆಯೇ ಎಂಬುದನ್ನೂ ಆಲೋಚನೆ ಮಾಡಬೇಕು. ಆದುದರಿಂದ, ಇದರ ಬಗ್ಗೆ ಕ್ಲಾರಿಫೈ ಮಾಡಬೇಕು. ಅನಂತರ, ಬೆಲೆ ನಿಗದಿ ಬಗ್ಗೆ ಏನನ್ನೂ ಹೇಳಿಲ್ಲ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಚಿವರು ಹೇಳಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇವೆ. ಕ್ವಾಲಿಟಿ ಕರೆಂಟ್ ಬಗ್ಗೆಯೂ ಹೇಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಅಪಾಜಿ ಎಸ್. ನಾಡಗೌಡ (ಮುದ್ದೇಬಿಹಾಳ): ಅಧಿಕಾರಿಗಳಾಗಲಿ, ನೀವಾಗಲಿ, ನಮ್ಮ ಮನಸ್ಸಿಗೆ ಇವತ್ತು ಆಗಿರುವಷ್ಟು ಬೇಸರ ಎಂದು ಆಗಿರಲಿಲ್ಲ. ನಾವು ಇಲ್ಲಿ ಸುಮ್ಮನೆ ಒತ್ತಾಯಕ್ಕೆ ಕುಳಿತುಕೊಂಡಿದ್ದೇವೆ. ನಾವೆಲ್ಲರೂ ಹೊರಗಡೆ ಹೋಗಬೇಕೆಂದು ಮನಸ್ಸು ಮಾಡಿದ್ದೆವು. ಸದನ ಈ ರೀತಿ ನಡೆದರೆ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ಇಲ್ಲಿಯವರೆಗೂ ಮೂರು ದಿವಸಗಳ ಕಾಲ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕುರಿತಂತೆ ಸದನದಲ್ಲಿ ಚರ್ಚಿಸಿದ್ದೇವೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ನಾವು ಯಾವ ರೀತಿ ಪ್ರೋತ್ಸಾಹ ನೀಡಬೇಕು ಮತ್ತು ಹೇಗೆ ಅಲ್ಲಿ ವ್ಯವಸ್ಥೆ ಸುಧಾರಿಸಬೇಕು. ಅದರಿಂದ ನಮ್ಮ ನಾಡಿಗೆ ಹೇಗೆ ಪ್ರಯೋಜನವಾಗುತ್ತದೆಂಬ ಮಾತುಗಳನ್ನೂ ಹೇಳಿದ್ದೇವೆ. ಈ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳಲು ಇಚ್ಛಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದಾಗ ಪದೇ ಪದೇ ಪ್ರಸ್ತಾಪಿಸುತ್ತಿದ್ದರು. ಏನೆಂದರೆ, ಈ ಸರ್ಕಾರ ಸೆರೆಯನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆಯೇ ಇಲ್ಲವೇ ಎಂದು ಬೊಟ್ಟು ಮಾಡಿ ಕೇಳುತ್ತಿದ್ದರು. ಆ ಪ್ರಶ್ನೆಯನ್ನು ಇವತ್ತು ನಾನು ನಿಮಗೆ ಕೇಳುತ್ತೇನೆ. ಮೊದಲು ಶಿಸ್ತು ತರಬೇಕಾದರೆ ಸೆರೆಯನ್ನು ಸಂಪೂರ್ಣ alcoholನ್ನು ನಿಷೇಧಿಸುವುದಕ್ಕೆ ನೀವೇಕೆ ಹಿಂದೆ ಸರಿಯುತ್ತಿದ್ದೀರಿ? ನೀವು ವಿರೋಧ

ಪಕ್ಷದಲ್ಲಿದ್ದಾಗ ನಿಮ್ಮ ಅಜೆಂಡಾ ಇದೇ ಆಗಿತ್ತು. ಆದರೆ, ಇವತ್ತೇಕೆ ಅದು ಇಲ್ಲ? ಸೆರೆಯನ್ನು ಸಂಪೂರ್ಣವಾಗಿ ನಿಷೇಧಿಸುವುದಕ್ಕೆ ಏಕೆ ಹಿಂಜರಿಯುತ್ತಿದ್ದೀರಿ? ಇದು ಮೊದಲನೆಯದು.

ಎರಡನೆಯದ್ದು, ಇದರಲ್ಲಿ ತಾವು ಹೇಳಿಕೆ ನೀಡಿದ್ದೀರಿ. ಹೇಳಿಕೆಯಲ್ಲಿ ವಿದ್ಯುತ್ ಬಗ್ಗೆ ತಾವು ಪ್ರಸ್ತಾಪಿಸಿಲ್ಲ. ವಿದ್ಯುತ್ ಸಮಸ್ಯೆ ಬಗ್ಗೆ, ಜನರೇಟರ್‌ಗಳನ್ನು ಒದಗಿಸುವುದಾಗಲಿ, ಡೀಸೆಲ್ ಸಬ್ಸಿಡಿಯಾಗಲಿ, ಇವತ್ತು ಬಹಳ ಅವಶ್ಯಕವಾಗಿರುವುದರ ಬಗ್ಗೆ ಏನೂ ಹೇಳಿಕೆ ನೀಡಲಿಲ್ಲ. ಮತ್ತು ಅದರ ಬಗ್ಗೆ ನೀವು ಉಲ್ಲೇಖವನ್ನೂ ಮಾಡಲಿಲ್ಲ. ಇನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕುರಿತು, ಓಂಬುಡ್ಸ್‌ಮನ್ ವ್ಯವಸ್ಥೆ ಜಾರಿಗೆ ತರುತ್ತೇವೆಂದು ಹೇಳಿದ್ದೀರಿ. ಓಂಬುಡ್ಸ್‌ಮನ್ ಎಂದರೇನು? ಒಂದು ಪದ ಉಪಯೋಗಿಸಿಕೊಂಡರೆ ಸಾಕೇ? ಒಬ್ಬ ಅಧಿಕಾರಿ ಪಂಚಾಯಿತಿ ಮಟ್ಟದಲ್ಲಿ ಇಲ್ಲವೇ ಒಬ್ಬ ವ್ಯಕ್ತಿ ಮೇಲೆ ಇನ್‌ವೆಸ್ಟಿಗೇಶನ್ ನಡೆಸುವುದಕ್ಕೆ ಓಂಬುಡ್ಸ್‌ಮನ್ ಎಂದು ಕರೆಯುತ್ತಾರೆ. ಈ ವ್ಯವಸ್ಥೆ ಈಗಾಗಲೇ ಜಾರಿಯಲ್ಲಿದೆ. What is new in this? ನೀವು ಏಕೆ ಮಾಡುತ್ತಿಲ್ಲ? ಇಲ್ಲಿಯವರೆಗೂ ನೀವು ಏಕೆ ಈ ಕುರಿತಂತೆ ಕ್ರಮ ಕೈಗೊಳ್ಳುತ್ತಿಲ್ಲ? Is it new in this? ನಿಮ್ಮ ಆ್ಯಕ್ಟ್‌ನಲ್ಲಿ ಈಗಾಗಲೇ ಇದಕ್ಕೆ ಪ್ರಾವಿಜನ್ ಇದೆ. ಅವರನ್ನು dis-qualify ಮಾಡುವುದಕ್ಕೆ ನಿಮಗೆ ಎಲ್ಲಾ ರೀತಿಯ ಅಧಿಕಾರ ಇದೆ. ಯಾರು ಸರಿಯಾಗಿ ನಡೆದುಕೊಳ್ಳುವುದಿಲ್ಲವೋ, ಅವರ ಮೇಲೆ ಕ್ರಮ ಕೈಗೊಳ್ಳಲು ಈಗ ಅಧಿಕಾರ ಇದೆ. Default ಆಗಲಿ, mis-use of powers ಆಗಲಿ, ಕ್ರಮ ಜರುಗಿಸಲು ಅಧಿಕಾರ ಇದೆ. ಅದನ್ನು ಇವತ್ತು ಏಕೆ ನೀವು ಜಾರಿಗೊಳಿಸುತ್ತಿಲ್ಲ ಎನ್ನುವ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು: ನೋಡಿ, ಈಗ ಮಾನ್ಯ ಸದಸ್ಯರಾದ ಅಪ್ಪಾಜಿ ನಾಡಗೌಡರು ಒಂದು ಮಾದರಿ ಹಾಕಿಕೊಟ್ಟಿದ್ದಾರೆ. ಅವರು ಭಾಷಣ ಮಾಡಲಾರದೆ 2–3 ಪ್ರಶ್ನೆಗಳನ್ನು ಕೇಳಿದ್ದಾರಲ್ಲ, ಆ ರೀತಿ ಕೇಳಲು ಎಲ್ಲಾ ಮಾನ್ಯ ಸದಸ್ಯರು ಕಲಿತುಕೊಳ್ಳಬೇಕು. ಈ ರೀತಿ ಮಾತನಾಡಿದರೆ ಹತ್ತು ಮಾನ್ಯ ಸದಸ್ಯರುಗಳಿಗೆ

ಮಾತನಾಡಲು ಅವಕಾಶ ಕಲ್ಪಿಸಿಕೊಡಬಹುದು. ಅಪ್ಪಾಜಿ ನಾಡಗೌಡರು ಮಾತನಾಡಿದ್ದಾರಲ್ಲ, ಆ ರೀತಿ ಮಾತನಾಡಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ): ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇಷ್ಟೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಆದಾಯ ಮಿತಿಯನ್ನು 50,000 ದಿಂದ 2,50,000 ರೂ.ಗಳವರೆಗೆ ಹೆಚ್ಚಿಸಿದ್ದೀರಿ. ಅದೇ ರೀತಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳವರ ಆದಾಯ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವದ ಕಡತ ತಮ್ಮ ಸರ್ಕಾರದ ಮುಂದಿದೆ. ಉತ್ತರಿಸುವಾಗ ಇದರ ಬಗ್ಗೆ ಹೇಳಬೇಕು. ಎರಡನೆಯದಾಗಿ, ಆಶ್ರಯ ಮನೆಗಳಿಗೆ ಜಮೀನು ಖರೀದಿಸಲು ಮೀಸಲಿರಿಸಿರುವ ಹಣ ಏನೇನು ಸಾಲದು. ಇದನ್ನು ಹೆಚ್ಚಿಸಬೇಕು. ಮತ್ತೊಂದು ಸಲಹೆ ಏನಿದೆಯೆಂದರೆ, ಬಹಳಷ್ಟು ಗ್ರಾಮಗಳಲ್ಲಿ ಸ್ಮಶಾನದ ಸಮಸ್ಯೆಗಳಿವೆ. ಯಾರಾದರೂ ಸತ್ತಾಗ ಅವರನ್ನು ಹೂಳಲು ಅವರಿವರಿಗೆ ಕೈಜೋಡಿಸಬೇಕಾದ ಪರಿಸ್ಥಿತಿ ಇದೆ. ಸರ್ಕಾರ ಇದರ ಬಗ್ಗೆ ವಿಶೇಷ ಕಾಳಜಿ ವಹಿಸಿ ಸ್ಮಶಾನ ಭೂಮಿ ದೊರಕಿಸಿಕೊಡುವ ಕುರಿತಂತೆ ತಮ್ಮ ಉತ್ತರದಲ್ಲಿ ಹೇಳಬೇಕೆಂದು ಬಯಸುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಚಿಕ್ಕೋಡಿ): ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಈಗ ಸಕ್ಕರೆ ಮತ್ತು ಎಪಿಎಂಸಿ ಸಚಿವರು ಇದ್ದಾರೆ. ನಾನು ಮಾತನಾಡುವಾಗ ಹೇಳಿದ್ದೆ. ಬೆಳಗಾಂ ಜಿಲ್ಲೆಯಲ್ಲಿ ಸಂಕೇಶ್ವರ, ನಿಪ್ಪಾಣಿ ಮತ್ತು ಸದಲಗಾ ಎಪಿಎಂಸಿ ಯಾರ್ಡ್‌ಗಳೇನಿವೆ, ರೈತರು ಬೆಳೆದ ಬೆಲ್ಲ, ಮೆಣಸಿನಕಾಯಿ, ಇತ್ಯಾದಿ ಬೆಳೆಗಳು ಆ ಎಪಿಎಂಸಿ ಯಾರ್ಡ್‌ಗಳಿಗೆ ಬರುವುದಿಲ್ಲ. ಆ ಬೆಳೆಗಳೆಲ್ಲವೂ ಮಹಾರಾಷ್ಟ್ರದ ಸಾಂಗ್ಲಿ, ಕೊಲ್ಲಾಪುರದ ಮಾರುಕಟ್ಟೆಗಳಿಗೆ ಹೋಗುತ್ತವೆ. ಅದನ್ನು ತಡೆಗಟ್ಟುವುದಕ್ಕೆ ನೀವು ಏನು ಕ್ರಮ ಕೈಗೊಳ್ಳುತ್ತೀರಿ? ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ತೆರಿಗೆ ಸಂಬಂಧವಾಗಿ ಏನಾದರೂ ತಾರತಮ್ಯವಿದೆಯೇ? ಇಲ್ಲಿನ ಎಪಿಎಂಸಿ ಯಾರ್ಡ್‌ಗಳು ಸಂಪೂರ್ಣ ಮುಚ್ಚುವ ಪರಿಸ್ಥಿತಿಗೆ ಬಂದಿದೆ. ಪ್ರತಿಯೊಂದು ಎಪಿಎಂಸಿ ಯಾರ್ಡ್‌ಗಳಿಗೆ ಜೆಎಂಎಫ್‌ಸಿ ಕೋರ್ಟ್‌ಗಳನ್ನು ಬಾಡಿಗೆಗೆ ನೀಡಲಾಗಿದೆ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರೆಂಬುದನ್ನು ಹೇಳಬೇಕು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಎರಡನೆಯದಾಗಿ, ಈ ಸಲ ರೈತರಿಗೆ ಕಬ್ಬಿನ ಬಂಪರ್ ಬೆಳೆ ಬಂದಿದೆ. ಈಗ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಕಬ್ಬು ಸಾಗಾಣಿಕೆಯಾಗುತ್ತಿದ್ದು, ಇದರ ಮೇಲೆ ತಾವೇನಾದರೂ ನಿರ್ಬಂಧ ವಿಧಿಸುತ್ತೀರಾ? ಹೇಗೆ? ನಿರ್ಬಂಧ ವಿಧಿಸಬಾರದೆಂದು ನಾವುಗಳು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇವೆ. ಸದನದಲ್ಲಿ ಮಾಜಿ ಸಕ್ಕರೆ ಸಚಿವರಿದ್ದಾರೆ. ದಯಮಾಡಿ ಕಬ್ಬಿನ ಮೇಲೆ ಯಾವುದೇ ರೀತಿಯಲ್ಲೂ ನಿಯಂತ್ರಣ ಹೇರಬಾರದು.

ಶ್ರೀ ಉಮೇಶ್ ವಿ. ಕತ್ತಿ: ಕಬ್ಬು ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಸಾಗಾಣಿಕೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಮತ್ತು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬರುವ ಕಬ್ಬು ಸಹ ನಿಲ್ಲಬಾರದು. ಮಹಾರಾಷ್ಟ್ರದವರು ಕರ್ನಾಟಕದಿಂದ ಬರುವ ಕಬ್ಬಿಗೆ ನಿರ್ಬಂಧ ಹೇರದಿದ್ದರೆ, ನಾವೂ ಹೇರುವುದೂ ಬೇಡ. ಅವರು ನಿರ್ಬಂಧ ವಿಧಿಸಿದರೆ ನಾವೂ ನಿರ್ಬಂಧ ವಿಧಿಸೋಣ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಕಬ್ಬು ಬರುವುದೇ ಇಲ್ಲ. ಏಕೆಂದರೆ, ಇಲ್ಲಿ ಪ್ರತಿ ಟನ್ ಕಬ್ಬಿಗೆ 1,400 ರೂ.ಗಿಂತಲೂ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಮಹಾರಾಷ್ಟ್ರದಲ್ಲಿ 1,650 ರೂ. ಇದೆ.

ಶ್ರೀ ಉಮೇಶ್ ವಿ. ಕತ್ತಿ: ನಾನು ಇಷ್ಟೇ ಹೇಳುವುದು. ಎರಡೂ ಕಡೆಗಳಲ್ಲೂ ಮುಕ್ತವಾಗಿಡೋಣ. ಅಲ್ಲಿಂದ ಕಬ್ಬು ಬರುವುದಿದ್ದರೆ ತೆಗೆದುಕೊಳ್ಳೋಣ. ಅಲ್ಲಿಗೆ ಕಬ್ಬು ಕೊಡಬೇಕೆಂದಿದ್ದರೆ ಕೊಡೋಣ. ಅವರು ಈ ವಿಚಾರದಲ್ಲಿ ಬ್ಯಾನ್ ಮಾಡಿದಾಗ ನಾವೂ ಬ್ಯಾನ್ ಮಾಡಲೇಬೇಕು. ಅವರು ಬ್ಯಾನ್ ಮಾಡದಿದ್ದಾಗ ನಾವೂ ಮಾಡಬಾರದು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಕಬ್ಬು ಬರುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಮತ್ತು ತಕರಾರು ಸಹ ಇಲ್ಲ. ಇದರ ಬಗ್ಗೆ ಮಾನ್ಯ ಸಕ್ಕರೆ ಸಚಿವರು ಸ್ಪಷ್ಟವಾಗಿ ಹೇಳಬೇಕು. ಕಬ್ಬಿನ ಮೇಲೆ ಯಾವುದೇ

ರೀತಿಯ ನಿರ್ಬಂಧ ವಿಧಿಸಬಾರದು. ನಮ್ಮ ಜಿಲ್ಲೆಯಲ್ಲಿ ಏನು APMC ಇವೆ, ಆ APMCಗೆ ಬೆಲ್ಲ ಆಗಲಿ, ಶೇಂಗಾ ಆಗಲಿ, ಮೆಣಸಿನಕಾಯಿ ಆಗಲಿ, ರೈತರು ಬೆಳೆದಂತಹ ಪದಾರ್ಥಗಳು ಮಾರುಕಟ್ಟೆಗೆ ಬರುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ? ಅದರ ಬಗ್ಗೆ ಹೇಳಬೇಕು.

ಶ್ರೀ ಸಿ.ಸಿ. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಗೌರವಾನ್ವಿತ ಸದಸ್ಯರಾದ ಪ್ರಕಾಶ್ ಹುಕ್ಕೇರಿಯವರು ವ್ಯಕ್ತಪಡಿಸಿದ ಭಾವನೆಗಳು ಸ್ವಾಗತಾರ್ಹ. ಆದರೆ ಹಿಂದೆ ಅವರೇ ಮಾರುಕಟ್ಟೆ ಸಚಿವರಾಗಿದ್ದರು ಆಗ ಏನು ಕ್ರಮ ತೆಗೆದುಕೊಂಡಿದ್ದರು ಎಂದು ಅದರ ಜೊತೆಗೆ ಸ್ವಲ್ಪ ಹೇಳಿದರೆ ಇವತ್ತಿನ ಸಚಿವರಿಗೆ ದಾರಿದೀಪವಾಗುತ್ತದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ): ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಮಾತನಾಡತಕ್ಕಂತಹ ಸಂದರ್ಭದಲ್ಲಿ ನಾನು ಹೇಳಿದ್ದೆ. ಈ

5.00 P.M.

ಅಧಿವೇಶನದ ಅವಶ್ಯಕತೆ ಇತ್ತಾ ಎನ್ನತಕ್ಕಂತಹ ಪ್ರಶ್ನೆಯನ್ನು ಹಾಕಿದ್ದೆ. ನಾನು ಏಕೆ ಹೇಳುತ್ತೇನೆಂದರೆ, 3–4 ದಿವಸ ಮಾಡಿದ್ದು ಬೆಟ್ಟ ಅಗೆದು ಇಲಿ ಹಿಡಿದ ಹಾಗಾಯಿತು ಅಷ್ಟೆ. ಇದರಿಂದ ಏನೂ ಪ್ರಯೋಜನ ಆಗಲಿಲ್ಲ. ಇಲಿ ಕೂಡ ಸಿಗಲಿಲ್ಲ. ನಾನು ಮೂರು ಪ್ರಶ್ನೆಗಳನ್ನು ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಬರದಿಂದ ತತ್ತರಿಸುತ್ತಿದ್ದೇವೆ. ನೀವೇನೋ ಕೃಷಿ ಬಗ್ಗೆ ಬಹಳ ವಿಶೇಷ ಅಧಿವೇಶನ ಕರೆದಿದ್ದೀರಿ. ಸುಮಾರು 86 ತಾಲ್ಲೂಕುಗಳು ಬರದಲ್ಲಿವೆ. ಬರದಲ್ಲಿರುವಂತಹ ರೈತರು ಏನು ಸಾಲ ಮಾಡಿದ್ದಾರೆ. ಕನಿಷ್ಠ ಅದನ್ನು ಮನ್ನಾ ಮಾಡತಕ್ಕಂಥದ್ದನ್ನು ಮಾಡಬೇಕು. ಈ ಅಧಿವೇಶನ ಕರೆದಿರುವ ವಿಶೇಷತೆಯಿಂದಾಗಿ ಅದನ್ನು ಮಾಡಬೇಕು. ಇದು ಒಂದು. ಬಡ್ಡಿಯಾದರೂ ಮನ್ನಾ ಮಾಡತಕ್ಕಂತಹ ವ್ಯವಸ್ಥೆ ಮಾಡಬೇಕು. ಎರಡನೆಯದಾಗಿ ಪ್ರಧಾನ ಮಂತ್ರಿಗಳೂ ಕೂಡ ರಾಜ್ಯ ಸರ್ಕಾರಗಳಿಗೆ ಹೇಳಿದ್ದಾರೆ. ಆಹಾರ ಉತ್ಪಾದನೆ

ಬಹಳ ಕುಂಠಿತವಾಗುತ್ತದೆ. ಅದನ್ನು ಜಾಸ್ತಿ ಮಾಡುವುದಕ್ಕೋಸ್ಕರ ನೀವು ಸಬ್ಸಿಡಿ ದರದಲ್ಲಿ ಡೀಸೆಲ್ ಕೊಡಿ ರೈತರಿಗೆ ಸರಿಯಾದ ಕರೆಂಟ್ ಕೊಡಿ, ಎನ್ನತಕ್ಕಂತಹ ವಿಚಾರವನ್ನು ಹೇಳಿದ್ದಾರೆ. ನಮ್ಮ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳಿದ್ದಾರೆ. ಈ ಮಳೆಗಾಲ ಮುಗಿಯುವವರೆಗೆ ವ್ಯವಸಾಯಕ್ಕೆ ಬಹಳ ಅವಶ್ಯಕವಾಗಿರುವ ವಿದ್ಯುತ್ತನ್ನು ಕನಿಷ್ಠ 10 ಗಂಟೆ ಪ್ರತಿನಿತ್ಯ ಕರೆಂಟ್ ಕೊಡತಕ್ಕಂತಹ ವ್ಯವಸ್ಥೆಯನ್ನು ತಾವು ಮಾಡುತ್ತೀರಾ ಎಂದು ದಯಮಾಡಿ ಸದನಕ್ಕೆ ತಿಳಿಸಬೇಕು. ಮೂರನೆಯದಾಗಿ ಶೌಚಾಲಯದ ಬಗ್ಗೆ ಮಾತನಾಡಿದೆವು. ನಮ್ಮ ಸಚಿವರು ಮಹಿಳೆಯರಿದ್ದಾರೆ. ಮಹಿಳೆಯರ ಪಾಡೇನು ಎಂದು ಅವರಿಗೆ ಗೊತ್ತಿದೆ. 2,5000 ರೂ.ಗಳಲ್ಲಿ ಶೌಚಾಲಯ ಕಟ್ಟಲಿಕ್ಕೆ ಸಾಧ್ಯವಿಲ್ಲ. ಇವತ್ತು ಸಿಮೆಂಟ್ ಹಾಗೂ ಶೀಟುಗಳ ಬೆಲೆಗಳು ಜಾಸ್ತಿಯಾಗಿರುವುದರಿಂದ 5,000 ರೂ.ಗಳನ್ನು ಕೊಡಬೇಕು. Compulsory ಶೌಚಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಏನಾದರೂ ಮನಸ್ಸು ಮಾಡುತ್ತದಾ? ಈ ಮೂರು ವಿಷಯಗಳಿಗೆ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಮಾನಾಥ ರೈ (ಬಂಟ್ವಾಳ): ಮಾನ್ಯ ಉಪಾಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ವಿಶೇಷವಾದ ಸದನದನ್ನು ಕರೆದು, ವಿಶಾಲವಾದ ಚರ್ಚೆ ಆಗಿ ಉತ್ತಮವಾದ ಫಲಿತಾಂಶ ಬರುತ್ತದೆ ಎಂದು ನಿರೀಕ್ಷೆ ಇತ್ತು. ಯಾವುದೇ ಉತ್ತರದಾಯಿತ್ವ ಇಲ್ಲದ ಉತ್ತರವನ್ನು ಕೊಟ್ಟು ಕಣ್ಣೊರೆಸುವಂತಹ ಕೆಲಸವನ್ನು ಮಾಡಿದ್ದಾರೆ. ಬಹು ಮುಖ್ಯವಾಗಿ ಗ್ರಾಮದ ಅಭಿವೃದ್ಧಿ; ದೇಶದ ಅಭಿವೃದ್ಧಿ ಎಂದರೆ ಗ್ರಾಮ ಅಭಿವೃದ್ಧಿ ಆದರೆ ದೇಶ ಅಭಿವೃದ್ಧಿ ಆಗುತ್ತದೆ. ಮೂಲಭೂತವಾದ ಕೆಲವು ವಿಷಯಗಳು ಗ್ರಾಮೀಣಾಭಿವೃದ್ಧಿ ಬಗ್ಗೆ ನಾವು ಮಾತನಾಡಬೇಕೆಂದರೆ, ಪಂಚಾಯತ್ ವ್ಯವಸ್ಥೆ ಪ್ರಾರಂಭವಾದಾಗ ಒಂದು ಲಕ್ಷ ರೂ. ಅನುದಾನ ಇಟ್ಟು ಪ್ರಾರಂಭ ಮಾಡಿದರು. ಅದು ಎರಡು ಲಕ್ಷ, ಮೂರು ಲಕ್ಷ, ಆಗಿ ಆರು ಲಕ್ಷ ರೂ.ಗೆ ಬಂದು ನಿಂತಿದೆ. ಆಗ ಪ್ರಾರಂಭವಾದ ಒಂದು ಲಕ್ಷ ರೂ. ಅನುದಾನ ನನ್ನ ದೃಷ್ಟಿಯಲ್ಲಿ ಇವತ್ತಿಗೆ 10 ರಿಂದ 15 ಲಕ್ಷ ರೂ. ಗಳನ್ನಾದರೂ ಕೊಡಬೇಕು. ಬಹುಶಃ ಕೆಲವು ಪಂಚಾಯತಿಗಳಲ್ಲಿ ಅನುದಾನ

ಮತ್ತು ಸಂಪನ್ಮೂಲ ಎರಡನ್ನೂ ಒಟ್ಟಿಗೆ ಸೇರಿಸಿದರೆ ವಿದ್ಯುತ್ ಬಿಲ್ಲನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ಪಂಚಾಯಿತಿಗಳಲ್ಲಿ ತಿಂಗಳಿಗೆ 30,000 ರೂ. ವಿದ್ಯುತ್ ಬಿಲ್ಲನ್ನು ಕಟ್ಟಬೇಕು. ಸಂಪನ್ಮೂಲ ಹಾಗೂ ಅನುದಾನ ಒಟ್ಟಿಗೆ ಸೇರಿಸಿದರೂ ಕೂಡ ಅವರ ಕರೆಂಟ್ ಬಿಲ್ಲನ್ನು ಕಟ್ಟುವುದಕ್ಕಾಗುತ್ತಿಲ್ಲ. ಇದರ ಬಗ್ಗೆ ಬಹಳ ಚರ್ಚೆ ನಡೆದಾಗ ಪಂಚಾಯಿತಿಗಳಿಗೆ ಹೆಚ್ಚಿನ ಅನುದಾನ ಕೊಡುತ್ತೇನೆಂದು ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಅದರ ಬಗ್ಗೆ ಪ್ರಸ್ತಾಪ ಇಲ್ಲ. ಕುಡಿಯುವ ನೀರಿಗೆ ವಿದ್ಯುತ್ ಬಿಲ್ಲನ್ನು ಕಟ್ಟುವ ಹಣ ಇಲ್ಲ. ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಸಾಲ ಇದೆ. ಒಂದು ಪಂಚಾಯಿತಿಗೆ ಇಂತಿಷ್ಟು ಕರೆಂಟ್ ಧರ್ಮಾರ್ಥವಾಗಿ ಕೊಡತಕ್ಕಂತಹ ವ್ಯವಸ್ಥೆ ಮಾಡಿ. ಸಂಪೂರ್ಣವಾಗಿ ಕೊಡಿ ಎಂದು ನಾನು ಹೇಳುವುದಿಲ್ಲ. ಇಂತಿಷ್ಟು ಯೂನಿಟ್ ಕೊಡಿ ನಂತರ ಬೇಕಾದರೆ ಪಂಚಾಯಿತಿಯವರು ಕಟ್ಟಿಕೊಳ್ಳಲಿ. ಬಹುಶಃ ಇದು ಹೇಳಿದ್ದರೆ ಅದಕ್ಕೆ ಒಳ್ಳೆಯ ಫಲಿತಾಂಶ ಸಿಗುತ್ತಿತ್ತು ಎಂದು ನನ್ನ ಅನಿಸಿಕೆ. ಬಹುಶಃ ಪಂಚಾಯಿತಿಗಳನ್ನು ಬಲಿ ತೆಗೆದುಕೊಳ್ಳಬೇಕು. ಪಂಚಾಯಿತಿ ಅಧಿಕಾರವನ್ನು ಮೊಟಕುಗೊಳಿಸಬೇಕು ಎನ್ನುವಂತಹ ಪ್ರಯತ್ನ ನಡೆಯುತ್ತಿದೆ ಎಂದು ವ್ಯಾಪಕವಾಗಿ ಚರ್ಚೆ ನಡೆಯುತ್ತಿದೆ. ಒಂದೇ ಒಂದು ಮಾತು ಯಥಾವತ್ತಾಗಿ ಬೇಲೂರು ಘೋಷಣೆಯನ್ನು ಅನುಷ್ಠಾನ ಮಾಡುತ್ತೇವೆಂದು ಒಂದೇ ಒಂದು ಮಾತು ಹೇಳಿದ್ದರೆ ಈ ಚರ್ಚೆಗೆ ಶಕ್ತಿ ಬರುತ್ತಿತ್ತು ಎಂದು ನನ್ನ ಅಭಿಪ್ರಾಯ. ಬೇಲೂರು ಘೋಷಣೆಯನ್ನು ಯಥಾವತ್ತಾಗಿ ನಾವು ಅನುಷ್ಠಾನ ಮಾಡುತ್ತೇವೆ ಎಂದು ಹೇಳಬೇಕು. ಬಹುಶಃ ಅದಕ್ಕೆ ವಿಶೇಷವಾದ ಅಧಿಕಾರ ಕೊಡುವ ಒಂದು ಪ್ರಯತ್ನ ನಡೆಯಬೇಕು. ಬಹುಶಃ ಹಂತಹಂತವಾಗಿ ಪಂಚಾಯಿತಿಗಳನ್ನು ದುರ್ಬಲ ಮಾಡತಕ್ಕಂತಹ ಪ್ರಯತ್ನ ಪ್ರತಿಯೊಂದು ಹಂತದಲ್ಲಿ ನಡೆಯುತ್ತಿದೆ. ಕಾಟಾಚಾರಕ್ಕೆ ಗ್ರಾಮಸಭೆಗಳು ಇವೆ. ಪಂಚಾಯಿತಿಗಳಲ್ಲಿ ಒಂದು ಫಲಾನುಭವಿಗಳನ್ನು ಆಯ್ಕೆ ಮಾಡುವುದು ಕೂಡ ಸರಿಯಾಗಿ ಆಗುತ್ತಿಲ್ಲ. ಆಶ್ರಯ ಮನೆಗಳ ಬಗ್ಗೆ ನಾನು ಹೇಳಿದರೆ ಕೆಲವರು ಅಪಾರ್ಥ ಮಾಡಿಕೊಳ್ಳುತ್ತಾರೆ. ಪಂಚಾಯಿತಿಗಳನ್ನು ದುರ್ಬಲ ಮಾಡತಕ್ಕಂತಹ ಪಂಚಾಯಿತಿಗಳನ್ನು ಬಹಳಷ್ಟು ಶಕ್ತಿಹೀನ ಮಾಡತಕ್ಕಂತಹ ಪ್ರಯತ್ನಗಳು

ಹಂತಹಂತವಾಗಿ ನಡೆಯುತ್ತಾ ಬಂದವು. ಮಾನ್ಯ ಎಸ್.ಎಂ. ಕೃಷ್ಣರವರ ಕಾಲದ ಬೇಲೂರು ಘೋಷಣೆ ಯಥಾವತ್ತಾಗಿ ಜಾರಿ ಮಾಡಿದ್ದರೆ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವುದಕ್ಕೆ ಹೆಚ್ಚಿನ ಶಕ್ತಿ ಬರುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ. ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಅನುದಾನ ಜಾಸ್ತಿ ಮಾಡಬೇಕು. ಕುಡಿಯುವ ನೀರಿನ ವಿದ್ಯುತ್ ಬಿಲ್ಲನ್ನು ಬಹುಶಃ ಇಂತಿಷ್ಟು ಯೂನಿಟನ್ನು ಸರ್ಕಾರ ಭರಿಸುವ ಹಾಗೆ ಮಾಡಿದರೆ ಪ್ರಯೋಜನವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಉಪಾಧ್ಯಕ್ಷರೆ, ಮೂರು ದಿವಸಗಳ ಕಾಲ ನಡೆದಂತಹ ಗ್ರಾಮೀಣ ಮತ್ತು ಕೃಷಿ ಅಭಿವೃದ್ಧಿ ಬಗ್ಗೆ ವಿರೋಧ ಪಕ್ಷದವರಿಂದ ಮತ್ತು ಆಡಳಿತ ಪಕ್ಷದವರಿಂದ ಒಳ್ಳೆಯ ಸಲಹೆ ಸೂಚನೆಗಳನ್ನು ಕೊಟ್ಟಿದ್ದೆವು. ಅದಕ್ಕೆ ಸಭಾ ನಾಯಕರು ಉತ್ತರವನ್ನು ಕೊಟ್ಟಿದ್ದಾರೆ. ಅವರು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ನಾವು ಏನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದೆವು ಅದರ ಬಗ್ಗೆ ಮಾತನಾಡಿದ್ದಾರೆ. ಸ್ತ್ರೀಶಕ್ತಿ ಸಂಘಗಳ ಬಗ್ಗೆ ನಾವು ಮಾತನಾಡಿದ್ದೆವು. ಅವರಿಗೆ ಸಹಾಯಧನ ಸೌಲಭ್ಯಗಳನ್ನು ವಿಸ್ತರಿಸುತ್ತೇವೆಂದು ಹೇಳಿದ್ದಾರೆ. ಆದರೆ ಉಪ ಕಸುಬಿನಲ್ಲಿ ಹೈನುಗಾರಿಕೆಯಲ್ಲಿ ಸ್ತ್ರೀಶಕ್ತಿ ಸಂಘವನ್ನು ತೊಡಗಿಸಬೇಕೆಂಬ ಅಭಿಪ್ರಾಯವನ್ನು ಹೇಳಿದ್ದೆವು ಅದರ ಬಗ್ಗೆ ಸ್ಪಷ್ಟವಾದ ಉತ್ತರ ಇಲ್ಲ. ಎರಡನೆಯದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಫುಡ್ ಅನ್ನು ತಯಾರು ಮಾಡಬೇಕಾದರೆ, ಸ್ತ್ರೀಶಕ್ತಿ ಸಂಘದವರನ್ನು ಉಪಯೋಗಿಸಿಕೊಳ್ಳಬೇಕೆಂದು Supreme Court Order ಇದೆ. ಆದರೆ ಈಗ ಕೇವಲ 11 ಜನರಿಗೆ ಮಾತ್ರ ಎರಡು ತಾಲ್ಲೂಕುಗಳು ಸೇರಿ ಒಂದು ಘಟಕ ಮಾಡಿ, ಅವರ ಅಧೀನದಲ್ಲಿ ಕೆಲಸ ಮಾಡಬೇಕು. ಯಾರು ಮದ್ರಾಸ್ ಕಂಪನಿಯವರು ತೆಗೆದುಕೊಂಡಿದ್ದಾರೆ. ಅವರ ಅಧೀನದಲ್ಲಿ ಸ್ತ್ರೀಶಕ್ತಿ ಸಂಘದವರು ಕೆಲಸ ಮಾಡಬೇಕೆಂದು ಹೇಳಿ, ಕೇವಲ 2,500 ರೂ. ಸಂಬಳಕ್ಕೆ ನೀವು ಹೋಗಿ ಕೆಲಸ ಮಾಡಿ ಎಂದು ಹೇಳಿ ಪುನಃ ಇವರನ್ನು ತಂದು ಜೀತದಾಳುಗಳಾಗಿ ಮಾಡಿದ್ದಾರೆ. ಇದು ತಪ್ಪು. ಇವರಿಗೆ ಕೊಡುವಂತಹ ಬಂಡವಾಳವನ್ನು ಸರ್ಕಾರ ಸ್ತ್ರೀಶಕ್ತಿ ಸಂಘಗಳಲ್ಲಿ

ಹೂಡಿ, ಸ್ತ್ರೀಶಕ್ತಿ ಸಂಘದವರೇ ಆ ಫುಡ್ ಅನ್ನು ತಯಾರು ಮಾಡಿ, ಆ ಮಕ್ಕಳಿಗೆ ಕೊಡುವಂತಹ ವ್ಯವಸ್ಥೆ ಮಾಡಿದರೆ, ನಿಜವಾಗಿಯೂ ಅವರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುತ್ತದೆ. ಉತ್ತಮ ಗುಣಮಟ್ಟದ ಆಹಾರ ಸಿಗುತ್ತದೆ. ಇದನ್ನು ಇಂತಹ ದೊಡ್ಡ ದೊಡ್ಡ ಮಲ್ಟಿ-ನ್ಯಾಷನಲ್ ಕಂಪನಿಗಳಿಗೆ ಕೊಟ್ಟು, ಗ್ರಾಮೀಣ ಬದುಕನ್ನು ಹಾಳು ಮಾಡಬೇಡಿ. ಇದರ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ. ಬೆಳೆ ವಿಮೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಬೆಳೆ ವಿಮೆ ಬಗ್ಗೆ ಪ್ರಸ್ತಾಪ ಮಾಡತಕ್ಕಂತಹ ಸಂದರ್ಭದಲ್ಲಿ ನೀವು ಆ ಗ್ರಾಮ ಪಂಚಾಯಿತಿಯ ಹೋಬಳಿ ಮಟ್ಟದ ಏನು ಮಾಪನ ಇದೆ, ಆ ಮಾಪನವನ್ನು ಆಧರಿಸಿ ನಾವು ಬೆಳೆ ವಿಮೆಗೆ ಆದೇಶವನ್ನು ಕೊಡುತ್ತೇವೆ ಎನ್ನತಕ್ಕಂತಹ ಮಾತನ್ನು ಏನು ಹೇಳಿದ್ದೀರಿ, ಅದು ಸರಿಯಲ್ಲ. ನೀವು ಬೆಳೆ ವಿಮೆ ಮಾಡುವ ಸಂದರ್ಭದಲ್ಲಿ ಮಳೆ ಬಂದಿರುತ್ತದೆ. ಒಂದು ವೇಳೆ ಮಳೆ ಬಾರದೆ ಇದ್ದು, ನೀರಾವರಿ ಮುಖಾಂತರ ಬೆಳೆಯನ್ನು ಬೆಳೆದಿರುತ್ತಾರೆ. ಆದರೆ ವಿದ್ಯುಚ್ಛಕ್ತಿ ಸಿಗುವುದಿಲ್ಲ. ಆಗ ಬೆಳೆ ನಾಶವಾಗುತ್ತದೆ. ಅದಕ್ಕೆ ಬೆಳೆ ಸಂಪೂರ್ಣವಾಗಿ ನಾಶವಾಗುವ ಸಂದರ್ಭದಲ್ಲಿ ಹಾಳಾಗಿರುವುದನ್ನು ಗುರುತಿಸಿ ಬೆಳೆ ವಿಮೆ ಕೊಡಬೇಕು. ಇದು ಒಂದು ಸರ್ಕಾರಕ್ಕೆ ನಾನು clarification ಕೇಳುತ್ತೇನೆ. ಮತ್ತೊಂದು ರಾಜೀವ್ ಗಾಂಧಿ ಗ್ರಾಮೀಣ ವಿದ್ಯುಚ್ಛಕ್ತಿಯಿಂದ ಬಹಳಷ್ಟು ಬಡವರ ಬದುಕಿಗೆ ಬೆಳಕು ಬಂದಿತ್ತು. ನಮ್ಮ ಹಿಂದಿನ ವಿದ್ಯುಚ್ಛಕ್ತಿ ಮಂತ್ರಿಗಳಾದ ರೇವಣ್ಣರವರು ಕ್ರಾಂತಿಕಾರಿ ಬದಲಾವಣೆಯನ್ನು ಮಾಡಿದ್ದರು. ಅದರ ಬಗ್ಗೆ ಇದರಲ್ಲಿ ಪ್ರಸ್ತಾಪ ಇಲ್ಲ. ಅಲ್ಲಲ್ಲಿ ಲೈನ್ ಎಳೆದಿದ್ದಾರೆ, ಕಂಬ ಹಾಕಿದ್ದಾರೆ, ಹಾಗೆಯೇ ನಿಲ್ಲಿಸಿದ್ದಾರೆ, ದಯಮಾಡಿ ಅದಕ್ಕೆ ಚಾಲನೆ ಕೊಟ್ಟು, ಗ್ರಾಮೀಣ ಪ್ರದೇಶದಲ್ಲಿ ಯಾರು ಅಸಹಾಯಕರಾಗಿ ತನ್ನ ಜೀವನದಲ್ಲಿ ವಿದ್ಯುಚ್ಛಕ್ತಿಯನ್ನು ನೋಡಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂತಹ ಮಟ್ಟದಲ್ಲಿ ಇದ್ದಂತಹ ಗ್ರಾಮೀಣ ಬದುಕಿನ ಜನತೆಗೆ ದಯಮಾಡಿ ಅವರಿಗೆ ಆಶ್ರಯ ಕೊಡಬೇಕು. ಈ ನಿಟ್ಟಿನಲ್ಲಿ ಅದಕ್ಕೆ ಸರ್ಕಾರ ಉತ್ತರವನ್ನು ಕೊಡಬೇಕು. ಮೂರನೆಯದಾಗಿ ಮತ್ತು ಕೊನೆಯದಾಗಿ, ಬೀಜಗಳ ಬಗ್ಗೆ ಹೇಳುತ್ತೇನೆ. ಬೀಜಗಳನ್ನು ತಯಾರು ಮಾಡುವುದಕ್ಕೆ Multi-National Companyಗಳಿಗೆ

ಬಿಡಬಾರದು. ಇಲ್ಲಿ ನಾವು ಕೃಷಿ ವಿಶ್ವವಿದ್ಯಾನಿಲಯಗಳಿಂದ ಮಾಡುತ್ತೇವೆಂದು ಹೇಳಿದ್ದೀರಿ. ಅವುಗಳು ಬೀಜಗಳನ್ನು ತಯಾರು ಮಾಡುವುದಕ್ಕೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದೀರಿ. Multi-National Companyಗಳನ್ನು ನಾವು ಇನ್ನು ಮುಂದೆ ಇಟ್ಟುಕೊಳ್ಳುವುದಿಲ್ಲ. ಅವರಿಗೆ ಯಾವುದೇ ರೀತಿಯಾದಂತಹ ಪ್ರಾಧಾನ್ಯತೆಯನ್ನು ಕೊಡುವುದಿಲ್ಲ. ನಿಜವಾಗಿಯೂ ರೈತರಿಂದಲೇ ಬೀಜಗಳನ್ನು ಉತ್ಪತ್ತಿ ಮಾಡಿ, ರೈತರಿಗೆ ಹಂಚಿಕೆ ಮಾಡುತ್ತೇವೆ ಎಂದು ಹೇಳುವಂತಹ ಬದ್ಧತೆ ಸರ್ಕಾರಕ್ಕೆ ಇದೆಯೇ ಅಥವಾ ಇಲ್ಲವೇ ಎಂಬುದಕ್ಕೆ ಸರ್ಕಾರ ದಯಮಾಡಿ ಉತ್ತರವನ್ನು ಕೊಡಬೇಕು. ಸಿಬ್ಬಂದಿ ಬಗ್ಗೆ ಸಹ ನಾನು ಹೇಳಿದ್ದೆ. ಸಿಬ್ಬಂದಿಗಳು ಹೆಚ್ಚು ಇಲ್ಲ. ತಾಲ್ಲೂಕಿಗೆ ಎರಡು ಜನ ಮಾತ್ರ ಇದ್ದಾರೆ. ಕೃಷಿ ಇಲಾಖೆಗೆ ಹೋದರೆ ಕಸ ಹೊಡೆಯುವ peonಗೂ ಸಹ ಬರವಿದೆ. ಅಂತಹ ಒಂದು ಪರಿಸ್ಥಿತಿ ಇದೆ. ಹಿಂದೆ ಕೃಷಿ ಸಹಾಯಕರಿದ್ದರು. ಮತ್ತೊಮ್ಮೆ ಅವರು ಇರುವುದು ಒಳ್ಳೆಯದು, ಅವರನ್ನು ಇಡಬೇಕು. ಅವರು ಹಿಂದೆ ಇದ್ದರು. ಆ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ಬದ್ಧವಿದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಕೇಳಬಯಸುತ್ತೇನೆ. ಅದರ ಜೊತೆಗೆ, ಈ ರಸ್ತೆಗಳ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ನೀವು ಆಗಲೇ 64 ಸಾವಿರ ಕಿಲೋ ಮೀಟರ್ ರಸ್ತೆಗಳನ್ನು ಗ್ರಾಮೀಣ ಪ್ರದೇಶಕ್ಕೆ ಎಲ್ಲಾ ಕಡೆ ಕೊಟ್ಟಾಗಿದೆ ಎಂದು ಹೇಳಿದ್ದೀರಿ.

ಉಪಾಧ್ಯಕ್ಷರು: Clarification ಇದ್ದರೆ ಕೇಳಿ. ಅದನ್ನು ಬಿಟ್ಟು ಮತ್ತೊಂದು ಭಾಷಣ ಮಾಡಲಿಕ್ಕೆ ನೀವು ಶುರು ಮಾಡಿದ್ದೀರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಆ ರಸ್ತೆಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯಕ್ಕೆ ಮುಂದೆ ಬರತಕ್ಕವರಿಗೆ ಆರ್ಥಿಕ ಹೊರೆ ಬರುವ ಬಗ್ಗೆ ಯೋಚನೆ ಮಾಡಿ ಸಮರ್ಪಕವಾದಂತಹ ಉತ್ತರ ಕೊಡಿ. ಇದನ್ನು ಜನರ ಅಭಿಪ್ರಾಯಕ್ಕೆ ಬಿಟ್ಟು, ಜನತೆಯಿಂದ ಅದರ ಬಗ್ಗೆ ಉತ್ತಮವಾದಂತಹ ಪ್ರತಿಕ್ರಿಯೆಯನ್ನು ಬಯಸಿದ ಮೇಲೆ, ಈ ಕಾರ್ಯಕ್ರಮವನ್ನು ಜಾರಿಗೆ ತರಬೇಕು. ಏಕಾಏಕಿಯಾಗಿ ಕಾರ್ಯಕ್ರಮವನ್ನು

ಜಾರಿಗೆ ತರಬಾರದೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮತ್ತು ಉತ್ತರವನ್ನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಉಪಾಧ್ಯಕ್ಷರೆ, ಕಳೆದ ಮೂರು ದಿನಗಳಿಂದ ನಡೆದಂತಹ ವಿಶೇಷ ಅಧಿವೇಶನದ ಚರ್ಚೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ಕೇಳಿದ ನಂತರ ಬಹಳ ನಿರಾಸೆ ಆಗಿದೆ. ಏಕೆಂದರೆ, ಪತ್ರಿಕೆಗಳಲ್ಲಿ, ಜನರಲ್ಲಿ, ಸಾರ್ವಜನಿಕರಲ್ಲಿ, ಶಾಸಕರಲ್ಲಿ, ಜನಪ್ರತಿನಿಧಿಗಳಲ್ಲಿ ಎಲ್ಲರಲ್ಲೂ ಬಹಳ ವಿಶೇಷವಾದಂತಹ ಆಸಕ್ತಿ ಇತ್ತು. ಈ ವಿಶೇಷ ಅಧಿವೇಶನದಲ್ಲಿ ಬಹಳಷ್ಟು ವಿಚಾರಗಳ ಬಗ್ಗೆ ಸರ್ಕಾರ ಪ್ರಕಟಣೆ ಮಾಡುತ್ತದೆಂದು ನಿರೀಕ್ಷಿಸಲಾಗಿತ್ತು. ರಾಜ್ಯ ಸರ್ಕಾರಕ್ಕೆ ರೈತರ ಬಗ್ಗೆ ಕೃಷಿಕರ ಬಗ್ಗೆ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಇರುವ ಕಳಕಳಿ ಉತ್ತರದಲ್ಲಿ ಬಿಂಬಿತವಾಗುತ್ತದೆ ಎಂಬ ನಿರೀಕ್ಷೆ ಇತ್ತು. ಇವತ್ತು ಏನಾಗಿದೆ ಎಂದರೆ, ಕನಿಷ್ಠ ಪಕ್ಷ ನಾವು ಶಾಸಕರುಗಳು ಇಲ್ಲಿ ಏನೊಂದು ಸಲಹೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೆವೋ, ಆ ವ್ಯಕ್ತಪಡಿಸಿದಂತಹ ಅಭಿಪ್ರಾಯಗಳಿಗೆ ಪೂರಕವಾಗಿ ಸರ್ಕಾರದ ಅಭಿಪ್ರಾಯ ಏನಿದೆ ಎನ್ನುವುದನ್ನಾದರೂ ಒಂದೊಂದು ಮಾತಿನಲ್ಲಿ ತಿಳಿಸಿದ್ದರೆ, ಈ ಚರ್ಚೆಗೊಂದು ಮಹತ್ವ ಬರುತ್ತಿತ್ತು. ಅಧಿವೇಶನಕ್ಕೊಂದು ಮಹತ್ವ ಬರುತ್ತಿತ್ತು. ಆದರೆ ಅವರು ಕೊಟ್ಟಂತಹ ಪುಸ್ತಕದಲ್ಲಿ ಅಂತಹ ಯಾವುದೇ ವಿಚಾರಗಳಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಪ್ರಾಸ್ತಾವಿಕ ನುಡಿಗಳಿಗೂ ಮತ್ತು ಅವರ ಭವಿಷ್ಯದ ಹೆಜ್ಜೆಗಳಿಗೂ ಹಾಗೂ ನಾವು ಮಾಡಿದಂತಹ ಚರ್ಚೆಗೂ ಒಂದಕ್ಕೊಂದಕ್ಕೂ ಹೋಲಿಕೆ ಇಲ್ಲದಿರುವಂತಹ ರೀತಿಯಲ್ಲಿ ಈ ಸದನದಲ್ಲಿ ಚರ್ಚೆ ನಡೆದಿದೆ ಎಂದು ನಾನಾದರೂ ಹೇಳಲಿಕ್ಕೆ ಬಯಸುತ್ತೇನೆ. ಒಂದೊಂದು ರೀತಿಯಲ್ಲಿ 'ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆ' ಎಂದು ನಮ್ಮ ಕಡೆಯಲ್ಲಿ ಮಾತನಾಡುತ್ತಾರೆ. ಆ ರೀತಿಯಲ್ಲಿ ಈ ಒಂದು ಮೂರು ದಿನದ ಕಲಾಪ ನಡೆದಿದೆ ಎಂದು ನಾನು ಹೇಳಬೇಕಾಗುತ್ತದೆ. ವಿಶೇಷವಾಗಿ ನಾನು ಮೂರು ಇಲಾಖೆಗಳಿಗೆ ಸಂಬಂಧಪಟ್ಟಂತೆ ಕೆಲವು ನಿರ್ದಿಷ್ಟವಾದ ನನ್ನ ಅನುಭವದ ಸಲಹೆಗಳನ್ನು ಸದನದ ಮುಖಾಂತರ ತಿಳಿಸಲಿಕ್ಕೆ ಪ್ರಯತ್ನ ಮಾಡಿದ್ದೆ. ಇವತ್ತು ಕೇಂದ್ರದ ಪರಿಸರ ಇಲಾಖೆ ಫ್ಲೋರೈಡ್ ಕಂಟೆಂಟ್

ತೊಂದರೆ ಇರುವಂತಹ ಸುಮಾರು 20 ಜಿಲ್ಲೆಗಳು ನಮ್ಮ ರಾಜ್ಯದಲ್ಲಿವೆ ಎಂದು ಘೋಷಣೆ ಮಾಡಿದೆ. 10 ವರ್ಷದೊಳಗಿರತಕ್ಕಂಥ ಮಕ್ಕಳಿಗೆ ಇದರಿಂದ ತೊಂದರೆಯಾಗುತ್ತಿದೆ ಎನ್ನುವಂತಹ ವಿಚಾರವನ್ನೂ ಕೂಡ ಆ ವರದಿಯಲ್ಲಿ ಹೇಳಿದ್ದಾರೆ. ಹಾಗಾಗಿ ಇನ್ನೂ 10 ವರ್ಷಗಳ ನಂತರ ನಾವು ಕೊಳವೆ ಬಾವಿಗಳ ಮುಖಾಂತರ ಕುಡಿಯುವ ನೀರನ್ನು ಪಡೆಯುವುದೂ ಕೂಡ ದುರ್ಲಭ ಆಗುವಂತಹ ಸನ್ನಿವೇಶ ನಿರ್ಮಾಣವಾಗುತ್ತದೆ ಎನ್ನುವಂತಹ ಕಾರಣಕ್ಕಾಗಿ ನದಿ ಮೂಲದಿಂದ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಈಗಿನಿಂದಲೇ ಯೋಜನೆಯೊಂದನ್ನು ರೂಪಿಸಬೇಕು ಮತ್ತು ಈಗಾಗಲೇ ಸಿದ್ಧಗೊಂಡಿರುವಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ರೀತಿಯಲ್ಲಿ ಒಂದು ನಿರ್ದಿಷ್ಟವಾದ ಪ್ರಕಟಣೆಯನ್ನು ಸರ್ಕಾರ ಮಾಡಬೇಕು. ಈ ರೀತಿಯಾಗಿ ಯಾವ್ಯಾವ ನದಿ ಮೂಲದ ಯೋಜನೆಗಳಿವೆಯೋ, ಅವುಗಳ ನಿರ್ವಹಣೆಗಾಗಿ ಪ್ರತ್ಯೇಕ ಮಂಡಳಿಯೊಂದನ್ನು ರಚನೆ ಮಾಡಬೇಕು. ಯಾವ ರೀತಿ Urban Water Supply Borad ಇದೆಯೋ, ಅದೇ ರೀತಿಯಲ್ಲಿ Rural Water Supply Board ಎಂದು ನದಿ ಮೂಲಗಳ ಯೋಜನೆಗಳ ನಿರ್ವಹಣೆಗೆ ಮಾಡಬೇಕೆಂದು ಸಲಹೆ ಕೊಟ್ಟಿದ್ದೆ. ಆದರೆ ಉತ್ತರದಲ್ಲಿ 'ಈಗಾಗಲೇ ಸುಮಾರು 850 ಕೋಟಿ ರೂ.ಗಳ ವೆಚ್ಚದ ಬಹು ಗ್ರಾಮ ವಿಶೇಷ ಯೋಜನೆಯನ್ನು ತಯಾರಿಸಿ, ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ವಿಶ್ವ ಬ್ಯಾಂಕ್ ನೆರವಿನ ಜಲ ನಿರ್ಮಲ ಯೋಜನೆಯ ವಿಸ್ತರಣೆಗೂ ಸಹ ವಿಶೇಷ ನೆರವನ್ನು ಕೋರಲಾಗಿದೆ. ಕುಡಿಯುವ ನೀರಿನ ಯೋಜನೆಗಳ ಸಮರ್ಪಕ ನಿರ್ವಹಣೆಗೆ ಹೊರಗುತ್ತಿಗೆ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು' ಎಂದು ಹೇಳಿದ್ದಾರೆ. ಇದರಲ್ಲಿ ಯಾವುದೇ ಸ್ಪಷ್ಟವಾದ ಉತ್ತರವಿಲ್ಲ. ಇದನ್ನು ಹೇಳಿದರೂ ಒಂದೇ, ಹೇಳದಿದ್ದರೂ ಒಂದೇ. ಇದೆಲ್ಲಾ ಗೊತ್ತಿರುವಂತಹ ವಿಚಾರವೇ ಆಗಿದೆ. ಕೇಂದ್ರದ ನೆರವು ಕೇಳಿರುವುದು, ವಿಶ್ವಬ್ಯಾಂಕ್ ನೆರವು ಕೇಳಿರುವುದು ಇದ್ದದ್ದೇ. ಆದರೆ ರಾಜ್ಯ ಸರ್ಕಾರದ ಬದ್ಧತೆ ಏನು? ಈ ಯೋಜನೆ ಬಗ್ಗೆ ಅವರು ನೆರವು ಕೊಡಲಿ, ನೆರವು ಕೊಡದಿರಲಿ, ನಾವು ಜಾರಿಗೆ ತರುತ್ತೇವೆ ಎನ್ನುವಂತಹ ಸ್ಪಷ್ಟವಾದ ಸಂದೇಶವನ್ನು ಕೊಡಬೇಕಾಗಿತ್ತು ಅಥವಾ ಈ ಯೋಜನೆಗಳನ್ನು ಈ

ವರ್ಷದಲ್ಲಿ ತೆಗೆದುಕೊಂಡು, ಆ 850 ಕೋಟಿ ರೂ.ಗಳಲ್ಲಿ ಉಳಿದಂತಹ ಯೋಜನೆಗಳನ್ನು ನಾವು ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳುತ್ತೇವೆ ಎಂಬುದನ್ನಾದರೂ ಹೇಳಿದ್ದರೆ, ನಮ್ಮ ಚರ್ಚೆಗೊಂದು ಮಹತ್ವ ಬರುತ್ತಿತ್ತು. ಇನ್ನು ವಸತಿ ವಿಚಾರದಲ್ಲಿ ಸುಮಾರು 1 ಲಕ್ಷ ಮನೆಗಳು ಇವತ್ತು ವಸತಿ ಇಲಾಖೆಯಲ್ಲಿ ವಿವಿಧ ಹಂತಗಳಲ್ಲಿ ಸ್ಥಗಿತಗೊಂಡಿರುವಂತಹ ವಿಚಾರ ಪ್ರಸ್ತಾಪಿಸಿದ್ದೆ. ಇದು ಇರುವ fact. ಸುಮಾರು 1 ಲಕ್ಷ ಮನೆಗಳು ವಿವಿಧ ಹಂತಗಳಲ್ಲಿ ಸ್ಥಗಿತಗೊಂಡು ನಿಂತಿವೆ. ಈಗ ಸರ್ಕಾರ ಹೊಸದಾಗಿ 30 ಸಾವಿರ ರೂ. ಇದ್ದದ್ದನ್ನು 40 ಸಾವಿರ ರೂ.ಗಳಿಗೆ ಏರಿಸಿದೆ. ಇದರಿಂದ ತಕ್ಕಮಟ್ಟಿಗೆ ಹೊಸದಾಗಿ ಕಟ್ಟುವಂತಹ ಮನೆಗಳಿಗೆ ಅನುಕೂಲವಾಗುತ್ತದೆ. ಆದರೆ ಈ ಹಿಂದೆ basement levelನಲ್ಲಿ ಮತ್ತು lintel levelನಲ್ಲಿ ನಿಂತಿರುವ ಸುಮಾರು 1 ಲಕ್ಷ ಮನೆಗಳನ್ನು ಯಾವ ಕಾರಣಕ್ಕೂ ಪೂರ್ಣಗೊಳಿಸಲಿಕ್ಕಾಗುವುದಿಲ್ಲ. ಅವುಗಳನ್ನು ಪೂರ್ಣಗೊಳಿಸುವುದೂ ಇಲ್ಲ. ಸ್ಥಳೀಯವಾಗಿ ನಮ್ಮ ಕ್ಷೇತ್ರಗಳಲ್ಲೇ ಅಂತಹ ಸಾಕಷ್ಟು ಮನೆಗಳು ಐದಾರು ವರ್ಷಗಳಿಂದ spill-over ಪಟ್ಟಿಯಲ್ಲಿ ಸುಮ್ಮನೆ ಬರುತ್ತಿವೆಯೇ ಹೊರತು ಅವುಗಳನ್ನು ಪೂರ್ಣಗೊಳಿಸುವುದಕ್ಕೆ ಅವಕಾಶವಿಲ್ಲ. ಹೊಸ ಮನೆಗಳಿಗೆ 10 ಸಾವಿರ ರೂ.ಗಳನ್ನು ಇಟ್ಟಿರುವ ರೀತಿಯಲ್ಲಿ, ಪ್ರೋತ್ಸಾಹಕರವಾಗಿ 5 ಸಾವಿರ ರೂ.ಗಳನ್ನು ಆ ಮನೆಗಳಿಗಾಗಿ ಕೊಟ್ಟಲ್ಲಿ ಅವರು ಆ ಮನೆಗಳನ್ನು ಪೂರ್ಣಗೊಳಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆಂದು ಹೇಳಿದ್ದೆವು. ಆದರೆ ಅದನ್ನು ಮಾಡಲಿಲ್ಲ. ಆಂಧ್ರದ ಮಾದರಿಯಲ್ಲಿ ವಿಶೇಷ ಅನುದಾನವನ್ನು ಮನೆಗಳಿಗೆ ಮತ್ತು ಸೈಟು ಖರೀದಿಗೆ ಮೀಸಲಿರಿಸಬೇಕೆಂದು ಹೇಳಿದ್ದೆವು. ಆದರೆ ಸೈಟು ಖರೀದಿ ಮಾಡುವುದಕ್ಕೆ 100 ಕೋಟಿ ರೂ.ಗಳನ್ನು ಇಡುತ್ತೇವೆ ಎನ್ನುವಂತಹ ಮಾತನ್ನು ಬಿಟ್ಟರೆ, ಉಳಿದಂತೆ ಏನೂ ಹೇಳಿಲ್ಲ. ಅದೂ ಕೂಡ ಮೊದಲೇ ಹೇಳಿದ್ದರು.

ಉಪಾಧ್ಯಕ್ಷರು: Clarification ಕೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಉಪಾಧ್ಯಕ್ಷರೆ, ನಾನು clarification ಅನ್ನೇ ಕೇಳುತ್ತಿದ್ದೇನೆ. ನಮಗೆ ಬಹಳ ನೋವಾಗುತ್ತದೆ. ನಾವು ಚರ್ಚೆ ಮಾಡಿ, ಅದಕ್ಕೆ ಉತ್ತರ ಸಿಗಲಿಲ್ಲವೆನ್ನುವ ನೋವಿಗೆ ನಾವು

ಮಾತನಾಡುತ್ತಿದ್ದೇವೆ. ಅದೂ ಬೇಡವೆಂದರೆ, attendance ಹಾಕಿಬಿಟ್ಟು ಹೋಗುತ್ತೇವೆ. ನಾವು ಇನ್ನೇನು ಮಾಡುವುದಕ್ಕಾಗುತ್ತದೆ?

ಉಪಾಧ್ಯಕ್ಷರು: ಆಯಿತು, clarification ಇದ್ದರೆ ಕೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಗ್ರಾಮ ಪಂಚಾಯಿತಿ ವಿಚಾರದಲ್ಲಿ ಮಾನ್ಯ ಸದಸ್ಯರಾದ ನಾಡಗೌಡರು ಹೇಳಿದಂತೆ Ombudsman ನೇಮಕ ಮಾಡಬೇಕೆಂದು ಹೇಳಿದ್ದೆವು. ಈ ಬಗ್ಗೆ ತನಿಖೆ ವಿಚಾರ ಹೇಳಿದ್ದಾರೆಯೇ ಹೊರತು ಅಲ್ಲಿ ಸುಧಾರಣೆ ವಿಚಾರದಲ್ಲಿ ಏನೂ ಮಾತನಾಡಿಲ್ಲ. ಅಲ್ಲಿ ಭ್ರಷ್ಟಾಚಾರ ಏನು ನಡೆಯುತ್ತದೆ, ಕಳಪೆ ಕಾಮಗಾರಿಗಳು ಏನು ನಡೆಯುತ್ತವೆ, ಅಂಥದ್ದನ್ನು ತನಿಖೆ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ವಿಚಾರ ಹೇಳಿದ್ದಾರೆಯೇ ಹೊರತು ವಾಸ್ತವವಾಗಿ ಏನಾಗಿದೆ ಎಂದರೆ, ಕುಡಿಯುವ ನೀರಿಗೆ action plan ಮಾಡುವವರು ಜಿಲ್ಲಾ ಪಂಚಾಯಿತಿಯವರು. ಅವರು ಮಾಡಿ hand over ಮಾಡಿದ ಮೇಲೆ, ಅದನ್ನು maintain ಮಾಡುವವರು ಗ್ರಾಮ ಪಂಚಾಯಿತಿಯವರು. ಈ ಗ್ರಾಮ ಪಂಚಾಯಿತಿಗೂ, ಜಿಲ್ಲಾ ಪಂಚಾಯಿತಿಗೂ ಈಗ ಏನಾಗಿದೆ ಎಂದರೆ, ಈ hand over ಮಾಡಿದ ಮೇಲೆ ಅದನ್ನು maintain ಮಾಡತಕ್ಕ ಸಾಮರ್ಥ್ಯ ಇವತ್ತು ಗ್ರಾಮ ಪಂಚಾಯಿತಿಗಳಿಗೆ ಇಲ್ಲ. ಅದಕ್ಕೆ ಬೇಕಾದಂತಹ ಅನುದಾನಗಳಿಲ್ಲ. ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ universal ಆಗಿ ಒಂದೇ ರೀತಿಯ ಅನುದಾನ ನೀಡುವ ಬದಲು ಆಯಾ ಗ್ರಾಮ ಪಂಚಾಯಿತಿ ಜನಸಂಖ್ಯೆ ಅಥವಾ ಆ ಗ್ರಾಮ ಪಂಚಾಯತಿಯಲ್ಲಿ ಇರತಕ್ಕಂಥ ಯೋಜನೆಗಳು ಏನೇನಿವೆ, ಅವುಗಳನ್ನು ನಿರ್ವಹಣೆ ಮಾಡತಕ್ಕಂಥ ವೆಚ್ಚ ಏನಿದೆ, ಅದನ್ನು ಭರಿಸತಕ್ಕಂಥ ಪ್ರಮಾಣದಲ್ಲಿ ಅನುದಾನ ನೀಡಬೇಕು. ಕೆಲವು ಗ್ರಾಮ ಪಂಚಾಯತಿಗಳಿಗೆ ಬೇರೆ ಬೇರೆ ಆದಾಯ ಮೂಲಗಳಿವೆ. ಏನೂ ಆದಾಯ ಮೂಲ ಇಲ್ಲದಿರುವಂತಹ ಗ್ರಾಮ ಪಂಚಾಯಿತಿಗಳೂ ಸಾಕಷ್ಟಿವೆ. ಅವುಗಳಿಗೆ ವಿಶೇಷವಾದ ಅನುದಾನ ಕೊಡುವಂತಹ ಯಾವುದಾದರೂ ಒಂದು ಹೊಸ ಕಲ್ಪನೆಯಲ್ಲಿ ಉತ್ತರವನ್ನು ನಾವು ನಿರೀಕ್ಷೆ ಮಾಡಿದ್ದೆವು. ಅದರ ಬಗ್ಗೆ ಒಂದು ಮಾತನ್ನೂ ಕೂಡ ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ವಿಶೇಷವಾಗಿ ಆಹಾರ ಇಲಾಖೆ

system improvement ಬಗ್ಗೆ ಸಾಕಷ್ಟು ವಿಚಾರಗಳನ್ನು ನಾನು ಚರ್ಚೆ ಮಾಡಿದ್ದೆ. ಕೊನೆಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಯಾರ್‍ಯಾರು ಬೋಗಸ್ ಪಡಿತರ ಚೀಟಿಗಳನ್ನು ಪಡೆದುಕೊಂಡಿದ್ದಾರೋ, ಅದನ್ನು ಲೋಕಾಯುಕ್ತಕ್ಕೆ ವಹಿಸುತ್ತೇನೆ. ಅವರಿಗೆ ಬೇಕಾದ ಸಿಬ್ಬಂದಿಯನ್ನು ಕೊಡುತ್ತೇನೆಂದು ಹೇಳಿದ್ದಾರೆಯೇ ಹೊರತು, ಆ ಗೊಂದಲ ನಿವಾರಣೆ ಮಾಡತಕ್ಕಂಥ ರೀತಿಯಲ್ಲಿ ಮತ್ತು ಆ ಇಲಾಖೆಯ ವ್ಯವಸ್ಥೆ ಏನಿದೆ, ಅದನ್ನು ಸುಧಾರಣೆ ಮಾಡತಕ್ಕ ನಿಟ್ಟಿನಲ್ಲಿ ನಾವು ಕೊಟ್ಟಂತಹ ಒಂದು ಸಲಹೆಯನ್ನೂ ಕೂಡ ಗಂಭೀರವಾಗಿ ಪರಿಗಣಿಸಿಲ್ಲ. ಇದರಿಂದಾಗಿ ಏನಾಗುತ್ತದೆ ಎಂದರೆ, ನಾವು ಚರ್ಚೆ ಮಾಡಿದ್ದು ನಿರರ್ಥಕ ಎನ್ನುವಂತಹ ಭಾವನೆ ಸೃಷ್ಟಿಯಾಗುತ್ತದೆ. ಆದುದರಿಂದ clarification ಕೊಡುವ timeನಲ್ಲಾದರೂ ಅವರು ಸಮರ್ಪಕವಾಗಿ ಉತ್ತರ ಕೊಟ್ಟರೆ ಸಮಾಧಾನವಾಗುತ್ತದೆ ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಕೆ. ಬೆಳ್ಳುಬ್ಬಿ (ಬಸವನಬಾಗೇವಾಡಿ): ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರಲ್ಲಿ ವಿನಂತಿ ಮಾಡುವ ವಿಷಯವೇನೆಂದರೆ, ಇವತ್ತು ರಾಜ್ಯಾದ್ಯಂತ Transformer failure ಆದರೆ ರೈತರಿಗೆ ತಕ್ಷಣ ಅದು ಸಿಗುವುದಿಲ್ಲ. ಇದರಿಂದ ಕೋಟಿಗಟ್ಟಲೆ ಬೆಳೆ ಹಾಳಾಗುತ್ತದೆ. ಕುಡಿಯುವ ನೀರಿನ ಸಮಸ್ಯೆ, ಹಿಟ್ಟು ಬೀಸುವ ಸಮಸ್ಯೆ ಇವೆಲ್ಲಾ ರಾಜ್ಯದ ತುಂಬ ಇರುವ ಜ್ವಲಂತ ಸಮಸ್ಯೆಯಾಗಿದೆ. ಅದಕ್ಕೆ ನನ್ನ ವಿನಂತಿ ಏನೆಂದರೆ, ಗ್ರಾಮಪಂಚಾಯಿತಿ ಅನುದಾನದಲ್ಲಿ ಹೆಚ್ಚುವರಿಯಾಗಿ ಒಂದು ಅಥವಾ ಎರಡು ಟ್ರಾನ್ಸ್‌ಫಾರ್ಮರ್‌ಗೆಂದು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಕು, ಇರುವ ಟ್ರಾನ್ಸ್‌ಫಾರ್ಮರ್ ಯಾವಾಗ ಸುಟ್ಟುಹೋಗುತ್ತದೆಯೋ ಆಗ ಬದಲಿಯಾಗಿ ಜೋಡಿಸಿಕೊಳ್ಳಲು ರೈತರಿಗೆ ಅನುಕೂಲವಾಗುತ್ತದೆ. ಅದಕ್ಕೆ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಒಂದು ಸುತ್ತೋಲೆಯನ್ನು ಕಳುಹಿಸಬೇಕೆಂದು ವಿನಂತಿ ಮಾಡುತ್ತೇನೆ. ಪಂಚಾಯಿತಿಯಲ್ಲಿ ಅನುದಾನವಿದೆ. ಅದರಲ್ಲಿ ಒಂದೆರಡು ಟ್ರಾನ್ಸ್‌ಫಾರ್ಮರ್ ಖರೀದಿ ಮಾಡಿ ಇಟ್ಟುಬಿಟ್ಟರೆ ಅಲ್ಲಿ ಯಾವ ಬೆಳೆ ಹಾಳಾಗುವುದಿಲ್ಲ. ಮೊನ್ನೆ ಶ್ರೀ ಕರಡಿ ಸಂಗಣ್ಣನವರು ಇರುವ ಕೊಪ್ಪಳದ ಕಡೆ

ಸಮಸ್ಯೆಯಾಯಿತು. ನಮ್ಮ ನಾಡಗೌಡರಿಗೆ ಸೇರಿದಂತೆ ಎಲ್ಲರಿಗೂ ಸೇರಿದಂಥ ಒಂದು ಜ್ವಲಂತ ಸಮಸ್ಯೆಯಾಗಿದೆ. ಅದಕ್ಕೆ ಈ ಬಗ್ಗೆ ತಕ್ಷಣ ಆದೇಶವನ್ನು ಕಳುಹಿಸಿ, ಟ್ರಾನ್ಸ್‌ಫಾರ್ಮರ್ ಅನ್ನು ಅವರು ಖರೀದಿ ಮಾಡುವುದಲ್ಲ. ನೀವೇ ಖರೀದಿ ಮಾಡಿ ಅವರಿಗೆ ಕಳುಹಿಸುವಂಥ ವ್ಯವಸ್ಥೆಯಾಗಬೇಕು. ಅದರ ಜೊತೆಗೆ ಇನ್ನೊಂದು ಇವತ್ತು ಬಹು ಹಳ್ಳಿ ಕುಡಿಯುವ ನೀರಿನ ಯೋಜನೆ ತೆಗೆದುಕೊಳ್ಳುತ್ತೇವೆಂದು ಸರ್ಕಾರದವರು ಹೇಳಿದರು. ಬಹಳ ಒಳ್ಳೆಯ ಯೋಜನೆ. 2003ರಲ್ಲಿ ನಾನು ಶಾಸಕನಿದ್ದಾಗ ಬಾಗೇವಾಡಿ ಕ್ಷೇತ್ರದಲ್ಲಿ ಆ ಯೋಜನೆಯನ್ನು ತೆಗೆದುಕೊಂಡುಬಿಟ್ಟೆವು. ಮುದ್ದೇಬಿಹಾಳ ಕ್ಷೇತ್ರದಲ್ಲಿ 30 ಹಳ್ಳಿ, ಬಾಗೇವಾಡಿ ಕ್ಷೇತ್ರದಲ್ಲಿ 80 ಹಳ್ಳಿ, 6 ವರ್ಷದಲ್ಲಿ ಯೋಜನೆ ಮುಗಿದು, ಇವತ್ತು ಹೊಳೆಯಿಂದ ಶುದ್ಧವಾದ ನೀರು ಸಿಗುತ್ತಿದೆ. ಅದನ್ನು ರಾಜ್ಯದ ತುಂಬಾ ಜಾರಿಗೆ ತರಲು ಏನು ಪ್ರಸ್ತಾಪ ಮಾಡಿದ್ದೀರಿ. ಅದನ್ನು ತಕ್ಷಣ ಜಾರಿಗೆ ತಂದರೆ, ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೋಗುತ್ತದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸುನೀಲ್ ಹೆಗ್ಗಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೆ, ಮೂರು ದಿವಸದ ಈ ಅಧಿವೇಶನದಲ್ಲಿ ನಂಜುಂಡಪ್ಪ ವರದಿಯಲ್ಲಿ ಬಂದಂಥ ಅತ್ಯಂತ ಹಿಂದುಳಿದ ತಾಲ್ಲೂಕಾದ ಜೋಯಿಡ ನನ್ನ ಕ್ಷೇತ್ರಕ್ಕೆ ಬರುತ್ತದೆ. ಆ ಕ್ಷೇತ್ರದ ಉದಾಹರಣೆಯನ್ನು ಇಟ್ಟುಕೊಂಡು ಹೇಳುವುದಾದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಅರಣ್ಯ ಅತಿಕ್ರಮಣ ಮಾಡಿ ರೈತರೇನು ಕೃಷಿ ಮಾಡುತ್ತಿದ್ದಾರೆ, ಅವರಿಗೆ ಇವತ್ತಿನವರೆಗೆ ಯಾವುದೇ ರೀತಿಯ ಸಕ್ರಮವಾಗಲಿಲ್ಲ. ಅವರಿಗೆ ಯಾವುದೇ ರೀತಿಯಾದ ಬೆಳೆ ಸಾಲ ಸಿಗುವುದಿಲ್ಲ. ಬೆಳೆ ವಿಮೆ ಸಿಗುವುದಿಲ್ಲ ಅಥವಾ ಅರಣ್ಯದಿಂದ ಯಾವುದೇ ರೀತಿಯಾದ ಹಾನಿಯಾದರೆ ಅವರಿಗೆ ಯಾವುದೇ ರೀತಿಯಾದ ಪರಿಹಾರ ಸಿಗುವುದಿಲ್ಲ. ಆ ಕಾರಣದಿಂದ ಈ ಅಧಿವೇಶನದಲ್ಲಿ ಕೃಷಿ ಬಗ್ಗೆ, ಅರಣ್ಯ ಅತಿಕ್ರಮಣದ ಬಗ್ಗೆ ಸ್ಪಷ್ಟವಾದ ಒಂದು ನಿಲುವು ಸರ್ಕಾರದಿಂದ ಸಿಗಬಹುದೆಂದು ಇತ್ತು. ಆದರೆ ಅದು ಇದುವರೆವಿಗೂ ಸಿಗಲಿಲ್ಲ. ದಯವಿಟ್ಟು, ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಬೇಕೆಂದು ಕೇಳುತ್ತೇನೆ. ಅದೇ ರೀತಿ ನಾವು ವಿದೇಶಗಳಿಗೆ ಹೋದಾಗ ಕೃಷಿಗೆ ಪೂರಕವಾಗಿ

ಹೈನುಗಾರಿಕೆ ಮಾಡುವಂಥ ಪರಿಪಾಠವನ್ನು ಅವರೇನು ಬೆಳೆಸಿಕೊಂಡಿದ್ದಾರೆ, ಆ ರೀತಿ ಇಲ್ಲಿ ಕೃಷಿ ನೀತಿಯ ಜೊತೆಗೆ ಹೈನುಗಾರಿಕೆ ನೀತಿಯನ್ನು ತಂದು ಸ್ತ್ರೀಶಕ್ತಿ ಸಂಘದವರಿಗೆ, ಹೆಣ್ಣುಮಕ್ಕಳಿಗೆ ಅದರಲ್ಲಿಯೂ ಮುಖ್ಯವಾಗಿ ಯುವಕರಿಗೆ ಗ್ರಾಮೀಣ ಪ್ರದೇಶದಲ್ಲಿ ನೆಲೆಸುವಂಥ ಪರಿಸರ ನಿರ್ಮಾಣವಾಗದೆ ಇದ್ದರೆ, ಅವರು ನಗರಕ್ಕೆ ವಲಸೆ ಬರುವಂತಾದರೆ ಮುಂದಿನ ದಿವಸಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಯಾವ ಯುವಕರೂ ಉಳಿಯುವುದಿಲ್ಲ. ಈ ದಿಶೆಯಲ್ಲಿ ಹೈನುಗಾರಿಕೆ ನೀತಿಯನ್ನು ಮಾಡಿ ಯುವಕರಿಗೆ ಮತ್ತು ಸ್ತ್ರೀಶಕ್ತಿ ಸಂಘದವರಿಗೆ ಅದರಲ್ಲಿ ತೊಡಗಿಸಿಕೊಳ್ಳುವಂಥ ಯಾವ ಕಾರ್ಯಕ್ರಮಗಳೂ ಇದರಲ್ಲಿ ಬರಲಿಲ್ಲವೆಂದು ದುಃಖವಾಗುತ್ತಿದೆ. ಅದೇ ರೀತಿ ನನ್ನ ಕ್ಷೇತ್ರದಲ್ಲಿ ಗೌಳಿಜನ, ಕುಣಬಿಜನ ಈ ಬುಡಕಟ್ಟು ಜನರು ಅರಣ್ಯ ಭಾಗದಲ್ಲೇನು ನೆಲೆಸುತ್ತಾರೆ. ಅವರು ಗ್ರಾಮಕ್ಕೂ ಸಂಬಂಧವಿಲ್ಲ ನಗರಕ್ಕೂ ಸಂಬಂಧವಿಲ್ಲ. ಇವತ್ತು ಸಹ ಅವರು ವಾಸಿಸುವಂಥ ಪರಿಸ್ಥಿತಿಯನ್ನು ನೋಡಿದರೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಸಹ ಅವರಿಗೆ ಈ ಪರಿಸ್ಥಿತಿ ಇದೆ ಎಂದು ನಮಗನಿಸುತ್ತದೆ. ಆ ಬಗ್ಗೆಯೂ ಮುಖ್ಯಮಂತ್ರಿಗಳಿಂದ ಯಾವುದೇ ರೀತಿಯ ಕ್ಲಾರಿಫಿಕೇಷನ್ ಬಂದಿಲ್ಲ. ಈ ಎಲ್ಲಾ ಕಾರಣಗಳಿಂದ ನನಗೇನು ಅನಿಸುತ್ತಿದೆ ಎಂದರೆ ಈ ಆರ್ಥಿಕ ಮುಗ್ಗಟ್ಟಿನಿಂದ ಕೆಲವೊಂದು ಸಲಹೆಗಳನ್ನು ಸಹ ಕೊಡುವುದಕ್ಕೆ ಹೆದರಿಕೆಯಾಗುತ್ತಿದೆ. ಏಕೆಂದರೆ, ಊಪರ್ ಸೇ ಶೇರ್ವಾನಿ, ಅಂದರ್ ಸೇ ಪರೇಶಾನಿ ಎಂದು ಒಂದು ಗಾದೆ ಇದೆ. ಆ ರೀತಿಯಾಗಿ ಮುಖ್ಯಮಂತ್ರಿಗಳಿಂದ ಉತ್ತರ ಬಂದಿದೆ. ದಯವಿಟ್ಟು ನಾನು ಹೇಳಿದ ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬೆಳಕನ್ನು ಚೆಲ್ಲಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎ. ಮಂಜು (ಅರಕಲಗೂಡು): ಸನ್ಮಾನ್ಯ ಅಧ್ಯಕ್ಷರೆ, ಈಗ ಮೂರು ದಿವಸಗಳ ಅಧಿವೇಶನದಲ್ಲಿ ಸರ್ಕಾರ, ಮುಖ್ಯಮಂತ್ರಿಗಳು ಏನು ಭವಿಷ್ಯದ ಹೆಜ್ಜೆಗಳೆಂದು ನಮ್ಮ ಮುಂದೆ ಕೊಟ್ಟಿದ್ದಾರೆ. ಬಹುಶಃ ಭವಿಷ್ಯದ ಹೆಜ್ಜೆಗಳೆಂದು ಎಲ್ಲಿ ಇಡುತ್ತಾರೆ. ಇಡುವುದಕ್ಕೆ ಹಣವೆಲ್ಲಿದೆ ಎಂಬುದನ್ನು ಮೊದಲು ಇದರಲ್ಲಿ ಘೋಷಣೆ ಮಾಡಬೇಕು. ಜೊತೆಗೆ ಬಹು ಮುಖ್ಯವಾಗಿ ಸರ್ಕಾರ ರೈತರಿಗೆ; ನೀವೇನು ಮಾಡುವುದು ಬೇಕಾಗಿಲ್ಲ. ರೈತ ನೀನು ಸಾಲವನ್ನು ಕೊಡಬೇಕಾಗಿಲ್ಲ.

ಬದ್ಧತೆಯಿಂದ ನಾವು ಕರೆಂಟ್ ಕೊಡುತ್ತೇವೆ. ನೀರನ್ನು ಕೊಡುತ್ತೇವೆ ಮತ್ತು ರೈತ ಬೆಳೆದಂಥ ಬೆಳೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಮಾರ್ಕೆಟ್ ಇರಬೇಕು. ಆಗ ಮಾತ್ರ ರೈತನನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಎರಡು ಸಾವಿರ ಜನಸಂಖ್ಯೆಯ ಆಧಾರದ ಮೇಲೆ ಈಗೇನು ಸುವರ್ಣ ಗ್ರಾಮವನ್ನು ಮಾಡಿದ್ದೀರಿ. ಮೊದಲು ಸುವರ್ಣ ಗ್ರಾಮಕ್ಕೆ ತಲಾ ರೂ. 2000ರಂತೆ ಲೆಕ್ಕಾಚಾರ ಹಾಕಿ ಕೊಡುತ್ತಿರುವುದು ಪರಿಪಾಠ. ಆದರೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಆಗಲೇ ಒಂದು ಆದೇಶವನ್ನು ಹೊರಡಿಸಿದ್ದಾರೆ. ಬಹುಶಃ ನಮ್ಮ ಶಾಸಕ ಮಿತ್ರರಿಗೆ ಗೊತ್ತಿದೆ. 1:3 ಪ್ರಕಾರ ಆ ಗ್ರಾಮವನ್ನು ಅಭಿವೃದ್ಧಿಪಡಿಸಬೇಕೆಂದು ಇದ್ದದ್ದು ಆ ಯೋಜನೆ. ಆದರೆ ಅದನ್ನು ಈಗ ಕಡಿತ ಮಾಡಿ ಕೇವಲ ಏನು 2000 ರೂ. ಅಂದಾಜು ಏನಿದೆ ಅದರ ಪ್ರಕಾರ ಮಾಡಬೇಕೆಂದೇನು ಹೇಳಿದ್ದಾರೆ. ಅದನ್ನು ವಾಪಸ್ ತೆಗೆದುಕೊಂಡು ಹಿಂದೆ 1:3, ಎಲ್ಲಾ ಇಲಾಖೆಗಳ ಒಂದು ಸಹಾಯವನ್ನು ಪಡೆದು ಅಭಿವೃದ್ಧಿಪಡಿಸುವುದಕ್ಕೆ ಮಾಡಬೇಕು. ಇನ್ನು ನೀರಾವರಿಗೆ ಸಂಬಂಧಿಸಿದಂತೆ ಈ ಸರ್ಕಾರ ಹಿಂದೆ ಮೋಸ ಹೋಗಿರುವಂಥ ಏತ ನೀರಾವರಿ ಯೋಜನೆಗಳನ್ನು ಎಲ್ಲೆಲ್ಲಿ ಕೈಬಿಟ್ಟಿದ್ದಾರೆ, ತೊಂದರೆಯಾಗಿದೆ, ಮೋಸ ಹೋಗಿದೆ ಅದರ ಬಗ್ಗೆ ಸರ್ಕಾರ ತಕ್ಷಣ ಘೋಷಣೆ ಮಾಡಬೇಕು. ಈ ಟ್ರಿಬ್ಯುನಲ್ ಮೂಲಕ ನಾವು ನೀರಿನ ಹಂಚಿಕೆ ಮಾಡಿಕೊಳ್ಳಬಹುದೆಂದು ಈಗಾಗಲೇ ಕೇಂದ್ರ ಸರ್ಕಾರ ಮತ್ತು ಸುಪ್ರೀಂ ಕೋರ್ಟ್‌ನ ತೀರ್ಮಾನವಾಗಿದೆ. ನಿಂತು ಹೋಗಿರುವ ಆ ಲಿಫ್ಟ್ ಇರಿಗೇಷನ್ ಅನ್ನು ಘೋಷಣೆ ಮಾಡಬೇಕೆಂದು ಹೇಳುತ್ತೇನೆ. ತಾವು ಇವತ್ತು 850 ಕೋಟಿ ಹಣವನ್ನು ಗ್ರಾಮೀಣ ನೀರಿಗೆಂದು ಇಟ್ಟಿದ್ದೀರಿ. ಇದು ಹಿಂದೆ ರಾಜೀವ್ ಗಾಂಧಿ ವಾಟರ್ ಸ್ಕೀಂನಲ್ಲಿರತಕ್ಕಂಥದ್ದು. 850 ಕೋಟಿ ರೂಪಾಯಿಗಳಿಗೆ ಕೆಲವೇ ಶಾಸಕರ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಎಲ್ಲಾ ಶಾಸಕರದ್ದು ಕಳುಹಿಸಿಲ್ಲ. ಎಲ್ಲಿ ನದಿ ತೀರದಲ್ಲಿ ಬರುವ ತಾಲ್ಲೂಕುಗಳಿವೆ. ಅವನ್ನು 100% ರಾಜ್ಯಾದ್ಯಂತ ಘೋಷಣೆ ಮಾಡಿ ಮಂತ್ರಿಗಳು ಕಳುಹಿಸಿಕೊಡಬೇಕೆಂದು ಈ ಮೂಲಕ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್(ಬೀದರ್ ದಕ್ಷಿಣ): ಸನ್ಮಾನ್ಯ ಅಧ್ಯಕ್ಷರೆ, ಈ ಮೂರು ದಿವಸದ ಅಧಿವೇಶನದ ಬಗ್ಗೆ ಇತಿಹಾಸದಲ್ಲೆ ಮೊದಲನೆ ಭಾರಿ ಕರೆದಿದ್ದು ಎಂದು ಪತ್ರಿಕೆಗಳಲ್ಲೆಲ್ಲಾ ಬಂದು ಬಹಳ ಮಹತ್ವ ಪಡೆದಿತ್ತು. ಆದರೆ ನಮ್ಮ ಎಲ್ಲಾ ಸದಸ್ಯರು ಬಹಳ ಒಳ್ಳೆಯ ರೀತಿಯಿಂದ ಸರ್ಕಾರದ ಮೇಲೆ ಯಾವುದೇ ಆಪಾದನೆ ಮಾಡದೆ ಒಳ್ಳೆ ಒಳ್ಳೆಯ ಸಲಹೆಗಳನ್ನು ಕೊಟ್ಟು, ಮುಖ್ಯಮಂತ್ರಿಗಳೇನು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದರು, ಈ ಅಧಿವೇಶನದಿಂದ ಇಡೀ ರಾಜ್ಯದ ರೈತಾಪಿ ಜನರಿಗೆ ಒಳ್ಳೆಯದಾಗುತ್ತದೆಂಬ ಭಾವನೆಯಿಂದ ಎಲ್ಲರೂ ಮೂರು ದಿವಸಗಳ ಕಾಲ ಸಲಹೆಗಳನ್ನು ಕೊಟ್ಟಿದ್ದರು. ಆದರೆ ಅವರ ಉತ್ತರವನ್ನು ನೋಡಿದ ಮೇಲೆ, ನಮಗೆ ಅಲ್ಲ ಇಡೀ ರಾಜ್ಯದ ರೈತರಿಗೆ ಇವತ್ತು ಬಹಳ ಬೇಜಾರಾಗಿದೆ. ಏಕೆಂದರೆ, ಇವತ್ತು ನಮ್ಮ ಕಡೆ ಬಂದಾಗ ಬರಗಾಲಕ್ಕೆ ತುತ್ತಾದ ಜನರಿಗೆ ಸನ್ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ರೂ. 25,000/- ಮನ್ನಾ ಮಾಡಿದ್ದರು. ಮುಖ್ಯಮಂತ್ರಿಗಳು ಹೇಗೂ ಸಾಲವನ್ನಾದರೂ ಮನ್ನಾ ಮಾಡುತ್ತಾರೆ ಇಲ್ಲವೆಂದರೆ ರೂ. 50,000/- ಕನಿಷ್ಠ ಡಬಲ್ ಮಾಡುತ್ತಾರೆಂದು ಇವತ್ತು ರಾಜ್ಯದ ಎಷ್ಟೋ ಜನ ರೈತರು ಟಿವಿ ನೋಡುತ್ತಿದ್ದಾರೆ. ಆದರೆ ಇವತ್ತು ಒಂದು ರೂಪಾಯಿ ಸಾಲ ಮನ್ನಾ ಮಾಡಿದ್ದು ಈ ಹೆಜ್ಜೆ ಗುರುತಿನಲ್ಲಿಲ್ಲ. ಆಮೇಲೆ ಸುಮಾರು ವಿಷಯಗಳನ್ನು ಪ್ರಸ್ತಾವನೆ ಮಾಡಿದ್ದಾರೆ. ಅದರಲ್ಲಿ ಒಂದೆರಡಕ್ಕೆ ನಾನು ಕ್ಲಾರಿಫಿಕೇಷನ್ ಮಾಡಬೇಕಾದರೆ, ಇವತ್ತು ಬೆಳೆ ವಿಮೆ ವಿಸ್ತರಣೆ ಹಾಗೂ ಸಹಾಯಧನದ ಬಗ್ಗೆ ಅವರು ಮಾತನಾಡಿದ್ದಾರೆ. ಈಗಿರುವ ವಿಮಾ ಯೋಜನೆ ರೈತರಿಗೆ ಸರಿಯಾಗಿ ತಲುಪುತ್ತಿಲ್ಲವೆಂದು ಅವರೇ ಹೇಳಿದ್ದಾರೆ. ಗ್ರಾಮಪಂಚಾಯಿತಿ ಮಟ್ಟದಲ್ಲಿ Tele-metric rain gauge ಅಳವಡಿಸುತ್ತೇವೆಂದು ಹೇಳಿದ್ದಾರೆ ಅದು ಒಳ್ಳೆಯದು. ಏಕೆಂದರೆ, ಇವತ್ತು ಹವಾಮಾನಕ್ಕೆ ಸಂಬಂಧಪಟ್ಟಿದ್ದು ತಾಲ್ಲೂಕು ಮಟ್ಟಕ್ಕೆ ಇದೆ. ನಾನು ಆ ಕೃಷಿ ಇಲಾಖೆಯ ಸಚಿವನಾಗಿದ್ದೆ. ನಮ್ಮ ಶಿವಲಿಂಗೇಗೌಡರು ಮಾತನಾಡಿದರು. ನಮ್ಮ General Insurance ಬಂದಾಗ, ಇವತ್ತು ನಮ್ಮ crop cutting

experiment ಏನಾಗುತ್ತಿದೆ. ಒಂದೇ ಹೋಬಳಿಯಲ್ಲಿ ಕೆಲವು ಜನರಿಗೆ ಸಿಗುತ್ತಿದೆ. ಕೆಲವು ಜನರಿಗೆ ಸಿಗುತ್ತಿಲ್ಲ. ಹಾಗಾಗಿ ಅದರಲ್ಲಿ ಬಹಳಷ್ಟು ಸುಧಾರಣೆ ಮಾಡಬೇಕು. ಆಮೇಲೆ ನಾವು ವಿಮೆ ಕೊಡುವಾಗ ಈಗ ನಾವು ಒಂದು ವರ್ಷಕ್ಕೆ ಒಂದೇ ಸಾರಿ ಕೊಡುತ್ತಿದ್ದೇವೆ. ಈಗ ನಾವು ಲಾಂಗ್ ಟರ್ಮ್ ಶಾರ್ಟ್ ಟರ್ಮ್ ಮಾಡಿದ್ದೇವೆ. ಅದಕ್ಕೆ ಇನ್ನೂ ಕಮ್ಮಿ ಮಾಡಿ, ರೈತರಿಗೆ ಕೂಡಲೆ ವಿಮೆ ಕೊಡುವಂಥ ಕೆಲಸವನ್ನು ಮಾಡಬೇಕು. ಆಮೇಲೆ 2006ರಲ್ಲಿ ಕೃಷಿ ನೀತಿಯನ್ನು ತಂದಿದ್ದು, 2007ರಲ್ಲಿ ಅಧಿಕಾರಿಗಳ ತಂಡ ಏನು ಸಲಹೆಗಳನ್ನು ಕೊಟ್ಟಿತ್ತು. ಅವನ್ನು ಸಂಪೂರ್ಣವಾಗಿ ಗಮನದಲ್ಲಿಟ್ಟುಕೊಂಡು ಮುಂದಿನ ದಿವಸಗಳಲ್ಲಿ ರೈತರಿಗೆ ಒಳ್ಳೆಯದನ್ನು ಮಾಡುವ ಕೆಲಸವನ್ನು ಮಾಡಬೇಕು ಮತ್ತು ಸಲಹೆ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಗೋಪಾಲ್ ಭಂಡಾರಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಬಹುಶಃ ಭವಿಷ್ಯದತ್ತ ಹೆಜ್ಜೆಗಳು ಹೊಸ ಆಶ್ವಾಸನೆಗಳ ಪಟ್ಟಿ ಇದ್ದ ಹಾಗೆ ಇದೆ. ಇಲ್ಲಿ ನಿವೇಶನಕ್ಕೆ ಭೂಮಿಯನ್ನು ಖರೀದಿ ಮಾಡಿ ಕೊಡುತ್ತೇವೆಂದು ಹೇಳಿದ್ದರು.

5.30 P.M.

ಕಳೆದ ಮೂರು ವರ್ಷಗಳಿಂದ ಒಂದೂ ನಿವೇಶನವನ್ನು ಕೊಟ್ಟಿಲ್ಲ. ಖರೀದಿ ಮಾಡುವುದು ಬಿಟ್ಟು, ಸರ್ಕಾರಿ ಜಾಗವಿದ್ದೆಡೆಯಲ್ಲೂ ನಿವೇಶನಗಳನ್ನು ಕೊಟ್ಟಿಲ್ಲ. ಎಷ್ಟು ಸಮಯದೊಳಗೆ ಕೊಡುತ್ತಾರೆಂಬ ಒಂದು ಸ್ಪಷ್ಟೀಕರಣವನ್ನು ಕೊಟ್ಟರೆ ಒಳ್ಳೆಯದು. ಜೊತೆಗೆ ಬಹುಶಃ ನಮ್ಮ ಕರಾವಳಿ ಜಿಲ್ಲೆಯಲ್ಲಿ ಕೃಷಿಯ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಪಶ್ಚಿಮಘಟ್ಟದ ಮೇಲೆ ಬೆಳೆದಂಥ ಬೆಳೆಗಿಂತ ನಾಲ್ಕನೆ ಒಂದು ಪಾಲು ಬೆಳೆ ನಮ್ಮಲ್ಲಿ ಕಮ್ಮಿ ಬರುತ್ತದೆ. ಆದರೆ ನಮ್ಮಲ್ಲಿ ಯಾವುದೇ ರೀತಿಯಾಗಿ ತೆಂಗಿನಕಾಯಿ, ಕೊಬ್ಬರಿಗಾಗಲಿ ಬೆಂಬಲ ಬೆಲೆ ಇಲ್ಲಿಯವರೆಗೆ ಇಲ್ಲ.

ಅಡಿಕೆಗೆ ಅದರಲ್ಲೂ ಬಿಳಿ ಗೋಟು ಅಡಿಕೆಗೆ ಬೆಂಬಲ ಬೆಲೆ ಇಲ್ಲ. ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಕೃಷಿ ಉಪಕರಣಗಳಿಗೆ ಸಬ್ಸಿಡಿ ಸಿಗುತ್ತಿತ್ತು. ಉದಾಹರಣೆಗೆ ಟ್ರಿಲ್ಲರ್‌ಗೆ ಒಂದು ಲಕ್ಷ ರೂಪಾಯಿ ಇದ್ದಾಗ 50 ಸಾವಿರ ರೂ. ಸಿಗುತ್ತಿತ್ತು. ನಮ್ಮಲ್ಲಿ ಕೃಷಿ ಕಾರ್ಮಿಕರೇ ಸಿಗದಿರುವ ಪರಿಸ್ಥಿತಿಯಲ್ಲಿ, ಈಗ ಟ್ರಿಲ್ಲರ್‌ಗೆ ಒಂದೂವರೆ ಲಕ್ಷ ರೂಪಾಯಿ ಆಗಿದೆ. ಆದರೆ, ಸಬ್ಸಿಡಿ ಈಗಲೂ 50 ಸಾವಿರ ರೂ. ಸಿಗುತ್ತದೆ. ಆದ್ದರಿಂದ ಕೃಷಿ ಉಪಕರಣದ ಬೆಲೆಯ 50 ಪರ್ಸೆಂಟ್ ಹಣವನ್ನು ಸಬ್ಸಿಡಿಯಾಗಿ ಕೊಡುವಂತೆ ಮಾಡಿದರೆ ಟ್ರಾಕ್ಟರ್ ಮತ್ತು ಇನ್ನಿತರ ಕೃಷಿ ಉಪಕರಣಗಳನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಸಾವಯವ ಕೃಷಿಗೆ ಹೆಚ್ಚು ಕೊಡುತ್ತೇವೆಂದು ಹೇಳಿದರು. ಆದರೆ, ಇದುವರೆಗೆ ನನ್ನನ್ನೂ ಸೇರಿ ನನ್ನ ತಾಲ್ಲೂಕಿನಲ್ಲಿ ಯಾವ ಜನಪ್ರತಿನಿಧಿಗಳ ಗಮನಕ್ಕೂ ಬಾರದೆ ಹಂಚಿಕೆಯಾಗಿದೆ. ಇದು ಯಾವ ರೀತಿ ಎನ್ನುವುದು ಗೊತ್ತಿಲ್ಲ. ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟರೆ ಒಳ್ಳೆಯದು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಯೋಜನೆಗಳು ಅನುಷ್ಠಾನವಾಗಬೇಕಾದರೆ village functionary ಯಾರಿದ್ದಾರೆ, ಕೆಳಮಟ್ಟದ ಅಧಿಕಾರಿಗಳು ಯಾರಿದ್ದಾರೆ ಅವರೆಲ್ಲರೂ ಇರಬೇಕಾಗುತ್ತದೆ. ಇವತ್ತು ವಿಶೇಷವಾದ ಅನುದಾನವನ್ನು ನಬಾರ್ಡ್‌ನಂಥ ಅನುದಾನವನ್ನು ಬಿಡುಗಡೆ ಮಾಡುವಾಗ, ನಮ್ಮಲ್ಲಿ ಮುಖ ನೋಡಿ ಮಣೆ ಹಾಕುವುದು ಎಂದು ಹೇಳುತ್ತಾರೆ. ಆ ರೀತಿ ಪಕ್ಷ ನೋಡಿ ಅನುದಾನವನ್ನು ಬಿಡುಗಡೆ ಮಾಡುವ ವ್ಯವಸ್ಥೆಯಾಗಿ ನಮಗೆ ಬಹಳಷ್ಟು ಕಡಿಮೆ ಅನುದಾನವನ್ನು ಕೊಡುವುದರ ಜೊತೆಗೆ ನನ್ನ ಕ್ಷೇತ್ರದಲ್ಲಿ ಅಧಿಕಾರಿಗಳನ್ನು ಸಾರಾಸಗಟಾಗಿ ವರ್ಗಾವಣೆ ಮಾಡಿದ್ದಾರೆ. ಶೇ. 20 ಹೆಚ್ಚು ಜನರನ್ನು ಗ್ರಾಮಲೆಕ್ಕಾಧಿಕಾರಿಯವರನ್ನೂ ಸೇರಿಸಿ ಎಲ್ಲರನ್ನು ವರ್ಗಾವಣೆ ಮಾಡಿದ್ದಾರೆ. ಅಲ್ಲಿಗೆ substituteನ್ನೇ ಕೊಡದೆ ವರ್ಗಾವಣೆ ಮಾಡಿದ್ದಾರೆ. ನಮ್ಮಲ್ಲಿ Chief Officer Postಗೆ ಮೂರು ಜನ ಅಧಿಕಾರಿಗಳು musical chair ಮಾಡುತ್ತಿದ್ದಾರೆ. ಒಬ್ಬರಿಗೆ ಸರ್ಕಾರವೇ ಆದೇಶ ಮಾಡಿ ಅವರು charge ತೆಗೆದುಕೊಂಡ ಮಾರನೆಯ ದಿವಸವೇ ಅವರ ಹಿಂದೆ ಮತ್ತೊಬ್ಬರು ನಿಂತಿದ್ದಾರೆ. ಅದರ ಹಿಂದೆ ಇನ್ನೊಬ್ಬರು ನಿಂತಿದ್ದಾರೆ. ಈ

ರೀತಿಯಾದರೆ ಅಭಿವೃದ್ಧಿ ಯಾವ ರೀತಿಯಾಗುತ್ತದೆ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟರೆ ಒಳ್ಳೆಯದು.

ಶ್ರೀ ಎಂ.ಸಿ. ಅಶ್ವಥ್ (ಚನ್ನಪಟ್ಟಣ): ಮಾನ್ಯ ಉಪಾಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ನಡೆದು ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಹಲವಾರು ಅಭಿಪ್ರಾಯಗಳನ್ನು ಕೊಟ್ಟರು. ಇಂದು ಮಾನ್ಯ ಮುಖ್ಯಮಂತ್ರಿಯವರು ಕೆಲವೇ ಕೆಲವಕ್ಕೆ ಉತ್ತರವನ್ನು ನೀಡಿದರು. ನಮ್ಮ ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿಯಲ್ಲಿ ರೇಷ್ಮೆ ಕೃಷಿಯು ರೈತರ ಜೀವನಾಡಿ. ಆದರೆ, ಅದರ ಬಗ್ಗೆ ಪ್ರಸ್ತಾಪವಾಗಿಲ್ಲ. ರಾಮನಗರ ಜಿಲ್ಲೆ ರೇಷ್ಮೆನಾಡು ಎಂದು ಹೆಸರುವಾಸಿಯಾಗಿದೆ. ಆದ್ದರಿಂದ ರೇಷ್ಮೆ ಬಗ್ಗೆ ಬೆಳಕನ್ನು ಚೆಲ್ಲಿ ಅನುಕೂಲ ಮಾಡಿಕೊಡಬೇಕೆಂದು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ. ರೈತರ ಸಾಲದ ಬಗ್ಗೆ ಕುಮಾರ ಸ್ವಾಮಿಯವರ 20 ತಿಂಗಳ ಕಾಲದಲ್ಲಿ 25 ಸಾವಿರ ರೂ. ಸಾಲಾ ಮನ್ನಾ ಮಾಡಿದ್ದರು. ಈ ಸರ್ಕಾರ ಕೊನೆಯ ಪಕ್ಷ ಅಸಲು ಬೇಡ ಬಡ್ಡಿಯನ್ನಾದರೂ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮ ಭಾಗದಲ್ಲಿ ತೆಂಗಿಗೆ ನುಸಿ ರೋಗ ಬಂದು ಸುಮಾರು ಜನ ರೈತರು ಕಂಗಾಲಾಗಿದ್ದಾರೆ. ಆದ್ದರಿಂದ ತೆಂಗಿಗೆ ಬೆಂಬಲ ಬೆಲೆಯನ್ನು ಕೊಟ್ಟು ನಮ್ಮ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕು. ಕಳೆದ ಉಪ ಚುನಾವಣೆಯ ಸಂದರ್ಭದಲ್ಲಿ ನಮ್ಮ ತಾಲ್ಲೂಕಿಗೆ 5 ಸಾವಿರ ಮನೆಗಳನ್ನು ಕೊಡುವುದಾಗಿ ಘೋಷಣೆ ಮಾಡಿದ್ದರು. ದಯಮಾಡಿ ನಮ್ಮ ತಾಲ್ಲೂಕನ್ನು ಗುಡಿಸಲುರಹಿತ ತಾಲ್ಲೂಕನ್ನಾಗಿ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳು.

ಶ್ರೀ ಕೆ. ಸುರೇಶ್‌ಗೌಡ (ನಾಗಮಂಗಲ): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ವಿಶೇಷ ಅಧಿವೇಶನವನ್ನು ನಾವೆಲ್ಲಾ ನೋಡುತ್ತಿದ್ದೇವೆ. ಕಳೆದ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಭ್ರಷ್ಟಾಚಾರದ ಬಗ್ಗೆಯೂ ಕರೆಯುತ್ತೇವೆಂದು ಹೇಳಿದ್ದರು. ಆದರೆ, ಇವತ್ತು ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಬರದ ಬಗ್ಗೆ ಕೊಟ್ಟಿದ್ದಾರೆ. ಇದು ಸಪ್ಲಿಮೆಂಟರಿ

ಬಜೆಟೋ ಅಥವಾ ಏನೋ ಎಂದು ನಮ್ಮ ನಾಯಕರುಗಳು ಪ್ರಶ್ನೆ ಮಾಡಿದ್ದಾರೆ. ನನಗೆ ಆಗುವ ಆಶ್ಚರ್ಯವೇನೆಂದರೆ ನನ್ನ ಕ್ಷೇತ್ರದಲ್ಲಿ ಸರ್ಕಾರಿ ಚೆಕ್‌ಗಳೇ ಬೌನ್ಸ್ ಆಗುತ್ತಿದೆ. ಇಲ್ಲಿ ವಸತಿ ಮತ್ತು ಕೃಷಿ ಸಚಿವರು ಇಲ್ಲ. ಅದೂ 5-10 ಸಾವಿರ ರೂ. ಮೌಲ್ಯದ ನೂರಾರು ಸರ್ಕಾರಿ ಚೆಕ್‌ಗಳು ಬೌನ್ಸ್ ಆಗಿರಬೇಕಾದರೆ ಇಲ್ಲಿ ಮಂಡಿಸಿರುವುದನ್ನು ನಾವು ಕನಸು ಎಂದು ತಿಳಿದುಕೊಳ್ಳಬೇಕೇ ಅಥವಾ ಆಶ್ವಾಸನೆಯೆಂದು ತಿಳಿದುಕೊಳ್ಳಬೇಕೇ ಅರ್ಥವಾಗುತ್ತಿಲ್ಲ. ದಯಮಾಡಿ ಇದರ ಬಗ್ಗೆ ಸ್ಪಷ್ಟೀಕರಣವನ್ನು ಬಯಸುತ್ತೇನೆ. ನನ್ನ ಕ್ಷೇತ್ರ ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ಡಾ: ನಂಜುಂಡಪ್ಪನವರ ವರದಿಯಲ್ಲಿದೆ. ಜೊತೆಗೆ ಬರ ಪೀಡಿತವೂ ಆಗಿದೆ. ಇದುವರೆಗೆ ನಿನ್ನೆ ಒಂದು ದಿವಸ ಮಳೆ ಆಗಿರುವುದನ್ನು ಬಿಟ್ಟರೆ ಮತ್ತೆ ಯಾವುದೇ ಮಳೆಯಾಗಿಲ್ಲ. ಆದರೆ ನಮ್ಮಲ್ಲಿ ಎರಡು ಹೋಬಳಿಗಳನ್ನು ಬರ ಎಂದು ಸೇರಿಸಿ ಉಳಿದ ನಾಲ್ಕು ಹೋಬಳಿಗಳನ್ನು ಬಿಟ್ಟುಬಿಟ್ಟಿದ್ದಾರೆ. ಆದರೆ 144 ಮಿ.ಮೀಟರ್ ಮಳೆಯಾಗಿದೆಯೆಂದು ತೋರಿಸುತ್ತಾರೆ. ಆದರೆ, ನಮ್ಮಲ್ಲಿ ನಿನ್ನೆ ಒಂದೇ ಒಂದು ದಿವಸ ಮಳೆಯಾಗಿರುವುದು. ಅವೈಜ್ಞಾನಿಕವಾಗಿ ಈ ಕೆಲಸವನ್ನು ಮಾಡಿದ್ದಾರೆ. ನಮ್ಮ ತಾಲ್ಲೂಕನ್ನು ಸಂಪೂರ್ಣವಾಗಿ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕು. ಆರ್.ಡಿ.ಪಿ.ಆರ್. ಇಲಾಖೆಯ ಸಚಿವರು ಇಲ್ಲೇ ಇದ್ದಾರೆ. ಕುಡಿಯುವ ನೀರಿನ ಪಾಯಿಂಟ್ ಮಾಡುವ ಸಂದರ್ಭದಲ್ಲಿ ಜಿಯಾಜಲಿಸ್ಟ್‌ನ್ನು ಕಳುಹಿಸುತ್ತೇವೆ. ಅವರು ಪಾಯಿಂಟ್ ಮಾಡಿದ ಮೇಲೆ ಬೋರ್ ಕೊರೆಸುತ್ತೇವೆಂದು ಹೇಳುತ್ತಾರೆ. ಆದರೆ, ಅವರ ಜಿಯಾಜಲಿಸ್ಟ್‌ನವರು ಎಲ್ಲೆಲ್ಲಿ ಪಾಯಿಂಟ್ ಮಾಡುತ್ತಾರೆ ಅಲ್ಲಿ 600 ಅಡಿಯವರೆಗೆ ಕೊರೆದರೂ ಅರ್ಧ ಇಂಚು ನೀರು ಬರುವುದಿಲ್ಲ. ಖಾಸಗಿಯವರನ್ನು ಕರೆದುಕೊಂಡು ಬಂದು ಮಾಡಿಸಿದರೆ 400 ಅಡಿಗೆಲ್ಲ 5-6 ಇಂಚು ನೀರು ಬರುತ್ತದೆ. ಖಾಸಗಿಯವರು ಮಾಡಿದ್ದಕ್ಕೆ ಅವರು ಸರ್ಟಿಫೈ ಮಾಡುವುದಿಲ್ಲವೆಂದು ಹೇಳತ್ತಾರೆ. ಇದರ ಬಗ್ಗೆ ಆರ್.ಡಿ.ಪಿ.ಆರ್.ನ ಮಾನ್ಯ ಸಚಿವರು ಸೂಕ್ತ ನಿರ್ದೇಶನವನ್ನು ಕೊಟ್ಟು ನೀರು ಹೆಚ್ಚಾಗಿ ಎಲ್ಲಿ ಬರುತ್ತದೆ ಅಲ್ಲಿ ಬೋರ್‌ವೆಲ್‌ನ್ನು ತೆಗೆಸುವ ವ್ಯವಸ್ಥೆ ಮಾಡಬೇಕು. ವಿದ್ಯುಚ್ಛಕ್ತಿ ಸಚಿವರು ಇಲ್ಲೇ ಇದ್ದಾರೆ. ವಿದ್ಯಾರ್ಥಿಗಳು ಬಹಳ ಕಷ್ಟವನ್ನು

ಅನುಭವಿಸುತ್ತಿದ್ದಾರೆ. ರೈತರಿಗಂತೂ ನಿಮಗೆ ವಿದ್ಯುತ್ ಕೊಡಲು ಕಷ್ಟವಾಗುತ್ತಿದೆ. ಆದರೆ, ವಿದ್ಯಾರ್ಥಿಗಳಿಗಾದರೂ ನೀವು ಈಗ ಏನು 5 ರಿಂದ 6 ಗಂಟೆ ವಿದ್ಯುತ್‌ನ್ನು ಕೊಡುತ್ತೀರಿ ಅದನ್ನು 6 ರಿಂದ 9 ಗಂಟೆಯವರೆಗಾದರೂ ಕೊಡಿ. ಕೊನೆಯಪಕ್ಷ ಅವರ ಶಿಕ್ಷಣಕ್ಕಾದರೂ ಅನುಕೂಲವಾಗುತ್ತದೆ. ನೀರಾವರಿ ಸಚಿವರು ಇಲ್ಲೇ ಇದ್ದಾರೆ. ನಮ್ಮ ಭಾಗದಲ್ಲಿ 1992ರಲ್ಲಿ 9 ಏತ ನೀರಾವರಿ ಯೋಜನೆಗಳು ಪ್ರಾರಂಭವಾಗಿದೆ. 80 ಪರ್ಸೆಂಟ್ ಕೆಲಸ ಪೂರ್ಣವಾಗಿದೆ. ಆದರೆ, ಇದುವರೆಗೆ ಒಂದೂ ಕೆಲಸ ಮಾಡುತ್ತಿಲ್ಲ. ನಾವು ಐ.ಸಿ.ಸಿ. ಸಭೆಗಳನ್ನು ಮಾಡುತ್ತೇವೆ. ಆದರೆ, ಅದು ಕೇವಲ ನಾಮಕಾವಸ್ಥೆಯ ಸಭೆಗಳಾಗಿದೆ. ಕೊನೆಯ ಭಾಗದಲ್ಲಿರುವ ಅಚ್ಚುಕಟ್ಟುದಾರರಿಗೆ ಇದುವರೆಗೂ ನೀರನ್ನು ಬಿಡುವುದಕ್ಕೆ ಹೋಗಿಲ್ಲ. ನಿನ್ನೆ ಏನೋ ಮಳೆ ಬಂದಿದೆ. ಸ್ವಲ್ಪ ಉಸಿರಾಡಲು ಸಾಧ್ಯವಾಗಿದೆ. ದಯಮಾಡಿ ಐ.ಸಿ.ಸಿ. ಸಭೆಯನ್ನು ಕರೆದು ಅಧಿಕಾರಿಗಳಿಗೆ ಸೂಚನೆ ಕೊಡಿ. ಇದುವರೆಗೆ ಎರಡು ತಿಂಗಳಿನಿಂದ ನೀರು ಬಿಡುತ್ತಿದ್ದಾರೆ. ಆದರೆ, H.L.B.C. ಅಧಿಕಾರಿಗಳು ನಮ್ಮ ತಾಲ್ಲೂಕಿನಲ್ಲಿ ಒಂದು ಕೆರೆಯನ್ನೂ ತುಂಬಿಸಲು ಆಗಿಲ್ಲ. ದಯಮಾಡಿ ಜಲಸಂಪನ್ಮೂಲ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು. ಅಲ್ಲಿ 9 ಏತ ನೀರಾವರಿ ಕೇವಲ 10–15 ಲಕ್ಷ ರೂ. ಹಣದಿಂದ ಉಳಿದುಕೊಂಡಿದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿದ್ದರೂ ಇದು ನಿಂತುಹೋಗಿದೆ. ಸುಮಾರು 15 ವರ್ಷಗಳಿಂದ ಇದನ್ನು ಪ್ರಾರಂಭ ಮಾಡುವುದಕ್ಕೆ ಆಗಿಲ್ಲ. ಹಲವಾರು ವಿಶೇಷ ಯೋಜನೆಯಲ್ಲಿ ನಮ್ಮಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೀರಿ. ರಾಜೀವ್‌ಗಾಂಧಿ ಸಬ್‌ಮಿಷನ್ ಇರಬಹುದು. ನಬಾರ್ಡ್ ಇರಬಹುದು ಅಥವಾ ಮತ್ತೊಂದು ಇರಬಹುದು. ಆದರೆ, ಪ್ರಾಪರ್ ಆಗಿ ನಿರ್ವಹಣೆ ಮಾಡುವುದಕ್ಕೆ ಯಾರೂ ತಯಾರಿಲ್ಲ. ತಾಲ್ಲೂಕು ಪಂಚಾಯಿತಿ, ವಿಲೇಜ್ ಪಂಚಾಯಿತಿಯಿಂದ ಇದನ್ನು ಖಂಡಿತವಾಗಿಯೂ maintain ಮಾಡುವುದಕ್ಕೆ ಆಗುವುದಿಲ್ಲ. ಲಕ್ಷಾಂತರ ರೂಪಾಯಿ ಕೊಟ್ಟು ಯೋಜನೆಯನ್ನು ಮಾಡುತ್ತೀರಿ. ಆದರೆ ಅದರ maintain ಸರಿಯಾಗಿ ಆಗುವುದಿಲ್ಲ. ವಿಲೇಜ್ ಪಂಚಾಯಿತಿ ಮತ್ತು ಆ ವಾಲ್ವ್‌ಮೆನ್ ಕೈಯಲ್ಲಿ ಆಗುವುದಿಲ್ಲ. ಕೊನೆಯ ಪಕ್ಷ ಒಂದು ಜಿಲ್ಲೆಗೆ ಒಂದು ವಿಶೇಷ

ಘಟಕವನ್ನು ಇದಕ್ಕಾಗಿ ಮಾಡಿ ಅವರಿಗೆ ಇದನ್ನು ವಹಿಸಬೇಕು. ಕೆರೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಇರತಕ್ಕ ಕೆರೆಗಳ ಒತ್ತುವರಿ ತೆಗೆಸುತ್ತೇವೆಂದು ಹೇಳಿದ್ದಾರೆ. ಆದರೆ, ಎಷ್ಟು ದಿವಸದಲ್ಲಿ ತೆಗೆಯುತ್ತಾರೆ ಎಂಬ ಬಗ್ಗೆ ಹೇಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ರಾಜು (ರಾಮನಗರ): ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದವನ್ನು ಅರ್ಪಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಬಗ್ಗೆ ವಿಶೇಷ ಅಧಿವೇಶನವನ್ನು ಕರೆದಾಗ ನಾವೆಲ್ಲಾ ಬಹಳ ನಿರೀಕ್ಷೆಯನ್ನಿಟ್ಟುಕೊಂಡಿದ್ದೆವು. ಇಲ್ಲಿ ಬಂದಿರುವ ಬಹುತೇಕ ಶಾಸಕರು ಗ್ರಾಮೀಣ ಭಾಗದಿಂದ ಬಂದವರಾಗಿದ್ದೇವೆ. ನಮಗೆ ವಿಶೇಷ ಒತ್ತನ್ನು ಕೊಟ್ಟು ಹೊಸ ನಾಂದಿಯನ್ನು ಹಾಡುತ್ತಾರೆಂದು ನಾವು ಬಹಳ ಆಸೆ ಇಟ್ಟುಕೊಂಡಿದ್ದೆವು. ಆದರೆ, ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ನೋಡಿದಾಗ ನಮಗೆ ಬಹಳ ನಿರಾಸೆಯಾಗಿದೆ. ಎಷ್ಟೋ ಕಡೆ ನಮ್ಮ ಗ್ರಾಮೀಣ ಭಾಗದಲ್ಲಿ ರೈತರು ಮತ್ತು ಯುವಕರು ವಲಸೆ ಹೋಗಲು ಕಾರಣವೇನೆಂದರೆ, ಈ ದಿನ ವ್ಯವಸಾಯ ಲಾಭದಾಯಕವಲ್ಲವೆಂದು ತೀರ್ಮಾನಕ್ಕೆ ಬಂದು ಎಲ್ಲಾ ಹಳ್ಳಿಯ ಯುವಕರುಗಳು ಪಟ್ಟಣ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದಾರೆ. ಆದುದರಿಂದ ಹಳ್ಳಿಗಳಲ್ಲಿ ರೈತರು ಮತ್ತು ಯುವಕರುಗಳು ಇರಬೇಕೆಂದರೆ ಕೆಲವು ಲಾಭದಾಯಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ರೈತರಿಗೆ ಅನುಕೂಲಕರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಮೊದಲನೆಯದಾಗಿ ನೀರಾವರಿ ವಿಷಯಗಳ ಬಗ್ಗೆ ನಾನು ಮಾತನಾಡಿ ನನ್ನ ತಾಲ್ಲೂಕಿನ ಬಗ್ಗೆ ಈ ವಿಚಾರದಲ್ಲಿ ಹೇಳಬಯಸುತ್ತೇನೆ. ಸನ್ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಆಗಿನ ಕಾಲದಲ್ಲಿ ಶಂಕುಸ್ಥಾಪನೆಯನ್ನು ಮಾಡಿದಂಥ ಮಂಚನಬೆಲೆ ಜಲಾಶಯ ಇನ್ನೂ ಕೂಡ ಮುಗಿದಿಲ್ಲ. ಅಂದರೆ 35 ರಿಂದ 40 ವರ್ಷಗಳ ಕಾಲವಾದರೂ ಹಿಂದೆ ಪ್ರಾರಂಭವಾದ ಈ ಯೋಜನೆ ಮುಗಿಯಲಿಲ್ಲವೆಂದರೆ ರೈತರಿಗೆ ನೀರಾವರಿ ಅನುಕೂಲವನ್ನು ಮಾಡಿಕೊಡುವುದಕ್ಕೆ ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆ ಎನ್ನುವುದು ಒಂದು ವಿಷಯ. ಎರಡನೆಯದಾಗಿ ರೈತರು ಬೆಳೆಯುವಂಥ ರೇಷ್ಮೆ

ಬೆಳೆ ಇರಬಹುದು, ತೆಂಗಿನ ಬೆಳೆ ಇರಬಹುದು, ಇಂದು ಇವುಗಳು ಬಹಳ ಅಧೋಗತಿಗೆ ತಲುಪಿವೆ. ನಿಮಗೆಲ್ಲರಿಗೂ ಈ ವಿಷಯ ಗೊತ್ತಿದೆ. ನಾನು 1985ನೇ ಇಸವಿಯಲ್ಲಿ ಹಳ್ಳಿಯಲ್ಲಿ ವ್ಯವಸಾಯ ಮಾಡುವುದಕ್ಕೆ ಹೋದಾಗ 5 ರೂಪಾಯಿಗೆ ತೆಂಗಿನಕಾಯಿಯನ್ನು ಮಾರಿದ್ದೇವೆ, 120 ರೂಪಾಯಿಗೆ ರೇಷ್ಮೆಯನ್ನು ಮಾರಿದ್ದೇವೆ. ಇವತ್ತೂ ಕೂಡ ಅದೇ ರೀತಿಯ ಬೆಲೆ ಇದ್ದಾಗ ರೈತರು ಯಾವ ರೀತಿಯಲ್ಲಿ ಉದ್ಧಾರವಾಗುತ್ತಾರೆ? ನಾವು ಕೊಡುವಂಥ ಕೂಲಿ ಇರಬಹುದು, ನಾವು ತೆಗೆದುಕೊಳ್ಳುವಂಥ ಯೂರಿಯಾ ಇರಬಹುದು ಅಥವಾ ಕೃಷಿಗೆ ಬೇಕಾದಂಥವುಗಳ ಬೆಲೆ ಇಪ್ಪತ್ತು ಪಟ್ಟು, ಮೂವತ್ತು ಪಟ್ಟು ಜಾಸ್ತಿಯಾಗಿ ಇಂದು ರೈತರುಗಳು ಅಧೋಗತಿಗೆ ತಲುಪುತ್ತಿದ್ದಾರೆ. ಯಾವ ಮಟ್ಟದಲ್ಲಿ ಇವುಗಳ ಬೆಲೆ ಹೆಚ್ಚು ಆಗುತ್ತಿದೆಯೋ ಅದೇ ರೀತಿಯಲ್ಲಿ ರೈತರುಗಳು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗಲು ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಿ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಹೆಚ್. ಶಿವಶಂಕ ರೆಡ್ಡಿ (ಗೌರಿಬಿದನೂರು): ಮಾನ್ಯ ಉಪಾಧ್ಯಕ್ಷರೆ, ಕೃಷಿಗೆ ಸಂಬಂಧಪಟ್ಟಂತೆ ಅಂತರ್ಜಲ ಸಂರಕ್ಷಣೆ ಬಗ್ಗೆ ವಿಶೇಷವಾದಂಥ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ ಎನ್ನುವಂಥ ಮಾತುಗಳನ್ನು ಹೇಳಿದ್ದಾರೆ. ಇತ್ತೀಚೆಗೆ ಒಂದು ವಾರದ ಹಿಂದೆ ಮರಳು ಗಣಿಗಾರಿಕೆಗೆ ಮುಕ್ತವಾದಂಥ ಅವಕಾಶ ಸರ್ಕಾರ ಕೊಟ್ಟಿದೆ. ಇದರಿಂದೇನಾಗಿಯೆಂದರೆ, ಎಲ್ಲಾ ನದಿ ಪಾತ್ರಗಳಲ್ಲಿ ಮರಳನ್ನು ತೆಗೆಯುತ್ತಿದ್ದಾರೆ. ನಮ್ಮ ಜಿಲ್ಲೆಗಳಲ್ಲಿ ಯಾವುದೇ ನೀರಾವರಿ ಸೌಲಭ್ಯಗಳು ಇರುವುದಿಲ್ಲ. ಕೇವಲ ಕೊಳವೆ ಬಾವಿಗಳ ಮುಖಾಂತರ ಅಥವಾ ಕೆರೆ ಆಧಾರದ ಮೇಲೆ ನೀರಾವರಿ ಸೌಲಭ್ಯವಿದೆ. ಹೀಗಾಗಿ ಈ ನದಿ ಪಾತ್ರದಲ್ಲಿ ಮರಳು ತೆಗೆಯುವುದರಿಂದ ಬಹಳಷ್ಟು ಅಂತರ್ಜಲ ಇನ್ನೂ ಕುಸಿಯುತ್ತದೆ. ಅನೇಕ ನೀರಾವರಿ ಕೊಳವೆ ಬಾವಿಗಳು ಕೂಡ ಒಣಗಿ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಈಗಾಗಲೇ ರೈತರು ಕೂಡ ಬಹಳಷ್ಟು ಕಂಗಾಲಾಗಿದ್ದಾರೆ. ನಾನು ಈಗಾಗಲೇ ಈ ವಿಚಾರದ ಬಗ್ಗೆ ಮಾನ್ಯ ನೀರಾವರಿ ಸಚಿವರ ಗಮನಕ್ಕೂ ಕೂಡ ತಂದಿದ್ದೇನೆ. ಈಗಾಗಲೇ ಏನು ಆಜ್ಞೆಯನ್ನು

ಮಾಡಿದ್ದಾರೆ, ಅದನ್ನು ನಮ್ಮ ಜಿಲ್ಲೆಗಳಲ್ಲಿ, ಅದರಲ್ಲಿಯೂ ವಿಶೇಷವಾದಂಥ ಬರಪೀಡಿತ ಜಿಲ್ಲೆಗಳಲ್ಲಿ ಅಂದರೆ ಚಿಕ್ಕಬಳ್ಳಾಪುರ ಇರಬಹುದು, ಕೋಲಾರ ಇರಬಹುದು ಅಥವಾ ತುಮಕೂರು ಇರಬಹುದು, ಈ ಜಿಲ್ಲೆಗಳಲ್ಲಿ ವಿಶೇಷವಾಗಿ ಗಣಿಗಾರಿಕೆಯನ್ನು ನಿಷೇಧ ಮಾಡತಕ್ಕಂಥ ಕೆಲಸವನ್ನು ಮಾಡಬೇಕೆಂಬ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಮಾನ್ಯ ಉಪಾಧ್ಯಕ್ಷರೆ, 37 ಭವಿಷ್ಯದ ಹೆಜ್ಜೆಗಳ ಬಗ್ಗೆ ಚರ್ಚೆಯನ್ನು ಮೂರು ದಿವಸಗಳಲ್ಲಿ ಮಾಡಿರತಕ್ಕಂಥದ್ದು ಒಂದು ಕಡೆ ಭವಿಷ್ಯವನ್ನು ನಿರ್ಮಾಣ ಮಾಡತಕ್ಕಂಥದ್ದರ ಬಗ್ಗೆ ಚಿಂತನೆಯಾಗಿದೆಯೆಂದು ಅಂದುಕೊಂಡರೂ ಕೂಡ ಏನಿವತ್ತು 37 ಹೆಜ್ಜೆಗಳಲ್ಲಿ ಬಹಳ ಪ್ರಾಮುಖ್ಯವಾದಂಥ ಹೆಜ್ಜೆಯೆಂದರೆ ಮಾನ್ಯ ಬಸವರಾಜ ಬೊಮ್ಮಾಯಿಯವರ ಹೆಜ್ಜೆಯೆಂದು ಹೇಳಿ ನಾನು ಗುರುತಿಸಿಕೊಂಡಿದ್ದೇನೆ. ಅಂದರೆ ಮುಖ್ಯಮಂತ್ರಿಗಳನ್ನು ಬಿಟ್ಟರೆ ಡೈನಾಮಿಕ್ ಮಂತ್ರಿಗಳೆಂದರೆ ಶ್ರೀ ಬಸವರಾಜ ಬೊಮ್ಮಾಯಿಯವರು ಮತ್ತು ಆರ್.ಡಿ.ಪಿ.ಆರ್. ಮಂತ್ರಿಗಳು ಮತ್ತು ಇನ್ನೂ ಮೂರ್ನಾಲ್ಕು ಮಂದಿ ನಮಗೆ ನೋಡುವುದಕ್ಕೆ ಕಾಣುತ್ತಾರೆ. ನೀರಾವರಿಗೆ ಅವರು ಏನು ಹೇಳಿದ್ದಾರೆಂದರೆ AIDP ಎಂದು ಒಂದು ಸೆಂಟ್ರಲ್ ಸ್ಕೀಂ ಇದೆ. ಅದರಲ್ಲಿ ಹಣಕಾಸಿನ ನೆರವನ್ನು ಒದಗಿಸುತ್ತೇವೆ ಮತ್ತು ಸಂಪನ್ಮೂಲಗಳನ್ನು ಹೆಚ್ಚಿಸುತ್ತೇವೆ ಎನ್ನುವಂಥ ಮಾತನ್ನು ಬಿಟ್ಟರೆ ಇನ್ನೂ ನಮಗೆ 30 ಲಕ್ಷ ಹೆಕ್ಟೇರ್‌ನಷ್ಟು ಜಮೀನಿಗೆ ಕರ್ನಾಟಕ ರಾಜ್ಯದಲ್ಲಿ ನೀರಾವರಿಯಾಗಬೇಕಾಗಿದೆ. ಇದರ ಬಗ್ಗೆ ಅವರು ಏನನ್ನೂ ಹೇಳೇ ಇಲ್ಲ. ತಮ್ಮ ಅಸಹಾಯಕತೆಯನ್ನು ತೋರಿಸುತ್ತಿದ್ದಾರೆ. ಈ ಮೂರು ದಿವಸಗಳಲ್ಲಿ ನಾವೇನು ಚರ್ಚೆ ಮಾಡಿದ್ದೇವಲ್ಲ. ಈ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿಗೆ ಒಳ್ಳೆಯ ಚಾಲನೆ ಸಿಗಬೇಕಾದರೆ 30 ಲಕ್ಷ ಹೆಕ್ಟೇರ್‌ಗೆ ಈ ರಾಜ್ಯದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಿದರೆ ಮಾತ್ರ ಈ ಹೊಸ ಭವಿಷ್ಯದ ಹೆಜ್ಜೆಗಳಿಗೆ ಏನಾದರೂ ಒಂದು ಪೂರಕ ಶಕ್ತಿಯನ್ನು ತುಂಬತಕ್ಕಂಥ ಕೆಲಸವಾಗುತ್ತದೆ. ಆ ಕಾರಣಕ್ಕಾಗಿ ಮಾನ್ಯ ಬಸವರಾಜ ಬೊಮ್ಮಾಯಿಯವರು ಈ ವರ್ಷದ ಆಯವ್ಯಯದಲ್ಲಿ ಸುಮಾರು 10 ಸಾವಿರ ಕೋಟಿ ಅನುದಾನವನ್ನು ಇಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು

ಮಾಡುತ್ತಾರೆಂದು ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆಂದು ಹೇಳಬಯಸುತ್ತೇನೆ. ಇದಲ್ಲದೆ ಮಾನ್ಯ ಇಂಧನ ಮಂತ್ರಿಗಳೆ, ಮಾನ್ಯ ಬೆಳ್ಳುಬ್ಬಿಯವರು ಒಂದು ಸಣ್ಣ ಸಲಹೆಯನ್ನು ಕೊಟ್ಟಿದ್ದಾರೆ. ನಾನೂ ಕೂಡ ಮೊನ್ನೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದೆ. ಏನು ಓವರ್‌ಲೋಡ್ ಇದೆ, ಏನು ಗ್ರಾಮೀಣ ಮಟ್ಟದಲ್ಲಿರತಕ್ಕಂಥ ಐ.ಪಿ. ಸೆಟ್‌ನ್ನು ಹಾಕಿಕೊಂಡಿರತಕ್ಕಂಥ ರೈತರ ಬಗ್ಗೆ ನೀವು ಅದರ ಬಗ್ಗೆ ಸರ್ವೆ ಮಾಡಿಸಿ detailed project report ಮಾಡಿಸಿ, ಎಲ್ಲಿ ಓವರ್‌ಲೋಡ್ ಇವೆ ಅಲ್ಲಿ ಇನ್ನೂ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳು ಬೇಕು ಎಂಬ ಬಗ್ಗೆ ಒಂದು ಸರ್ವೆಯನ್ನಾದರೂ ಮಾಡಿಸಿ, ಆ ಕಳಕಳಿ ನಿಮಗೆ ಇದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಇವರು ಆಗಲೇ ತಮ್ಮ ಭಾಷಣದಲ್ಲಿ ಹೇಳಿದರು. 20 ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತೇವೆಂದು ಹೇಳುತ್ತಾರೆ. ಮಾಡಿ, ಸಂತೋಷ. ಆದರೆ ಈಗ ರೈತ ಏನು ಅನುಭವಿಸುತ್ತಿದ್ದಾನೆ, ಈಗ ತಾನೆ ನಮ್ಮ ಸಹೋದರರು ಮಾತನಾಡುವಾಗ ಹೇಳಿದರು. ಮಕ್ಕಳು ಓದುವುದಕ್ಕೆ ಅಗತ್ಯವಿರುವ ವಿದ್ಯುತ್‌ನ್ನು ನೀವು ಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತಿಲ್ಲ. ಟ್ರಾನ್ಸ್‌ಫಾರ್ಮರ್‌ಗಳ ಬಗ್ಗೆ ನೀವು ಸರ್ವೆ ಮಾಡಿಸಿ. ಇವತ್ತು ಓವರ್‌ಲೋಡ್ ಇರುವ ಕಡೆ ಲೋಡ್ ಕಡಿಮೆ ಮಾಡಿದರೆ ಸರ್ಕಾರಕ್ಕೂ ಉಳಿತಾಯವಾಗುತ್ತದೆ ಮತ್ತು ರೈತರಿಗೆ ನೀವು 3 ತಾಸು, 6 ತಾಸು ಏನು 3 ಫೇಸ್‌ನಲ್ಲಿ ವಿದ್ಯುತ್‌ನ್ನು ಸರಬರಾಜು ಮಾಡುತ್ತಿದ್ದಿರಲ್ಲ, ಅದರಲ್ಲಿ ಇದ್ದದ್ದರಲ್ಲಿಯೇ ರೈತ ಬದುಕಿಕೊಳ್ಳುತ್ತೇನೆ. ಆ ಕಾರಣಕ್ಕಾಗಿ ನಾನು ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತಾ ಏನು ಇವತ್ತು ಟ್ರಾನ್ಸ್‌ಫಾರ್ಮರ್‌ಗಳು ಹೆಚ್ಚಾಗಿ ಬೇಕಾಗಿದೆ ಅದನ್ನು ಪೂರೈಕೆ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇದರ ಜೊತೆಗೆ ಬೆಳೆ ವಿಮೆ ಬಗ್ಗೆ ಹೇಳುವುದೇನೆಂದರೆ, ನಾನು ಮೊನ್ನೆ ಒಂದು ಪತ್ರಿಕೆಯಲ್ಲಿ ನೋಡಿದೆ. ರಾಜ್ಯಕ್ಕೆ ಬಿಡುಗಡೆಯಾಗಿರತಕ್ಕಂಥದ್ದು 142 ಕೋಟಿ ರೂ.ಗಳ ಹಣ. ಇದರಲ್ಲಿ ಕೇವಲ ಹಾವೇರಿಗೆ 42 ಕೋಟಿ ರೂ.ಗಳನ್ನು ಕೊಡಲಾಗಿದೆ. ಇದೇನೂ ನಮಗೆ ಅರ್ಥವಾಗುತ್ತಿಲ್ಲ. ಒಂದು ಕಡೆ ಬೆಳೆ ವಿಮೆ ಯೋಜನೆಯಲ್ಲಿ ಹಣವನ್ನು ತುಂಬಿರತಕ್ಕಂಥ ಪ್ರದೇಶದಲ್ಲಿ ಒಂದು ಪೈಸೆ ಕೂಡ ಹಣ ರಿಲೀಸ್ ಆಗುತ್ತಿಲ್ಲ.

ಆದರೆ ಹಾವೇರಿಗೆ 42 ಕೋಟಿ ರೂ. ಹಣವನ್ನು ಬಿಡುಗಡೆ ಮಾಡುತ್ತಾರೆ. ಈಗ ತಾವು ಹೇಳಿದಿರಲ್ಲ, ಪಂಚಾಯತಿ ಮಟ್ಟಕ್ಕೆ ತರುವಂಥದ್ದು ಬಹಳ ಒಳ್ಳೆಯದು. ಮತ್ತೆ ಇನ್ನೊಂದು ವಿಚಾರ ಏನೆಂದರೆ, ಪ್ರಾರಂಭಿಕ ಇಳುವರಿ ಮತ್ತು ಮೂಲ ಇಳುವರಿ ಎಂದು ಅವರು ಪ್ರೆಸೆಂಟ್ ಇಳುವರಿ ಎಂದು ಮಾಡಿದ್ದಾರೆ. ಈ ವರ್ಷ ಬರ ಎಂದು ಸರ್ಕಾರ ಘೋಷಣೆಯನ್ನು ಮಾಡಿದೆ. ಆದರೆ ಈ ವರ್ಷದ ಲೆಕ್ಕಕ್ಕೆ ನಾವು ಹೇಳಿರುವುದು ಬರುವುದಿಲ್ಲವಂತೆ, ಹಿಂದಿನ ಮೂರು ವರ್ಷಗಳ ಲೆಕ್ಕವನ್ನು ತೆಗೆದುಕೊಳ್ಳುತ್ತಾರಂತೆ. ಇಂಥದ್ದರಲ್ಲಿ ಬದಲಾವಣೆಯನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇನ್ನು ಬೆಳೆ ವಿಮೆಯಲ್ಲಿ ಏನು ಗೊಂದಲವಾಗಿದೆ ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾನ್ಯ ಕಂದಾಯ ಸಚಿವರು ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಗಣಿ ಬಗ್ಗೆ ಹೇಳಬೇಕೆಂದರೆ ಗಣಿಯನ್ನು ಅಗೆದು ಅದಿರನ್ನು ಹೊರದೇಶಕ್ಕೆ ಕಳುಹಿಸುತ್ತೇವೆ. ಆದರೆ ಅದರಿಂದ ಹೆಚ್ಚು ಲಾಭವೇನೂ ಈ ರಾಜ್ಯಕ್ಕೆ ಆಗುತ್ತಿಲ್ಲ. ಆದುದರಿಂದ ಸ್ಥಳೀಯವಾಗಿ ಇವತ್ತು ಕಚ್ಚಾ ವಸ್ತುಗಳನ್ನು ಉಪಯೋಗ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಮಾನ್ಯ ಕೈಗಾರಿಕಾ ಸಚಿವರಿಗೆ ತಮ್ಮ ಮೂಲಕ ಕೇಳಿಕೊಳ್ಳುತ್ತಾ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಪಿ. ಪಾಟೀಲ್ (ನಿಪ್ಪಾಣಿ): ಮಾನ್ಯ ಉಪಾಧ್ಯಕ್ಷರೆ, ಈ ಕುಡಿಯುವ ನೀರಿನ ಯೋಜನೆ ಬಗ್ಗೆ ಈಗಾಗಲೇ ಸಾಕಷ್ಟು ಗೌರವಾನ್ವಿತ ಸದಸ್ಯರುಗಳು ಸಲಹೆಯನ್ನು ಕೊಟ್ಟಿದ್ದಾರೆ. ತಮ್ಮ ಮುಖಾಂತರ ಸರ್ಕಾರಕ್ಕೆ ನನ್ನ ವಿನಂತಿಯೇನೆಂದರೆ ಪ್ರತಿಯೊಂದು ಜಿಲ್ಲಾ ಪಂಚಾಯತಿ ವ್ಯಾಪ್ತಿ ಕ್ಷೇತ್ರದಲ್ಲಿ ಒಬ್ಬ ಜೂನಿಯರ್ ಇಂಜಿನಿಯರ್‌ರವರನ್ನು ನಾವು ನೇಮಕಾತಿ ಮಾಡಬೇಕು. ಅಂದರೆ ಆ ಭಾಗದಲ್ಲಿ ಬರುವಂಥ ಎಲ್ಲಾ drinking water supply schemeಗಳೇನಿವೆ ಅಂದರೆ mini water supply schemes ಇರಬಹುದು ಅಥವಾ ಬಹು ಗ್ರಾಮಗಳ ಸ್ಕೀಂ ಇರಬಹುದು, ಅದರ maintenance ಅವರ ಮುಖಾಂತರ ಆಗಬೇಕು ಮತ್ತು ಅದರ ಉಸ್ತುವಾರಿಯನ್ನು ಜಿಲ್ಲಾ ಪಂಚಾಯತಿಯವರು ತೆಗೆದುಕೊಳ್ಳಬೇಕು. ಏಕೆಂದರೆ ಗ್ರಾಮ ಪಂಚಾಯತಿ

ಕಡೆಯಿಂದ ಅವುಗಳನ್ನು ಮಾಡಲು ಸಾಧ್ಯವಿಲ್ಲ. ಇನ್ನು ಎರಡನೆಯದಾಗಿ ಪ್ರತಿಯೊಂದು ಗ್ರಾಮ ಪಂಚಾಯತಿಗೆ ಕನಿಷ್ಠ ಹತ್ತು ಲಕ್ಷ ರೂಪಾಯಿಗಳ ಅನುದಾನವನ್ನು ಕೊಡಬೇಕು. ಪ್ರತಿಯೊಂದು ಗ್ರಾಮ ಪಂಚಾಯತಿ ಸದಸ್ಯರ ಸಂಖ್ಯೆ ಎಷ್ಟಿದೆ ಅದನ್ನೂ ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಹೇಳಬೇಕೆಂದರೆ ಬೆಳಗಾಂ ಜಿಲ್ಲೆಯಲ್ಲಿ ಆರು ಗ್ರಾಮಗಳ ಸಂಖ್ಯೆ ಇರತಕ್ಕಂಥ ಗ್ರಾಮ ಪಂಚಾಯಿತಿ ಕೂಡ ಇದೆ. 54 ಗ್ರಾಮಗಳ ಸದಸ್ಯರನ್ನೊಳಗೊಂಡ ಗ್ರಾಮ ಪಂಚಾಯತಿ ಕೂಡ ಇದೆ. 6 ಜನ ಇರುವ ಗ್ರಾಮ ಪಂಚಾಯಿತಿಗೂ ಒಂದೇ ರೀತಿಯ ಅನುದಾನ ಮತ್ತು 54 ಜನ ಸದಸ್ಯರಿರುವ ಗ್ರಾಮ ಪಂಚಾಯಿತಿಗೂ ಒಂದೇ ರೀತಿಯ ಅನುದಾನವನ್ನು ಕೊಡುತ್ತಿದ್ದಾರೆ. ಅನುದಾನವನ್ನು ಹೆಚ್ಚು ಜನ ಸದಸ್ಯರಿರುವ ಕಡೆ ಹೆಚ್ಚು ಮಾಡಬೇಕು. ಇನ್ನು ನನ್ನ ಎರಡನೆಯ ಸಲಹೆಯೇನೆಂದರೆ drinking water supply schemes ಏನಿದೆ ಅದರ ಉಸ್ತುವಾರಿಯನ್ನು ಜಿಲ್ಲಾ ಪಂಚಾಯತಿಯವರು ನೇರವಾಗಿ ತೆಗೆದುಕೊಳ್ಳಬೇಕು. ಈ ರೀತಿಯಾದರೆ ಮಾತ್ರ ಅದರ ಕಂಟ್ರೋಲಿಂಗ್ ಮತ್ತು ಮಾನಿಟರಿಂಗ್ ಮಾಡಲು ಸಾಧ್ಯವಾಗುತ್ತದೆ. ಇನ್ನು ಮೂರನೆಯದಾಗಿ ಈ ನದಿ ಪಾತ್ರಗಳಲ್ಲಿ ಅಥವಾ ಪಾರ್ಟ್ 'ಬಿ'ಯಲ್ಲಿ ಅದರಲ್ಲಿಯೂ ವಿಶೇಷವಾಗಿ ನಮ್ಮ ಚಿಕ್ಕೋಡಿ ತಾಲ್ಲೂಕಿನಲ್ಲಿ ನೀರನ್ನು ಪೂರೈಕೆ ಮಾಡುವ ಕೆಲಸವನ್ನು ತೆಗೆದುಕೊಳ್ಳಬೇಕು. ಇನ್ನು ನಮ್ಮ ಭಾಗದಲ್ಲಿ ತಂಬಾಕು ಬೆಳೆಗೆ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಅದರ ಬದಲಾಗಿ ಈಗ 2020ನೇ ಸಾಲಿನವರೆಗೆ W.H.O. ದವರು ಒಂದು ವಾರ್ನಿಂಗ್‌ನ್ನು ಕೊಟ್ಟಿದ್ದಾರೆ. ತಂಬಾಕು ಬೆಳೆಯುವುದನ್ನು ಬಂದ್ ಮಾಡಬೇಕೆಂದು ಹೇಳಿದ್ದಾರೆ. ಆದುದರಿಂದ ಈ ಬೆಳೆಗೆ ಪರ್ಯಾಯವಾಗಿ ಯಾವ ಯಾವ ಬೆಳೆಗಳನ್ನು ಬೆಳೆಯಬೇಕೆಂದು ಮುಖ್ಯಮಂತ್ರಿಗಳ ಉತ್ತರದಲ್ಲಿ ಬರಬೇಕು ಅಥವಾ ಮಾನ್ಯ ಸಚಿವರು ಈ ಬಗ್ಗೆ ಹೇಳಬೇಕೆಂದು ತಮ್ಮ ಮುಖಾಂತರ ಮನವಿಯನ್ನು ಮಾಡಿ ನನಗೆ ಒಂದೆರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಮೇಶ್ ಭೂಸನೂರು (ಸಿಂಧಗಿ): ಮಾನ್ಯ ಉಪಾಧ್ಯಕ್ಷರೆ, ಹುಬ್ಬಳ್ಳಿ ತಾಲ್ಲೂಕಿನ ರೈತರು ಮುಂಗಾರು ಬೆಳೆಗಳಾದ ಸೋಯಾಬೀನ್ ಮತ್ತು ಅವರೆ ಬೆಳೆಗೆ ಕ್ರಿಮಿಕೀಟಗಳ ಬಾಧೆಯಿಂದ ಅಪಾರ ನಷ್ಟವಾಗಿದೆ. ಈ ಕುರಿತು ತಮ್ಮ ಆತಂಕವನ್ನು ವ್ಯಕ್ತಮಾಡುವುದಕ್ಕೆ ಪ್ರಬಲವಾದ ಒಂದು ಹೋರಾಟವನ್ನು ಮಾಡಿ ಇಂದು ಮಧ್ಯಾಹ್ನ ಜಿಲ್ಲಾಧಿಕಾರಿಗಳಿಗೆ ತಮ್ಮ ಮನವಿಯನ್ನು ಸಲ್ಲಿಸಿದ್ದಾರೆ. ಆ ಕ್ರಿಮಿಗಳಿಂದ ನಷ್ಟಕ್ಕೊಳಗಾದಂಥ ರೈತರಿಗೆ ಅವರಿಗೆ ಕಾಳು ಕೈಗೆ ಬರುವ ಹೊತ್ತಿಗೆ ಬೆಳೆ ನಷ್ಟವಾಗಿದೆ. ಬಹಳ ಆತಂಕದ ಸ್ಥಿತಿಯಲ್ಲಿ ಹುಬ್ಬಳ್ಳಿ ತಾಲ್ಲೂಕಿನ ರೈತರಿದ್ದಾರೆ. ನಮಗೂ ಕೂಡ ಬರುವಾಗ ಮನವಿಯನ್ನು ಕೊಟ್ಟಿದ್ದಾರೆ. ಸರ್ಕಾರ ಈ ಬಗ್ಗೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು. ನಷ್ಟಕ್ಕೊಳಗಾಗಿರುವ ಎಲ್ಲಾ ರೈತರ ಜಮೀನುಗಳಿಗೆ ಕೃಷಿ ಇಲಾಖೆಯಿಂದ ಸರ್ವೆ ಮಾಡಿ ಅವರಿಗೆ ನ್ಯಾಯಸಮ್ಮತವಾದ ಪರಿಹಾರವನ್ನು ದೊರಕಿಸಿಕೊಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಯು.ಟಿ. ಖಾದರ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವ ಈ ಸಂದರ್ಭದಲ್ಲಿ ಮೊದಲಿಗೆ ನಾವು ಸರ್ಕಾರದ ಗಮನವನ್ನು ಸೆಳೆಯುವುದೇನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಬೆಳೆದ ಬಿಳಿ ಅಡಿಕೆಗೆ ಇನ್ನೂ ಕೂಡ ಬೆಂಬಲ ಬೆಲೆಯನ್ನು ಘೋಷಿಸಿಲ್ಲ. ಅಲ್ಲಿನ ಜನರು ಬಹಳ ಸಂಕಷ್ಟದಲ್ಲಿರುವ ಇವತ್ತಿನ ಸಂದರ್ಭದಲ್ಲಿ ಬೆಂಬಲ ಬೆಲೆಯನ್ನು ಘೋಷಿಸಬೇಕೆಂದು ಮನವಿ ಮಾಡುತ್ತೇನೆ. ಈಗಾಗಲೇ ವಿಳಂಬವಾಗಿದೆ. ಇನ್ನು ಮುಂದೆ ತಾವು ಬೆಂಬಲ ಬೆಲೆಯನ್ನು ಘೋಷಿಸಿದರೂ ಅದು ಶ್ರೀಮಂತ ರೈತರಿಗೆ ಅನುಕೂಲವಾಗುತ್ತದೆಯೇ ಹೊರತು ಸಣ್ಣಮುಟ್ಟ ರೈತರಿಗೆ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ.

ಉಪಾಧ್ಯಕ್ಷರು: ಆಯಿತು, ತಾವು ಬೆಂಬಲ ಬೆಲೆಯನ್ನು ಕೇಳಿದ್ದಿರಿ. ಮುಗಿಯಿತು. ಈಗ ಕುಮಾರಸ್ವಾಮಿಯವರು.

ಶ್ರೀ ಯು.ಟಿ. ಖಾದರ್: ಎರಡು ಪ್ರಶ್ನೆಗಳಿವೆ. ನಮಗೆ ಮಾತನಾಡಲಿಕ್ಕೆ ಎರಡು ನಿಮಿಷ ಅವಕಾಶ ಕೊಡಿ.

ಶ್ರೀ ಎನ್. ಸಂಪಂಗಿ: ದಯವಿಟ್ಟು ನೀವು ಮಾತನಾಡುವವರಿಗೆ ಅವಕಾಶ ಕೊಡಿ. ಇಲ್ಲದಿದ್ದರೆ ಮಾತನಾಡುವುದಕ್ಕೆ ಬಿಡಬೇಡಿ. ಮುಗಿಯಿತು ಎಂದರೆ ಅರ್ಥವೇನು? ನಾವು ಬರೀ ಎದ್ದು ಕುಳಿತುಕೊಳ್ಳುವುದೇ? ಇದು ಅನ್ಯಾಯವಾಗುತ್ತದೆ.

ಶ್ರೀ ಯು.ಟಿ. ಖಾದರ್: ಎರಡು ನಿಮಿಷ ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು: ಇದು ಮಾತನಾಡುವುದಲ್ಲ, clarification ಕೇಳಬೇಕು. ನಂತರ ಸಂಪಂಗಿಯವರಿಗೂ ಕೊಡುತ್ತೇನೆ.

ಶ್ರೀ ಎನ್. ಸಂಪಂಗಿ: ಇವರು clear ಆಗಿ ಮಾತನಾಡಲಿ. ಇಲ್ಲಿರುವವರ್ಯಾರೂ clear ಆಗಿ ಮಾತನಾಡುವುದು ಬೇಡವೆ? ನಾವು ಕೇವಲ ಎದ್ದು ಕುಳಿತುಕೊಳ್ಳಬೇಕೆ? ಆ ತರಹ ಮಾಡುವುದಾದರೆ ಬೇಡವೇ ಬೇಡ; ನೀವು ಅವಕಾಶ ಕೊಡುವುದೇ ಬೇಡ; ನಾವು ಮಾತನಾಡುವುದೇ ಬೇಡ.

ಉಪಾಧ್ಯಕ್ಷರು: ಆಯಿತು, ಕೊಡುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ: ಮುಂದುಗಡೆ ಬೆಂಚಿನವರು ಮೂರುಮೂರು ಸಲ ನಿಂತು ಗಂಟೆಗಟ್ಟಲೆ ಮಾತನಾಡಿದರೂ, ಆಗ ನೀವು ಇದು clarification ಎಂದು ಹೇಳುವುದಿಲ್ಲ. ಹಿಂದುಗಡೆಯಿರುವ ಹೊಸದಾಗಿ ಬಂದಿರುವವರು ಯಾರಾದರೂ ನಿಂತರೆ clarification ಎಂದು ಹೇಳುತ್ತೀರಿ. ಅವರು ಸ್ಪಷ್ಟವಾಗಿ ಅವರ ಅಭಿಪ್ರಾಯವನ್ನು ಹೇಳಲಿ.

ಶ್ರೀ ಎನ್. ಸಂಪಂಗಿ: ನಾವು ಕಾಟಾಚಾರಕ್ಕೆ ಮಾತನಾಡಲು ಅಲ್ಲ ಇಲ್ಲಿಗೆ ಬಂದಿರುವುದು. ನಮ್ಮ ವಿಚಾರಗಳನ್ನು ಸರಿಯಾಗಿ ನಿಮಗೆ ಅರ್ಥ ಮಾಡಿಸುವಂತೆ ಮಾತನಾಡುವುದಕ್ಕೆ ನಾವು ಬಂದಿದ್ದೇವೆ. ಎದ್ದ ತಕ್ಷಣ ಕುಳಿತುಕೊಳ್ಳಿ ಎನ್ನುವುದಾದರೆ, ಎದ್ದು ಕುಳಿತುಕೊಳ್ಳುವುದಕ್ಕೆ ನಾವು ಏಕೆ ಬೇಕು? ಹಾಗಿದ್ದರೆ ನಮಗೆ ಅವಕಾಶವನ್ನೇ ಕೊಡಬೇಡಿ.

ಉಪಾಧ್ಯಕ್ಷರು: ನೀವಿಬ್ಬರೂ ಒಟ್ಟಿಗೆ ಎದ್ದು ನಿಂತರೆ ಏನು ಮಾಡಬೇಕು?

ಶ್ರೀ ಎನ್. ಸಂಪಂಗಿ: ನೀವು ಒಬ್ಬರ ಹೆಸರು ಹೇಳಿ. ಅವರಿಗೆ ಮಾತನಡಲು ಹೇಳಿ. ನಾವು ಮಾತನಾಡಿದರೆ, ನಮ್ಮ ವಿಚಾರವೇನಿದೆ ಅದನ್ನು ಪೂರ್ತಿಯಾಗಿ ಹೇಳಿ ಅರ್ಥ ಮಾಡಿಸುವುದಕ್ಕೆ ನೀವು ಅವಕಾಶ ಕೊಡಿ.

ಉಪಾಧ್ಯಕ್ಷರು: ಈಗ clarificationಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ: ಶ್ರೀ ಖಾದರ್‌ರವರದ್ದು ಆದ ಮೇಲೆ ಶ್ರೀ ಸಂಪಂಗಿಯವರಿಗೆ clarification ಕೇಳಲು ಅವಕಾಶ ಮಾಡಿಕೊಡಿ.

ಶ್ರೀ ಯು.ಟಿ. ಖಾದರ್: ಇನ್ನೂ ಕೂಡ ಬೆಂಬಲ ಬೆಲೆ ಘೋಷಣೆಯಾಗಿಲ್ಲ. ರೈತರು ಬಹಳ ಆತಂಕದ ಪರಿಸ್ಥಿತಿಯಲ್ಲಿದ್ದಾರೆ. ನಮ್ಮ ಕಳಕಳಿಯ ವಿನಂತಿ ಎಂದರೆ, ಯಾವಾಗಲೂ ಬೆಂಬಲ ಬೆಲೆ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಘೋಷಣೆಯಾಗಬೇಕು. ಈಗ ಘೋಷಣೆ ಮಾಡಿದರೂ ಅದರಿಂದ ಸಣ್ಣ ರೈತರಿಗೆ ಯಾವುದೇ ಪ್ರಯೋಜನವಿಲ್ಲ. ಅದು ಏನಿದ್ದರೂ ಶ್ರೀಮಂತ ರೈತರಿಗೆ ಮತ್ತು ಕ್ಯಾಂಪ್ಕೋ ಕಂಪನಿಗೆ ಲಾಭವಾಗುವಂಥ ವ್ಯವಸ್ಥೆಯಾಗುತ್ತದೆ. ಏಕೆಂದರೆ, ಅವರು stock ಇಟ್ಟಿದ್ದಾರೆ. ಆದರೆ ಸಣ್ಣಸಣ್ಣ ರೈತರು ಈಗಾಗಲೇ sale ಮಾಡಿ ಆಗಿದೆ. ಆದ್ದರಿಂದ ಮುಂದಿನ ವರ್ಷಗಳಲ್ಲಿ ಇದನ್ನು ಸರಿಪಡಿಸಬೇಕು.

ಗ್ರಾಮೀಣ ಜನರ ಬಹುಮುಖ್ಯ ಸಮಸ್ಯೆಯಾದ 94-ಸಿ ಬಗ್ಗೆ ಮತ್ತೊಂದು ಅವಕಾಶ ಕೊಡಬೇಕೆಂದು ನಾವು ಕೇಳಿದ್ದೆವು. ಜನಸಾಮಾನ್ಯರ ಬಗ್ಗೆ ಒಂದೂ ಕೂಡ ಆದೇಶವಾಗಿಲ್ಲ. 94-ಸಿ ಬಗ್ಗೆ ಚಕಾರವೆತ್ತಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಬಸ್ಸಿನ ವ್ಯವಸ್ಥೆಯಲ್ಲಿಯೂ ಕೂಡ ಬಹಳಷ್ಟು ಗಂಭೀರವಾದ ಪರಿಸ್ಥಿತಿ ಇದೆ. ಎಲ್ಲಿಗೆ ಈಗಾಗಲೇ ಬಸ್ಸುಗಳಿವೆಯೋ ಅಲ್ಲಿಗೆ ಮತ್ತೆ K.S.R.T.C. ಬಸ್ಸುಗಳನ್ನು ಹಾಕುತಿದ್ದಾರೆ. ಯಾವ ಗ್ರಾಮೀಣ ಪ್ರದೇಶಗಳಿಗೆ ಬಸ್ಸು ಇಲ್ಲ, ಅಲ್ಲಿಗೆ ಬಸ್ಸುಗಳನ್ನೇ ಹಾಕುತ್ತಿಲ್ಲ. ಎಲ್ಲಿ ಈಗಾಗಲೇ ಬಸ್ಸಿನ ಸೌಕರ್ಯವಿದೆಯೋ ಅಲ್ಲಿ ಪುನಃ ಬಸ್ಸಿನ ಅಗತ್ಯವಿಲ್ಲ. ಯಾವ ಗ್ರಾಮಗಳಿಗೆ ಬಸ್ಸುಗಳಿಲ್ಲ ಅಲ್ಲಿಗೆ ಸರ್ಕಾರಿ ಬಸ್ಸುಗಳನ್ನು ಹಾಕುವಂಥ ವ್ಯವಸ್ಥೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಸುವರ್ನ ಗ್ರಾಮ ಯೋಜನೆಯ ಮೇಲುಸ್ತುವಾರಿಯನ್ನು

ಶಾಸಕರಿಗೆ ಕೊಡಿ ಎಂದು ನಾವು ಹೇಳಿದ್ದೇವೆ. ಏಕೆಂದರೆ ಈಗ ಅದು ಸರಿಯಾಗಿ implement ಆಗುತ್ತಿಲ್ಲ. ಉದಾಹರಣೆ ಕೊಡುವುದಾದರೆ, ಸುವರ್ಣ ಗ್ರಾಮ ಯೋಜನೆಯಲ್ಲಿ ನೂರು ಜನರನ್ನು ಡ್ರೈವಿಂಗ್ ಕಲಿಯಲು ಕಳುಹಿಸಿ ಲೈಸೆನ್ಸ್ ಕೊಡುತ್ತಾರೆ. ಇವತ್ತು ನಮ್ಮ ಕ್ಷೇತ್ರದಲ್ಲಿ ನೂರು ಜನರಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಆದರೆ ಅವರಿಗೆ ಖಂಡಿತವಾಗಿ ಕಾರ್ ಡ್ರೈವಿಂಗ್ ಮಾಡಲು ಬರುವುದಿಲ್ಲ.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಂಥ ಸಂದರ್ಭದಲ್ಲಿ, ಎಲ್ಲಾದರೂ ಕೋಮು ಗಲಭೆಗಳಾದರೆ, ಇನ್ನಿತರ ಸಮಸ್ಯೆಗಳಾದರೆ ಸಂಬಂಧಪಟ್ಟ ಜಿಲ್ಲಾ ಎಸ್.ಪಿ.ಯವರನ್ನು ಅದಕ್ಕೆ ಹೊಣೆಗಾರರನ್ನಾಗಿ ಮಾಡಲಾಗುವುದು ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು ಪೋಲೀಸ್ ವರಿಷ್ಠಾಧಿಕಾರಿಯವರಿಗೆ ಏನು ಅಧಿಕಾರವನ್ನು ಕೊಟ್ಟಿದ್ದಾರೆ ಎನ್ನುವುದನ್ನು ನೋಡಬೇಕು. ಒಬ್ಬ ಎಸ್.ಐ. ಅನ್ನು ಟ್ರಾನ್ಸ್‌ಫರ್ ಮಾಡಬೇಕಾದರೆ ಅದಕ್ಕೆ ಬೆಂಗಳೂರಿನಿಂದ ಆರ್ಡರ್ ಬರಬೇಕಾಗುತ್ತದೆ. ಎಸ್.ಪಿ.ಗೆ ಯಾವುದೇ ಅಧಿಕಾರವಿಲ್ಲ. ಎಸ್.ಪಿ.ಯವರು ಕೇಸ್ ಹಾಕಿದರೆ, ಈ ಸರ್ಕಾರದವರು ಆ ಕೇಸನ್ನು ಹಿಂದಕ್ಕೆ ಪಡೆಯುತ್ತಾರೆ. ಆದ್ದರಿಂದ ಕೆಲವೊಂದು ನೀತಿ ನಿಯಮಗಳನ್ನು ಮಾಡಿಕೊಂಡು ಪೊಲೀಸ್ ಇಲಾಖೆಗೆ ವಿಶೇಷವಾದ ಅಧಿಕಾರವನ್ನು ಕೊಡಬೇಕು. ರಾಜಕೀಯವಾಗಿ ಯಾವುದೇ ಒಂದು ಹಸ್ತಕ್ಷೇಪವನ್ನು ಮಾಡಬಾರದು. ಪೊಲೀಸಿನವರು ಕೇಸ್ ಹಾಕುವುದು, ಸರ್ಕಾರ ಆ ಕೇಸನ್ನು ತೆಗೆಯುವುದಾದರೆ ಇದು ಪೊಲೀಸ್ ಇಲಾಖೆಯನ್ನು demoralize ಮಾಡಿದ ಹಾಗಾಗುತ್ತದೆ ಎಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆಯೂ ಮಾತನಾಡುತ್ತೇನೆ. ಈ ವರ್ಷ ಅತಿವೃಷ್ಟಿಯಿಂದಾಗಿ ಮಲೆನಾಡು ಪ್ರದೇಶದ ರಸ್ತೆಗಳು ಎಷ್ಟು ಹಾಳಾಗಿವೆ ಎನ್ನುವುದೂ ತಮಗೆ ಗೊತ್ತು. ಕಾಫಿ ಬೆಳೆ ಎಷ್ಟೊಂದು ನಷ್ಟವಾಗಿದೆ ಎನ್ನುವುದೂ ಗೊತ್ತು. 2007–08ರಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ಕಾಫಿ ಬೆಳೆ ನಷ್ಟವಾಗಿದೆ ಎಂದು ಹೇಳಿ ಅಂದಿನ ಸರ್ಕಾರದ ಆದೇಶದ ಮೇರೆಗೆ ಅಲ್ಲಿಗೆ

ಅಧಿಕಾರಿಗಳ ತಂಡ ಹೋಗಿ ಸುಮಾರು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದಂಥ ಸುಮಾರು 6 ಕೋಟಿ 43 ಲಕ್ಷ ರೂಪಾಯಿಗಳಷ್ಟು ಅಂದಾಜು ಕಾಫಿ ಬೆಳೆ ನಷ್ಟವಾಗಿದೆ. ಅದನ್ನು ಸರ್ಕಾರ ಭರಿಸಬೇಕು ಎಂದು ಅಧಿಕಾರಿಗಳ ತಂಡ ಹೇಳಿತ್ತು. ಆದರೆ ಸರ್ಕಾರ ಈವರೆಗೆ ಆ ಹಣವನ್ನು ಬಿಡುಗಡೆ ಮಾಡಿಲ್ಲ. ಅದನ್ನು ಸರ್ಕಾರ ಬಿಡುಗಡೆ ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ, ನನ್ನ ಭಾಗದಲ್ಲಿ ಆಲೂಗಡ್ಡೆ ಬೆಳೆ ನಷ್ಟವಾಗಿದೆ. ಒಂದು ಕಡೆ ಅತಿವೃಷ್ಟಿಯಿದ್ದರೆ, ನಮ್ಮದು ಅನಾವೃಷ್ಟಿಯಾಗಿದೆ. ನಮ್ಮ ನಾಯಕರಾದ, ಹಾಲಿ ಲೋಕಸಭಾ ಸದಸ್ಯರಾದ, ಮಾಜಿ ಪ್ರಧಾನಿಗಳೂ ಕೂಡ ಒತ್ತಾಯ ಮಾಡಿದ್ದಾರೆ. ಆಲೂಗಡ್ಡೆಗೆ ಬೆಂಬಲ ಬೆಲೆ ಕೊಡಿ ಎಂದು ಹೇಳಿದ್ದಾರೆ. ಆದರೆ ಸರ್ಕಾರ ಈ ಕಡೆಗೆ ಕಿವಿಗೊಡುತ್ತಿಲ್ಲ. ಇವತ್ತು ನೂರಾರು ಕೋಟಿ ರೂಪಾಯಿನ ಆಲೂಗಡ್ಡೆ ಬೆಳೆ ನಷ್ಟವಾಗಿದ್ದು, ಒಂದೇ ಒಂದು ರೂಪಾಯಿಯ ಬೆಳೆಯನ್ನೂ ತೆಗೆಯಲು ಸಾಧ್ಯವಾಗಿಲ್ಲ. ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ. ಅದು ಆ ಕಡೆಗೆ ಗಮನ ಹರಿಸಬೇಕು. ಬೆಂಬಲ ಬೆಲೆಯನ್ನು ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ.

ಎಲ್ಲಕ್ಕಿಂತ ಮೂಲವಾಗಿ ನಮ್ಮ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗದಿರುವುದು ಜನಸಂಖ್ಯೆಯನ್ನು ಆಧಾರವಾಗಿ ತೆಗೆದು ಕೊಂಡಿರತಕ್ಕಂಥಾದ್ದೇ ಮೂಲವಾಗಿದೆ. ಆದ್ದರಿಂದ ಭೌಗೋಳಿಕ ವಿಸ್ತೀರ್ಣವನ್ನು ಆಧಾರವಾಗಿ ತೆಗೆದುಕೊಳ್ಳಬೇಕು. ಜನಸಂಖ್ಯೆಯನ್ನು ಆಧಾರವಾಗಿ ತೆಗೆದುಕೊಂಡು ಯಾವುದೇ ಸವಲತ್ತನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಅದನ್ನೂ ಕೂಡ ಸರ್ಕಾರ ಪರಿಗಣಿಸಬೇಕು.

ನಮ್ಮಲ್ಲಿ ರಸ್ತೆಗಳು ಬಹಳಷ್ಟು ಹಾಳಾಗಿದ್ದು ಅದಕ್ಕೆ ಎಷ್ಟು ಅನುದಾನ ಕೊಟ್ಟರೂ ಸಾಲದು. ಇನ್ನೂ ಕೂಡ ಹಣ ಬಿಡುಗಡೆಯಾಗಿಲ್ಲ. ನೂರಾರು ಟಿ.ಎಂ.ಸಿ. ನೀರು ಶೇಖರಿಸತಕ್ಕಂಥ ಡ್ಯಾಂಗಳು ತುಂಬುತ್ತವೆ. ಆದರೆ ನಮ್ಮಲ್ಲಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಹೆಚ್ಚು ಗಮನವನ್ನು ಕೊಡಬೇಕು ಎಂದು ಹೇಳುತ್ತಿದ್ದೇನೆ.

ಮಾನ್ಯ ಮುಖ್ಯಮಂತ್ರಿಗಳು ಬೆಳಗ್ಗೆ ಮಾತನಾಡುವಾಗ, ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಮನೆಗಳಿಗೆ ನಾವು ಭಾಗ್ಯಜ್ಯೋತಿ ಯೋಜನೆಯನ್ನು ಕೊಡುತ್ತೇವೆ ಎಂದು ಹೇಳಿದರು. ಅದು ಯಾವಾಗ ಪ್ರಾರಂಭವಾಗಿದ್ದು ಎನ್ನುವುದನ್ನು ಅವರು ಹೇಳಬೇಕು. ಈಗ ಅವರು ಹೇಳುತ್ತಿರತಕ್ಕಂಥದ್ದು, ರಾಜೀವ್‌ಗಾಂಧಿ ನಿಗಮದಿಂದ ಬಂದಂಥ ಹಣದಲ್ಲಿ, ಮಾನ್ಯ ರೇವಣ್ಣನವರು ವಿದ್ಯುತ್ ಸಚಿವರಾಗಿದ್ದಾಗ ಮಾಡಿದಂಥ ಕೆಲಸವಿದು. ಆವತ್ತು ಅವರು ಇಚ್ಛಾಶಕ್ತಿ ತೋರಿದ್ದರಿಂದ ಇವತ್ತು ಅದು ಆಗಿದೆ. ಅದರ ಅಂಕಿಅಂಶವನ್ನು ತಾವು ಕೊಡುತ್ತಿದ್ದೀರಿ ಎಂದು ಅನ್ನಿಸುತ್ತದೆ. ಸುಮಾರು 1,200 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಾಡಿದಂಥ ಕೆಲಸ ಅದು.

ಆನೆಗಳ ಹಾವಳಿ ಬಗ್ಗೆ ನನಗನ್ನಿಸತಕ್ಕಂಥದ್ದು ಏನೆಂದರೆ, ಸರ್ಕಾರ, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಅಸಹಾಯಕರಾಗಿದ್ದಾರೇನೋ ಎಂದು ಅನ್ನಿಸುತ್ತಿದೆ. ಅಥವಾ ನಾವು ಇಚ್ಛಾಶಕ್ತಿಯನ್ನು ತೋರುತ್ತಿಲ್ಲ. ನಮ್ಮ ಭಾಗದಲ್ಲಿ ಯಾರಾದರೂ ಸತ್ತರೆ ಅಥವಾ ಗಾಯಗೊಂಡರೆ ಅಲ್ಲಿಗೆ ಹೋಗುವುದಕ್ಕೆ ನಮಗೆ ಭಯವಾಗುತ್ತದೆ. ಏಕೆಂದರೆ, ಜನ ಎಷ್ಟೊಂದು ಕೋಪೋದ್ರಿಕ್ತರಾಗಿದ್ದಾರೆ. ತಾಳ್ಮೆಗೆಟ್ಟಿದ್ದಾರೆ ಎಂದರೆ ಯಾವಾಗ ಬೇಕಾದರೂ ನಮ್ಮ ಮೇಲೆ ಹಲ್ಲೆ ಮಾಡಬಹುದು ಎನ್ನುವಂತಹ ಪರಿಸ್ಥಿತಿ ಅಲ್ಲಿದೆ. ಕಳೆದ ಸಾಲಿನ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆನೆಧಾಮವನ್ನು ನಾವು ಸ್ಥಾಪಿಸುತ್ತೇವೆ. ಆನೆಗಳನ್ನು ಹಿಡಿಯುವುದಕ್ಕೆ ನಾವು ಬೇರೆಬೇರೆ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಹೇಳಿದರು. ಇಲ್ಲಿಯವರೆಗೆ ಆ ಇಲಾಖೆಯಿಂದ ಒಂದೇ ಒಂದು ಪ್ರಯತ್ನ ನಡೆದಿಲ್ಲ. ಆನೆ ಹಾವಳಿಯಿಂದ ಉಂಟಾಗುವ ನಷ್ಟಕ್ಕೆ ಪರಿಹಾರವನ್ನು ದುಪ್ಪಟ್ಟು ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಆನೆಗಳನ್ನು ಸ್ಥಳಾಂತರ ಮಾಡುವುದಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ? ಈ ಸಭೆಯ ಮೂಲಕ ನಾನು ತಮಗೆ ಹೇಳುತ್ತಿದ್ದೇನೆ. ಯಾವ ಹಂತದಲ್ಲಿ ಬೇಕಾದರೂ ಸ್ಥಳೀಯ ಜನರು ಜನಪ್ರತಿನಿಧಿಗಳ ಮೇಲೆ, ಅಧಿಕಾರಿಗಳ ಮೇಲೆ ಹಲ್ಲೆ ಮಾಡಬಹುದು, ಯಾವ ಮಟ್ಟಕ್ಕೆ ಬೇಕಾದರೂ ಹೋಗಬಹುದು. ಇದರಿಂದ ಏನಾದರೂ ಹೆಚ್ಚು ಕಡಿಮೆಯಾದರೆ ಸರ್ಕಾರವೇ ಅದರ ಜವಾಬ್ದಾರಿಯನ್ನು

ಹೊರಬೇಕಾಗುತ್ತದೆ ಎಂದು ನಾನು ಹೇಳುತ್ತಿದ್ದೇನೆ. ನಮಗೂ ಕೂಡ ತಾಳ್ಮೆಗೆಟ್ಟುಹೋಗಿದೆ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಹೇಳುತ್ತಿದ್ದೇನೆ. ಕೃಷಿ ನೀತಿ ಮತ್ತು ಗ್ರಾಮೀಣಾಭಿವೃದ್ಧಿ ನೀತಿಯನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮೊದಲಿನಿಂದಲೂ ಸರಿಯಾದ ರೀತಿ ಪಾಲಿಸಿಕೊಂಡು ಬರದೇ ಇರುವುದೇ ಇವತ್ತಿನ ಸಮಸ್ಯೆಗಳಿಗೆ ಮೂಲವಾಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಮಲೆನಾಡು ಅಭಿವೃದ್ಧಿ ಮಂಡಳಿಯಂತೆಯೇ ಪಶ್ಚಿಮ ಘಟ್ಟ ಅಭಿವೃದ್ಧಿ ಮಂಡಳಿಯನ್ನು ನಾವು ಸ್ಥಾಪಿಸಿದ್ದೇವೆ ಎಂದು ಬಜೆಟ್‌ನಲ್ಲಿ ಹೇಳಿದಿರಿ. ಅದು ಏನಾಗಿದೆ ಎನ್ನುವ ಬಗ್ಗೆ ಒಂದೇ ಒಂದು ಮಾತಿಲ್ಲ. ಪಶ್ಚಿಮ ಘಟ್ಟ ಮಂಡಳಿ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು. ಆ ನಿಟ್ಟಿನಲ್ಲಿ, ನಮ್ಮ ಸಮಸ್ಯೆಯನ್ನು ಬಗೆಹರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಬಿ.ಪಿ.ಎಲ್. ಕಾರ್ಡ್‌ಗಳನ್ನು ಯಾರಾದರೂ ಹೆಚ್ಚಿಗೆ ತೆಗೆದುಕೊಂಡಿದ್ದರೆ, ಅನರ್ಹರು ತೆಗೆದುಕೊಂಡಿದ್ದರೆ, ಅವರ ಮೇಲೆ criminal case ಹಾಕುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ನಮ್ಮ ಭಾಗದಲ್ಲಿ ಸುಮಾರು 13 ಸಾವಿರ ಕಾರ್ಡ್‌ಗಳನ್ನು ನೆಮ್ಮದಿ ಕೇಂದ್ರಗಳಲ್ಲಿ ಕೊಟ್ಟರು. ನೆಮ್ಮದಿ ಕೇಂದ್ರಗಳಲ್ಲಿ ವಿತರಣೆಯಾದಂಥ ಕಾರ್ಡ್‌ಗಳನ್ನು issue ಮಾಡಿದಂಥವರು ಸರ್ಕಾರದವರೇ.

6.00 P.M.

Affidavit ಅನ್ನು ಕೇಳಿ ಪಡೆದು ನಂತರ ಪಡಿತರ ಚೀಟಿಯನ್ನು ವಿತರಣೆ ಮಾಡುವಂಥ ಕೆಲಸವನ್ನು ಸರ್ಕಾರ ಮಾಡಿದೆ. ಹಾಗೆ ವಿತರಿಸಿದಂಥ ಕಾರ್ಡುಗಳಿಗೆ ಅಕ್ಕಿ, ಗೋಧಿ, ಸೀಮೆಎಣ್ಣೆಯನ್ನು ಕೊಡುವುದನ್ನು ನಿಲ್ಲಿಸಿದ್ದಾರೆ. ಇಡೀ ರಾಜ್ಯದಲ್ಲಿರುವ ಹಳ್ಳಿಗಳಲ್ಲಿ ಈ ರೀತಿಯ ಪರಿಸ್ಥಿತಿ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರ ಪರವಾಗಿ ನಾವು ಈ ಮೂರು ದಿವಸ ಸದನವನ್ನು ನಡೆಸುತ್ತಿದ್ದೇವೆ. ಆದರೆ ಇವತ್ತು ಅಲ್ಲಿ ರೈತರು ಉಪವಾಸ ಬೀಳುತ್ತಿದ್ದಾರೆ.

ಅವರಿಗೆ ಅಕ್ಕಿ ಕೊಡುವುದಕ್ಕೆ ಏಕೆ ಸಾಧ್ಯವಾಗಿಲ್ಲ? ಇವತ್ತಿನವರೆಗೂ ವಿತರಣೆಯಾಗಿಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು 13,000 ಪಡಿತರ ಚೀಟಿಗಳು ಕೊಡುವುದಕ್ಕೆ ಆಗದೇ, ಹಳೆಯ ಕಾರ್ಡ್‌ಗಳಿರುವಂಥವರಿಗೆ ಅಕ್ಕಿ ಬಂದಿದ್ದರೂ ಕೂಡ, ನೆಮ್ಮದಿ ಕಾರ್ಡ್‌ಗಳು ಇರುವವರಿಗೆ ಇದು ಸಿಗದ ಕಾರಣ ಇವರು ಗಲಾಟೆ ಮಾಡುತ್ತಿದ್ದಾರೆ. ಇಲ್ಲಿ ಹಳೆಯ ಕಾರ್ಡ್‌ಗಳಿರುವವರಿಗೆ ಕೊಡದೇ ನಿಲ್ಲಿಸಿದ್ದಾರೆ. ಅವರಿಗೆ ಅಕ್ಕಿಯನ್ನು ಯಾವಾಗ ವಿತರಣೆ ಮಾಡುತ್ತೀರೆಂಬುದನ್ನು ಹೇಳಿ. ಬಡವರಿಗೆ ಅಕ್ಕಿಯನ್ನು ವಿತರಣೆ ಮಾಡುವ ನೆಮ್ಮದಿ ಕಾರ್ಡ್‌ಗಳಿಗೆ ಇನ್ನು ಎಷ್ಟು ದಿವಸಗಳವರೆಗೆ ಅಕ್ಕಿಯನ್ನು ವಿತರಣೆ ಮಾಡುತ್ತಾರೆಂಬುದನ್ನು ತಿಳಿಸಬೇಕು. ಮಾನ್ಯ ಆಹಾರ ಮಂತ್ರಿಗಳು ಇಲ್ಲೇ ಇದ್ದಾರೆ. ನಮಗೆ ಅವರು ಉತ್ತರವನ್ನು ಕೊಡಬೇಕು. ಎರಡನೆಯದಾಗಿ ಕುಡಿಯುವ ನೀರಿನ ಸಮಸ್ಯೆ ಕರ್ನಾಟಕದಲ್ಲಿ ಎಲ್ಲಾ ಕಡೆಗಳಲ್ಲೂ ಫ್ಲೋರೈಡ್ ಅತಿ ಹೆಚ್ಚಾಗಿರುವಂಥ ಹಳ್ಳಿಗಳು ಇವೆ. ಅದರಲ್ಲೂ ವಿಶೇಷವಾಗಿ ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಹೆಚ್ಚಿಗೆ ಫ್ಲೋರೈಡ್ ಇರುವ ನೀರು ನಮಗೆ ಸಿಕ್ಕಿರುವುದರಿಂದ ನಮ್ಮ ಭಾಗದಲ್ಲಿರುವಂಥ ಜನರೆಲ್ಲರೂ ಇವತ್ತು ಅಂಗವಿಕಲರಾಗುತ್ತಿದ್ದಾರೆ. ಇವರು ಫ್ಲೋರೈಡ್ ಇರುವ ನೀರನ್ನು ಕುಡಿದು ಫ್ಲೋರೊಸಿಸ್ ಖಾಯಿಲೆಗೆ ತುತ್ತಾಗಿ ಅಂಗವಿಕಲರಾಗುತ್ತಿದ್ದಾರೆ. ಇವತ್ತು ಅಂತರ್ಜಲ ಕುಸಿಯಲು ಕಾರಣ ಏನೆಂದರೆ ಮರಳು ಸಾಗಾಣಿಕೆ. ಇದಕ್ಕೆ ನಮ್ಮ ಜಿಲ್ಲಾ ಮಂತ್ರಿಗಳ ಸಮ್ಮುಖದಲ್ಲಿ ಒಂದು ದೊಡ್ಡ ಕಮಿಟಿಯನ್ನು ಮಾಡಿ ಇದನ್ನು ನಾವು ನಿಲ್ಲಿಸಿದ್ದೇವೆ. ಈಗ ಮೂರ್‍ನಾಲ್ಕು ದಿವಸಗಳ ಹಿಂದೆ ಎಲ್ಲರೂ ಶಾಮೀಲಾಗಿ ಮರಳು ದಂಧೆಯನ್ನು ಮಾಡುವುದಕ್ಕೆ ಪ್ರಾರಂಭಿಸಿದ್ದಾರೆ. ಇದೇ ಜಿಲ್ಲಾ ಸಚಿವರ ಸಮ್ಮುಖದಲ್ಲಿ ಇದನ್ನು ನಿಲ್ಲಿಸಿ, ಸುಮಾರು ಮೂರು ತಿಂಗಳು ಕಾಲ ಮರಳು ಸಾಗಿಸುವ ದಂಧೆಯನ್ನು ಕಂಟ್ರೋಲ್ ಮಾಡಿದಂಥ ಜಿಲ್ಲಾ ಸಚಿವರಿಗೂ ಬಾಯಿ ಮುಚ್ಚಿಸಿ, ಈಗ ಮೂರು ದಿವಸಗಳಿಂದ ಮರಳನ್ನು ಸಾಗಿಸುತ್ತಿದ್ದಾರೆ. ಇವತ್ತು ಅಂತರ್ಜಲ ಕುಸಿಯುತ್ತಿರುವುದಕ್ಕೆ ಕಾರಣ ಮರಳು ದಂಧೆಯಾಗುತ್ತಿರುವಂಥದ್ದು. ಇಲ್ಲಿ ಫ್ಲೋರೋಸಿಸ್ ಖಾಯಿಲೆಗೆ ತುತ್ತಾಗುತ್ತಿರುವುದಕ್ಕೆ ಕಾರಣ ಫ್ಲೋರೈಡ್ ನೀರು ಎಂದು ಗೊತ್ತಿದ್ದು, ನಮ್ಮ ಭಾಗದಲ್ಲಿ ಏಕೆ ಮರಳನ್ನು ಸಾಗಿಸುವುದಕ್ಕೆ

permission ಕೊಟ್ಟಿದ್ದಾರೆ? ಅದನ್ನು ನಿಷೇಧ ಮಾಡಬೇಕು. ಇದರ ಬಗ್ಗೆ ಸರ್ಕಾರ ಹೇಳಬೇಕಾಗುತ್ತದೆ. ಆ ಭಾಗದಲ್ಲಿ ಇವತ್ತು ಬರ ಪರಿಸ್ಥಿತಿ ಇದ್ದು, ಇದನ್ನು ಬರ ಪ್ರದೇಶವೆಂದು ಘೋಷಣೆ ಮಾಡಿದಂಥ ಕಂದಾಯ ಸಚಿವರು ಸದನದಲ್ಲಿದ್ದಾರೆ. ಒಂದು ತಿಂಗಳಾಗಿದೆ...

ಉಪಾಧ್ಯಕ್ಷರು: ನೀವು clarification ಕೇಳಿ.

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ನಾನು ಗ್ರಾಮೀಣ ವಿಚಾರವಾಗಿಯೇ ಮಾತನಾಡುತ್ತಿದ್ದೇನೆ. ಮಾನ್ಯ ಕಂದಾಯ ಸಚಿವರು ಒಂದು ತಿಂಗಳ ಹಿಂದೆ ಬರ ಪ್ರದೇಶವೆಂದು ಘೋಷಣೆ ಮಾಡಿ, ಇನ್ನು ಬರ ಕಾಮಗಾರಿಗಳನ್ನು ಹಾಕಿಕೊಂಡಿಲ್ಲ.

ಉಪಾಧ್ಯಕ್ಷರು: ಇದು clarification ಆಗುವುದಿಲ್ಲ. ನೀವು clarification ಕೇಳಿ. ನೀವು ಏನು ಹೇಳಬೇಕೋ ಅದನ್ನು ಹೇಳಿ ಆಗಿದೆ.

ಶ್ರೀ ಎನ್. ಸಂಪಂಗಿ: ನಾನು ಈಗ ಅದನ್ನೇ ಕೇಳುತ್ತಿದ್ದೇನೆ. ಬರ ಪ್ರದೇಶವೆಂದು ಘೋಷಣೆ ಮಾಡಿದ ಮೇಲೆ ಬರ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕಾಗಿತ್ತು. ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರೆಂಬುದನ್ನು ತಿಳಿಸಬೇಕು.

ಉಪಾಧ್ಯಕ್ಷರು: ಇದು clarification ಆಗುವುದಿಲ್ಲ.

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ನಾವು ಬರ ವಿಚಾರವಾಗಿ ಕೇಳಬಾರದೆ?

ಉಪಾಧ್ಯಕ್ಷರು: ನೀವು clarification ಕೇಳಿ.

ಶ್ರೀ ಎನ್. ಸಂಪಂಗಿ: ನಾವು ಅದನ್ನೇ ಕೇಳುತ್ತಿದ್ದೇವೆ. ಅವರು ಬರ ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಅದಕ್ಕೆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತಾರೆಂದು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು: ಈಗ ಕೊಟ್ಟ ಉತ್ತರದಲ್ಲಿ ಏನು ವಿಷಯವನ್ನು ಕೇಳಬೇಕೋ ಕೇಳಿ. ಅದು ಬಿಟ್ಟು ಭಾಷಣಕ್ಕೆ ಹೋದರೆ ಹೇಗೆ?

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎನ್. ಸಂಪಂಗಿ: ನಾನು ಅದನ್ನೇ ಕೇಳುತ್ತಿದ್ದೇನೆ. ಈಗ ಕಂದಾಯ ಸಚಿವರು ಇಲ್ಲೇ ಇದ್ದಾರೆ. ಅವರು ಬರ ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಇವತ್ತಿನವರೆಗೂ ಹಣವನ್ನು ಬಿಡುಗಡೆ ಮಾಡಿಲ್ಲ. ಸರ್ಕಾರದಲ್ಲಿ ಹಣ ಇಲ್ಲವೇ? ಅಥವಾ ಸರ್ಕಾರದಲ್ಲಿ ಹಣದ ಕೊರತೆಯಾಗಿ ಬರ ಪ್ರದೇಶವೆಂದು ಘೋಷಣೆ ಮಾಡಿ ಕಾಮಗಾರಿಗಳಿಗೆ ಕೊಡಲು ಸಾಧ್ಯವಾಗಿಲ್ಲವೇ? ಇವತ್ತು NREG ಕಾರ್ಯಕ್ರಮ ಇದೆ. ಮಾನ್ಯ ಸಚಿವರು ಇಲ್ಲೇ ಇದ್ದಾರೆ. ಕೇಂದ್ರ ಸರ್ಕಾರದ ಉದ್ಯೋಗ ಖಾತರಿ ಯೋಜನೆ ಇದೆ. ಇದಕ್ಕೆ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಿದೆ. ಆ ಹಣ ಕೂಡ ನಮ್ಮ ಭಾಗಕ್ಕೆ ಸರಿಯಾದ ರೀತಿಯಲ್ಲಿ ಬಿಡುಗಡೆಯಾಗುತ್ತಿಲ್ಲ. ಇವತ್ತು ನಾವು ಸುಮಾರು ಕೆಲಸಗಳನ್ನು ಮಾಡುತ್ತಿದ್ದೇವೆ. ಆದರೆ ಸರಿಯಾದ ರೀತಿಯಲ್ಲಿ ಹಣ ಬಿಡುಗಡೆ ಆಗುತ್ತಿಲ್ಲ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ನೂರು ದಿವಸಗಳ ಕೆಲಸವನ್ನು ಕೊಡುವಂಥದ್ದು ಏನು ಇದೆ. ಅದನ್ನು 150 ದಿನಗಳಿಗೆ ಹೆಚ್ಚು ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಈ ಸದನದ ಮೂಲಕ ಮನವಿ ಹೋಗಬೇಕು. ನಾನು ಇದನ್ನು ಕೇಳುತ್ತಿದ್ದೇನೆ. ಇವತ್ತು ನೂರು ದಿವಸಗಳ ಕಾರ್ಯಕ್ರಮಗಳು ಏನು ಇದೆ. ಅದು ಒಳ್ಳೆಯದು ಇರಬಹುದು. ಆದರೆ ನಮ್ಮ ಭಾಗದಲ್ಲಿ ಸರಿಯಾದ ರೀತಿಯಲ್ಲಿ ಆಹಾರ ಪೂರೈಕೆ ಆಗುತ್ತಿಲ್ಲ. ಅದರ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆದು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಶ್ರೀ ಕಿಮ್ಮನೆ ರತ್ನಾಕರ್‌ರವರೆ ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಎರಡು, ಮೂರು ಪ್ರಶ್ನೆಗಳಿಗೆ ಮಾತ್ರ clarification ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ

ಸಚಿವರು, ನೀರಾವರಿ ಸಚಿವರು ಇಲ್ಲೇ ಇದ್ದಾರೆ. ಒಂದು ನಾಗರಿಕ ಸರ್ಕಾರ ಒಳ್ಳೆಯ ಆಡಳಿತವನ್ನು ನೀಡಬೇಕೆಂದು ಇದ್ದರೆ ನಾವು ಏನನ್ನು ಮಾಡಬೇಕು? ಮೊದಲು ಖಾಲಿ ಇರುವಂಥ ಹುದ್ದೆಗಳನ್ನು ಭರ್ತಿ ಮಾಡಬೇಕು. ನಾನು ಗ್ರಾಮೀಣ ಸಚಿವರನ್ನು ಪ್ರಶ್ನೆ ಮಾಡುತ್ತೇನೆ. ನೀವು ಖಾಲಿ ಇದ್ದ ಹುದ್ದೆಗಳಿಗೆ ಏನು ಕ್ರಮಗಳನ್ನು ಕೈಗೊಂಡಿದ್ದೀರೆಂಬ ವಿಚಾರ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರುವಂಥ ಉತ್ತರದಲ್ಲಿ ಇದಕ್ಕೆ ಏನಾದರೂ ಇದೆಯಾ? ನಮ್ಮ ಗ್ರಾಮ ಪಂಚಾಯತಿಗಳಲ್ಲಿ ಎರಡು ದಿವಸಗಳು ಬ್ಯಾಗನ್ನು ಹಿಡಿದುಕೊಂಡು ಓಡಾಡುತ್ತಾರೆ. ಒಬ್ಬ ಇಂಜಿನಿಯರ್ ಇಲ್ಲ. ನೀವು ಯಾವುದೇ ಕೆಲಸ ಕೊಟ್ಟರೂ ಮಾಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಓದುವುದಕ್ಕೂ ಬರುವುದಿಲ್ಲ, ಬರೆಯುವುದಕ್ಕೂ ಬರುವುದಿಲ್ಲ. ನಿಮ್ಮ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಗಳಿಗೆ ರಸೀದಿ ಹರಿಯುವುದಕ್ಕೆ ಬರುವುದಿಲ್ಲ. ಈ ಸರ್ಕಾರದಲ್ಲಿ 1,35,000 ಹುದ್ದೆಗಳು ಖಾಲಿ ಇದೆ. ಇದನ್ನು ಇದೇ ಸರ್ಕಾರ ಮಾಡಿದ ತಪ್ಪು ಎಂದು ನಾನು ಹೇಳುವುದಿಲ್ಲ. ಹಿಂದಿನ ಎಲ್ಲಾ ಸರ್ಕಾರಗಳು ಮಾಡಿದ ತಪ್ಪುಗಳು ಇದರಲ್ಲಿ add ಆಗಿದೆ. ನಾವು ಪಾರದರ್ಶಕ ಆಡಳಿತವನ್ನು ಕೊಡುತ್ತೇವೆಂದು ಹೇಳಿದ ಮೇಲೆ ನಿಮ್ಮ ಉತ್ತರದಲ್ಲಿ ಇದು ಇರಬೇಕಾಗಿತ್ತು. ಇಲ್ಲಿ ಮೂರು ದಿವಸಗಳ ಕಾಲ ಗ್ರಾಮೀಣ ಪ್ರದೇಶಗಳ ಬಗ್ಗೆ ಚರ್ಚೆ ನಡೆಸುತ್ತಿರುವಂಥದ್ದು ಖಂಡಿತವಾಗಿಯೂ ಒಳ್ಳೆಯದಾಗಿದೆ. ಆದರೆ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಂಥ ಲಿಖಿತ ಹೇಳಿಕೆ ಏನು ಇದೆ. ಅದನ್ನು ವಿರೋಧ ಪಕ್ಷದವರು ಮಾಡಬೇಕಾದಂಥ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಯವರು ನಮ್ಮ ಮುಂದಿಟ್ಟಿದ್ದಾರೆ. ಅದರಲ್ಲಿ ವಾಸ್ತವವಾಗಿ ಯಾವುದೇ ಉತ್ತರಗಳು ಇಲ್ಲ. ಇಲ್ಲಿ ಬೆಟ್ಟವನ್ನು ಅಗೆದು ಇಲಿಯನ್ನಾದರೂ ಹಿಡಿದಿದ್ದರೆ ಪರವಾಗಿಲ್ಲ. ಇದರಲ್ಲಿ ಇಲಿಯನ್ನೂ ಹಿಡಿಯುವುದಕ್ಕೆ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಂಥ ಉತ್ತರ ಹೇಗಿತ್ತೆಂದರೆ ನಮ್ಮ ಮಲೆನಾಡಿನಲ್ಲಿ ಎರಡು ಗಾದೆಯನ್ನು ಹೇಳುತ್ತಾರೆ. ಅದು ಏನೆಂದರೆ, "ಊಟ ಆಯಿತಾ ಮಗನೆ?" ಎಂದು ಅಪ್ಪ ಕೇಳುತ್ತಾನೆ. ಅದಕ್ಕೆ ಮಗ "ಮುಂಡಾಸ

ಮೂರು ಮೊಳ ಇದೆಯೊ ಅಪ್ಪ" ಎಂದು ಹೇಳುತ್ತಾನೆ. ಅಂದರೆ ಪ್ರಶ್ನೆನೇ ಬೇರೆ, ಉತ್ತರವೇ ಬೇರೆ ಇದೆ. ಇಲ್ಲಿ ಪ್ರಸ್ತಾಪ ಮಾಡಿರುವಂಥ ಪ್ರಶ್ನೆಗೆ ಯಾವುದಕ್ಕೂ ಉತ್ತರವಿಲ್ಲ. ಇಲ್ಲಿ ಚರ್ಚೆನೇ ಬೇರೆ, ಉತ್ತರ ಯಾವುದಕ್ಕೂ ಇಲ್ಲ. ನಮ್ಮ ಎದುರಿಗೆ ಇರುವಂಥಾದ್ದು. ಇದು post-dated cheque. ಕೇರಳ ರಾಜ್ಯದಲ್ಲಿ ಒಂದು ಗ್ರಾಮ ಪಂಚಾಯತಿಗೆ 13 ಜನ ನೌಕರರು ಇದ್ದಾರೆ. ಇವತ್ತು ಕೇರಳ ರಾಜ್ಯದಲ್ಲಿ ಗ್ರಾಮ ಪಂಚಾಯತಿ success ಆಗಿದೆಯೆಂದರೆ ಇದೇ ಕಾರಣ. ಒಬ್ಬ ಇಂಜಿನಿಯರ್ ಒಂದು ಗ್ರಾಮ ಪಂಚಾಯತ್‌ಗೆ ಇದ್ದಾನೆ. ನಮ್ಮಲ್ಲಿ 5–10 ಗ್ರಾಮ ಪಂಚಾಯತ್‌ಗಳಿಗೂ ಒಬ್ಬ ಇಂಜಿನಿಯರ್ ಇಲ್ಲ. ನೀವು ಹೇಗೆ estimate ಮಾಡುತ್ತೀರಾ? ನೀವು ಹೇಗೆ ಅದನ್ನು execute ಮಾಡುತ್ತೀರಾ? ಇದರ ಜೊತೆಗೆ ಕುಡಿಯುವ ನೀರಿನ ವಿಚಾರವನ್ನು ಇದರಲ್ಲಿ ಚರ್ಚೆ ಮಾಡಿದ್ದೀರಿ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು "ಚೈನಾ ದೇಶಕ್ಕೆ ಹೋಗಿದ್ದೆ. ನನಗೆ ನಿದ್ರೆ ಬರಲಿಲ್ಲ. ಮನಸ್ಸಿಗೆ ಬೇಜಾರಾಯಿತು" ಎಂದು ಹೇಳಿದರು. ಸತ್ಯ, ಒಪ್ಪಿಕೊಳ್ಳೋಣ. ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಏಕೆಂದರೆ ನಮ್ಮನ್ನೂ ಕೂಡ ವಿದೇಶಕ್ಕೆ ಕಳುಹಿಸಿದ್ದೀರಿ. ಆದರೆ ನನಗೆ ನೋವಾಗುವಂಥದ್ದು ಏನೆಂದರೆ ಕುಡಿಯುವ ನೀರಿನ ಬಗ್ಗೆ ಇವರು ಕೊಟ್ಟಿರುವಂಥ ಉತ್ತರದಲ್ಲಿ ಏನಾದರೂ ಇದೆಯಾ? ನನ್ನ ಪ್ರಾರ್ಥನೆ ಏನೆಂದರೆ ನೀವು 400 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೆ ಎಂದು ಮಾಡಿ, ಪ್ರತಿ ಗ್ರಾಮೀಣ ಪ್ರದೇಶಗಳ ತಾಲ್ಲೂಕುಗಳಿಗೆ ಕೊಡಿ. ನೀವು ಪುರ ಪಂಚಾಯತ್, ಟೌನ್ ಪಂಚಾಯತ್, ನಗರ ಸಭೆ, ಕಾರ್ಪೋರೇಷನ್ ಕೈಬಿಟ್ಟು ಗ್ರಾಮೀಣ ಪ್ರದೇಶದ ಒಂದು ತಾಲ್ಲೂಕಿಗೆ ನೀವು ಎರಡು ಕೋಟಿ ರೂಪಾಯಿಗಳನ್ನು ಕೊಟ್ಟರೆ, ನಾವು 200 ಬಾವಿಗಳನ್ನು ತೆಗೆಯಬಹುದು. ನಾವು ಕುಡಿಯುವ ನೀರಿನ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಬಹುದು. ತಾವು ಭಯೋತ್ಪಾದನೆ ವಿರೋಧಿ ಅಭಿಯಾನ, ತೀರ್ಥ ಕೊಡುವುದು, ಲಾಡು ಕೊಡುವುದು, ಇವುಗಳನ್ನೆಲ್ಲಾ ಕೈಬಿಡಬೇಕು. ಇದರಿಂದ ಯಾರಿಗೂ ಬೇಜಾರಾಗುವುದಿಲ್ಲ. ಮತಕ್ಕೆ ಕೊಡುವಂಥದ್ದು ಇವು ಯಾವುದಕ್ಕೂ

ನಾವು ವಿರೋಧವಿಲ್ಲ. ನಾನು ಹೇಳುವಂಥದ್ದು ಈ ಹಣವನ್ನು ನೀರಾವರಿಗೆ ತೊಡಗಿಸಬೇಕಾಗಿತ್ತು. ನೀವು ಕೊಟ್ಟಿರುವ ಉತ್ತರದಲ್ಲಿ ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪವೇ ಇಲ್ಲ. ನಿಮ್ಮ ಉತ್ತರವನ್ನು ಓದಿದರೆ ಕುಡಿಯುವ ನೀರಿಗೆ ಉತ್ತರವಿಲ್ಲ. ಇವತ್ತು ಮಲೆನಾಡಿನ ಪ್ರದೇಶದ ಹೊಸನಗರ ಮಾನ್ಯ ಹಾಲಪ್ಪನವರ ಕ್ಷೇತ್ರ. ಇಲ್ಲಿ ಇಬ್ಬರು ಹೆಣ್ಣು ಮಕ್ಕಳು ತೇಲಿಕೊಂಡು ಹೋಗಿ ಬಿಟ್ಟರು. ಒಂದು ಮಗು ಸತ್ತು ಹೋಯಿತು. ಸತ್ತ ಹುಡುಗಿ ಮೂರನೇ ತರಗತಿಯವಳು, ಅದಕ್ಕೆ ಉತ್ತರವಿಲ್ಲ. ನೀವು ಯಾವುದನ್ನೇ ತೆಗೆದುಕೊಳ್ಳಿ. ಇಂಥ ಎಲ್ಲಾ ಸಮಸ್ಯೆಗಳನ್ನು ಇಟ್ಟುಕೊಂಡು ಇದು post-dated cheque. ನಮ್ಮಲ್ಲಿ ಹೆಣ್ಣು ಮಕ್ಕಳಿಗೆ ಒಂದು ಗಾದೆಯನ್ನು ಹೇಳುತ್ತಾರೆ. ಅದು "ನಮ್ಮ ಯಜಮಾನರಿಗೆ ಸಂಬಳವಿಲ್ಲ. ಸಾರಿಗೆ ಇಲ್ಲ. ಜಮೇದಾರ" ಎಂದು ಇದೆ. ಆ ರೀತಿ ಇದಕ್ಕೆ ಏನೂ ಇಲ್ಲ. ಇದು ವಾಸ್ತವದಲ್ಲಿ ಉತ್ತರವೇ ಅಲ್ಲ. ನಾನು ಹೇಳುವಂಥದ್ದು ನೀವು ಒಂದು ಕಾಂಕ್ರೀಟ್ programme ಹಾಕಬೇಕು. ನಾವು ಈ ರೀತಿ ಮಾಡುತ್ತೇವೆ. ನಮ್ಮ ಹತ್ತಿರ ಇಷ್ಟೆ ಹಣವಿದೆ. ಇಷ್ಟು ಹಣದಲ್ಲಿ ಈ ಕೆಲಸವನ್ನು ಮಾಡುತ್ತೇವೆಂದು ಹೇಳಬೇಕು. ನಾವು ಗ್ರಾಮೀಣ ಪ್ರದೇಶದ ಜನರಿಗೆ ಏನು ಹೇಳುವುದು? ಇದರಲ್ಲಿ ಯಾರಿಗೆ satisfaction ಇದೆ? ಇನ್ನು ಯೋಜನೆಗಳನ್ನು ಕಡಿಮೆ ಮಾಡಬೇಕೆಂದು ನಾನು ಎಲ್ಲಾ ಮಂತ್ರಿಗಳಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಯೋಜನೆಗಳು ಹೆಚ್ಚಾಗಿವೆ. ಆದರೆ ಅದರ ಅನುಷ್ಠಾನವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಹಾಗೂ ಎಲ್ಲಾ ಗೌರವಾನ್ವಿತ ಸಚಿವರುಗಳು, ನೀವೆಲ್ಲಾ ಅನುಭವಸ್ಥರಾಗಿದ್ದೀರಿ. ನಾನು ಈ ಸಭೆಗೆ ತುಂಬಾ ಕಿರಿಯವನಾಗಿದ್ದೇನೆ. ನಾನು ತಮ್ಮಲ್ಲಿ ಕೇಳಿಕೊಳ್ಳುವಂಥಾದ್ದು ಏನೆಂದರೆ ಯೋಜನೆಗಳು ಹೆಚ್ಚಿಗೆ ಬೇಡ. ಈಗ ಹಾಕುವಂಥ ಯೋಜನೆಗಳಿಗೆ ಒಂದು time-bound programme ಹಾಕಿಕೊಂಡು, ನಾವು ಈ ಕೆಲಸವನ್ನು ಮಾಡಿ ಮುಗಿಸುತ್ತೇವೆನ್ನುವಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಈ ರೀತಿ ಆಗದಿದ್ದರೆ ನಿಮಗೂ ಒಳ್ಳೆಯ ಹೆಸರು ಬರುವುದಿಲ್ಲ. ನಮಗೂ ಒಳ್ಳೆಯ ಹೆಸರು ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಹಳ interested ಆಗಿದ್ದಾರೆ.

ನನಗೆ ಬಹಳ ಸಂತೋಷವಾಗುತ್ತದೆ. ನಾನು ಸೈದ್ಧಾಂತಿಕವಾಗಿ ಸಂಪೂರ್ಣ ವಿರುದ್ಧವಿದ್ದೇನೆ. ನಾನು ಅವರಿಗೆ ಒಂದು ಪತ್ರವನ್ನು ಬರೆಯಬೇಕೆಂದು ಇದ್ದೇನೆ. ನೀವು ನಮ್ಮನ್ನು ವಿದೇಶ ಪ್ರವಾಸಕ್ಕೆ ಕಳುಹಿಸಿದ್ದೀರಿ. ತುಂಬಾ ಸಂತೋಷ. ಇದರಿಂದ ನಮಗೆ ಬಹಳ ಅನುಕೂಲವಾಗಿದೆ. ಆದರೆ ಅದಕ್ಕೆ ಪೂರ್ವಭಾವಿಯಾಗಿ ಒಂದು workshop ಅನ್ನು ಮಾಡಬೇಕಾಗಿತ್ತು. ನಮಗೆ ಆ ದೇಶದ population ಎಷ್ಟು ಇದೆ. literacy ಎಷ್ಟು ಇದೆ. ಆಡಳಿತ ವ್ಯವಸ್ಥೆ ಹೇಗಿದೆ. ನಮಗಿಂತ ಅವರು ಹೇಗೆ ಮುಂದುವರೆದಿದ್ದಾರೆ. ಕಾರಣ ಏನು? ನಮ್ಮಲ್ಲಿ Tourism Development ಇದೆ. ಇವ್ಯಾವುದಕ್ಕೂ ಉತ್ತರವಿಲ್ಲ. ನಾನು ತಮ್ಮಲ್ಲಿ ಕೇಳುವಂಥದ್ದು ಏನೆಂದರೆ, ಇದರಲ್ಲಿ ಯಾವುದಕ್ಕೆ ಉತ್ತರವಿದೆ? ಈ ಯಾವ ಪ್ರಶ್ನೆಗಳಿಗೂ ಇಲ್ಲ. ನಾವು ನಾಳೆ ಜನರಿಗೆ ಏನು ಉತ್ತರವನ್ನು ಕೊಡುತ್ತೇವೆ? ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವಂಥದ್ದು. ನೀವು ಗ್ರಾಮ ಪಂಚಾಯತಿಯಲ್ಲಿ ಅಥವಾ ಯಾವುದೇ ಆಡಳಿತದಲ್ಲಿ ಇನ್ನು ಎರಡು ವರ್ಷಗಳೊಳಗಾಗಿ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ. ನಿಮಗೆ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಆಗುತ್ತದೆ. ಮಾನ್ಯ ಕಂದಾಯ ಮಂತ್ರಿಯವರು ಇಲ್ಲೇ ಇದ್ದಾರೆ. ಅವರು ಒಳ್ಳೆಯ ರೀತಿಯಲ್ಲಿ ಮಾತನಾಡುತ್ತಾರೆ. ಕೆಲವು ಸಚಿವರು ಇದ್ದಾರೆ. ಅವರು ನಮ್ಮನ್ನು ಮಾತೇ ಆಡಿಸುವುದಿಲ್ಲ. ಅವರಿಗೆ ದೇವರು ಒಳ್ಳೆಯದನ್ನು ಮಾಡಲಿ, ನಮಗೆ ಏನೂ ಬೇಕಾಗಿಲ್ಲ. ನಮ್ಮ ಊರಿಗೆ ಒಂದು ಬಸ್ಸು ಬೇಕು ಎಂದು ನಾಲ್ಕು ಸಾರಿ ಕೇಳಿದೆ. ಆ ಮನುಷ್ಯರು ಮುಖ ಕೊಟ್ಟು ನಮ್ಮನ್ನು ನೋಡುವುದೇ ಇಲ್ಲ. ನಮ್ಮ ತಾಲ್ಲೂಕು ಆಫೀಸಿನಲ್ಲಿ 13 ಜನ ನೌಕರರಿಲ್ಲ. 13 ಖಾಲಿ ಹುದ್ದೆಗಳಿವೆ. ಇಡೀ ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ 600 ರಿಂದ 800 ಜನ ನೌಕರರಿಲ್ಲ. ಅಷ್ಟು ಖಾಲಿ ಹುದ್ದೆಗಳಿವೆ. ಹೀಗಿರುವಾಗ ನೀವು ಹೇಗೆ ಆಡಳಿತ ಮಾಡುತ್ತೀರಿ? ಶ್ರೀಮತಿ ರೂಪಕಲಾ ಎನ್ನುವ ಒಬ್ಬ ತಹಶೀಲ್ದಾರ್ ಆರು ತಿಂಗಳ ಕಾಲ ಎರಡು ವಿಧಾನಸಭಾ ಕ್ಷೇತ್ರಗಳನ್ನು maintain ಮಾಡಿದ್ದಾರೆ. ನಮ್ಮಲ್ಲಿ ಬರವೂ ಇದೆ, ಅತಿವೃಷ್ಟಿಯೂ ಇದೆ. ನೀವು ಅವುಗಳಿಗೆಲ್ಲ ಇದರಲ್ಲಿ ಎಲ್ಲಿ ಉತ್ತರ ಹುಡುಕುತ್ತೀರಿ? ನಾನು ನಿಮ್ಮಲ್ಲಿ ಪ್ರಾರ್ಥನೆ

ಮಾಡಿಕೊಳ್ಳುತ್ತೇನೆ. ಮೊದಲು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ. ಅದನ್ನು ಬಿಟ್ಟು, ಈ ರೀತಿ post-dated cheque ಕೊಡುವುದರಿಂದ ಏನೂ ಉಪಯೋಗವಿಲ್ಲ. ಮುಂದೆ ನಾವು ಏನಾಗುತ್ತೇವೋ ನಮಗೆ ಗೊತ್ತಿಲ್ಲ. ನಾವು ಮುಂದೆ ಏನೂ ಆಗದಿರಬಹುದು. ಆದರೆ ನೀವು ಒಂದು concrete plan ಅನ್ನು ಹೊರತರಬೇಕು. ಈ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಇನ್ನೊಂದು ಕಡೆ, ನಿಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಿಕ್ಕೆ ನೀವು ಈ ರೀತಿ ಮಾಡಿದಿರಿ ಎನ್ನುವ ಆಪಾದನೆಗೆ ನೀವು ಒಳಗಾಗಬಾರದು ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಶ್ರೀ ಪ್ರಕಾಶ್‌ರವರು, ನಂತರ ಕೊನೆಯದಾಗಿ ಶ್ರೀ ಸುಧಾಕರ್‌ರವರು.

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ): ಸನ್ಮಾನ್ಯ ಅಧ್ಯಕ್ಷರೆ, ಶಾಸಕರುಗಳಾದ ನಾವುಗಳು ವಿದೇಶ ಪ್ರವಾಸಕ್ಕೆ ಹೋಗಿದ್ದೆವು, ರೈತರುಗಳು ಹೋಗಿದ್ದರು. ಸನ್ಮಾನ್ಯ ಮುಖ್ಯಮಂತ್ರಿಗಳು ಚೈನಾ ಪ್ರವಾಸಕ್ಕೆ ಹೋದ ನಂತರ ನಮ್ಮ ದೇಶದ ಕೃಷಿಯಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣುತ್ತಿದ್ದೇವೆ. ಕಾರಣವೆಂದರೆ, ನನ್ನ ತಾಲ್ಲೂಕಿನಲ್ಲಿ ಜೋಳದ ಬೆಳೆಯನ್ನು ಬೆಳೆದಿದ್ದಾರೆ. ಜೋಳ ಬಹಳ ಹುಲುಸಾಗಿ ಬೆಳೆದಿದೆ. ಆದರೆ ತೆನೆ ಮಾತ್ರ ಬಿಟ್ಟಿಲ್ಲ. ಅದಕ್ಕೆ ಕೊಟ್ಟಂಥ ಬಿತ್ತನೆ ಬೀಜವನ್ನು ಚೈನಾದಿಂದ ತಂದರೋ ಅಥವಾ ಈ ದೇಶದ್ದೇ ಎನ್ನುವುದನ್ನು ಮೊದಲು ಪರಿಶೀಲನೆ ಮಾಡಿ. ಏಕೆಂದರೆ, ಇವರು ಚೈನಾಗೆ ಹೋಗಿ ಬಂದ ಮೇಲೆ ಕೃಷಿ ಅಭಿವೃದ್ಧಿಯನ್ನು ಮಾಡುತ್ತೇವೆ ಎಂದು ಹೇಳಿದರು. ಈಗ ಗಿಡ ಚೆನ್ನಾಗಿ ಬಂದಿದೆ. ಆದರೆ ತೆನೆ ಬಂದಿಲ್ಲವೆಂದರೆ ಅದನ್ನು ತೆಗೆದುಕೊಂಡು ಹೋಗಿ ದನಗಳಿಗೆ ಹಾಕಬೇಕಾಗುತ್ತದೆ. ಆದ್ದರಿಂದ, ದಯಮಾಡಿ ಏನು ಜ್ಞಾನೋದಯವಾಗಿದೆ ಅದು ಸ್ವಲ್ಪ ತಿದ್ದುಪಡಿಯಾಗಬೇಕಾಗುತ್ತದೆ. ಎರಡನೆಯದಾಗಿ ರೈತ P.W.D. Officeಗೆ ಅಥವಾ Engineerರವರ

officeಗೆ ಹೋಗುವುದಿಲ್ಲ. ಅವನು ತಾಲ್ಲೂಕು ಆಫೀಸಿಗೆ ಹೋಗುತ್ತಾನೆ. ಕೃಷಿಗೆ ಸಂಬಂಧಪಟ್ಟಂಥ Agriculture, Horticulture, Sericulture ಇಂಥ ಆಫೀಸುಗಳಿಗೆ ಹೋಗುತ್ತಾನೆ. ಸನ್ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಹಾಸನ ತಾಲ್ಲೂಕಿಗೆ 2 ತಿಂಗಳಲ್ಲಿ 6 ಜನ ತಹಶೀಲ್ದಾರರು ಬಂದು ಹೋಗಿದ್ದಾರೆ. ಶನಿವಾರ ಜನಸಂಪರ್ಕ ಸಭೆಗೆ ಹೋಗೋಣ ಎಂದು ನಾನು ಹೇಳಿಬಂದಿರುತ್ತೇನೆ. ಶುಕ್ರವಾರ ಅವರು transfer ಆಗಿ ಹೊಸಬರು ಬಂದಿರುತ್ತಾರೆ. ನಾನು ಮೊದಲಿನಿಂದ ಅವರಿಗೆ ಹೇಳಿದ್ದೆಲ್ಲ ಮರೆತು ಹೋಗಿರುತ್ತದೆ. ಅಷ್ಟರಲ್ಲಿ ಹೊಸಬರು ಬಂದು ಕುಳಿತಿರುತ್ತಾರೆ. ಹೀಗಾದರೆ ನಾವು ಯಾವ ರೀತಿ ಕೆಲಸ ಮಾಡಬೇಕು ಎಂದು ಯೋಚನೆ ಮಾಡಬೇಕಾಗುತ್ತದೆ. ಮೂರನೆಯದಾಗಿ, ನಾನು ಯಾರ ಮೇಲೂ ಆಪಾದನೆಯನ್ನು ಮಾಡುತ್ತಿಲ್ಲ. ಈ ಸಲ ರೈತರ ಬಗ್ಗೆ ಕಾಳಜಿ ವಹಿಸಿ, ಅವರ ಕಣ್ಣಲ್ಲಿ ನೀರು ಬಂದಂಥ ಮುಖ್ಯಮಂತ್ರಿಯನ್ನು ನೋಡಿದೆವು. ಆಗ ನನಗೂ ಮನಸ್ಸಿಗೆ ಬಹಳಷ್ಟು ನೋವಾಯಿತು. ಮುಖ್ಯಮಂತ್ರಿಗಳು ಕೃಷಿ ಬಗ್ಗೆ ಇಷ್ಟೊಂದು ಆದ್ಯತೆ ಕೊಟ್ಟು ಮಾತನಾಡುತ್ತಿದ್ದಾರಲ್ಲ ಎಂದು ಅನ್ನಿಸಿತ್ತು. ಅಂಥ ಮುಖ್ಯಮಂತ್ರಿಗಳು ಹೋದ ವರ್ಷ ನನ್ನ ತಾಲ್ಲೂಕಿಗೆ ಬಂದಿದ್ದರು. ಬಂದು ಒಂದು ದೇವಸ್ಥಾನವನ್ನು ಉದ್ಘಾಟನೆ ಮಾಡಿದರು. ಅದರ ಪಕ್ಕದಲ್ಲೇ ನೂರು ಅಡಿ ದೂರದಲ್ಲಿ, ಆಲೂಗಡ್ಡೆ ಬೆಳೆಗೆ ಅಂಗಮಾರಿ ರೋಗ ಬಂದಿದೆ. ಬನ್ನಿ, ದಯಮಾಡಿ ನೋಡಿ ಎಂದು ಹೇಳಿದರೂ ಅವರು ಬರಲಿಲ್ಲ. ನಾನು, ಕುಮಾರಸ್ವಾಮಿಯವರು ಎಲ್ಲರೂ ಹೋಗಿದ್ದೆವು. ಈಗಲೂ ಸಹ ಹಾಸನ ತಾಲ್ಲೂಕಿನಲ್ಲಿ ಆಲೂಗಡ್ಡೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಒಂದು ಚೂರೂ ಆಲೂಗಡ್ಡೆ ಬೆಳೆ ಇಲ್ಲ. ಒಂದು ಕ್ವಿಂಟಾಲ್ ಆಲೂಗಡ್ಡೆಗೆ ಈಗ 2,000 ರೂಪಾಯಿ ಇದೆ. ಆದರೆ ರೈತನ ಹತ್ತಿರ ಆಲೂಗಡ್ಡೆ ಇಲ್ಲ. ಆದ್ದರಿಂದ, ದಯಮಾಡಿ ಎಲ್ಲಿ ಆಲೂಗಡ್ಡೆ ಬೆಳೆ ಹಾನಿಯಾಗಿದೆ ಅಲ್ಲಾದರೂ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿ ರೈತರ ಕಷ್ಟಕ್ಕೆ ಬರಲಿ ಎಂದು ಹೇಳುತ್ತೇನೆ. ನಮ್ಮ ರೆವಿನ್ಯೂ ಮಂತ್ರಿಗಳಲ್ಲಿ ಒಂದು ವಿಷಯವನ್ನು ಕೇಳುತ್ತೇನೆ. ಚಿಕ್ಕಕೊಂಡಗುಳದ ಸರ್ವೆ ನಂಬರ್ 73ರಲ್ಲಿ ಒಂದು

ಎಕರೆ ಜಮೀನು ಹೋಗಿದೆ. ನಾನು ಮಂತ್ರಿಗಳ ಮೇಲೆ ಆಪಾದನೆಯನ್ನು ಮಾಡುತ್ತಿಲ್ಲ. ಇದು 1993ರಲ್ಲಿ ಆಗಿರುವುದು. Revenue Minister ತಕ್ಷಣ ಬರೆದು, ಶಾಸಕರು ಕೊಟ್ಟಿದ್ದು ಸರಿ ಇದ್ದರೆ ಪರಿಶೀಲನೆ ಮಾಡಿ cancel ಮಾಡಿ ಎಂದು 13ನೇ ತಾರೀಖು ಬರೆದು ಕೊಟ್ಟರು. ಬಳಿಗಾರ್ ಸಾಹೇಬರು ಅದನ್ನು inspection ಮಾಡಿ, cancel ಮಾಡಿ ಎಂದು ಬರೆದುಕೊಟ್ಟರು. ಆದರೆ, 22ನೇ ತಾರೀಖು ಬರೆಯುತ್ತಾರೆ, ಯಾರಿಗೆ ಆಗಿದೆಯೋ ಅವರಿಗೇ ಖಾತೆ ಮಾಡಿ ಎಂದು ಬರೆಯುತ್ತಾರೆ. ಇಂಥವುಗಳನ್ನು ನೋಡಿದಾಗ, ನಾವು ನಮ್ಮ ಕ್ಷೇತ್ರದಲ್ಲಿ ಹೇಗೆ ಕೆಲಸವನ್ನು ಮಾಡಬೇಕು ಎಂದು ಅನ್ನಿಸುತ್ತದೆ. ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತೇವೆ ಎಂದು ಹೇಳುತ್ತಾರೆ. ಇವತ್ತು ಪತ್ರಿಕೆಯಲ್ಲಿ ಓದಿದೆ, ಯಾವ ಅಧಿಕಾರಿಗಳು ಅಧ್ಯಕ್ಷರಲ್ಲ. ಪ್ರಾಮಾಣಿಕರಲ್ಲ ಅವರನ್ನೆಲ್ಲ ತೆಗೆದು ಹಾಕಿ ಎಂದು ಹೇಳುತ್ತಾರೆ. ಯಾರನ್ನು ತೆಗೆದು ಎಲ್ಲಿ ಹಾಕೋಣ. ನಾವು ಎಲ್ಲಿ ಹುಡುಕೋಣ? ದಯಮಾಡಿ ಇದನ್ನು ಹೇಳಬೇಕು.

ಗ್ರಾಮೀಣಾಭಿವೃದ್ಧಿ ಸಂಬಂಧಪಟ್ಟಂತೆ ಹೇಳುವುದಾದರೆ ಕುಡಿಯುವ ನೀರಿನ ಸಮಸ್ಯೆ ಎಲ್ಲಾ ಕಡೆ ಬಹಳಷ್ಟಿದೆ. ಕುಡಿಯುವ ನೀರಿಗೆ ಒಂದಿಷ್ಟು ಹಣವನ್ನು ತಹಶೀಲ್ದಾರರಿಗೆ ಬಿಡುಗಡೆ ಮಾಡಿ. ತುರ್ತಾಗಿ ಎಲ್ಲಿ ಅವಶ್ಯಕತೆ ಇದೆಯೋ ಅಂಥ ಕಡೆಗಳಲ್ಲಿ ಕುಡಿಯುವ ನೀರಿಗಾದರೂ ಹಣದ ವ್ಯವಸ್ಥೆಯನ್ನು ಮಾಡಬೇಕು ಎಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ. ನಾವು ಇಷ್ಟೆಲ್ಲ ಹೇಳುತ್ತಿದ್ದೇವೆ. ಒಬ್ಬರಾದರೂ ಮಂತ್ರಿಗಳು ನಮ್ಮ ಮಾತನ್ನು ಕೇಳುತ್ತಿದ್ದಾರೆಯೇ, ಬರೆದುಕೊಳ್ಳುತ್ತಿದ್ದಾರೆಯೇ? ಹೀಗಾದರೆ ನಾವು ಏಕೆ ಮಾತನಾಡಬೇಕು?

ಅಧ್ಯಕ್ಷರು: ಕೇಳುತ್ತಿದ್ದಾರೆ, ಶ್ರೀ ಈಶ್ವರಪ್ಪನವರು ಕೇಳುತ್ತಿದ್ದಾರೆ.

ಶ್ರೀ ಹೆಚ್.ಎಸ್. ಪ್ರಕಾಶ್: ಅವರವರು ಅಲ್ಲಲ್ಲಿಯೇ ಮಾತನಾಡುವುದಾದರೆ ನಾವು ಏಕೆ ಮಾತನಾಡಬೇಕು? ಇಲ್ಲಿ ರೆಕಾರ್ಡ್ ಆಗಿದೆ. ಆದರೆ ಅದನ್ನು ಓದುವಷ್ಟು ತಾಳ್ಮೆ ಅವರಿಗೆ ಇರಬೇಕಲ್ಲವೇ? ನಾವು ಕೊಟ್ಟ ಪತ್ರವನ್ನೇ ಓದುವುದಿಲ್ಲ. ನಾವು ಇಷ್ಟು ಚರ್ಚೆ ಮಾಡುತ್ತಿದ್ದೇವೆ. ಅವರೆಲ್ಲರೂ ಅಲ್ಲಲ್ಲಿಯೇ ಮಾತನಾಡುತ್ತಿದ್ದಾರೆ. ಅಶೋಕ್‌ರವರು ಅಲ್ಲಿ ಮಾತನಾಡುತ್ತಾರೆ,

ಇಲ್ಲಿ ಮಾತನಾಡುತ್ತಿರುತ್ತಾರೆ. ನಾವು ಯಾರ ಬಗ್ಗೆ ಮಾತನಾಡಬೇಕು ಎನ್ನುವುದೇ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: 2 ತಿಂಗಳಲ್ಲಿ 6 ತಹಶೀಲ್ದಾರರು ವರ್ಗಾವಣೆಯಾಗಿದ್ದಾರೆ ಎಂದು ಹೇಳಿದರು. ಆದರೆ, ನಮ್ಮಲ್ಲಿ ನೌಕರರ ಸಂಘದ ಅಧ್ಯಕ್ಷರನ್ನೇ ವರ್ಗ ಮಾಡಿದ್ದಾರೆ. Revenue Minister ರವರಿಗೆ ಆ ವಿಷಯವನ್ನು ಯಾರಾದರೂ ತಿಳಿಸಿದ್ದಾರೋ, ಇಲ್ಲವೋ ಗೊತ್ತಿಲ್ಲ. ಸರ್ಕಾರಿ ನೌಕರರ ಸಂಘದ ಅಧ್ಯಕ್ಷರನ್ನು ಯಾವುದೇ ಕಾರಣಕ್ಕೂ ವರ್ಗಾವಣೆ ಮಾಡುವುದಕ್ಕೆ ಅವಕಾಶವಿಲ್ಲ. ಆದರೂ ಅವರ ವರ್ಗವಾಗಿದೆ. ಇದು ತಮ್ಮ ಕಣ್ಣು ತಪ್ಪಿ ಆಗಿದೆಯೇನೋ ಗೊತ್ತಿಲ್ಲ. ಒಂದು ಸಾರಿ ದಯಮಾಡಿ ಇದರ ಬಗ್ಗೆ ವಿಚಾರ ಮಾಡಿ. 6 ಬಾರಿ ಇಲ್ಲದಿದ್ದರೆ 8 ಬಾರಿ ತಹಶೀಲ್ದಾರರುಗಳನ್ನು ವರ್ಗ ಮಾಡಿ, ನಮಗೇನೂ ಬೇಜಾರಿಲ್ಲ. ಆದರೆ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರನ್ನೇ ವರ್ಗ ಮಾಡಿದ್ದಾರೆ. ಅದು ತಮ್ಮ ಗಮನದಲ್ಲಿರಲಿ ಎಂದು ಹೇಳುತ್ತಿದ್ದೇನೆ.

ಡಾ: ಎಂ.ಸಿ. ಸುಧಾಕರ್ (ಚಿಂತಾಮಣಿ): ಮಾನ್ಯ ಅಧ್ಯಕ್ಷರೆ, ಮೊನ್ನೆ ಕಡೆಯವನಾಗಿ ಮಾತನಾಡಲು ನನಗೆ ತಾವು ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು: ಆಗ ಬಿಟ್ಟುಹೋದ ಕೆಲವು ವಿಷಯಗಳನ್ನು ಈಗ ಮಾತನಾಡುತ್ತೀರೇನು?

ಡಾ: ಎಂ.ಸಿ. ಸುಧಾಕರ್: ಈಗ ನಾನು ಹೊಸದಾಗಿ ಮಾತನಾಡುವುದಿಲ್ಲ. ಆದರೆ ಮೊನ್ನೆ ಕೇಳಿದಂಥ ವಿಚಾರಗಳ ಬಗ್ಗೆ ಉತ್ತರದಲ್ಲಿ ಏನೂ ಪ್ರಸ್ತಾಪವಾಗಲಿಲ್ಲ. ಈಗಾಗಲೇ ಸಂಪಂಗಿಯವರು ಹೇಳಿದರು. ಅದರಂತೆ ಈಗ ನಮ್ಮ ಭಾಗದಲ್ಲಿ ಮರಳು ದಂಧೆಯನ್ನು ಪ್ರಾರಂಭ ಮಾಡಿದ್ದಾರೆ. ಅದರಿಂದಾಗಿ ನಮ್ಮ ಭಾಗದಲ್ಲಿ ಅಂತರ್ಜಲ ಕುಸಿಯುತ್ತಿದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆಗೆ ಎಂದು ಈ ಅಧಿವೇಶನವನ್ನು ಕರೆದಿದ್ದು, ಅದರ ಅರ್ಥ ಏನು ಎಂದು ಈಗಲೂ ನನಗೆ ಗೊತ್ತಾಗುತ್ತಿಲ್ಲ. ಒಂದು ಕಡೆ ನೀವು, ಅಂತರ್ಜಲ ವೃದ್ಧಿ ಮಾಡುತ್ತೇವೆ.

ಕೆರೆಗಳನ್ನು ತುಂಬಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಇನ್ನೊಂದು ಕಡೆ ಮರಳು ಎತ್ತುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಯಾವ ಪುರುಷಾರ್ಥಕ್ಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಬಹಳ ಸ್ಪಷ್ಟವಾಗಿ ಉತ್ತರ ಕೊಡಬೇಕಾಗುತ್ತದೆ. ನಮ್ಮ ಕಡೆ ಗ್ರಾಮೀಣ ಪ್ರದೇಶದ ರಸ್ತೆಗಳೆಲ್ಲ ಹಾಳಾಗುತ್ತಿವೆ. Indian Road Congress ನವರ ಪ್ರಕಾರ ಯಾವಯಾವ ವಾಹನ ಎಷ್ಟೆಷ್ಟು ಟನ್ ತೂಕವನ್ನು ಸಾಗಿಸಬಹುದು ಎಂದು ಇದೆಯೋ ಆ ನಿಯಮಗಳನ್ನೆಲ್ಲ ಉಲ್ಲಂಘನೆ ಮಾಡಿ ಸಾಗಿಸುತ್ತಿದ್ದಾರೆ. ಲಾರಿ ಚಾಲಕರ ಮತ್ತು ಲಾರಿ ಮಾಲೀಕರ ಒತ್ತಡಕ್ಕೆ ಸರ್ಕಾರ ಮಣಿದಿದೆ ಎಂದು ಹೇಳಬೇಕಾಗುತ್ತದೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ತನ್ನ ಸ್ಪಷ್ಟವಾದ ನಿಲುವನ್ನು ಹೇಳಬೇಕು. ನಾವು ಕೆಲವೇ ಕೆಲವು ವ್ಯಕ್ತಿಗಳ ಒತ್ತಡಕ್ಕೆ ಮಣಿಯುತ್ತೇವೆ. ನಮಗೆ ರೈತರ ಮತ್ತು ಆ ಭಾಗದ ಜನರ ಹಿತ ಮುಖ್ಯವಲ್ಲ. ಅವರು ಹಾಗೆಯೇ ಇರಲಿ ಎನ್ನತಕ್ಕಂಥ ನಿಲುವನ್ನು ತಾಳುವುದಾದರೆ ದಯವಿಟ್ಟು ಅದನ್ನೇ ಸ್ಪಷ್ಟ ಮಾಡಿ.

ಇನ್ನು, ಬೆಂಬಲ ಬೆಲೆ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳಬೇಕು. ಅದು ಆಲೂಗಡ್ಡೆ ಇರಬಹುದು, ಟೊಮ್ಯಾಟೊ ಇರಬಹುದು, ತೊಗರಿ ಇರಬಹುದು, ಮತ್ತೊಂದು ಇರಬಹುದು, ಯಾವುದೇ ಇರಬಹುದು. ಬೆಳೆಗಳಿಗೆ ಬೆಲೆ ಕುಸಿದಾಗ ವೈಜ್ಞಾನಿಕವಾಗಿ ಬೆಂಬಲ ಬೆಲೆ ಕೊಡತಕ್ಕಂಥ ನೀತಿಯನ್ನು ನಾವು ಮಾಡಬೇಕು. ತಕ್ಷಣಕ್ಕೆ ಏನೋ ಒಂದು ಪರಿಹಾರವನ್ನು ಘೋಷಣೆ ಮಾಡಿದರೆ, ಅದು ದಲ್ಲಾಳಿಗಳು ಮತ್ತು ಅಂಥ ಅವಕಾಶಗಳಿಗಾಗಿ ಕಾಯುತ್ತಿರುವಂಥ ದುಷ್ಟರು ಅದರ ದುರುಪಯೋಗ ಮಾಡತಕ್ಕಂಥದ್ದರಿಂದ ರೈತರಿಗೆ ಬಹಳ ನಷ್ಟವಾಗುತ್ತದೆ. ನಾವು ರೈತರ ವಿಶ್ವಾಸವನ್ನು ಪಡೆಯಬೇಕು. ಅದರ ಜೊತೆಗೆ, ರೈತರನ್ನು ತಪ್ಪುದಾರಿಗೆ ಎಳೆಯತಕ್ಕಂಥವರು ಕೆಲವರು ಇರುತ್ತಾರೆ. ಅವರಿಗೂ ಇದು ಸರಿಯಲ್ಲ ಎಂದು ಹೇಳುವ ಮಾರ್ಗದಲ್ಲಿ ನಾವು ಹೋಗಬೇಕಾಗುತ್ತದೆ. ಟೊಮ್ಯಾಟೊ ಬೆಳೆ ಬಗ್ಗೆ ಹೇಳಿದೆ. ದಯವಿಟ್ಟು ಅಧಿಕಾರಿಗಳು ಅದರ ಬಗ್ಗೆ ಗಮನ ಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಈ ಬಗ್ಗೆ ನಾನು ಈಗ ತಾನೇ ಮಂತ್ರಿಗಳ ಹತ್ತಿರ ಮಾತನಾಡಿದೆ. ಕುಡಿಯುವ ನೀರಿಗೆ ಬೋರ್‌ವೆಲ್ ಕೊರೆಯಬೇಕಾದರೆ ಅದಕ್ಕೆ ಟೆಂಡರ್ ಕರೆಯಬೇಕು ಎಂದು ಮಂತ್ರಿಗಳು ಒಂದು ಆದೇಶ ಮಾಡಿದ್ದಾರೆ. ಒಂದು ಟೆಂಡರ್ ಕರೆಯಬೇಕಾದರೆ ಅದಕ್ಕೆ ಯಾವ ಯಾವ ರೀತಿಯ formalities ಇರುತ್ತದೆ, ಟೆಂಡರ್ ಪ್ರಕ್ರಿಯೆ ಎಷ್ಟು ದಿವಸವಾಗುತ್ತದೆ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಪಂಪು, ಮೋಟರ್ ಖರೀದಿ ಮಾಡುವುದು ಟೆಂಡರ್ ಮುಖಾಂತರವೇ, ಪೈಪ್ ಖರೀದಿ ಮಾಡುವುದೂ ಟೆಂಡರ್ ಮುಖಾಂತರವೇ. ಬರೀ ಪೈಪ್‌ಲೈನ್ ಅಗೆಯುವುದನ್ನು ಮಾತ್ರ entrust ಮಾಡುತ್ತಾರೆ. Bescomನವರು ಅವರದೇ ಆದಂಥ ನಿಯಮದ ಪ್ರಕಾರ energization ಮಾಡುತ್ತಾರೆ. ಈಗ ಏಕಾಏಕಿ ಟೆಂಡರ್ ಕರೆಯಬೇಕು ಎಂದರೆ ತೊಂದರೆಯಾಗುತ್ತದೆ. ಅದಲ್ಲದೇ, ಒಂದು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಕೆಲವು ಗ್ರಾಮಗಳಲ್ಲಿ ನೀರು ಬರತಕ್ಕಂಥಾದ್ದು ನಿಂತುಹೋದಾಗ ಒಟ್ಟಿಗೆ ಸೇರಿಸಿ ಟೆಂಡರ್ ಕರೆಯಬೇಕು ಎಂದು ಹೇಳುತ್ತಾರೆ. ಯಾವಯಾವ ಗ್ರಾಮಗಳಲ್ಲಿ ನೀರು ಬರತಕ್ಕಂಥಾದ್ದು ನಿಂತುಹೋಗುತ್ತದೆ ಎಂದು ನಾವು ಕಾಯಬೇಕಾಗುತ್ತದೆ. ಎಲ್ಲವನ್ನೂ ಒಟ್ಟಿಗೆ ಸೇರಿಸಿ ಹಣ ಕೇಳಿದರೆ ಹಣ ಇಲ್ಲ ಎಂದು ಹೇಳುತ್ತಾರೆ. ಈ ರೀತಿಯಾದರೆ ನಾವು ಅಲ್ಲಿ ಜನಗಳಿಗೆ ಹೇಗೆ ಉತ್ತರ ಕೊಡಬೇಕು? ದಯವಿಟ್ಟು ಹಿಂದೆ ಏನು ಪದ್ಧತಿ ಇತ್ತೋ ಅದನ್ನೇ ಮುಂದುವರೆಸಬೇಕೆಂದು ಹೇಳುತ್ತೇನೆ. ಇದು ಬರಗಾಲದ ಪರಿಸ್ಥಿತಿ, ತುರ್ತು ಪರಿಸ್ಥಿತಿಯಾಗಿರುವುದರಿಂದ ಹಿಂದೆ ಯಾವ ನಿಯಮಗಳಿದ್ದವೋ, ಆ ನಿಯಮದಡಿಯಲ್ಲೇ ಬೋರ್‌ವೆಲ್ ಕೊರೆಯತಕ್ಕಂಥಾದ್ದಕ್ಕೆ, ಪಂಪು ಮೋಟರ್ ಅಳವಡಿಸತಕ್ಕಂಥದ್ದಕ್ಕೆ ಅವಕಾಶ ಮಾಡಿಕೊಡಬೇಕು. ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಗೆ ಕುಡಿಯುವ ನೀರಿಗಾಗಿ ಸುಮಾರು 6 ಕೋಟಿ ರೂಪಾಯಿಗಳ ಬೇಡಿಕೆಯನ್ನಿಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಭೀಕರವಾಗಿದೆ. ನನ್ನ ಕ್ಷೇತ್ರಕ್ಕೆ ಸುಮಾರು 3 ಕೋಟಿ ರೂಪಾಯಿಗಳ

ಪ್ರಸ್ತಾವನೆಯನ್ನು ನಾವು ಕೊಟ್ಟಿದ್ದೇವೆ. ದಯವಿಟ್ಟು ಅದರ ಬಗ್ಗೆ ಹೆಚ್ಚು ಗಮನ ಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮತ್ತೊಂದು ವಿಚಾರವೆಂದರೆ, ನಮ್ಮನ್ನೆಲ್ಲ ವಿದೇಶ ಪ್ರವಾಸಕ್ಕೆ ಕಳುಹಿಸಿದ್ದಕ್ಕಾಗಿ ನಮ್ಮ ಸ್ನೇಹಿತರೆಲ್ಲ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು. ಆದರೆ ನನ್ನ ಅಭಿಪ್ರಾಯವೇ ಬೇರೆಯಾಗಿದೆ. ದಯವಿಟ್ಟು ಇನ್ನು ಮೇಲೆ ನಮ್ಮನ್ನು ವಿದೇಶಕ್ಕೆ ಕಳುಹಿಸಬೇಡಿ. ಏಕೆಂದರೆ ನಾವು ಅಲ್ಲಿಗೆ ಹೋಗಿ ನೋಡಿ ಬಂದ ಮೇಲೆ ನಮ್ಮಲ್ಲಿಯೂ ಅಂಥ ಅಭಿವೃದ್ಧಿಯನ್ನು ಮಾಡಬೇಕು ಎನ್ನುವ ನಮ್ಮ ಆಸೆಯನ್ನು airport ನಲ್ಲೇ ಬಿಟ್ಟುಬರಬೇಕಾಗುತ್ತದೆ. ಏಕೆಂದರೆ, ನಮ್ಮಲ್ಲಿರತಕ್ಕಂಥ ಅಧಿಕಾರಿಗಳಿಗೆ ಬದ್ಧತೆಯಿಲ್ಲ. ಸಣ್ಣ ಮಟ್ಟದಲ್ಲಿರುವಂಥ ಅಧಿಕಾರಿಗಳಲ್ಲ; ದೊಡ್ಡದೊಡ್ಡ I.A.S. ಅಧಿಕಾರಿಗಳೇ ಇವತ್ತು, ನಾವು ದೂರದೃಷ್ಟಿಯನ್ನಿಟ್ಟುಕೊಂಡು ಮಾಡತಕ್ಕಂಥ ಕೆಲಸಗಳಿಗೆ ಯಾವುದೇ ರೀತಿಯ ಸಹಕಾರ ಕೊಡದ ಅಧಿಕಾರಿಗಳಿದ್ದಾರೆ. ಇವತ್ತು ಏನೊಂದು ಗ್ರಾಮೀಣಾಭಿವೃದ್ಧಿಯಾಗಬೇಕು, ಮತ್ತೊಂದು ಆಗಬೇಕು ಎಂದು ತಾವು ಹೇಳುತ್ತಿದ್ದೀರಿ. ಅದಕ್ಕೆ ನಮ್ಮ ಸಲಹೆಗಳನ್ನು ತೆಗೆದುಕೊಳ್ಳುವುದರ ಜೊತೆಗೆ, ಅಧಿಕಾರಿಗಳನ್ನು ಸರಿದಾರಿಗೆ ತರತಕ್ಕಂಥ ಕೆಲಸವಾಗಬೇಕು. ಉದಾಹರಣೆಗೆ ಹೇಳುತ್ತೇನೆ, ಇವತ್ತು ರೈತರಿಗಾಗಿ ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಾವು milk powder unit ತೆರೆಯುವುದಕ್ಕೆ ಇಂಥ ಸ್ಥಳ ಒದಗಿಸಿ ಎಂದು ಸರ್ಕಾರಿ ಜಾಗದ ಬಗ್ಗೆ ಜಿಲ್ಲಾಧಿಕಾರಿಗಳನ್ನು ನಮ್ಮೆಲ್ಲ ಮುಖಂಡರು ಭೇಟಿ ಮಾಡಿದ್ದರು. ಆ ಜಾಗವನ್ನು ಕೊಡಿ ಎಂದು ಮಂತ್ರಿಯವರೂ ಸಹ ಹೇಳಿದ್ದರು. ಆದರೆ, ಯಾವುದೋ ಒಂದು ಕ್ಷುಲ್ಲಕ ಕಾರಣ ಇಟ್ಟುಕೊಂಡು, ಯಾರೋ ಒಬ್ಬರು ಕೋರ್ಟ್‌ಗೆ ಹೋಗಿದ್ದಾರೆಂದು ಹೇಳಿದರು. ಆದರೆ, ಆ ಕೇಸ್ ಕೋರ್ಟ್‌ನಲ್ಲಿ ವಜಾ ಆಗಿದೆ. ಅಲ್ಲಿಯ Local Court ನಲ್ಲಿ stay ಏನೂ ಆಗಿಲ್ಲ. ಆ ಜಾಗವನ್ನು ಮಂಜೂರು ಮಾಡದೆಯೇ, ರಾಜಕೀಯ ಒತ್ತಡಕ್ಕೆ ಮಣಿದು, ನಮಗೆ ಸಹಕಾರ ಕೊಡುತ್ತಿಲ್ಲ. ಒಂದು Dairyಗೆ 5–6 ಕೋಟಿ ರೂ.ಗಳ ಕೆಲಸವಾಗುವಂಥದ್ದಕ್ಕೆ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಯವರು ನಮಗೆ ಅವಕಾಶ ಮಾಡಿಕೊಡುತ್ತಿಲ್ಲ. ನಾನು ಎಲ್ಲಾ ಕಡೆ ರಸ್ತೆಗಳನ್ನು ನೋಡಿಕೊಂಡು ಬಂದೆ.

ನನ್ನ ಕ್ಷೇತ್ರದಲ್ಲಿ 2005 ರಿಂದ ರಸ್ತೆಗಳ ಅಗಲೀಕರಣ ಮಾಡಿಕೊಂಡು ಬರುತ್ತಿದ್ದೀರಿ. ರಸ್ತೆಯ ಪಕ್ಕದಲ್ಲಿ ಸರ್ಕಾರಿ ಜಾಗದಲ್ಲಿ ಡಬ್ಬಾ ಅಂಗಡಿ ಇದೆ. ನಮ್ಮ ವ್ಯವಸ್ಥೆ ಯಾವ ರೀತಿ ಇದೆ ಎನ್ನುವುದನ್ನು ಹೇಳುತ್ತೇನೆ. ಅದಕ್ಕೆ ಇವತ್ತು ನಮ್ಮ ನ್ಯಾಯಾಲಯದಲ್ಲಿ stay ಕೊಡುತ್ತಾರೆ. Notice ಕೊಡಬೇಕೆಂದು ಕಾನೂನು ಹೇಳುತ್ತದೆ, notice ಕೊಟ್ಟರೆ stay ಕೊಡುತ್ತಾರೆ, Court ನಲ್ಲಿ ವಜಾಗೊಳಿಸದ್ದನ್ನು ಸರ್ಕಾರ ಅದನ್ನು ತೆರವುಗೊಳಿಸಬೇಕೆಂದು ಡಿ.ಸಿ.ಗೆ ಹೇಳಿದರೆ, ಅವರಿಗೆ ಬೇರೆ ಜಾಗ ಕೊಡಿ ಎಂದು ಒಬ್ಬರು ಡಿ.ಸಿ. ಮಾತನಾಡುತ್ತಾರೆ. ರಾಜಕೀಯ ವ್ಯಕ್ತಿಗಳು ಮಾತನಾಡಬೇಕಾದ ಮಾತನ್ನು ಒಬ್ಬರು ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿ ಮಾತನಾಡುತ್ತಾರೆಂದರೆ ಹೇಗೆ? ಅವರಿಗೆ 15 ದಿವಸ ಟೈಂ ಕೊಡಿ ಎಂದು ಹೇಳಿ ಮತ್ತೆ ಅವರನ್ನು ಕೋರ್ಟ್‌ಗೆ ಕಳುಹಿಸುತ್ತಾರೆ. ಈ ರೀತಿಯಾದ ಅಧಿಕಾರಿ ಇದ್ದರೆ ನಾವು ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ? ಅದಕ್ಕೆ ನಾವು ಅಲ್ಲಿಗೆ ಹೋಗುವುದೂ ಬೇಡ, ಈ ಒಂದು ವ್ಯವಸ್ಥೆ, ಇಂಥ ಅಧಿಕಾರಿ ವರ್ಗ, ನಮಗೆ ಸಹಕಾರ ಕೊಡದಿರುವಂಥ ಅಧಿಕಾರಿಶಾಹಿ ಇದೆ, ಇಂಥ ಪರಿಸ್ಥಿತಿ ನಿರ್ಮಾಣವಾಗುವುದು ಬೇಡ. ನಮಗೆ ಬಹಳ ಬೇಸರವಾಗಿದೆ. ಒಳ್ಳೆಯ ಕೆಲಸಕ್ಕೆ ಯಾವುದೇ ಸಹಕಾರವನ್ನು ನೀಡುತ್ತಿಲ್ಲ. ಸಾಮಾನ್ಯವಾಗಿ ನಮ್ಮಂಥವರು ಅಡ್ಡಿಪಡಿಸುತ್ತಾರೆ, ಒಳ್ಳೆಯ ಕೆಲಸ ಮಾಡಬೇಕೆಂದು ನಾವು ಮುಂದೆ ಹೋದಾಗ ಅಧಿಕಾರಿಗಳು ಸಹಕಾರ ಕೊಡದಿದ್ದರೆ ಅದರಲ್ಲಿಯೂ ಜಿಲ್ಲಾಧಿಕಾರಿಗಳಂಥವರೇ ಇಂಥದ್ದಕ್ಕೆ ಅಡ್ಡ ಬಂದರೆ ನಾವು ಯಾರಿಗೆ ಹೇಳಬೇಕು? ದಯವಿಟ್ಟು, ಇಂಥ ಅಧಿಕಾರಿಗಳನ್ನು ಅಂಥ ಹುದ್ದೆಗಳಿಗೆ ನೇಮಕ ಮಾಡಬೇಡಿ. ಎಲ್ಲಾದರೂ ಬೇರೆ ಕಡೆಗೆ ಕೇವಲ file ಗೆ ಸಹಿ ಹಾಕುವ ಜಾಗ ಕೊಟ್ಟುಬಿಡಿ. ದಯವಿಟ್ಟು, ಕೆಲಸ ಮಾಡಬೇಕಾಗಿರುವಂಥ ಕಡೆಗೆ ಇಂಥವರನ್ನು ನೇಮಿಸಬೇಡಿ. ಇಂಥ ಕೆಲವು ಸಲಹೆಗಳನ್ನು ಕೊಡಲಿಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಮುಖ್ಯವಾಗಿ, ಮರಳು ವಿಚಾರದಲ್ಲಿ ನಾವಂತೂ ದೊಡ್ಡ ಹೋರಾಟ ಮಾಡಿಯೇ ಮಾಡುತ್ತೇವೆ. ದಯವಿಟ್ಟು, ತಾವು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಶ್ರೀ ಸಂಪಂಗಿಯವರು ಮತ್ತು ಶ್ರೀ ರೆಡ್ಡಿಯವರು, ಶ್ರೀ ಸುಧಾಕರ್‌ರವರು ಹೇಳಿದ ಹಾಗೆ, Lorry Owners' Association ನವರ ಜೊಎ ಸಾರಿಗೆ ಸಚಿವರು ಮಾತನಾಡಿದ ಮೇಲೆ ನೀವೊಂದು ತೀರ್ಮಾನ ಮಾಡಿದ್ದೀರಿ. ಹಿಂದೆ ಇದ್ದಂಥ restrictions ಎಲ್ಲವನ್ನೂ ತೆಗೆದು ಹಾಕುತ್ತೇವೆನ್ನುವ ಮಾತನ್ನು ಅವರಿಗೆ ಕೊಟ್ಟಿದ್ದೀರಿ. ಆ ಮಾತು ಕೊಟ್ಟ ಮೇಲೆ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಮರಳು ತೆಗೆಯುವುದನ್ನು ನಿಲ್ಲಿಸಿಬಿಟ್ಟರು. ಅಲ್ಲಿರುವ ಡಿ.ಸಿ., ತಹಶೀಲ್ದಾರ್ ಮತ್ತು ಬೇರೆ ಬೇರೆ ಅಧಿಕಾರಿಗಳೆಲ್ಲ ತೀರ್ಮಾನ ಮಾಡಿದ್ದಾರೆ. ಚಿಕ್ಕಬಳ್ಳಾಪುರ ಮತ್ತು ಕೋಲಾರಕ್ಕೆ ಯಾವುದೇ ನದಿ ನೀರಿನ ಸೌಕರ್ಯವಿಲ್ಲ. ಅಲ್ಲಿ ನಿಮಗೆಲ್ಲ ಗೊತ್ತಿರುವ ಹಾಗೆ, ಅಂತರ್ಜಲ ಬಹಳ ಕೆಳಗೆ ಹೋಗಿದೆ, 1000, 1500 ಅಡಿ ಕೊರೆಯಬೇಕಾಗುತ್ತದೆ, ಮತ್ತೆ ಮರಳನ್ನು ತೆಗೆಯುವುದಕ್ಕೆ ಬಿಟ್ಟರೆ, ಇನ್ನೊಂದಷ್ಟು ತೊಂದರೆಯಾಗುತ್ತದೆ. ಅದಕ್ಕೋಸ್ಕರವಾಗಿ ನೀವು Lorry Associationನವರಿಗೆ ಮಾತು ಕೊಟ್ಟಿರುವುದರಿಂದ ಅವರು ಪಿನಾಕಿನಿ, ಕುಮುದ್ವತಿ ನದಿಗಳಿಂದ ಮರಳು ತೆಗೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮೊದಲು ಹೇಗೆ ನಿಲ್ಲಿಸಲಾಗಿತ್ತೋ ಅದೇ ತರಹ ಅಲ್ಲಿ ಮರಳು ತೆಗೆಯದ ರೀತಿಯಲ್ಲಿ ನೋಡಿಕೊಳ್ಳಬೇಕು. ಸರ್ಕಾರ ಅದಕ್ಕೆ ಸ್ಪಷ್ಟವಾಗಿ ಹಿಂದೆ ಏನಿತ್ತು ಅದೇ ರೀತಿ ಮುಂದುವರಿಸಬೇಕೆಂಬ ಒತ್ತಾಯವನ್ನು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಎಲ್ಲಾ ಶಾಸಕರೂ ಮಾಡುತ್ತಿದ್ದಾರೆ. ನೀವು ಅಲ್ಲಿ ಮತ್ತೆ ಮರಳನ್ನು ತೆಗೆಯುವುದಕ್ಕೆ ಅವಕಾಶ ಕೊಡಬಾರದು. ಆ ರೀತಿ ನಿರ್ದೇಶನವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟು, ಹಿಂದೆ ಇದ್ದ ರೀತಿಯಲ್ಲಿ ಮರಳು ತೆಗೆಯಬಾರದೆಂದು ಹೇಳಬೇಕೆಂಬುದು ಅವರ ಒತ್ತಾಯ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು): ಮರಳು ಸಾಗಾಣಿಕೆದಾರರಿಗೆ ತೊಂದರೆಯಾಗುತ್ತಿದೆ ಎಂದು ರಾಜ್ಯಾದ್ಯಂತ ಲಾರಿ ಮುಷ್ಕರ ಮಾಡಿರುವುದು ತಮಗೆಲ್ಲ ಗೊತ್ತಿದೆ. ಮರಳು ಸಾಗಾಣಿಕೆ ಮಾಡಬೇಕಾದರೆ ಬಹಳಷ್ಟು ತೊಂದರೆಯಾಗುತ್ತದೆ ಮತ್ತು ಮರಳು ಬೆಂಗಳೂರಿಗೆ ಅವಶ್ಯಕತೆ ಇದೆ ಮತ್ತು

ಬೇರೆ ಬೇರೆ ಜಿಲ್ಲಾ ಕೇಂದ್ರಗಳಿಗೆ ಮರಳು ಅವಶ್ಯಕತೆ ಇದೆ, ಅದು ಬಂದಿಲ್ಲವೆಂದರೆ development ಕಾರ್ಯಕ್ಕೆ ತೊಂದರೆಯಾಗುತ್ತದೆನ್ನುವ ಬೇಡಿಕೆ ಇಟ್ಟುಕೊಂಡು strike ಮಾಡುವಂಥ ಸಂದರ್ಭ ಬಂತು. ಆ ಸಂದರ್ಭದಲ್ಲಿ ನಾನು ಸಭೆಯನ್ನು ಕರೆದಾಗ, ಇವೆಲ್ಲ ನೋಡಿದ ಮೇಲೆ ನನಗನ್ನಿಸಿದ್ದು ಏನೆಂದರೆ, ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಮರಳು ನೀತಿಯೊಂದನ್ನು ಮಾಡಿದ್ದಾರೆ. ಅಲ್ಲಿಯ ಸರ್ಕಾರಕ್ಕೆ ಇದರಿಂದ ಪ್ರತಿ ವರ್ಷ ಸುಮಾರು 200 ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆ. ಆದರೆ, ನಮ್ಮ ರಾಜ್ಯಕ್ಕೆ ಮರಳಿನಿಂದ ಕೇವಲ 10 ಕೋಟಿ ರೂಪಾಯಿಗಳಷ್ಟು ಮಾತ್ರ ಆದಾಯ ಬರುತ್ತದೆ. ಅಂದರೆ, ಸುಮಾರು 190 ಕೋಟಿ ರೂಪಾಯಿಗಳಷ್ಟು ನಮಗೆ ಗೊತ್ತಿದೆಯೇ ಎಲ್ಲೆಲ್ಲೋ ಹೋಗುತ್ತಿದೆ. ಅಂದರೆ, ಮರಳು ತರಬೇಕಾದರೆ ಯಾವ್ಯಾವ ಇಲಾಖೆಯವರು ಏನೇನು ಮಾಡುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ನಾನೇನೂ ಹೇಳಬೇಕಾಗಿಲ್ಲ. ಇಲಾಖೆ ಇರಬಹುದು, ಅಲ್ಲಿ ಸಂಘ ಸಂಸ್ಥೆಗಳಿರಬಹುದು, ಆ ದೇವಸ್ಥಾನಕ್ಕೆ collection ಇರಬಹುದು ಅಥವಾ ಊರಿನ ಅಭಿವೃದ್ಧಿ, ಈ ತರಹ ಎಲ್ಲ ಮಾಡಿ ಸರ್ಕಾರಕ್ಕೆ ಬರಬೇಕಾದಂಥ ಆದಾಯದಲ್ಲಿ ಕುಂಠಿತವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಅದು ಗೊತ್ತಾದ ತಕ್ಷಣವೇ ಗಣಿ ಇಲಾಖೆ, ಸಾರಿಗೆ ಇಲಾಖೆ ಮತ್ತು ಬೇರೆ ಅಧಿಕಾರಿಗಳನ್ನು ಸೇರಿಸಿ ಒಂದು ತಂಡ ಮಾಡಿ ಕಳುಹಿಸಿದ್ದೆ. ಅವರು survey ಮಾಡಿಕೊಂಡು ತಮಿಳುನಾಡಿನ ಅಧಿಕಾರಿಗಳ ಜೊತೆ ಮತ್ತು ಅಲ್ಲಿಯ Principal Secretary ಜೊತೆ ಮಾತನಾಡಿದ್ದಾರೆ. ಅವರು ಅಲ್ಲಿ ಯಾವ ರೀತಿ ಮರಳು ನೀತಿಯನ್ನು ಮಾಡಿದ್ದಾರೆಂದರೆ, DD ಕಟ್ಟಬೇಕು. ಮರಳು ತೆಗೆಯುವಂಥದ್ದಕ್ಕೆ ಒಂದು ಕ್ರಮ ಮಾಡಿದ್ದಾರೆ. Check post ಗಳನ್ನು ಹಾಕಿದ್ದಾರೆ. ಎಲ್ಲಿಂದ ಆಚೆಗೆ ಮರಳು ಬರುತ್ತದೋ ಅಲ್ಲಿಂದ ಆ check postಗೆ ಬಂದ ತಕ್ಷಣ ಅಲ್ಲಿ DD ಮೂಲಕ ಹಣ ಕಟ್ಟಬೇಕು. ಯಾವ spotಗೆ ಮರಳು ಹೋಗಬೇಕೋ ಅದನ್ನು ಅಲ್ಲಿಯೇ ಇಂಥ spotಗೆ ಹೋಗಬೇಕೆಂದು ಬರೆದು ಕೊಡುತ್ತಾರೆ. ಅದು ಬಿಟ್ಟು ಬೇರೆ ಕಡೆಗೆ ಹೋಗುವ ಹಾಗಿಲ್ಲ. ಈ ತರಹ ಕಟ್ಟುನಿಟ್ಟು ಮಾಡಿರುವುದರಿಂದ ಅಲ್ಲಿ ಒಂದು ಕಡೆ ಸರ್ಕಾರಕ್ಕೆ ಆದಾಯ ಬರುತ್ತಿದೆ. ಮಾನ್ಯ ಸುಧಾಕರ್‌ರವರು ಹೇಳಿದ

ಹಾಗೆ ಹಳ್ಳಿಗಾಡಿನ ಜಿಲ್ಲಾಪಂಚಾಯತ್ ರಸ್ತೆಗಳೆಲ್ಲ 20 mm. thickness ಮಾತ್ರ ಇದ್ದು ಅಲ್ಲಿ ಡಾಂಬರು 12 mm ಸಹ ಹಾಕುವುದಿಲ್ಲ ಅದು ನಮಗೆ ಗೊತ್ತಿದೆ. ಅಂಥ ರಸ್ತೆಗಳಲ್ಲಿ ಇಂಥ 15–20 ಟನ್ ಭಾರದ ಲಾರಿಗಳು ಹೋದರೆ ಆ ಜಿಲ್ಲಾ ಪಂಚಾಯತ್ ರಸ್ತೆಗಳು ಸಾಮಾನ್ಯವಾಗಿ ಇದರಿಂದ ಉಳಿಯುವುದಕ್ಕೆ ಸಾಧ್ಯವೇ ಇಲ್ಲ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅದರಿಂದ ಇಲ್ಲಿ ಬಂದಂಥ ಹಣ ಸರಿಯಾಗಿ ಉಪಯೋಗವಾಗಬೇಕು ಮತ್ತು ಮರಳನ್ನು ಸಹ ಕೆಲವು ಕಡೆ PWD bridges ಇರುತ್ತದೆ ಅಂಥ ಕಡೆಯೇ ತೆಗೆಯುತ್ತಾರೆ. ಅಂದರೆ bridges ಇರುವ ಕಡೆ ಅದಕ್ಕೆ ಅಪಾಯ ಬರುವಂಥ ಸಾಧ್ಯತೆ ಇರುತ್ತದೆ. ಮಾನ್ಯ ಶಿವಶಂಕರ್‌ರವರು ಹೇಳಿದ ಹಾಗೆ ಕೋಲಾರ, ಚಿಕ್ಕಬಳ್ಳಾಪುರ ಭಾಗದಲ್ಲಿ, especially ಗೌರಿಬಿದನೂರು ಭಾಗದಲ್ಲಿ ನೀರಿನ ಮಟ್ಟ ಪ್ರತಿದಿನ ಕಡಿಮೆಯಾಗುತ್ತಿದೆ ಅಂದರೆ 1000–1200 ಅಡಿಗೆ ಕುಸಿಯುತ್ತಿದೆ. ಒಂದು ಕಡೆ ಸರ್ಕಾರಕ್ಕೆ ಅನ್ಯಾಯವಾಗುತ್ತಿದೆ, ಇನ್ನೊಂದು ಕಡೆ ಪರಿಸರಕ್ಕೆ ಹಾನಿಯಾಗುತ್ತಿದೆ ಇವೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಸರ್ಕಾರ ಮರಳು ನೀತಿಯನ್ನು ತಮಿಳುನಾಡಿನಲ್ಲಿ ಏನಿದೆ ಅದೇ ರೀತಿಯ ಮರಳು ನೀತಿಯನ್ನು ತರಬೇಕೆಂದು ತೀರ್ಮಾನ ಮಾಡಿದೆ. ಅದನ್ನು ತರುತ್ತೇವೆ. ಮುಂದಿನ cabinetಗೆ ಅದನ್ನು ಮಂಡಿಸಬೇಕೆಂದು ನಮ್ಮ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಮುಂದಿನ cabinet ನಲ್ಲಿ ಇದಕ್ಕೊಂದು ನೀತಿಯನ್ನು ರೂಪಿಸಿದರೆ ಒಂದು ರೀತಿ ನಾವು ಪರಿಸರವನ್ನೂ ಕಾಪಾಡಿದ ಹಾಗೆ ಆಗುತ್ತದೆ ಮತ್ತು ಸರ್ಕಾರಕ್ಕೆ ಆದಾಯ ಸಹ ಬರುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಮರಳನ್ನು overload ಮಾಡಿ ಏನು ರಸ್ತೆಗಳನ್ನು ಹಾಳು ಮಾಡುತ್ತಿದ್ದಾರೆ...

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): That is not the problem. The problem is, ಮರಳು ನೀತಿ ತಂದು ಸರ್ಕಾರಕ್ಕೆ ಆದಾಯ ತರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿ. ಮಾನ್ಯ ಸದಸ್ಯರು ಹೇಳಿದ

ಸಮಸ್ಯೆ ಏನೆಂದರೆ, ಅವರ ಭಾಗದಲ್ಲಿ ಮರಳು ತೆಗೆಯುವುದನ್ನು 2007ರಿಂದ ನಿಲ್ಲಿಸಿದ್ದಾರೆ. ಆದರೆ, ಸರ್ಕಾರದಿಂದ ನೀವು ಯಾವಾಗ ಇದರ ತೀರ್ಮಾನ ಮಾಡಿದರೋ, ಲಾರಿ ಮಾಲೀಕರ ಸಂಘಾನ ನಿಮ್ಮ ಜೊತೆಯಲ್ಲಿ ಏನಾಯಿತೋ, ಸಂಧಾನವಾಗಿ ತಮಿಳುನಾಡಿನಲ್ಲಿ ಏನು ಮರಳು ನೀತಿ ಮಾಡಿದ್ದಾರೆ ಅದರ ಹಾಗೆ ಇಲ್ಲೂ ಸಹ ಮರಳು ನೀತಿ ಮಾಡುತ್ತೇವೆಂದು ಘೋಷಣೆ ಮಾಡಿದ ಮೇಲೆ, ಅವರೇನು demands ಇಟ್ಟಿದ್ದರು ಆ demands ನ್ನೆಲ್ಲ ಚರ್ಚೆ ಮಾಡಿದ ಮೇಲೆ ಈಗಾಗಲೇ ಅಲ್ಲಿ ಮತ್ತೆ ಮರಳು ತೆಗೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅದನ್ನು ಮಾಡಕೂಡದು ಎನ್ನುವುದು ಅವರ ಒತ್ತಾಯವಾಗಿದೆ.

ಶ್ರೀ ಆರ್. ಅಶೋಕ್: ಸಿದ್ದರಾಮಣ್ಣನವರೆ, ಹಿಂದೆ ಯಾವ್ಯಾವ ಏರಿಯಾಗಳಲ್ಲಿ ತೆಗೆಯಬೇಕೆಂದು ಮಾಡಿದ್ದರು...

ಶ್ರೀ ಸಿದ್ದರಾಮಯ್ಯ: ಹಿಂದೆ ಅಲ್ಲಿ ತೆಗೆಯುತ್ತಿರಲಿಲ್ಲ, ಅದನ್ನು ಹಾಗೆಯೇ ಮುಂದುವರಿಸಬೇಕು. ಅಲ್ಲಿ ಈಗ ಪುನಃ ಮರಳು ತೆಗೆಯುವುದನ್ನು ನಿಲ್ಲಿಸಬೇಕು.

ಶ್ರೀ ಎನ್. ಸಂಪಂಗಿ: ಹಿಂದೆ ಅಲ್ಲಿ ಮರಳು ತೆಗೆಯುವುದಕ್ಕೆ ನಿಷೇಧ ಇತ್ತು. ಅದನ್ನೇ ಈಗಲೂ ಮುಂದುವರಿಸಬೇಕು.

ಶ್ರೀ ಆರ್. ಅಶೋಕ್: ಮೊದಲು ಯಾವ್ಯಾವ ಏರಿಯಾದಲ್ಲಿ ಮರಳನ್ನು ತೆಗೆಯಬೇಕೆಂಬುದರ ಬಗ್ಗೆ ಒಂದು ಸ್ಪಷ್ಟವಾದ ನಿರ್ದೇಶನವಿತ್ತು. ಅದರ ಆಧಾರದ ಮೇಲೆಯೇ ಮರಳು ತೆಗೆಯುತ್ತಿದ್ದರು. ಆ ಸಂದರ್ಭದಲ್ಲಿ ಗೌರಿಬಿದನೂರು ಇಲ್ಲೆಲ್ಲಾ ಮರಳು ತೆಗೆಯುತ್ತಿರಲಿಲ್ಲ. ಈಗ ಅಲ್ಲಿ ಮರಳು ತೆಗೆಯುತ್ತಿದ್ದಾರೆಂಬುದು ನನ್ನ ಗಮನಕ್ಕೂ ಬಂದಿದೆ. ಆದ್ದರಿಂದ, Grey area ಎಲ್ಲಿರುತ್ತದೆಯೋ ಅಲ್ಲಿ ಅಂದರೆ ಇಂಥಿಂಥ ಜಿಲ್ಲೆ, ತಾಲ್ಲೂಕುಗಳಲ್ಲಿ ಮರಳನ್ನು ಯಾರೂ ತೆಗೆಯಬಾರದೆಂದು ಸರ್ಕಾರದ ಅಧಿಕಾರಿಗಳು ಆದೇಶ ಮಾಡಿದ್ದಾರೆ. ಅದರ ಮಾಹಿತಿ ಇದೆ. ಇಂಥ ಕಡೆ ಮರಳು ತೆಗೆಯಲೇಬಾರದೆಂಬುದು ನಮ್ಮ ಈ ಹೊಸ ನೀತಿಯಲ್ಲಿ ಸೇರಿದೆ. ಬೇರೆ ಕಡೆ ಮರಳನ್ನು ತೆಗೆಯುವುದಕ್ಕೆ ಹೊಸದಾಗಿ ಅನುಮತಿ ಕೊಡುತ್ತಿದ್ದೇವೆ, ಅಲ್ಲಿ ಅವರು ಯಾವ ಮಟ್ಟದಲ್ಲಿ

ಮರಳು ತೆಗೆಯಬೇಕೆನ್ನುವುದರ ಬಗ್ಗೆಯೂ ಸಮಗ್ರವಾದ ನೀತಿಯನ್ನು ಜಾರಿಗೆ ತರುತ್ತಿದ್ದು, ಅದರಿಂದ ಇದಕ್ಕೆಲ್ಲ ಒಳ್ಳೆಯ ಪರಿಹಾರ ಸಿಗುವುದಕ್ಕೆ ಸಾಧ್ಯವಾಗುತ್ತದೆ. ತಾವೇನು ಈ ಭಾಗದಲ್ಲೇನು ಆಗುತ್ತಿದೆ ಎನ್ನುವ ಬಗ್ಗೆ ಗಮನ ಸೆಳೆದಿದ್ದೀರಿ, ನಮ್ಮ ಅಧಿಕಾರಿಗಳಿಗೆ ಹೇಳಿ over-load ಹಾಕುವಂಥದ್ದು, ಮರಳು ತೆಗೆಯುವಂಥದ್ದರ ಬಗ್ಗೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಡಾ: ಎಂ.ಸಿ. ನಾಣಯ್ಯ: Over-load ಹಾಕುವ ಪ್ರಶ್ನೆಯಲ್ಲ. ಅವರು ಹೊಸದಾಗಿ ನೀತಿ ಮಾಡುವವರೆಗೆ ನಮ್ಮ ಎರಡು ಜಿಲ್ಲೆಗಳಲ್ಲಿ ತಕ್ಷಣ ಮರಳು ತೆಗೆಯುವುದನ್ನು ನಿಲ್ಲಿಸಬೇಕು.

ಶ್ರೀ ಎನ್. ಸಂಪಂಗಿ: ನಮ್ಮ ಜಿಲ್ಲೆಯಲ್ಲಿ ಮರಳು ತೆಗೆಯುವುದನ್ನು ನಿಲ್ಲಿಸಬೇಕಷ್ಟೆ.

ಒಬ್ಬ ಮಾನ್ಯ ಸದಸ್ಯರು: ನನ್ನ ಕ್ಷೇತ್ರದಲ್ಲಿಯೂ ಇದೇ ರೀತಿಯ ಪ್ರಾಬ್ಲಂ ಇದೆ. ದಯಮಾಡಿ, ಹೊಸ ನೀತಿ ರೂಪಿಸುವವರೆಗೆ ಮರಳು ತೆಗೆಯುವುದನ್ನು ನಿಲ್ಲಿಸುವುದಕ್ಕೆ ಹೇಳಿ. Mines and Geology Departmentನ ಪ್ರಕಾರ ನಮ್ಮ ಭಾಗವೆಲ್ಲ dark area ಆಗಿದೆ.

ಶ್ರೀ ಎನ್. ಸಂಪಂಗಿ: ಕಳೆದ 10 ದಿವಸಗಳಿಂದ ಕೊಳ್ಳೆ ಹೊಡೆಯುತ್ತಿದ್ದಾರೆ. ಪ್ರತಿ ದಿನ ಹಗಲು ರಾತ್ರಿ ಮರಳು ತೆಗೆಯುತ್ತಿದ್ದಾರೆ.

(ಗೊಂದಲ)

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ: ನದಿ ಪಾತ್ರದಲ್ಲಿ ಮರಳು ತೆಗೆಯುತ್ತಿರುವುದರಿಂದ ಸಮಸ್ಯೆಯಾಗುತ್ತಿದೆ. ಇದನ್ನಾದರೂ control ಮಾಡಿ.

(ಗೊಂದಲ)

ಡಾ: ಎಂ.ಸಿ. ಸುಧಾಕರ್: ನಮ್ಮ ಎರಡು ಜಿಲ್ಲೆಗಳಲ್ಲಿ ದಯವಿಟ್ಟು ಮರಳು ತೆಗೆಯುವುದನ್ನು ಕೂಡಲೇ ನಿಲ್ಲಿಸಬೇಡಿ.

ಶ್ರೀ ಸಿದ್ದರಾಮಯ್ಯ: Clarification ಕೇಳಿ ಉತ್ತರ ಪಡೆಯುವುದಕ್ಕೂ ಸಮಯವಿಲ್ಲ. ನಮ್ಮ ರಾಷ್ಟ್ರೀಯ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷರಾದ ಶ್ರೀಮತಿ ಸೋನಿಯಾ ಗಾಂಧಿಯವರು ಮೈಸೂರಿಗೆ ಬರುತ್ತಿದ್ದಾರೆ. ನಾನು Airportಗೆ ಹೋಗಬೇಕು. Rule 69 ಅಡಿಯಲ್ಲಿ ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ಇತ್ತು. ಆದ್ದರಿಂದ, ಬರಗಾಲದ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ.

6.30 P.M.

ಉಪಾಧ್ಯಕ್ಷರು: ಇಬ್ಬರು ಸದಸ್ಯರು ಮಾತನಾಡುವರು ಇದ್ದಾರೆ.

ಶ್ರೀ ಕೆ.ಬಿ. ಚಂದ್ರಶೇಖರ್ (ಕೆ.ಆರ್. ಪೇಟೆ): ಕಳೆದ ಮೂರು ದಿನಗಳಿಂದ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಬಗ್ಗೆ ವಿಧಾನ ಸಭೆಯಲ್ಲಿ ನಮಗೋಸ್ಕರ ಐತಿಹಾಸಿಕ ಚರಿತ್ರೆಯನ್ನು ಬರೆಯತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶದ ಜನರಿಗೆ ಒಳ್ಳೆಯದಾಗುತ್ತದೆನ್ನುವ ಭಾವನೆಯನ್ನು ಇಡೀ ಕರ್ನಾಟಕ ರಾಜ್ಯದ ಜನ ಬಹಳ ಆಸೆಯಿಂದ ಕಾಯುತ್ತಿದ್ದರು, ನಾನು ಇಂಧನ ಸಚಿವರ ಗಮನ ಸೆಳೆಯುವುದಕ್ಕೆ ಇಚ್ಚೆಪಡುತ್ತೇನೆ.

ಉಪಾಧ್ಯಕ್ಷರು: Please, clarification ಕೇಳಿ. ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಬಿ. ಚಂದ್ರಶೇಖರ್: ರೈತರು ಬೋರ್‌ವೆಲ್ ಹಾಕಿಸಿಕೊಂಡು unauthorized ಆಗಿ ಪವರ್ ತೆಗೆದುಕೊಂಡು ಕಳೆದ ಹತ್ತಾರು ವರ್ಷಗಳಿಂದ ನೀರನ್ನು ಉಪಯೋಗಿಸುತ್ತಿದ್ದಾರೆ. ಅಂಥ ರೈತರನ್ನು ನಿಮ್ಮ ಇಲಾಖೆಯಲ್ಲಿ registration ಮಾಡಿಕೊಳ್ಳದಿರುವುದು ಇಡೀ ರಾಜ್ಯದಲ್ಲಿ ಬಹುತೇಕ ಹೀಗೆ ಆಗಿದೆ. T.C. ಸುಟ್ಟುಹೋದರೆ ಹೊಸ ಟಿ.ಸಿ. ಹಾಕಿಕೊಡಿ ಎಂದರೆ ನಂಬರ್ ಹಾಕದ ವೈರ್‌ಗಳನ್ನು ಕಿತ್ತು ಹಾಕಿ ಇಲಾಖೆಯವರು ಆ ರೈತರಿಗೆ ತೊಂದರೆ ಕೊಡುತ್ತಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಒಬ್ಬ ರೈತ ಒಂದು ಪಂಪ್‌ಸೆಟ್

ಹೊಂದಬೇಕಾದರೆ ಸುಮಾರು ಒಂದು, ಒಂದೂವರೆ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅವನು ಈಗಾಗಲೇ 5–6 ವರ್ಷ unauthorises ಆಗಿ line ಎಳೆದುಕೊಂಡಿದ್ದಾನೆ. ಅವನನ್ನು ನಂಬರ್ ಮಾಡಿಕೊಳ್ಳುವುದು ಇಲಾಖೆಯವರ ಕರ್ತವ್ಯ. ಆದರೆ, ಇಲಾಖೆಯವರು ಅವನನ್ನು ನಂಬರ್ ಮಾಡಿಕೊಳ್ಳದೆ over-load ಆಗಿ ಟಿ.ಸಿ. ಸುಟ್ಟುಹೋದರೆ, ಆಗ ಇಲಾಖೆಯವರು, ನಂಬರ್ ಆಗಿಲ್ಲ, ನಾವು ಲೈನ್ ಕಿತ್ತುಹಾಕುತ್ತೇವೆಂದು ಹೇಳಿ ಮಾಡುತ್ತಿದ್ದಾರೆ. ಈ ಬಗ್ಗೆ ಲೈನ್ ಕಿತ್ತು ಹಾಕದ ಹಾಗೆ ಸಂಬಂಧಪಟ್ಟ ಇಲಾಖೆಗೆ ಮಾನ್ಯ ಮಂತ್ರಿಯವರು ಆದೇಶ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು, ಮರಳು ಬಗ್ಗೆ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. ನಾನು ಒಂದೆರಡು ಅಂಶವನ್ನು ನೀರಾವರಿ ಮಂತ್ರಿಯವರಿಗೆ ಹೇಳುತ್ತೇನೆ. ಬೇರೆ ಬೇರೆ ರಾಜ್ಯಗಳಲ್ಲಿ ಯಾವ್ಯಾವ ಡ್ಯಾಂಗಳಿವೆ. ಅಲ್ಲಿ ಹೂಳು ತೆಗೆಯುವ ಕಾರ್ಯಕ್ರಮವನ್ನು ಅವರು ಹಮ್ಮಿಕೊಂಡಿದ್ದಾರೆ. ಆ ಡ್ಯಾಂಗೆ ಮರಳು ಬಂದ ಸಂದರ್ಭದಲ್ಲಿ ಆ ಮರಳನ್ನು ಅಥವಾ ಮರಳನ್ನು ತೆಗೆಯುವುದಕ್ಕೆ ಬೇರೆ contractor ಗಳಿಗೆ ಹರಾಜು ಮಾಡುವ ಸನ್ನಿವೇಶವನ್ನು ಕೆಲವು ರಾಜ್ಯ ಮಾಡಿರುವ ಉದಾಹರಣೆ ಇದೆ. ಆದ್ದರಿಂದ, ಕರ್ನಾಟಕ ರಾಜ್ಯದ ಬಹುತೇಕ ಡ್ಯಾಂಗಳೇನಿವೆ, ಅಲ್ಲಿ ಹೂಳು ತುಂಬಿಕೊಂಡಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ.

ಉಪಾಧ್ಯಕ್ಷರು: ಇದಕ್ಕೆ ಆಗಲೇ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಮನಃ ಹೇಳಿದ್ದನ್ನೇ ಏಕೆ ಹೇಳುತ್ತಿದ್ದೀರಿ? ಅವರು ಏನು ಮಾಡುತ್ತೇವೆಂದು ಸರ್ಕಾರದ ನಿಲುವನ್ನು ಹೇಳಿದ್ದಾರೆ. ಮತ್ತೆ ಮತ್ತೆ ಅದನ್ನೇ ಹೇಳಿದರೆ ಏನರ್ಥ?

ಶ್ರೀ ಕೆ.ಬಿ. ಚಂದ್ರಶೇಖರ್: ಡ್ಯಾಂನಲ್ಲಿ ಹೂಳು ತುಂಬಿಕೊಂಡಿದೆ, ಮರಳು ತೆಗೆದ ನಂತರ ಅದನ್ನು ಹರಾಜಾದರೂ ಮಾಡಬಹುದು. ಟೆಂಡರ್ ಕರೆದು ಯಾರಿಗಾದರೂ ಹರಾಜು ಮಾಡಿಕೊಟ್ಟರೆ ಅದರಿಂದ ಸಾರ್ವಜನಿಕರಿಗೂ ಮರಳು ಸಿಗುತ್ತದೆ ಮತ್ತು ಡ್ಯಾಂನಲ್ಲಿರುವ ಹೂಳನ್ನೂ ತೆಗೆದ ಹಾಗಾಗುತ್ತದೆ. ಅದರ ಕಡೆ ತಾವು ಗಮನಹರಿಸಬೇಕೆಂದು ಮನವಿ ಮಾಡುತ್ತೇವೆ. ಅಲ್ಲದೆ, ಇದರಿಂದ water sources ಅನ್ನು ಹೆಚ್ಚು ಮಾಡಿದ ಹಾಗಾಗುತ್ತದೆ. ಮಾನ್ಯ

ಸಚಿವರು ಇದರ ಕಡೆ ಗಮನ ಕೊಟ್ಟು ಒಂದೊಂದು ಡ್ಯಾಂಗಳಿಗೆ ಬೇಕಾದರೆ ನೀವು auction ಆದರೂ ಮಾಡಿ, ಅದರಿಂದ ಬರುವ ಮರಳನ್ನು action ಆದರೂ ಮಾಡಿ ಅಥವಾ ಸರ್ಕಾರ ಏನು ನೀತಿ ನಿಯಮ ಮಾಡುತ್ತದೆ ಅದನ್ನು ಮಾಡಿದರೆ ಸಾರ್ವಜನಿಕರಿಗೆ ಮರಳು ಸಿಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ): ನಾನು ಈ ಹಿಂದೆಯೇ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಿರಬೇಕಾದರೆ ಬರ ಮತ್ತು ಅತಿವೃಷ್ಟಿ ಬಗ್ಗೆ ಮಾತನಾಡಿದರು. ಸರ್ಕಾರಕ್ಕೆ ಮನವಿ ಏನೆಂದರೆ, ಅತಿವೃಷ್ಟಿ ಪ್ರದೇಶದಲ್ಲಿ ಒಂದು ಸಂಪುಟ ಸಭೆ ಆಗಬೇಕು. ಅತಿವೃಷ್ಟಿ ಬಗ್ಗೆ ಎಲ್ಲಾ ಸರ್ಕಾರಗಳೂ ನಿರ್ಲಕ್ಷ್ಯ ಮಾಡಿವೆ ಎನ್ನುವ ಅಭಿಪ್ರಾಯ ಆ ಭಾಗದ ಜನತೆಗಿದೆ. ಚಿಕ್ಕಮಗಳೂರು, ಕೊಡಗು, ಕಾರವಾರ, ಮಡಿಕೇರಿಗೆ ಸಂಬಂಧಪಟ್ಟಂತೆ ಸಂಪುಟ ಸಭೆ ಆ ಭಾಗಗಳಲ್ಲಿ ಆಗಬೇಕು. ಹಾಗೆಯೇ, ಆನೆ ಹಾವಳಿಯಿಂದಾದ ನಷ್ಟಕ್ಕೆ ಹಳೆಯ ಕಾಲದ ಪರಿಹಾರವನ್ನು ಕೊಡುತ್ತಿದ್ದಾರೆ. ಇವತ್ತು ಮಲೆನಾಡಿನಲ್ಲಿ ಯಾರೂ ಸಹ ಬೆಳೆ ಬೆಳೆಯುವ ಪರಿಸ್ಥಿತಿಯಲ್ಲಿಲ್ಲ. ಕಾಡಿನಲ್ಲಿರುವ ಸಂಪನ್ಮೂಲಗಳ ಕೊರತೆಯಾಗಿ, ಮೇವು ಕೊರತೆಯಾಗಿ, ಆನೆಗಳು ಹಳ್ಳಿಗಳಿಗೆ ಬಂದು ನುಗ್ಗುತ್ತಿವೆ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಊರಿನಲ್ಲಿ ಕೂಡ ಆನೆ ಹಾವಳಿಯಿದೆ. ಆದ್ದರಿಂದ, ಹಳೆಯ ಪರಿಹಾರ ನೀತಿಯನ್ನು ಬಿಟ್ಟು ಹೊಸ ಪರಿಹಾರ ನೀತಿಯನ್ನು ತರಬೇಕು ಮತ್ತು ಆನೆಗಳನ್ನು ಸ್ಥಳಾಂತರ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ನೆಮ್ಮದಿ ಕೇಂದ್ರದ ಮೂಲಕ ಕಾರ್ಡ್ ಅನ್ನು ಬದಲಾವಣೆ ಮಾಡಬೇಕು. ಅದರಿಂದ ಜನರಿಗೆ ಬಹಳ ಅಶಾಂತಿ ಆಗಿದೆ. ನೆಮ್ಮದಿ ಕಾರ್ಡ್ ಅನ್ನು ತೆಗೆಯಬೇಕು. ಏಕೆಂದರೆ, computer, website ಅವಧಿಯಲ್ಲಿ ವೇಗ, ಉತ್ಪನ್ನ ಜಾಸ್ತಿಯಾಗುತ್ತದೆನ್ನುವ ಕನಸು ಕಂಡೆವು. ಅತ್ಯಂತ ತದ್ವಿರುದ್ಧವಾದುದು ಎಂದರೆ ನೆಮ್ಮದಿ ಕೇಂದ್ರ. ಅದು ಸುಧಾರಣೆ ಆಗಬೇಕು ಅಥವಾ ಅದನ್ನು stop ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀಮತಿ ಸೀಮಾ ಅಶೋಕ್ ಮಸೂತಿ (ಧಾರವಾಡ): ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿಶೇಷವಾದ, ವಿಶಿಷ್ಟವಾದ ಅಧಿವೇಶನವನ್ನು ಕರೆದಿದ್ದು ಇಲ್ಲಿ ಅತ್ಯಂತ ಅರ್ಥಪೂರ್ಣವಾದ ಚರ್ಚೆಯಾಗಿದೆ. ಬೆಳೆ ವಿಮೆ ಯೋಜನೆ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಮಾನ್ಯ ಮುಖ್ಯಮಂತ್ರಿಯವರೂ ಸಹ ಇದಕ್ಕೆ ಸ್ಪಂದಿಸಿ ಎಲ್ಲರ ಪ್ರಶ್ನೆಗೂ ಉತ್ತರ ಸಿಗುವ ರೀತಿಯಲ್ಲಿ ಬೆಳೆ ವಿಮೆ ಯೋಜನೆಯನ್ನು ಸರಳೀಕರಣಗೊಳಿಸಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಘಟಕವನ್ನಾಗಿ ಇಟ್ಟುಕೊಂಡು ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸುವುದಾಗಲಿ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ premium ಹಣವನ್ನು ಸರ್ಕಾರವೇ 50% ಭರಿಸುವುದೆಂದು ತೀರ್ಮಾನಿಸಿರುವುದೂ ಸಹ ರೈತರಿಗೆ ಸಂತೋಷವನ್ನು ತರುವಂಥ ಒಂದು ವಿಚಾರವಾಗಿದೆ. ಏಕೆಂದರೆ, ರೈತರ ವಿಚಾರವಾಗಿ ಚರ್ಚೆ ಮಾಡಲು ಕರೆದಿರುವ ಈ ಅಧಿವೇಶನ ಇತಿಹಾಸ ಸೃಷ್ಟಿ ಮಾಡಿದೆ. ಬೆಳೆ ವಿಮೆ ಯೋಜನೆಯನ್ನು 1999–2000ನೇ ಸಾಲಿನಲ್ಲಿ ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು ಜಾರಿಗೆ ತಂದರು. ನಮ್ಮದು ಹಳ್ಳಿಗಳ ದೇಶ, 70% ರೈತರೇ ಇದ್ದಾರೆ, ರೈತರೇ ನಮ್ಮ ಬೆನ್ನುಲುಬು ಎಂದು ಹಿಂದಿನ ಎಷ್ಟೋ ಸರ್ಕಾರಗಳು ಹೇಳುತ್ತಿರುವುದನ್ನು ಕೇಳುತ್ತಾ ಬಂದಿದ್ದಾಯಿತು. ಕೋಳಿ, ಕುರಿ, ದನ ಸತ್ತರೆ insurance ಇದೆ. ಆದರೆ, ನಮ್ಮ ರೈತ ಬೆಳೆದಂಥ ಬೆಳೆ ನಾಶವಾದಾಗ ಅದಕ್ಕೆ insurance ಇಲ್ಲವೆನ್ನುವ ದೃಷ್ಟಿಕೋನವನ್ನಿಟ್ಟುಕೊಂಡು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ವರದಾನವಾಗಿ ಈ ಯೋಜನೆಯನ್ನು ರೈತರಿಗೆ ಕೊಟ್ಟರು. ಮಾನ್ಯ ವಾಜಪೇಯಿಯವರ ಸರ್ಕಾರ ಇದ್ದಂಥ ಕಾಲದಲ್ಲಿ 2–3 ವರ್ಷಗಳ ಕಾಲ ರೈತರು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಂಡರು. ಆನಂತರ, ಈ ಬೆಳೆ ವಿಮೆ ಯೋಜನೆ ಎಂದರೇನೆಂದು ರೈತರೇ ತಮ್ಮ ತಲೆ ಚಚ್ಚಿಕೊಳ್ಳುವಂಥ ಪರಿಸ್ಥಿತಿ ತಂದಿಟ್ಟಿದ್ದಾರೆ. ಅಂಕಿ ಸಂಖ್ಯೆಗಳ ಇಲಾಖೆಯವರಾಗಲಿ, ಕೃಷಿ ಇಲಾಖೆಯವರಾಗಲಿ, ಕಾರ್ಪೋರೇಷನ್‌ರವರಾಗಲಿ, ಎಲ್ಲರೂ ಸಹಿತ ಅಗ್ರಿಗೇಟ್ ತೆಗೆದು ಆವರೇಜ್‌ನ್ನು ಗಣನೆಗೆ ತೆಗೆದುಕೊಂಡು ಅವರಿಗೆ ಬರುವಂಥದ್ದನ್ನು ಲೆಕ್ಕ

ಹಾಕುತ್ತಾರೆ. ಈಗ ಹತ್ತು ಚೀಲ ಹೆಸರು ಬೆಳೆಯುವಂಥ ರೈತ ಒಂದು ಚೀಲ ಬೆಳೆದಿರುತ್ತಾನೆ. ಅವನು ಕಟ್ಟಿದಂಥ ಪ್ರೀಮಿಯಮ್‌ಗಿಂತಲೂ ಕಡಿಮೆ ಹಣ ಬರುವ ಸಂದರ್ಭ ಇವತ್ತಿನ ದಿವಸ ಬೆಳೆ ವಿಮೆ ಯೋಜನೆಯಲ್ಲಿ ಆಗಿದೆ. ಅದಕ್ಕೆ ವಿಶೇಷ ಅಧಿವೇಶನದಲ್ಲಿ ನಾವೆಲ್ಲರೂ ಕೂಡಿ ಈ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಎಲ್ಲರೂ ತಮ್ಮ ತಮ್ಮ ಧ್ವನಿ ಎತ್ತಬೇಕಾಗಿದೆ. ಇಲ್ಲಿ ಎಲ್ಲರೂ ಕೂಡ ಶಾಸಕರು ಫೈಲ್‌ಗಳನ್ನು ತಂದು ಮಂತ್ರಿಗಳ ಹತ್ತಿರ ಹೋಗಿ ತಮ್ಮ ವಿಷಯಗಳನ್ನು ಹೇಳಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಹೋಗುತ್ತಾರೆ. ಆದರೆ ರೈತ ಬೆಂಗಳೂರಿಗೆ ಬಂದು ಅವನು ತನ್ನ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವನ ಪರವಾಗಿ ನಮ್ಮೆಲ್ಲರದೂ ಕೂಡ ಒಂದೇ ಕೂಗು ಆಗಬೇಕು. ಆ ರೈತನಿಗೆ ಇದು ಅವೈಜ್ಞಾನಿಕವಾದ ಬೆಳೆ ವಿಮೆ ಯೋಜನೆಯಾಗಿದ್ದು, ಇಲ್ಲಿ ನಾವೇನು ಅದು ಆಗಬೇಕು ಇದು ಆಗಬೇಕೆಂದು ಬಡಿದಾಡುತ್ತಿದ್ದೇವೆ, ಆದರೆ ಈ ಅವೈಜ್ಞಾನಿಕವಾದ ಬೆಳೆ ವಿಮೆ ಯೋಜನೆಯನ್ನು ಕೇಂದ್ರ ಸರ್ಕಾರದವರು ರೈತರಿಗೆ ವರದಾನವಾಗಿರುವ ಈ ಯೋಜನೆಯನ್ನು ಬಹಳ ಚಿಂತನೆ ಮಾಡಿ ಅವರು ರೈತರಿಗೆ ಒದಗಿಸುವಂಥ ಕೆಲಸ ಆಗಬೇಕೆಂದು ನಾವೆಲ್ಲರೂ ಕೂಡ ಒಕ್ಕೊರಲಿನಿಂದ ಈವತ್ತು ಸಂದೇಶವನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕೆನ್ನುವ ಮಾತನ್ನು ಹೇಳುತ್ತಾ, ಹಿಂದೆ ನಾನು ಜಿಲ್ಲಾ ಪಂಚಾಯತಿಯ ಮೆಂಬರ್ ಇರುವಾಗ ಕೇಂದ್ರ ಸರ್ಕಾರವರು, "ನಮ್ಮ ಹೊಲ ನಮ್ಮ ರಸ್ತೆ" ಯೋಜನೆಯಲ್ಲಿ ರೈತರಿಗೆ ಹೊಲದ ರಸ್ತೆಗಳನ್ನು ಮಾಡಲಿಕ್ಕೆ ವಿಶೇಷವಾದ ಅನುದಾನ ಕೊಡುತ್ತಿದ್ದರು. ನಾವು ಈಗ ಇಲ್ಲಿ ಹೇಳುತ್ತಿದ್ದೇವೆ. ಫಾರಿನ್‌ಗೆ ಹೋಗಿ ಬಂದಿದ್ದೇವೆ. ಅಲ್ಲಿ ಒಬ್ಬ ಎರಡು ಎಕರೆಯಲ್ಲಿ ದ್ರಾಕ್ಷಿ ಬೆಳೆಯುವವನು, ಸೇಬು ಬೆಳೆಯುವವನು, ಕಾರ್ ತೆಗೆದುಕೊಂಡು ಹೊಲಕ್ಕೆ ಹೋಗುತ್ತಾನೆ. ಆದರೆ, ನಮ್ಮ ರೈತ ಈಗ 8–10 ಕಿ.ಮೀ. ದೂರದಲ್ಲಿರುವ ಅವನ ಹೊಲಕ್ಕೆ ಹೋಗಬೇಕಾದರೆ ಅವನು ಮೇನ್ ರೋಡ್‌ನಲ್ಲಿ ಅವನು ತನ್ನ ಚಕ್ಕಡಿ ನಿಲ್ಲಿಸಿ ಹೋಗಬೇಕು. ಕಾರು ತೆಗೆದುಕೊಂಡು ಹೋಗುವ ಪರಿಸ್ಥಿತಿ ನಮ್ಮ ರೈತನಿಗೆ ಯಾವಾಗ ಬರಬೇಕು? ಬರುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕೆ ನಾವೆಲ್ಲರೂ ಕೂಡ ಆ ರೈತನಿಗೆ ಹೊಲಕ್ಕೆ ಹೋಗುವ ರಸ್ತೆಯನ್ನು ನಿರ್ಮಿಸುವುದಕ್ಕೆ ಅವಕಾಶ ಮಾಡಿ ಕೊಡಬೇಕು.

ಪ್ರತಿಯೊಂದು ತಾಲ್ಲೂಕುಗಳಲ್ಲಿ ದೊಡ್ಡ ದೊಡ್ಡ ಕೆರೆಗಳಿವೆ. ಈಗ ನಾವು ಯಾರು ಮಂತ್ರಿಗಳ ಬೆನ್ನು ಹತ್ತಿ ಕೆರೆಗಳ ಹೂಳೆತ್ತುವುದಕ್ಕೆ ದುಡ್ಡು ತೆಗೆದುಕೊಳ್ಳುತ್ತೇವೆ. ಆ ಕೆರೆಗಳ ಮಾತ್ರ ಹೂಳುತ್ತುವುದಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇರುವ ಕೆರೆಗಳನ್ನು ಹೂಳೆತ್ತುವುದು ಅವಶ್ಯಕವಿದೆ. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ ಸುಮಾರು 108 ಎಕರೆ ಇರುವ ತಡಕೋಡಿ ಕೆರೆ ಎಂಬ ಒಂದು ಕೆರೆ ಇದೆ. ಅದು ಜಿಲ್ಲಾ ಪಂಚಾಯಿತಿಯಿಂದ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಜೊತೆಗೆ ಅದನ್ನು ಮೈನರ್ ಇರಿಗೇಷನ್ ಇಲಾಖೆಗೆ ವರ್ಗಾಯಿಸಿರುವುದಿಲ್ಲ. ಅದಕ್ಕೆ ಹಿಂದೆ ಆಗಿರುವ ತಪ್ಪುಗಳು ಮುಂದೆ ಆಗಬಾರದು. ಆದುದರಿಂದ ನನ್ನ ಭಾಗದಲ್ಲಿರುವ ಸುಮಾರು 108 ಎಕರೆ ಇರುವ ಕೆರೆಯ ಹೂಳೆತ್ತಿದರೆ ಅಲ್ಲಿರುವ ಸುಮಾರು 15–20 ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬಹುದು. ಇಂಥ ಯೋಚನೆ ಮಾಡುವ ಸಂದರ್ಭ ಈ ಅಧಿವೇಶನದಲ್ಲಿ ಸಿಕ್ಕಿದೆ ಎನ್ನುವ ಮಾತನ್ನು ಹೇಳುತ್ತೇನೆ. ನಾವೆಲ್ಲರೂ ಈ ಸ್ತ್ರೀಶಕ್ತಿ ಸಂಘದ ಬಗ್ಗೆ ಮಾತನಾಡಿದ್ದೇವೆ. ಸ್ತ್ರೀಶಕ್ತಿ ಸಂಘದ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವರಾದ ಸಹೋದರಿಯಾದ ಕು: ಶೋಭಾ ಕರಂದ್ಲಾಜೆಯವರು ಅಲ್ಲಿ ಟ್ಯಾಕ್ಸ್ ಕಲೆಕ್ಷನ್ ಮಾಡುವುದಕ್ಕೆ ಸಹಿತ ಸ್ತ್ರೀಶಕ್ತಿ ಸಂಘದವರಿಗೆ ಅವಕಾಶ ಕೊಡುತ್ತೇವೆಂದು ಹೇಳಿದರು. ಇದು ಸ್ವಾಗತಾರ್ಹ. ಅವರ ಯೋಚನೆ ಇಡೀ ಸ್ತ್ರೀಶಕ್ತಿ ಸಂಘದವರಿಗೆ ವರದಾನವಾಗಲಿ ಎಂದು ಹೇಳುತ್ತೇನೆ. ಗ್ರಾಮೀಣಾಭಿವೃದ್ಧಿ ಹೇಗೆ ನಾವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಸ್ತ್ರೀಶಕ್ತಿ ಸಂಘಗಳನ್ನು ರಚನೆ ಮಾಡುತ್ತೇವೆ, ಅದೇ ರೀತಿಯಾಗಿ ಸಿಟಿಯಲ್ಲಿ ಈ ವ್ಯವಸ್ಥೆ ಇಲ್ಲ. ಸಿಟಿಯಲ್ಲಿಯೂ ಕೂಡ ನಾವು ಈ ವ್ಯವಸ್ಥೆಯನ್ನು ತರಬೇಕಾಗಿದೆ. ಮೊದಲು ಸಿಟಿಯಲ್ಲಿ ಈ ವ್ಯವಸ್ಥೆ ಇತ್ತು ಈಗ ಅದು ಬಂದ್ ಆಗಿದೆ. ಅದಕ್ಕಾಗಿ ಗ್ರಾಮೀಣಾಭಿವೃದ್ಧಿ ಭಾಗದಲ್ಲಿ ನಾವೇನು ಸ್ತ್ರೀಶಕ್ತಿ ಸಂಘಗಳನ್ನು ರಚಿಸಿದ್ದೇವೆ ಅದೇ ಮಾದರಿಯಲ್ಲಿ ಸಿಟಿಯಲ್ಲಿಯೂ ಮಾಡುವುದಕ್ಕೆ ಮಹಿಳೆಯರು ಮುಂದಾಗಿದ್ದಾರೆ. ಜೊತೆಗೆ ಸಿಟಿಯಲ್ಲಿರುವಂತ ಪ್ರಜ್ಞಾವಂತ ಮಹಿಳೆಯರು ಸಾಕಷ್ಟು ಮುಂದೆ ಬರುತ್ತಿರುವುದರಿಂದ ವಿಶೇಷವಾದ ಯೋಜನೆಗಳೊಂದಿಗೆ ಸಿಟಿಯಲ್ಲಿಯೂ ಅದನ್ನು ಜಾರಿಗೆ ತರಬೇಕು ಎನ್ನುವ

ಮಾತನ್ನು ಸದನದ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನಾನು ಮನವಿ ಮಾಡುತ್ತೇನೆ. ಸುಮಾರು 86 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಮಾನ್ಯ ಕಂದಾಯ ಸಚಿವರು ಘೋಷಿಸಿದ್ದಾರೆ. ಅದೇ ರೀತಿ ನಮ್ಮ ಧಾರವಾಡ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಬೇಕು. ಏಕೆಂದರೆ, ನಮ್ಮ ಧಾರವಾಡ ತಾಲ್ಲೂಕಿನಲ್ಲಿ ಮೂರು ಹೋಬಳಿಗಳಿವೆ. ಅಳ್ನಾವರ ಮಲನಾಡು, ಗರಗ ಸರ್ಕಲ್ ಅದು ಗಡಿನಾಡು, ಇನ್ನು ಅಂಬಿನಮಾವಿ ಮತ್ತು ಧಾರವಾಡ ಇದು ಬೆಳುವಲ ನಾಡು. ಹೀಗೆ ಮೂರು ವಿಧವಾದ ವಾತಾವರಣ ಇರುವುದರಿಂದ ಮಳೆ ಹೆಚ್ಚಾಗಿ ಭತ್ತವನ್ನು ಬಿತ್ತಿರುವ ಜನ, ಬೆಳುವಲದಲ್ಲಿ ಅವರೆ, ಹೆಸರು, ಇಂಥವುಗಳನ್ನು ಬಿತ್ತುತ್ತಾರೆ. ಆದರೆ ಭತ್ತವನ್ನು ಬಿತ್ತಿ ಎರಡು ತಿಂಗಳು ನಂತರ ಸಾಕಷ್ಟು ಮಳೆಯಾದಾಗ ಮಲೆನಾಡಿನವರು ಖುಷಿಯಾಗುತ್ತಾನೆ. ಏಕೆಂದರೆ ಭತ್ತ ಬಿತ್ತಿದ್ದೇನೆ ಬಹಳ ಚೆನ್ನಾಗಿ ಮಳೆಯಾಗಿರುವುದರಿಂದ ನನ್ನ ಭತ್ತ ಚೆನ್ನಾಗಿ ಬೆಳೆ ಬರುತ್ತದೆಂದು ಖುಷಿಯಾಗುತ್ತಾನೆ. ಆದರೆ ಬೆಳುವಲದಲ್ಲಿ ಇರುವಂಥ ಎಲ್ಲಾ ಬೆಳೆಗಳು ಇವತ್ತು ನಾಶವಾಗಿವೆ. ಹೀಗಾಗಿ ನಮ್ಮ ತಾಲ್ಲೂಕಿನಲ್ಲಿ ಈ ರೀತಿಯ ಸಮಸ್ಯೆಯಿರುವುದರಿಂಧ ನಮ್ಮ ಇಡೀ ಜಿಲ್ಲೆಯಲ್ಲಿ ನವಲಗುಂದ ಮತ್ತು ಹುಬ್ಬಳ್ಳಿಯ ಕೆಲವು ಹಳ್ಳಿಗಳನ್ನು ಬಿಟ್ಟರೆ ನೀರಾವರಿ ಸೌಲಭ್ಯವಿಲ್ಲ. ಬೃಹತ್ ನೀರಾವರಿ ಸಚಿವರು ನಮ್ಮವರು, ನಾವು ಕೂಡ ಅವರವರು ಎಂದು ತಿಳಿದುಕೊಂಡು ನಮ್ಮ ಜಿಲ್ಲೆಗೆ ನೀರಾವರಿ ಯೋಜನೆಯನ್ನು ಮತ್ತು ವಿಶೇಷವಾಗಿ ನನ್ನ ತಾಲ್ಲೂಕಿನ ಜನತೆಯ ಬಹಳ ದಿನಗಳ ಬೇಡಿಕೆಯಿರುವುದರಿಂದ ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಆ ಬಗ್ಗೆ ರೂಪುರೇಷೆಯನ್ನು ತಯಾರಿಸಿ ಜಾರಿಗೊಳಿಸಬೇಕೆಂದು ಮನವಿ ಮಾಡುತ್ತೇನೆ. ನಾನು ಜಿಲ್ಲಾ ಪಂಚಾಯತಿ ಮೆಂಬರ್ ಆಗಿರುವಾಗ ಸಾಕಷ್ಟು ಮಾತನಾಡುತ್ತಿದ್ದೆ. ಮಾತನಾಡಿ ಮಾತನಾಡಿ ಈಗ ಸುಮ್ಮನಾಗಿದ್ದೇನೆ. ಏಕೆಂದರೆ ನನ್ನ ವಯಸ್ಸಿಗಷ್ಟು ಅನುಭವವಾಗಿರುವಂಥ ಎಲ್ಲರೂ ತಾವು ಇದ್ದೀರಿ. ನಾನು ಏನಾದರೂ ಮಾತನಾಡಿದರೆ ತಪ್ಪಾಗಬಾರದು ಎಂದು ತಿಳಿದುಕೊಂಡಿದ್ದೇನೆ. ಆದರೆ, ಇವತ್ತಿನ ದಿವಸ ತಮ್ಮೆಲ್ಲರ ಸಹಕಾರದೊಂದಿಗೆ ಅಧ್ಯಕ್ಷರ ನಗುಮುಖದೊಂದಿಗೆ ನನ್ನ

ಮಾತುಗಳು ಹೊರಬಂದಿವೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಸರ್ವರಿಗೂ ಕೂಡ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ [ಮಂಗಳೂರು ನಗರ (ದಕ್ಷಿಣ)]: ಮಾಹಿತಿಯುಳ್ಳ ಉತ್ತರದಲ್ಲಿ ಬಹುಶಃ ನಾವು ಕೇಳಿದಂಥ ಅನೇಕ ಬೇಡಿಕೆಗಳಿಗೆ ಪೂರಕವಾದ ಉತ್ತರಗಳು ಬಂದಿವೆ. ವಿಶೇಷವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ rural developmentಗೆ ಸಂಬಂಧಪಟ್ಟಂತೆ Rural development and self-employment training institute ಬಗ್ಗೆ ಸರ್ಕಾರ ಯಾವ ಒಂದು ನಿರ್ಧಾರ ತೆಗೆದುಕೊಂಡಿದೆ ಅದಕ್ಕೆ ನಿಜವಾಗಿಯೂ ನಾನು ಇದನ್ನು ಸ್ವಾಗತಿಸುತ್ತೇನೆ. ಈ ರೀತಿಯಾಗಿ ಇದರ ಕಾರ್ಯವ್ಯಾಪ್ತಿಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸುವ ಮೂಲಕ ನಿಜವಾದ ಅರ್ಥದಲ್ಲಿ ನಾವು ತಳಮಟ್ಟದಲ್ಲಿ ರೈತರನ್ನು ತಲುಪುವುದಕ್ಕೆ ಸಾಧ್ಯವಾಗುತ್ತದೆ. ನಾನು ಆ ಸಂದರ್ಭದಲ್ಲಿ ಒಂದು ಉಲ್ಲೇಖಿಸಿದ್ದೆ. ಬ್ಯಾಂಕಿಂಗ್ ಲೋನ್‌ನಲ್ಲಿ ಅವರು ಏನು ಸಾಲ ಪಡೆದುಕೊಳ್ಳುತ್ತಿದ್ದಾರೆ. 70% ಮಾತ್ರ ಸಾಲ ರೈತರಿಗೆ ಬ್ಯಾಂಕಿಂಗ್ ಮೂಲಕ ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ಸಿಗುತ್ತಿದೆ. 20% ಮನಿಲೆಂಡರ್‌ಗಳ ಮೂಲಕ ಸಿಗುತ್ತಿರುವುದರಿಂದ ಅವರು ಬೇರೆ ರೀತಿಯಲ್ಲಿ ಕಿರುಕುಳ ಕೊಡುತ್ತಿರುವುದರಿಂದ ನಾವು ಅದನ್ನು ಎಲ್ಲಿಯವರೆಗೆ ನಿಯಂತ್ರಿಸುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯ ತನಕ ರೈತನಿಗೆ ವಿಶೇಷವಾಗಿ ಒಂದು ರೀತಿಯಲ್ಲಿ ಆ 20% ನಿಂದಾಗಿ ಅಥವಾ ಆತ್ಮಹತ್ಯೆಯ ಒತ್ತಡಕ್ಕೆ ನೂಕದ ಹಾಗೆ ಮಾಡಬೇಕೆಂದರೆ ಮನಿಲೆಂಡರ್ಸ್ ಕ್ಲಚ್‌ನಿಂದ ಹೊರಗೆ ತರುವ ರೀತಿಯಲ್ಲಿ ಲೆಜಿಸ್ಲೇಷನ್ ತರುವುದು ಅವಶ್ಯಕತೆಯಿದೆ ಎಂದು ಉಲ್ಲೇಖಿಸುತ್ತೇನೆ. ಮತ್ತೊಂದು ವಿಷಯ ಏನೆಂದರೆ, ನಮ್ಮ ಸರ್ಕಾರದ ಯೋಜನೆಗಳಲ್ಲಿ, ನಮ್ಮ ಸಚಿವರು ಸ್ವಲ್ಪ ಯೋಚಿಸಿ ಇದನ್ನು ಗಮನಿಸಬೇಕು. ಅನೇಕ ಯೋಜನೆಗಳನ್ನು ನಾವು DCC ಕೋ-ಆಪರೇಟಿವ್ ಬ್ಯಾಂಕ್‌ಗಳ ಮೂಲಕ ಕೆಳಗಡೆ ಕೊಡುತ್ತೇವೆ. ಆದರೆ ಅಲ್ಲಿಂದ ಗ್ರಾಮೀಣ ಮಟ್ಟದಲ್ಲಿರುವ ಸಹಕಾರಿ ಬ್ಯಾಂಕ್‌ಗಳಿಗೆ ಸರಕಾರ ಕೊಟ್ಟಿರುವ ಸಾಲ ಬಡ್ಡಿ ಮನ್ನಾ ಇರಬಹುದು ಅಥವಾ ಕೊಟ್ಟಿರುವ ಇನ್ನಿತರ ಸಬ್ಸಿಡಿಗಳಾಗಿರಬಹುದು, ಇನ್ನಿತರ ಯೋಜನೆಗಳಾಗಿರಬಹುದು, ಅವುಗಳು ತಲುಪುವುದಿಲ್ಲ ಎನ್ನುವ

ನೇರವಾದ ದೂರುಗಳು ನಮ್ಮ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ ನೇರವಾಗಿ ನೋಡಲ್ ಏಜೆನ್ಸಿಯಾಗಿ ಇವರನ್ನು ಮಾಡದೇ ಯಾವ ರೀತಿಯಲ್ಲಿ ನೇರವಾಗಿ ಕೇಂದ್ರದಿಂದ ನೇರವಾಗಿ ಗ್ರಾಮ ಪಂಚಾಯಿತಿಗೆ ಕೊಡುವಂಥ ವ್ಯವಸ್ಥೆ ಏನು ಇದೆ ಅದೇ ರೀತಿಯಲ್ಲಿ ನೇರವಾಗಿ ಗ್ರಾಮದಲ್ಲಿರುವ ಕೋ-ಆಪರೇಟಿವ್ ಸೊಸೈಟಿಗಳಿಗೆ ಅದನ್ನು ತಲುಪಿಸುವಂಥ ವ್ಯವಸ್ಥೆ ಸರ್ಕಾರ ಮಾಡಲಿಕ್ಕೆ ಸಾಧ್ಯವಾದಲ್ಲಿ ಖಂಡಿತವಾಗಿ ಇವರನ್ನು ನೋಡಲ್ ಏಜೆನ್ಸಿಯಾಗಿ ಕೇವಲ ಮಾನೀಟರ್ ಮಾಡಲಿಕ್ಕೆ ಬಿಡಬೇಕು. ಹಣ ಇವರ ಮೂಲಕ ತಲುಪಿಸುವಂಥ ವ್ಯವಸ್ಥೆ ಮಾಡಿದರೆ ತಳಮಟ್ಟದಲ್ಲಿ ತಲುಪುವುದಿಲ್ಲ ಎಂದು ದೂರು ಬಂದಿರುವ ಹಿನ್ನೆಲೆಯಲ್ಲಿ ಇದರ ಬಗ್ಗೆ ಪರಿಶೀಲಿಸಬೇಕೆನ್ನುವ ಮನವಿ ಮಾಡಲಿಕ್ಕೆ ಇಚ್ಛಿಸುತ್ತೇನೆ. ಬೇರೆ ಎಲ್ಲಾ ಸಂಗತಿಗಳ ಬಗ್ಗೆ ಸಾಕಷ್ಟು ಒಳ್ಳೆಯ ಉತ್ತರ ಕೊಟ್ಟಿದ್ದಾರೆ. ಪ್ರತಿ ಪಕ್ಷದಲ್ಲಿರುವ ನಮ್ಮ ಮಿತ್ರರು ಕೂಡ ಹೃದಯದಲ್ಲಿ ಅಂತರಾಳದಲ್ಲಿ ಬಹಳವಾಗಿ ಚೆನ್ನಾಗಿ ಇದೆ ಎಂದು ಹೊಗಳುತ್ತಾರೆ. ಹೀಗಿದ್ದರೂ ಕೂಡ ನನ್ನ ಕೋರಿಕೆ ಏನೆಂದರೆ ಇದರ ಜೊತೆ ಜೊತೆಯಲ್ಲಿ ನಾನೊಂದು ವಿಶೇಷವಾಗಿ ಉಲ್ಲೇಖಿಸುತ್ತಿರುವುದು ನದಿಗಳ ಬಗ್ಗೆ. ನಮ್ಮ ಕರಾವಳಿ ಜಿಲ್ಲೆಯಲ್ಲಿ ಹರಿಯುತ್ತಿರುವ ನದಿಗಳಿಂದ ಸುಮಾರು ಎರಡು ಸಾವಿರ ಟಿಎಂಸಿ ಗಳಷ್ಟು ನೀರು ವ್ಯರ್ಥವಾಗುತ್ತದೆ. ಎರಡರಿಂದ ಎರಡೂವರೆ ಪರ್ಸೆಂಟ್ ಮಾತ್ರ ಉಪಯೋಗವಾಗುತ್ತಿದೆ. ಅಲ್ಲಲ್ಲಿ ಚೆಕ್‌ಡ್ಯಾಂಗಳನ್ನು ಹಾಕುವ ಬಗ್ಗೆ ಮತ್ತು ಅದರ ಮೂಲಕ ರೈತಾಪಿ ವರ್ಗದವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ, ವಿಶೇಷವಾಗಿ ಕರಾವಳಿ ಪ್ರದೇಶದಲ್ಲಿ ಅನುಕೂಲವಾಗುವ ನಿಟ್ಟಿನಲ್ಲಿ ತಾವು ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ ಎನ್ನುವ ವಿನಂತಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡಲಿಕ್ಕೆ ಇಚ್ಛಿಸುತ್ತೇನೆ.

ಉಪಾಧ್ಯಕ್ಷರು: ಬೊಮ್ಮಾಯಿರವರೆ, ಉತ್ತರ ಕೊಡುತ್ತೀರಾ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಎಲ್ಲರೂ ಒಪ್ಪುವುದಾದರೆ ಉತ್ತರ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ದಯಮಾಡಿ ತಮಗೆ ಒಂದು ಕ್ಲಾರಿಫಿಕೇಷನ್ ಬೇಕು. ಅವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುತ್ತಾರೋ ಅಥವಾ ಮಾನ್ಯ ಮುಖ್ಯಮಂತ್ರಿಗಳು ನಾಳೆ ಬಂದ ನಂತರ ಉತ್ತರ ಕೊಡುತ್ತಾರೋ?

ಶ್ರೀ ಬಸವರಾಜ ಬೊಮ್ಮಾಯಿ: ತಾವು ಕೇಳಿರುವ ಕ್ಲಾರಿಫಿಕೇಷನ್‌ಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ.

ಉಪಾಧ್ಯಕ್ಷರು: ಆಯಿತು. ತಾವು ಉತ್ತರಿಸಿ.

ಶ್ರೀ ಬಸವರಾಜ ಬೊಮ್ಮಾಯಿ: ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಸುದೀರ್ಘವಾಗಿ ಮೂರು ದಿವಸ ಚರ್ಚೆಯಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಮತ್ತೆ ಹಲವಾರು ವಿಷಯಗಳು ಇಲ್ಲಿ ಪ್ರಸ್ತಾಪವಾಗಿವೆ. ಕೃಷಿ ಅಭಿವೃದ್ಧಿ ಈ ದೇಶಕ್ಕಾಗಲಿ, ರಾಷ್ಟ್ರಕ್ಕಾಗಲಿ ಹೊಸದಲ್ಲ. ಕಾಲಕಾಲಕ್ಕೆ ತಕ್ಕ ಹಾಗೆ ತನ್ನದೇ ಆದ ಸವಾಲುಗಳನ್ನು ಅದು ಎದುರಿಸುತ್ತಾ ಬಂದಿದೆ. ನಾವು ಇಲ್ಲಿ ಮಾತನಾಡಿರುವಂಥ ಹತ್ತು ಹಲವಾರು ವಿಷಯಗಳು ಯಾವುದೇ ಒಂದು ಕಾಲಮಿತಿಗೆ ನಾವು ಅದನ್ನು ಗುರ್ತಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇದು ಡೈನಮಿಕ್ ಪ್ರಾಬ್ಲಂ. ಉದಾಹರಣೆಗೆ ಕುಡಿಯುವ ನೀರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುವುದಾದರೆ, ಒಂದು ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ ಮಾಡಿದರೆ ಮುಂದಿನ ಕೆಲವು ದಿನಗಳಲ್ಲಿ ಆ ಯೋಜನೆಯ ಫಲಪ್ರದ ಸಂಪೂರ್ಣವಾಗಿ ಆಗಿ ಶಾಶ್ವತವಾಗಿ ನೀರನ್ನು ಯಾವ ಮಟ್ಟಕ್ಕೆ ಕೊಡಬೇಕೋ ಅದೇ ಮಟ್ಟದಲ್ಲಿ ಇರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಒಂದು ಜನಸಂಖ್ಯೆ ಹೆಚ್ಚಾಗಿರುತ್ತದೆ ಇನ್ನೊಂದು ಸೋರ್ಸು ಕಡಿಮೆಯಾಗಿರುತ್ತದೆ ಅಥವಾ ಆ ವ್ಯವಸ್ಥೆಯಲ್ಲಿ ತೊಂದರೆಯಾಗಿರುತ್ತದೆ. ಅದೇ ರೀತಿ ಕೃಷಿಯಲ್ಲೂ ಕೂಡ ಬದಲಾವಣೆಯಾಗುತ್ತಿದೆ. ನೀರಿನ ಗುಣಮಟ್ಟ ಕಡಿಮೆಯಾಗಿರುವಂಥದ್ದು ಮತ್ತು ವಿವಿಧ ನೀತಿಗಳನ್ನು ಸರ್ಕಾರಗಳು ತಂದು ಅದಕ್ಕೆ ಒದಗಿಸಿರುವ ಹಣಕಾಸಿನ ಆಧಾರದ ಮೇಲೆ ಇವತ್ತು ಕೃಷಿ ಅಭಿವೃದ್ಧಿಯಾಗುತ್ತದೆ. ಆದ್ದರಿಂದ, ನಾವು ಇದನ್ನು ಕಾಲಕಾಲಕ್ಕೆ ಪರಿಷ್ಕರಣೆ ಮಾಡತಕ್ಕಂಥ ಅವಶ್ಯಕತೆ ಇದೆ. ಈ

ರೀತಿಯಾದಂಥ ಒಂದು ಕೆಲಸ ಕಳೆದ ಮೂರು ದಿವಸಗಳಲ್ಲಿ ಆಗಿದೆ. ಇವತ್ತಿನ ದಿವಸ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಏನಾಗಿದೆ ಎಂಬುದನ್ನು ಎಲ್ಲರೂ ಸೇರಿ ಒಟ್ಟಿಗೆ ಚರ್ಚೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರೈತ ಯಾವುದೇ ಪಕ್ಷಕ್ಕೆ ಸೇರಿಲ್ಲ. ಆದರೆ, ಎಲ್ಲಾ ಪಕ್ಷಗಳು ರೈತನಿಗೆ ಸೇರಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಹತ್ತು ಹಲವಾರು ವಿಚಾರಗಳು ಪ್ರಸ್ತಾಪವಾಗಿವೆ ಎಂದು ನಾನಂತೂ ಭಾವಿಸಿದ್ದೇನೆ. ಎರಡನೆಯದಾಗಿ ಅಭಿವೃದ್ಧಿ ಬಗ್ಗೆ ಮಾತನಾಡುವಾಗ ನಮ್ಮ ಸದಸ್ಯರು ಬಹಳ ಉಪಯುಕ್ತವಾದಂಥ ಮಾತನ್ನು ಹೇಳಿದರು. ಅದೇನೆಂದರೆ, ಯೋಜನೆಗಳು ಮತ್ತು ಪಾಲಿಸಿಗಳು ಬಹಳಷ್ಟು ಆಗಿವೆ. ಆದರೆ, ಯೋಜನೆಗಳಿಂದ ಹತ್ತು ಹಲವಾರು ಸಮಸ್ಯೆಗಳನ್ನು ನಾವು ಬಗೆಹರಿಸಿದ್ದೇವೆಂದು ಆತ್ಮಸ್ಥೈರ್ಯವಾಗಿ ಹೇಳುವಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ. ಯೋಜನೆಗಳ ಅನುಷ್ಠಾನ ಮತ್ತು ಆ ಯೋಜನೆಗಳು ನಿಜವಾಗಿಯೂ ಕೂಡ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿವೆ ಎಂದು ಕಾಲಕಾಲಕ್ಕೆ ಮತ್ತೆ ನಾವು ಟೆಸ್ಟ್ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ನಿಮ್ಮ ಸ್ಪೀಚ್ ಕೇಳುವುದಕ್ಕೆ ಚೆನ್ನಾಗಿದೆ. ದಯವಿಟ್ಟು ಕ್ಲಾರಿಫಿಕೇಷನ್‌ಗೆ ಮಾತ್ರ ಉತ್ತರ ಕೊಡಿ. ದಯಮಾಡಿ ವಿಚಾರಕ್ಕೆ ಬನ್ನಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಅರ್ಧ ದಿವಸ ಕ್ಲಾರಿಫಿಕೇಷನ್ ಕೇಳಿದ್ದೀರಿ. ಆದ್ದರಿಂದ, ನಾನು ಉತ್ತರ ಕೊಡುವುದಕ್ಕೆ ದಯವಿಟ್ಟು ಸ್ವಲ್ಪ ಅವಕಾಶ ಕೊಡಿ. ಬೇಡವೆಂದರೆ ನನ್ನ ಅಭ್ಯಂತರ ಏನೂ ಇಲ್ಲ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: Let us come to the point.

ಶ್ರೀ ಬಸವರಾಜ ಬೊಮ್ಮಾಯಿ: I will come to your point later. ನಿಮ್ಮದೇನು ನನಗೆ ಬಹಳ ಸಮಸ್ಯೆ ಇಲ್ಲ. ನಾನು ಹೇಳಿದರೆ ತಾವು ಎದ್ದು ಹೋಗುತ್ತೀರಿ. ಆದ್ದರಿಂದ, ನೀವು ಇಲ್ಲಿಯೇ ಕುಳಿತುಕೊಳ್ಳಬೇಕೆಂದು ನನಗೆ ಆಸೆ ಇದೆ. I know what point you are speaking about. ಈಗ ಅಭಿವೃದ್ಧಿ ಸುತ್ತಲೂ ಜನರಿದ್ದಾರೆ. ಆದರೆ, ಜನರ ಸುತ್ತಲೂ ಅಭಿವೃದ್ಧಿಯಾಗಬೇಕು. ಈ

ಹಿನ್ನೆಲೆಯಲ್ಲಿ ಬಹಳಷ್ಟು ಉಪಯುಕ್ತವಾದಂಥ ಸಲಹೆಗಳನ್ನು ತಾವು ಕೊಟ್ಟಿದ್ದೀರಿ. ಅದರ ಹಿನ್ನೆಲೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ಕೂಡ ಉತ್ತರವನ್ನು ಕೊಟ್ಟಿದ್ದಾರೆ. ಇದಾದ ನಂತರವು ಕೂಡ ಹಲವು ಪ್ರಶ್ನೆಗಳು ವಿರೋಧಪಕ್ಷದ ಸಮೇತರಾಗಿ ತಾವೆಲ್ಲ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರುವ ಮೊದಲ ಎರಡು ಪ್ರಮುಖ ವಿಚಾರಗಳ ಬಗ್ಗೆ ಹೇಳುತ್ತೇನೆ. Food production ಬಗ್ಗೆ ಅವರು ಅತ್ಯಂತ ಕಳಕಳಿಯಿಂದ ಹೇಳಿದ್ದಾರೆ. ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ರೇವಣ್ಣನವರು ಸೇರಿ ರಾಜ್ಯ ಕೃಷಿ ನೀತಿ ಮತ್ತು ಕೇಂದ್ರ ಸರ್ಕಾರದ ಕೃಷಿ ನೀತಿಗಳಲ್ಲಿ ನೀವು ಏನೇನು ಅಳವಡಿಸಿಕೊಂಡಿದ್ದೀರೆಂಬ ಮೂಲಭೂತವಾದ ಎರಡು ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆಹಾರದ ಉತ್ಪಾದನೆ ಬಗ್ಗೆ ನಾನು ಹೇಳುವುದಾದರೆ, 2005-06ರಲ್ಲಿ 96.22 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಯಿತು. 2006-07ರಲ್ಲಿ 97.87 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ. 2007-08ರಲ್ಲಿ 99.50 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ. 2008-09ರಲ್ಲಿ 101.27 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ. ನಮಗೆ ಬೇಕಾಗಿರುವಂಥದ್ದು ಅದಕ್ಕಿಂತ ಸ್ವಲ್ಪ ಹೆಚ್ಚಿಗೆ, ಅಂದರೆ 101.84 ಲಕ್ಷ ಮೆಟ್ರಿಕ್ ಟನ್‌ನಷ್ಟು ಬೇಕಾಗಿದೆ. ಆದರೆ, ಮುಂದಿನ ದಿನಗಳಲ್ಲಿ ನಮ್ಮ ಆಹಾರದ ಬೇಡಿಕೆ ಹೆಚ್ಚಾಗುತ್ತದೆ. ಕನಿಷ್ಠ 4% ಆದರೂ ಆಹಾರ ಉತ್ಪಾದನೆಯಲ್ಲಿ ಗ್ರೋತ್ ಆಗಬೇಕೆಂಬುದು ತಜ್ಞರ ಅಭಿಪ್ರಾಯವಾಗಿದೆ. ಈ ಒಂದು ಹಿನ್ನೆಲೆಯಲ್ಲಿ 2009-10ಕ್ಕೆ ಟಾರ್ಗೆಟ್ ಅನ್ನು ನಾವು 118 ಲಕ್ಷ ಮೆಟ್ರಿಕ್ ಟನ್‌ನಷ್ಟು ಇಟ್ಟುಕೊಂಡಿದ್ದೇವೆ. ಆದರೆ, ಕನಿಷ್ಠ 103 ಲಕ್ಷ ಮೆಟ್ರಿಕ್ ಟನ್ ಆದರೂ ಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ಕೆಲವು ಕಡೆ ಬರಗಾಲ ಬಂದಿದೆ. ಮತ್ತೆ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ನಮಗೆ ಬೇಕಾಗಿರುವಂಥ ಆಹಾರ ಉತ್ಪಾದನೆ ಆಗಿಲ್ಲ. ಇವತ್ತಿನ ದಿವಸ ಹಲವಾರು ಆಯಾಮಗಳು ನಮ್ಮ ಕೈ ಮೀರಿ ಇರುವಂಥದ್ದು ನಿಮಗೂ ಕೂಡ ಗೊತ್ತಿದೆ. ಇದರ ಜೊತೆಗೆ ಆಹಾರ ಉತ್ಪಾದನೆ ಕಡಿಮೆಯಾಗುವುದಕ್ಕೆ ಮತ್ತು ಕೃಷಿಯಲ್ಲಿ productivity ಹೆಚ್ಚಾಗುವುದಕ್ಕೆ ಹೊಸ ತಳಿಗಳ ಸಂಶೋಧನೆ 70 ಮತ್ತು 80ರ ದಶಕದಲ್ಲಿ ವೇಗವಾಗಿ ಆದ ರೀತಿಯಲ್ಲಿ ಈಗ ಆಗುತ್ತಿಲ್ಲ. ಮತ್ತೆ ಬೀಜಗಳು

ಮತ್ತು ಗೊಬ್ಬರ ಸಮಯಕ್ಕೆ ಸರಿಯಾಗಿ ಇಲ್ಲದೆ ಇರತಕ್ಕಂಥವೆಲ್ಲವೂ ಕೂಡ man-made problems and nature-made problems ಆಗಿವೆ. ಈ ಎರಡರಿಂದ ಇವತ್ತಿನ ದಿವಸ ಆಹಾರ ಉತ್ಪಾದನೆ ಕಡಿಮೆ ಆಗಿರುವುದನ್ನು ನಾವೆಲ್ಲಾ ಗಮನಿಸಿದ್ದೇವೆ. ನಮ್ಮ ದೇಶದಲ್ಲಿ ವಿಶೇಷವಾಗಿ Pulses and Oil seeds ಎಲ್ಲಾ ರಾಜ್ಯಗಳಲ್ಲಿ ಉತ್ಪಾದನೆ ಆದರೂ ಕೂಡ ಇವತ್ತಿನ ದಿವಸ Pulses and Oil seeds ಕಡಿಮೆ ಆಗುತ್ತಿರುವುದರಿಂದ ಕೆಲವು ಸಂದರ್ಭದಲ್ಲಿ ಆಮದು ಮಾಡಿಕೊಳ್ಳುವ ಪ್ರಸಂಗಗಳು ಬರುತ್ತವೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ Pulses and Oil seeds ಉತ್ಪಾದನೆಯನ್ನು ಎರಡುಪಟ್ಟು ಹೆಚ್ಚಿಗೆ ಮಾಡಬೇಕೆಂಬ ದೃಷ್ಟಿಯಿಂದ ನಮ್ಮ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಕೃಷಿ ಬಗ್ಗೆ ಇರುವ ಸಂಶೋಧನೆಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದರ ಜೊತೆಗೆ Horticulture and Agriculture farm ಗಳು ಕೇವಲ R & Dಗೆ ರಿಸ್ಟ್ರಿಕ್ಟ್ ಆಗದೆ ಅವೂ ಕೂಡ Seeds manufacturing ಮಾಡುವುದಕ್ಕೆ ನಾವು ಪ್ರೋತ್ಸಾಹ ಕೊಡುತ್ತೇವೆಂಬ ಮಾತನ್ನು ಸಹ ಅವರು ಹೇಳಿದ್ದಾರೆ. ಆ ಜಮೀನುಗಳನ್ನು ಬಳಕೆ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ 2006ರ ಕೃಷಿ ನೀತಿಯಲ್ಲಿನ ಹತ್ತು ಹಲವಾರು ವಿಷಯಗಳನ್ನು ತಾವೇನು ಮಂಡಿಸಿದ್ದೀರಿ ಮತ್ತು ಇದರ ಜೊತೆಗೆ 2700 ಅಧಿಕಾರಿಗಳ ತಂಡ ಗುರುತಿಸಿರುವ ಎಲ್ಲಾ ವಿಚಾರಗಳ ಅನ್ವಯ ಇವತ್ತು ಸಾವಯವ ಕೃಷಿಗೆ ಚಾಲನೆ ಕೊಡಬೇಕೆಂದು ನಾವು ಹೇಳಿದ್ದೇವೆ. ಸಾವಯವ ಕೃಷಿಗೆ ನಾವು ಖಂಡಿತವಾಗಿ ಒಂದು ಟಾಸ್ಕ್‌ಫೋರ್ಸ್ ಮಾಡುತ್ತೇವೆ. ಪ್ರಥಮ ಬಾರಿಗೆ ರೈತರ ಮಟ್ಟಿಗೆ ನಿಮ್ಮ ನೀತಿಯ ಆಶಯದಂತೆ ಇದನ್ನು ತೆಗೆದುಕೊಂಡು ಹೋಗುವಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. ಅದೇ ರೀತಿಯಾಗಿ ಕೃಷಿ ನೀತಿಯಲ್ಲಿ ರೈತರಿಗೆ ಸಾಲವನ್ನು ಹೆಚ್ಚಿಗೆ ಕೊಡಿಸಬೇಕೆಂದು ಮತ್ತು ನಮ್ಮ ಕ್ರೆಡಿಟ್ ಸಿಸ್ಟಮ್ ಅನ್ನು improve ಮಾಡಬೇಕೆಂದು ನಮ್ಮ ಕೃಷಿ ನೀತಿಯಲ್ಲಿ ಹೇಳಿದೆ. ಅದಕ್ಕೆ ಕಿಸಾನ್ ಕ್ರೆಡಿಟ್ ಕಾರ್ಡ್‌ನ್ನು ಮಾಡಿದರೆ ಪ್ರತಿಯೊಬ್ಬ ರೈತನಿಗೆ ಅಂದರೆ ಸಣ್ಣ ಮತ್ತು ಅತಿ ಸಣ್ಣ ರೈತ ಕನಿಷ್ಠ 25 ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳುವುದಕ್ಕೆ ಅರ್ಹತೆ ಬರುತ್ತದೆ. ಇದನ್ನು ಒಂದು ಅಭಿಯಾನದ ಮುಖಾಂತರ ಎರಡು ವರ್ಷಗಳಲ್ಲಿ

ಈ ರಾಜ್ಯದ ಎಲ್ಲಾ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರಿಗೆ ಕಿಸಾನ್ ಕಾರ್ಡ್ ಮಾಡುವುದಕ್ಕೆ ನಿಮ್ಮ ಕೃಷಿ ನೀತಿಯ ಮೇಲೆ ನಾವು ಮಾಡಿದ್ದೇವೆ. ಈ ರೀತಿಯಾಗಿ ಹತ್ತು ಹಲವಾರು ಉದಾಹರಣೆಗಳನ್ನು ನಾನು ಕೊಡಬಹುದು. ಇದರ ಜೊತೆಗೆ ತಾವುಗಳು ಹೌಸಿಂಗ್ ಬಗ್ಗೆ ಅತ್ಯಂತ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್: ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಉತ್ತರ ಕೊಡಿ. ಮತ್ತೆ ಸಾವಯವ ಕೃಷಿಯಲ್ಲಿ ನಿಮ್ಮ ಕಾರ್ಯಕರ್ತರನ್ನು ಹಾಕಿಕೊಂಡಿದ್ದೇವೆಂದು ಹೇಳಿದ್ದೇವೆ. ಆದರೆ ನೀವು ಹೇಳುತ್ತಿರುವುದು ಕ್ಲಾರಿಫೀಕೇಷನ್‌ಗೆ ಉತ್ತರ ಆಗುವುದಿಲ್ಲ. ನಿಮ್ಮ ಭಾಷಣ ನಮಗೆ ಬೇಡ.

ಶ್ರೀ ಬಸವರಾಜ ಬೊಮ್ಮಾಯಿ: ನಾವು ಈಗಾಗಲೇ ಆ ವಿಷಯಕ್ಕೆ ಕ್ಲಾರಿಫೈ ಮಾಡಿದ್ದೇವೆ. ನಾನು ಹೇಳುವುದನ್ನು ದಯವಿಟ್ಟು ಒಂದು ಕೇಳಿ. ನೀವು ಹೇಳಿರುವುದನ್ನೆಲ್ಲಾ ನಾನು ಕೇಳಿದ್ದೇನೆ. ಕೈ ಮುಗಿಯುತ್ತೇನೆ ದಯವಿಟ್ಟು ನಾನು ಹೇಳುವುದನ್ನು ಕೇಳಿ. ಸಾವಯವ ಕೃಷಿಯಲ್ಲಿ ಯಾವುದೇ ಒಂದು ಪಕ್ಷದ ಕಾರ್ಯಕರ್ತರು ಇಲ್ಲ. ಯಾರ್‍ಯಾರು ಆಸಕ್ತಿ ವಹಿಸಿದ್ದಾರೆ ಮತ್ತು ಇದನ್ನು ಮಾಡಲು ಯಾರ್‍ಯಾರು ಮುಂದೆ ಬಂದಿದ್ದಾರೆ ಮತ್ತು ಯಾರು ಸಂಘಗಳನ್ನು ರಚನೆ ಮಾಡಿ ಆ ಟ್ರಸ್ಟ್‌ಗೆ ಮೆಂಬರ್ಸ್ ಆಗಿದ್ದಾರೆಯೋ ಅವರಿಗೆಲ್ಲಾ ನಾವು ಪ್ರೋತ್ಸಾಹ ಕೊಟ್ಟಿದ್ದೇವೆ. ನೀವು ಕೂಡ ಅದೇ ರೀತಿಯಲ್ಲಿ ಟ್ರಸ್ಟ್ ಮಾಡಿ ಮುಂದೆ ಬಂದರೆ ನಿಮಗೂ ಕೂಡ ಪ್ರೋತ್ಸಾಹ ಕೊಡುತ್ತೇವೆ. ಕಾಂಗ್ರೆಸ್‌ನ ಬ್ಲಾಕ್ ಅಧ್ಯಕ್ಷರು ಅವರ ತಾಲ್ಲೂಕಿನಲ್ಲಿ ಸಾವಯವ ಕೃಷಿ ಮಿಷನ್‌ನ ಅಧ್ಯಕ್ಷರಾಗಿದ್ದಾರೆಂದು ಮಾನ್ಯ ರವಿಯವರು ಉದಾಹರಣೆ ಕೂಡ ಕೊಟ್ಟಿದ್ದಾರೆ. ಇದನ್ನು ಒಪ್ಪಿಕೊಳ್ಳಬಹುದು ಅಥವಾ ಬಿಡಬಹುದು. ಸಾವಯವ ಕೃಷಿಯಲ್ಲಿ ಯಾರ್‍ಯಾರಿಗೆ ಆಸಕ್ತಿ ಇದೆಯೋ ಅವರಿಗೆಲ್ಲಾ ಅವಕಾಶ ಕೊಡುತ್ತೇವೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅವಕಾಶ ಕೊಟ್ಟು ಒಂದು ವೇಳೆ ಅಲ್ಲಿ ಏನಾದರೂ ಅವ್ಯವಹಾರ ಮಾಡಿದರೆ ಅವರ ಮೇಲೆ ಕ್ರಮ

ತೆಗೆದುಕೊಳ್ಳುತ್ತೀರಾ? ನೀವು on the floor of the House ನಲ್ಲಿ ಕಮಿಟ್ ಮಾಡಿ. ಇದರಲ್ಲಿ ಏನಾದರೂ ಅವ್ಯವಹಾರ ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮತ್ತು ಯಾವುದೇ ಪಕ್ಷದ ಕಾರ್ಯಕರ್ತರು ಹಣ ಮುಟ್ಟಿಸದಿದ್ದರೆ ಅದನ್ನು ಸರಿಪಡಿಸುತ್ತೇವೆಂದು ಮತ್ತು ಆ ರೀತಿ ಮಾಡುವುದಕ್ಕೆ ಬಿಡುವುದಿಲ್ಲವೆಂದು ಇಲ್ಲಿ ಸ್ಪಷ್ಟವಾಗಿ ಹೇಳಿ. ಏಕೆಂದರೆ, ಇದರ ಬಗ್ಗೆ ನಮ್ಮ ಆರೋಪ ಇದೆ. If you want we will prove it.

ಶ್ರೀ ಬಸವರಾಜ ಬೊಮ್ಮಾಯಿ: ಯಾರ್‍ಯಾರಿಗೆ ಸಾವಯವ ಕೃಷಿಯಲ್ಲಿ ಆಸಕ್ತಿ ಇದೆಯೋ ಅಂಥವರಿಗೆ ನಾವು ಸಂಪೂರ್ಣವಾದಂಥ ಪ್ರೋತ್ಸಾಹವನ್ನು ಕೊಡುತ್ತೇವೆ.

7.00 P.M.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಒಂದು ವೇಳೆ ಬೇರೆ ರೀತಿಯಲ್ಲಿ ಆಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಇದರ ಬಗ್ಗೆ ಸ್ಪಷ್ಟವಾಗಿ ಹೌಸ್‌ನಲ್ಲಿ ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಯಾರ್‍ಯಾರು ಆಸಕ್ತಿ ವಹಿಸಿದ್ದಾರೆಯೋ ಅಂಥವರಿಗೆ ನಾವು ಕೊಟ್ಟಿದ್ದೇವೆ. ಬೇರೆ ಯಾರ್‍ಯಾರಿಗೆ ಆಸಕ್ತಿ ಇದೆಯೋ ಅಂಥವರಿಗೆ ತಾವು ಶಿಫಾರಸ್ಸು ಮಾಡಿ ಅಂಥವರಿಗೂ ಸಹ ನಾವು ಕೊಡುತ್ತೇವೆ. ಬೇರೆ ಪ್ರಶ್ನೆಯೇ ಇದರಲ್ಲಿ ಇಲ್ಲ. ಪಕ್ಷಾತೀತವಾಗಿ ಕೊಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅದರಲ್ಲಿ ಅವ್ಯವಹಾರವಾದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ನೀವು ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಯಾರ್‍ಯಾರು ಆಸಕ್ತಿವಹಿಸಿದ್ದಾರೆ ಖಂಡಿತವಾಗಿ ಪ್ರೋತ್ಸಾಹ ಕೊಡುತ್ತೇವೆ, ಅದರಲ್ಲಿ ಎರಡು ಮಾತಿಲ್ಲ, ಪಕ್ಷಾತೀತವಾಗಿ ಕೊಡುತ್ತೇವೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಕ್ರಮ ತೆಗೆದುಕೊಳ್ಳುತ್ತೇವೆಂದು ನೀವು ಕಮೀಟ್‌ಮೆಂಟ್ ಮಾಡಿ ಎಂದು ಅಷ್ಟನ್ನು ನಾವು ಕೇಳುತ್ತಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಎಲ್ಲಿಯಾದರೂ ಸ್ಪೆಸಿಫಿಕ್ಕಾಗಿ ಅವ್ಯವಹಾರವಾಗಿದೆ ಎಂದು ಹೇಳಿ, ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಅದೇ ರೀತಿ ಕೃಷಿ ಮಾರುಕಟ್ಟೆಯ ಬಗ್ಗೆ ನಿಮ್ಮ ನೀತಿ ಏನು ಎಂದು ಹೇಳಿದಿರಿ; ಕೇಂದ್ರ ಸರ್ಕಾರದ ನೀತಿ ಇದೆ ಮತ್ತು ಕೇಂದ್ರ ಸರ್ಕಾರ ಸನ್ಮಾನ್ಯ ಶರದ್ ಪವಾರ್‌ನವರ ನೇತೃತ್ವದಲ್ಲಿ ಒಂದು APMC Amendment Actನ್ನು ತಂದಿದೆ. ಅದರ ಅನ್ವಯ ಈಗಾಗಲೇ ನಾವು ಹೇಳಿದ್ದೇವೆ. ರೈತನಿಗೆ ಮಧ್ಯವರ್ತಿಗಳು ಈ ಧಾರಣೆಯಲ್ಲಿ ಮೋಸ ಮಾಡುತ್ತಾರೆ ಅದಕ್ಕೆ ಸಂಪೂರ್ಣವಾಗಿ computerize ಮಾಡಿ international price, ಸ್ಥಳೀಯ ಪ್ರೈಸ್ ಎಲ್ಲವೂ ರೈತನಿಗೆ ಗೊತ್ತಾಗುವ ರೀತಿಯಲ್ಲಿ computerization ಮಾಡುತ್ತೇವೆನ್ನುವ ಮಾತನ್ನು ಕೂಡ ಹೇಳಿದ್ದೇವೆ. ಅದನ್ನು ತಾವು 2006ರಲ್ಲಿ ಹೇಳಿದ್ದೀರಿ ಅದನ್ನು ನಾವು ಅನುಷ್ಠಾನ ಮಾಡುತ್ತಿದ್ದೇವೆ. ಇದೇ ರೀತಿ ಹತ್ತು ಹಲವಾರು ವಿಷಯಗಳನ್ನು ಎಲ್ಲೆಲ್ಲಿ ಒಳ್ಳೆಯ ವಿಚಾರಗಳು ಇವೆ ಅವೆಲ್ಲವುಗಳನ್ನು ನಾವು ತೆಗೆದುಕೊಂಡಿರುತ್ತೇವೆ. ಗ್ರಾಮೀಣ ಮನೆಗಳ ಬಗ್ಗೆ ಬಹಳಷ್ಟು ಸದಸ್ಯರು ಆಸಕ್ತಿ ವಹಿಸಿದ್ದರು. ಅದಕ್ಕೆ ನಾನು ಆ ಇಲಾಖೆಯಿಂದ ಕೆಲವು ವಿವರಗಳನ್ನು ತರಿಸಿದ್ದೇನೆ. ನಮ್ಮ ಸದನದ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದ್ದಾರೆ ಅವರು ಹೇಳಲಿ, ಅವರು ಇದ್ದಾಗ ಇವರು ಹೇಳಬಾರದು.

ಉಪಾಧ್ಯಕ್ಷರು: ಅವರಿಗೆ ಕ್ಲಾರಿಫೈ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ: ತಾವು ಏನು ವಿಚಾರವನ್ನು ಎತ್ತಿದ್ದೀರಿ ಅದಕ್ಕೆ ಉತ್ತರ ಕೊಡುತ್ತಿದ್ದೇನೆ, ಸ್ವಾಮಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಇವರು ಹೇಳುವುದನ್ನು ಒಪ್ಪಿಕೊಳ್ಳೋಣ. ಆದರೆ ಇವರು ದುಡ್ಡಿನ ಮೂಲವನ್ನು ಹೇಳಲಿಲ್ಲ. ದುಡ್ಡು ಹೇಗೆ ಕ್ರೋಡೀಕರಿಸುತ್ತೇವೆ, ದುಡ್ಡು ಎಲ್ಲಿಂದ ಬರುತ್ತದೆ, ದುಡ್ಡು ಯಾವ ರೀತಿ ಬರುತ್ತದೆ ಅದನ್ನು ಹೇಗೆ

ಹೊಂದಾಣಿಕೆ ಮಾಡುತ್ತೇವೆ ಎನ್ನುವುದನ್ನು ಅವರು ಹೇಳಲಿಲ್ಲ. ಅದನ್ನು ಮಾಡುತ್ತೇವೆ ಮಾಡುತ್ತೇವೆಂದು ಹೇಳಿದರೆ, ಇದಕ್ಕೆ ಇಷ್ಟು ದುಡ್ಡು ಇದೆ, ಇಷ್ಟನ್ನು ತಂದಿದ್ದೇವೆ ಎನ್ನುವುದರ ಬಗ್ಗೆ ನೀವು ಹೇಳಬೇಕಲ್ಲವೆ?

ಶ್ರೀ ಬಸವರಾಜ ಬೊಮ್ಮಾಯಿ: ನೀವು ಮಾಡಿರುವ ಕೃಷಿ ನೀತಿಯನ್ನು ನಾವು ಒಪ್ಪಿಕೊಂಡಿದ್ದೇವೆಂದು ಹೇಳಿದರೂ ಕೂಡ ಸಮಾಧಾನದಿಂದ ಕೇಳುವುದಿಲ್ಲವೆಂದರೆ ಹೇಗೆ? ಈಗ ಗ್ರಾಮೀಣ ವಸತಿ ಬಗ್ಗೆ 2000–01ರಿಂದ ಎಲ್ಲಾ ಯೋಜನೆಯಡಿಯಲ್ಲಿ ಇದುವರೆಗೂ 15,89,000 ಮನೆಗಳನ್ನು ನಿರ್ಮಿಸಲಾಗಿದೆ. ನಗರ ಪ್ರದೇಶಗಳಲ್ಲಿ 1,42,000 ಮನೆಗಳನ್ನು ನಿರ್ಮಿಸಲಾಗಿದೆ. 2008–09ರಲ್ಲಿ 2,94,064 ಮನೆಗಳನ್ನು ನಿರ್ಮಿಸಲಾಗಿದೆ. ಇದಕ್ಕೆ 882 ಕೋಟಿ ರೂ.ಗಳ ವೆಚ್ಚವಾಗಿದೆ. ಇದರಲ್ಲಿ ಹಿಂದೆ ಇದ್ದಂಥ 2007–08 ಮಂಜೂರಾಗಿರುವ ಮನೆಗಳು ಸೇರಿವೆ. 2008ರಲ್ಲಿ ಪ್ರಾರಂಭವಾಗಿರುವ ಮನೆಗಳು ಕೂಡ ಸೇರಿರುತ್ತವೆ. ಅದರಲ್ಲಿ ಕೆಲವು ಹಿಂದೆ ಉಳಿದದ್ದು ಕೂಡ ಇದರಲ್ಲಿ ಸೇರಿವೆ. ಒಂದೇ ವರ್ಷದಲ್ಲಿ ನಾವು ಮಾಡಿದ್ದೇವೆಂದು ಹೇಳುವುದಿಲ್ಲ. ಅದೇ ರೀತಿ 2009–10 ಒಟ್ಟು 3,25,000 ಮನೆಗಳನ್ನು ಪೂರ್ಣಗೊಳಿಸುವಂಥ ಗುರಿ ಇದೆ. ಅದರಲ್ಲಿ ಇಲ್ಲಿಯವರೆಗೆ 92,037 ಮನೆಗಳು ನಿರ್ಮಾಣವಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, 92,000 ಮನೆಗಳು ಎಂದು ತಾವು ಹೇಳುತ್ತಿದ್ದೀರಿ. 10 ವರ್ಷದ ಹಿಂದಿನದ್ದು ಕೂಡ ಇನ್ನೂ ಫೈನಲ್ ಬಿಲ್ ಆಗಿಲ್ಲ, ಅದನ್ನೇ ಕೊಟ್ಟಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನೆ ನಾನು ಕ್ಲಾರಿಫೈ ಮಾಡುತ್ತಿದ್ದೇನೆ. ಯಾವ ರೀತಿ 2008–09ರಲ್ಲಿ ಹಿಂದಿನ ಎರಡು ವರ್ಷದ್ದು ಸೇರಿದೆ. ಬಾಕಿ ಇರುವುದನ್ನು 2,94,000 ಎಂದು ಹೇಳಿದೆವು. ಅದೇ ರೀತಿ ಹೋದ ವರ್ಷದ್ದು ಸೇರಿ 92,000 ಇದೆ ಎನ್ನುವುದನ್ನು ಸ್ಪಷ್ಟೀಕರಣ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ವರ್ಷ 3,25,000 ಏನು ಗುರಿ ಇದೆ, ಅದನ್ನು ನಾವು ಸಂಪೂರ್ಣವಾಗಿ ಮಾಡುತ್ತೇವೆ. ಈ ವರ್ಷ ಒಂದು ಮನೆಗೆ 30,000 ರೂ.ಗಳಿಂದ 40,000

ರೂ.ಗಳಿಗೆ ಹೆಚ್ಚಿಸಿರುವುದು ತಮಗೆ ಗೊತ್ತಿದೆ. ಅದೇ ರೀತಿ ಕೇಂದ್ರದ ಇಂದಿರಾ ಆವಾಸ್ ಯೋಜನೆ ಅದಕ್ಕೆ 35,000 ರೂ.ಗಳನ್ನು ಕೇಂದ್ರ ಸರ್ಕಾರ ಕೊಡುತ್ತಿತ್ತು. ಅದರಲ್ಲಿ ಸುಮಾರು 8,750 ರೂ.ಗಳನ್ನು ರಾಜ್ಯ ಸರ್ಕಾರ ಪಾಲು ಇತ್ತು. ನಮ್ಮ ಪಾಲನ್ನು 8,750 ರೂ.ಗಳಿಂದ ಈ ವರ್ಷ 13,750 ರೂ.ಗಳಿಗೆ ಅಂದರೆ 5,000 ರೂ.ಗಳನ್ನು ಹೆಚ್ಚಿಗೆ ಮಾಡಿದ್ದೇವೆ. ಅಲ್ಲಿ ಕಡಿಮೆ ಆಗುತ್ತದೆಂದು ಹೆಚ್ಚಿಗೆ ಮಾಡಿರುತ್ತೇವೆ. ಈ ರೀತಿ ಗ್ರಾಮೀಣ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಿಗೆ ಚಾಲನೆಯನ್ನು ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ. 100 ಕೋಟಿ ರೂ.ಗಳನ್ನು ಕೊಟ್ಟಿದ್ದು, ಇಲ್ಲಿ ಮುಖ್ಯವಾಗಿ ಜಮೀನಿನ ಅಡಚಣೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ: ಹಿಂದಿನ ಸರ್ಕಾರದಿಂದ ಇಂದಿರಾ ಆವಾಸ್ ಯೋಜನೆಗೆ ಎಷ್ಟು ಹಣ ಬಂದಿದೆ. ಎಷ್ಟು ಹಣವನ್ನು ರಿಲೀಜ್ ಮಾಡಿದ್ದಾರೆ. ಇದಕ್ಕೆ ಹಣಕಾಸು ಇಲಾಖೆಯಲ್ಲಿ ಈ ಹಣ ಇದೆಯೆ? ದಯವಿಟ್ಟು ಅದನ್ನು ಕ್ಲಾರಿಫೈ ಮಾಡಲಿ. ನಿಮ್ಮ ಹಣಕಾಸು ಇಲಾಖೆಯಲ್ಲಿ ದುಡ್ಡು ಇಟ್ಟುಕೊಂಡು ಬಿಟ್ಟು ಮನೆ ಮಾಡಿ, ಮನೆ ಮಾಡಿ ಎಂದರೆ ಹೇಗೆ? ಆ ಹಣವನ್ನು ಡಿ.ಸಿ.ಗಳಿಗೆ ಕಳುಹಿಸಿ. ಡಿ.ಸಿ. ಮತ್ತು ಸಿ.ಇ.ಓ.ಗಳಿಗೆ ಜವಾಬ್ದಾರಿಯನ್ನು ಹಾಕಿ. ನೀವು ಕೇಂದ್ರ ಸರ್ಕಾರದ ಹಣವನ್ನು ಇಟ್ಟುಕೊಂಡು ಮನೆ ಮಾಡಿದ್ದೇವೆಂದು ನೀವು ಹೇಳಿಕೊಂಡು ಕುಳಿತುಕೊಳ್ಳಬೇಡಿ. ಎಷ್ಟು ಹಣ ನಿಮ್ಮ ಹಣಕಾಸು ಇಲಾಖೆಯಲ್ಲಿದೆ, ಎಷ್ಟು ಹಣವನ್ನು ಡಿ.ಸಿ. ಮತ್ತು ಸಿ.ಇ.ಓ.ಗಳಿಗೆ ಕಳುಹಿಸಿಕೊಟ್ಟಿದ್ದೀರಿ? ಏಕೆ ಇಟ್ಟುಕೊಂಡಿದ್ದೀರಿ ಆ ಹಣವನ್ನು? ದಯಮಾಡಿ ಸ್ವಲ್ಪ ಅದನ್ನು ತಿಳಿಸಿ.

ಶ್ರೀ ಬಸವರಾಜ ಬೊಮ್ಮಾಯಿ: 2009-10ರ ಆರ್ಥಿಕ ವರ್ಷದಲ್ಲಿ ವಿವಿಧ ವಸತಿ ಯೋಜನೆಗಳಿಗೆ ಸರ್ಕಾರ ಒದಗಿಸಿದ ಅನುದಾನ, ಅದರಲ್ಲಿ ಇಂದಿರಾ ಆವಾಸ್ ಯೋಜನೆಯಡಿ ನಿರ್ಮಿಸಿದ ಮನೆಗಳು 34,473 ಆರ್ಥಿಕ ಸಾಧನೆ 12,065 ಲಕ್ಷ ರೂ.ಗಳು ಆಯವ್ಯಯದಲ್ಲಿ ಒದಗಿಸಿರುವ ಒಟ್ಟು ಹಣ 15,844 ಲಕ್ಷ ರೂ.ಗಳು. ಈ ಹಣವನ್ನು ಬಿಡುಗಡೆ ಮಾಡಿದ್ದು ಉಳಿದ ಹಣವನ್ನು ಬಿಡುಗಡೆ ಮಾಡಲಾಗುವುದು. ಒಟ್ಟು 158 ಕೋಟಿ ರೂ.ಗಳಲ್ಲಿ 120 ಕೋಟಿ

ರೂ.ಗಳನ್ನು ಬಿಡುಗಡೆ ಮಾಡಿರುತ್ತೇವೆ. ಮಿಕ್ಕಿದ ಹಣವನ್ನು ಕೂಡ ಬಿಡುಗಡೆ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ: ಆ ಬಾಕಿ 20 ಕೋಟಿ ರೂ. ಹಣಕಾಸು ಇಲಾಖೆಯಲ್ಲಿ ಇಧೆಯೋ ಅಥವಾ ಮುಖ್ಯ ಕಾರ್ಯದರ್ಶಿಗಳ ಹತ್ತಿರ ಇದೆಯೋ?

ಶ್ರೀ ಬಸವರಾಜ ಬೊಮ್ಮಾಯಿ: ಆ ವಿಚಾರವನ್ನು ಒದಗಿಸುತ್ತೇನೆ. ಈ ರೀತಿಯಾಗಿ ಗ್ರಾಮೀಣಾಭಿವೃದ್ಧಿ ಬಗ್ಗೆ ನಮ್ಮ ಕಳಕಳಿ ಇರುವುದು ಸ್ಪಷ್ಟವಾಗಿದೆ.

ಉಪಾಧ್ಯಕ್ಷರು: ಮಧ್ಯೆ ಮಧ್ಯೆ ಕೇಳುವುದಕ್ಕೆ ಅವಕಾಶವಿಲ್ಲ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರೆ ಭೂಮಿಯನ್ನು ಖರೀದಿ ಮಾಡುವುದಕ್ಕೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರೆಂದು ಹೇಳಿದ್ದೀರಿ. ಅದರಲ್ಲಿ Land Guidance Valu ಇಲ್ಲದೆಯೇ ನೀವು ಒಂದು ಎಕರೆ ಭೂಮಿಯನ್ನು ಖರೀದಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಉತ್ತರವನ್ನು ಕೊಡುವುದಕ್ಕೆ ಬಿಡಿ ಸ್ವಾಮಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನೀವು 100 ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಅಲ್ಲಿ Land Guidance Value ಕಡಿಮೆ ಇರುವುದರಿಂದ ನೀವು ಭೂಮಿಯನ್ನು ಖರೀದಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ನೋಡಿ ಸ್ವಾಮಿ, ಒಂದು ನಯಾಪೈಸೆಯೂ ಇರಲಿಲ್ಲ. ಈ ಒಂದು ಅಧಿವೇಶನದ ಪರಿಣಾಮವಾಗಿ ನಿಮ್ಮ ಸಲಹೆಯಂತೆ ಜಮೀನು ಖರೀದಿ ಮಾಡುವುದಕ್ಕೆ ನಮ್ಮ ಸರ್ಕಾರ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನೀವು ನಮಗೆ ಅಭಿನಂದನೆಯನ್ನು ಸಲ್ಲಿಸಬೇಕು. ಆ ಹಣವು ಸಾಕಾಗುವುದಿಲ್ಲವೆಂದು ಹೇಳುತ್ತೀರಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅದು ಫಲಕಾರಿಯಾಗುವುದಿಲ್ಲ ಏಕೆಂದರೆ, land guidance value ಪ್ರಕಾರ ಯಾರೂ ಕೂಡ ಭೂಮಿಯನ್ನು ಕೊಡುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಖಂಡಿತವಾಗಿಯೂ ಫಲಕಾರಿಯಾಗುತ್ತದೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಹೇಳಿರುವುದು ಉಪಯೋಗವಾಗುವುದಿಲ್ಲ. ನೀವು land guidance value ಅನ್ನು increase ಮಾಡಿ market price ಕೊಡುತ್ತೇವೆ, land guidance value ಅನ್ನು higher ಮಾಡುತ್ತೇವೆಂದು ಹೇಳಿದ್ದರೆ ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದೆವು. ನೀವು ಕೊಟ್ಟಿರುವ ಹಣವು ಉಪಯೋಗವಾಗಿಲ್ಲವೆಂದು ಹೇಳುತ್ತಿರುವುದು.

ಉಪಾಧ್ಯಕ್ಷರು: ಅವರು ಯೀಲ್ಡ್ ಆಗಿಲ್ಲ. ಮಧ್ಯೆ ಮಧ್ಯೆ ಹೇಗೆ ಮಾತನಾಡುತ್ತೀರಿ? Please ಕುಳಿತುಕೊಳ್ಳಿ. ಮೊದಲು ಅವರು ಮಾತನಾಡಿ ಮುಗಿಸಲಿ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಅದಕ್ಕೆ ನಾನು ಸಹಾಯಕ್ಕೆ ಬರುತ್ತಿದ್ದೇನೆ. ಹಿಂದೆ ಕೊಟ್ಟಿರುವ ಪ್ರಕಾರ ಅವರು ಖರೀದಿ ಮಾಡಿದ್ದಾರೆ. 100 ಕೋಟಿ ರೂಪಾಯಿಯಲ್ಲಿ effective ಆಗಿ ಕೆಲಸ ಆಗುವುದಿಲ್ಲ. ಹೆಚ್ಚಿಗೆ ಕೊಡುವುದರ ಬಗ್ಗೆ ನಾವು clarification ಕೇಳಿದ್ದೇವೆ. ಅದಕ್ಕೆ ಉತ್ತರವು ಬರಬೇಕಲ್ಲ?

ಉಪಾಧ್ಯಕ್ಷರು: ಬರುತ್ತದೆ. ನೀವು ಮಾತನಾಡುವುದಕ್ಕೆ ಬಿಡದೇ ಇದ್ದರೆ ಹೇಗೆ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: 100 ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಅದರಿಂದ ನಮಗೆ ಸಮಾಧಾನವಾಗುವುದಿಲ್ಲ.

ಉಪಾಧ್ಯಕ್ಷರು: ಅವರಿಗೆ ನೀವು ಮಾತನಾಡುವುದಕ್ಕೆ ಬಿಡದಿದ್ದರೆ ಹೇಗೆ?

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನು ಕಾರ್ಯಗತ ಮಾಡಿ ಯಾವಾಗ ಎಷ್ಟೆಷ್ಟು ಅವಶ್ಯಕತೆ ಇದೆಯೋ ಖಂಡಿತವಾಗಿಯೂ ಮಾಡುತ್ತೇವೆ. ಆಶ್ರಯ

ಮನೆಗೆ ನಮ್ಮ priority ಇದೆ. ಅದಕ್ಕೆ ಒದಗಿಸುತ್ತೇವೆ, ಏನೂ ತೊಂದರೆ ಇರುವುದಿಲ್ಲ.

ಉಪಾಧ್ಯಕ್ಷರು: ಆಯಿತು.

ಶ್ರೀ ಬಸವರಾಜ ಬೊಮ್ಮಾಯಿ: ಅದೇ ರೀತಿ Insurance ಬಗ್ಗೆ ಬಹಳಷ್ಟು ಜನರು ಸದಸ್ಯರು ಹೇಳಿದ್ದಾರೆ.

ಶ್ರೀ ಬಿ. ಸುರೇಶ್‌ಗೌಡ: ಫಲಾನುಭವಿಗಳಿಗೆ ಜನಸ್ಪಂದನ ಕಾರ್ಯಕ್ರಮದಲ್ಲಿ ನಮ್ಮ ಕೈಯಿಂದ ಕೊಡಿಸಿರುವ ಚೆಕ್‌ಗಳು ಬೌನ್ಸ್ ಆಗಿವೆ. ಅದನ್ನು ಯಾವಾಗ ಕೊಡುತ್ತೀರಿ ಅದರ ಬಗ್ಗೆ ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಅದರ ಬಗ್ಗೆ ದಯವಿಟ್ಟು ವಿವರಗಳನ್ನು ಕೊಡಿ. ಅದಕ್ಕೆ ನಾವು ಪರಿಹಾರವನ್ನು ಒದಗಿಸುತ್ತೇವೆ.

ಶ್ರೀ ಬಿ. ಸುರೇಶ್‌ಗೌಡ: ನಾಗಮಂಗಲ ಕ್ಷೇತ್ರದ ನೆಲ್ಲಿಗೆರೆ ಪಂಚಾಯಿತಿಯಲ್ಲಿ ಹಲವಾರು ಆಗಿವೆ.

ಶ್ರೀ ಬಸವರಾಜ ಬೊಮ್ಮಾಯಿ: ಖಂಡಿತವಾಗಿಯೂ ಪರಿಶೀಲನೆ ಮಾಡಿ ಹಣವನ್ನು ಬಿಡುಗಡೆ ಮಾಡಿಸುತ್ತೇವೆ.

ಶ್ರೀ ಬಿ. ಸುರೇಶ್‌ಗೌಡ: ಸರ್ಕಾರಿ ಚೆಕ್‌ಗಳು ಬೌನ್ಸ್ ಆದರೆ ನಾವು ಏನು ಮಾಡೋಣ?

ಉಪಾಧ್ಯಕ್ಷರು: ಆಯಿತು, ಮಾನ್ಯ ಸಚಿವರು ಬಿಡುಗಡೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ. ಸುರೇಶ್‌ಗೌಡ: ಸರ್, ಇದು ಎಂತಹ ಅತಂತ್ರ ಎಂದರೆ, ಚೆಕ್‌ಬೌನ್ಸ್ ಆದರೆ ...

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸುರೇಶ್‌ಗೌಡರೆ, ನಿಮಗೆ ಇದು ಗೊತ್ತಿರಬಹುದು, ತಾಂತ್ರಿಕ ಕಾರಣಗಳಿಂದ ಎಲ್ಲಾ ಸರ್ಕಾರಗಳಲ್ಲಿಯೂ ಚೆಕ್ ಬೌನ್ಸ್ ಆಗಿವೆ.

ಶ್ರೀ ಬಿ. ಸುರೇಶ್‌ಗೌಡ: ನಮ್ಮ ಮೇಲೆ ಚೆಕ್‌ಬೌನ್ಸ್ ಕೇಸನ್ನು ಸಹ ಹಾಕುವ ಹಾಗಿಲ್ಲ.

ಉಪಾಧ್ಯಕ್ಷರು: ಆಯಿತು.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸಭಾಧ್ಯಕ್ಷರೆ, insurance ಬಗ್ಗೆ ಈಗಾಗಲೇ ಬಹಳಷ್ಟು ಜನ ಸದಸ್ಯರು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿಯೂ ಕೂಡ ನಿಮ್ಮ ನೀತಿಯಲ್ಲಿ insurance ವ್ಯಾಪ್ತಿಯನ್ನು ಹೆಚ್ಚಿಸಬೇಕು ಮತ್ತು ಪರಿಣಾಮಕಾರಿಯಾಗಿ ಮಾಡಬೇಕೆಂದು ತಾವೆಲ್ಲರೂ ಹೇಳಿದ್ದೀರಿ. ಆ ಹಿನ್ನೆಲೆಯಲ್ಲಿ ಮೊದಲನೆಯದು climatic insurance ಇರಬಹುದು ಅಥವಾ crop-cutting ಮಾಡುವಂತಹ general agricultural insurance ಇರಬಹುದು. ಇವೆಲ್ಲಕ್ಕೂ ಕೂಡ ಮಳೆಮಾಪನ ಕೇಂದ್ರ ಬಹಳ ಮುಖ್ಯ. ಅದನ್ನು ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಂದು ಗ್ರಾಮಪಂಚಾಯತಿಗೆ ವಿಸ್ತರಣೆ ಮಾಡುತ್ತಿರುವುದು ನಿಜವಾಗಿಯೂ ಕೂಡ ಅದು ಕ್ರಾಂತಿಕಾರಕ ಬದಲಾವಣೆಯಾಗಿದೆ ಎಂದು ನಾನು ಭಾವಿಸಿದ್ದೇನೆ. ಅದನ್ನು ಆದಷ್ಟು ಬೇಗನೆ ಮಾಡಿದರೆ ಖಂಡಿತವಾಗಿಯೂ ಒಂದು ಹೋಬಳಿಗೆ insurance ಸಿಕ್ಕಿದ್ದು ಒಂದೇ ತಾಲ್ಲೂಕಿನಲ್ಲಿ ಇನ್ನೊಂದು ಕಡೆಯಲ್ಲಿ ಸಿಗುತ್ತಿಲ್ಲ. ಆ ಅನ್ಯಾಯ ಏನು ಇದೆ, ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆ. ಅದರ ಬಗ್ಗೆಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಇದು ಯಾವ ರೀತಿಯಾಗಿ ಉಪಯೋಗವಾಗುತ್ತದೆ ಎಂದು ತಾವು ಹೇಳಿ. ನೀವು crop-cutting insuranceಗೆ ನೀವು ಮಳೆ ಮಾಪನ ಕೇಂದ್ರ ಮಾಡಿದರೆ ಏನು? Is it rain dependent? ಮಳೆಯಾಧಾರಿತ insuranceನ್ನು ನೀವು ಕೊಡುತ್ತಿದ್ದೀರಾ? ಈ ರೀತಿಯಾಗಿ ನೀವು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟರೆ ಹೇಗೆ?

ಶ್ರೀ ಬಸವರಾಜ ಬೊಮ್ಮಾಯಿ: ಕೇಂದ್ರ ಸರ್ಕಾರವು insurance policyಯನ್ನು ಮಾಡುವುದು. ಇದನ್ನು ನೀವು ಅರ್ಥ ಮಾಡಿಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅದು ಆಯಿತು.

ಶ್ರೀ ಬಸವರಾಜ ಬೊಮ್ಮಾಯಿ: Agricultural Insuranceಗೆ corporation ಇದೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅವರಿಗೆ ಹೇಳಿ, ನೀವು ಇವತ್ತು ನೀವು ಗ್ರಾಮಪಂಚಾಯಿತಿಯ ಮಟ್ಟದಲ್ಲಿ ಮಳೆ ಮಾಪನ ಕೇಂದ್ರವನ್ನು ಮಾಡುತ್ತೇವೆಂದರೆ ಅದು ಎಲ್ಲವೂ ಸರಿಯಾಗುತ್ತದೆ ಎಂದು ನೀವು ತಪ್ಪು ಮಾಹಿತಿಯನ್ನು ಕೊಡುವುದಕ್ಕೆ ಹೋಗಬೇಡಿ. ನೀವು ಕೇಂದ್ರ ಸರ್ಕಾರವು ಮಾಡಬೇಕೆಂದು ಹೇಳುವುದನ್ನು ನಾವು ಕೇಳುತ್ತೇವೆ. ಆದರೆ ನೀವು crop-cutting insuranceಗೆ, ಮಳೆ ಮಾಪನ ಕೇಂದ್ರಕ್ಕೆ ಏನು ಸಂಬಂಧ ಇದೆ ಹೇಳಿ. How is it related?

ಶ್ರೀ ಬಸವರಾಜ ಬೊಮ್ಮಾಯಿ: ಸಂಬಂಧವಿಲ್ಲವೇ? ಮಳೆ ಮಾಪನಾ ಕೇಂದ್ರ ...

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: Insurance claim ಮಾಡುವುದರಲ್ಲಿ ...

ಶ್ರೀ ಬಸವರಾಜ ಬೊಮ್ಮಾಯಿ: ಒಂದು ನಿಮಿಷ ತಾವು ಕೇಳಿ.

ಉಪಾಧ್ಯಕ್ಷರು: ನೀವು ಮಧ್ಯದಲ್ಲಿ ಈ ರೀತಿಯಾಗಿ ಮಾತನಾಡಿದರೆ ಹೇಗೆ? ನೀವು ಮಾತನಾಡುವುದಕ್ಕೆ ಅನುಮತಿಯನ್ನು ತೆಗೆದುಕೊಳ್ಳುವುದಿಲ್ಲವಲ್ಲ? ಈ ರೀತಿಯಾಗಿ ತಾವು ಪ್ರಶ್ನೆಯನ್ನು ಕೇಳಿದರೆ ಅದು ದಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ ಅಷ್ಟೇ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಈ ರೀತಿಯಾಗಿ ...

ಉಪಾಧ್ಯಕ್ಷರು: ನೀವು ಈ ರೀತಿಯಾಗಿ ಕೇಳಿದರೆ, ನಾನು ದಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಒಂದು ನಿಮಿಷ ನಾನು ಹೇಳುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಪಾಟೀಲ್‌ರವರೆ, ತಾವು ಕುಳಿತುಕೊಳ್ಳಿ. ನೀವು ಹೇಳುವುದು ದಾಖಲೆಗೆ ಹೋಗುವುದಿಲ್ಲ. ನೀವು ಏನೇ ಹೇಳಿದರೂ ಕೂಡ ಅದು ದಾಖಲೆಗೆ ಹೋಗುವುದಿಲ್ಲ. ನೀವು ಮಾತನಾಡುವುದಕ್ಕೆ ಅನುಮತಿಯನ್ನು ಸಹ ಕೇಳುವುದಿಲ್ಲ. ಮಧ್ಯೆಯಲ್ಲಿ ಎದ್ದುನಿಂತುಕೊಂಡು ಹೇಳುತ್ತಿರುತ್ತೀರಿ. Please ಕುಳಿತುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಯೀಲ್ಡ್ ಆಗಿದ್ದಾರೆ.

ಉಪಾಧ್ಯಕ್ಷರು: ತಾವು ಕುಳಿತುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಮಾತನಾಡುವುದಕ್ಕೆ ಯಾರಿಗೆ ಅನುಮತಿಯನ್ನು ಕೊಟ್ಟಿದ್ದೀರಿ? ಈ ಬಗ್ಗೆ ಯಾರು ಮಾತನಾಡಬೇಕು?

ಉಪಾಧ್ಯಕ್ಷರು: ನೀವು ಸಾಕಷ್ಟು ಮಾತನಾಡಿದ್ದೀರಿ. ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅವರು ಯೀಲ್ಡ್ ಆಗಿದ್ದಾರೆ.

ಉಪಾಧ್ಯಕ್ಷರು: ಮಾನ್ಯ ಸಚಿವರೇ, ತಾವು ಯೀಲ್ಡ್ ಆಗಿದ್ದೀರಾ?

ಶ್ರೀ ಬಸವರಾಜ ಬೊಮ್ಮಾಯಿ: ಇಲ್ಲಾ, ಅವರಿಗೆ ನಾನು ಯೀಲ್ಡ್ ಆಗಿಲ್ಲ. ನಾನು ಇವರಿಗೆ ಯೀಲ್ಡ್ ಆಗಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಅವರು ನಮಗೆ ಯೀಲ್ಡ್ ಆಗಿದ್ದಾರೆ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಸರ್ಕಾರವನ್ನು ಸರಿಯಾದ ರೀತಿಯಲ್ಲಿ ತರುವುದರ ಬಗ್ಗೆ ನಾವು ಪ್ರಯತ್ನವನ್ನು ಮಾಡಿದ್ದೇವೆ. ನೀವು ದಾರಿತಪ್ಪಿಸು ಅಂದರೆ ...

ಶ್ರೀ ಬಸವರಾಜ ಬೊಮ್ಮಾಯಿ: ಡಾಕ್ಟರೆ ತಾವು ಕೇಳಿ. Crop-cutting Experimentಗೆ ಮೊದಲನೆಯದಾಗಿ ಏನೇನು ನ್ಯೂನತೆಗಳು ಇವೆ. ಅವುಗಳ ಬಗ್ಗೆ Statistics Department, Agriculture Department, Revenue Department ಎಲ್ಲರೂ ಸೇರಿ ಮಾಡುವಂತಹ ಕೆಲಸವಿದೆ. ಕಳೆದ ಐದು ವರ್ಷದ average ತೆಗೆದುಕೊಂಡು regular ಆಗಿ crop-cutting ಮಾಡುತ್ತಿರುತ್ತಾರೆ. ಅದರಲ್ಲಿ ಇನ್ನಷ್ಟು ಜನರನ್ನು ತೊಡಗಿಸಬೇಕಾಗಿದೆ. ಸರಿಯಾದ ರೀತಿಯಲ್ಲಿ crop-cutting insurance ಮಾಡಿ time ಪ್ರಕಾರ ಅದನ್ನು ಕೊಡಬೇಕಾಗಿದೆ. ಅದಕ್ಕೆ ಎಲ್ಲವನ್ನು ವ್ಯವಸ್ಥೆ ಮಾಡುವುದರ ಜೊತೆಗೆ ಮಳೆ ಮಾಪನಾ ಕೇಂದ್ರವನ್ನು ಗ್ರಾಮಪಂಚಾಯತಿಯ ಲೆವೆಲ್‌ನಲ್ಲಿ ಮಾಡುತ್ತೇವೆಂದು ಹೇಳಿದ್ದೇವೆ. ಇಲ್ಲಿ ಎರಡು ತರಹದ insurance ಇರುವ ಬಗ್ಗೆ ತಮಗೆ ಗೊತ್ತಿದೆಯಲ್ಲ?

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಎರಡು ತರಹದ insurance ಇದೆ. ತಾವು ಹೇಳುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಒಂದು ಹವಾಮಾನ ಆಧಾರಿತವಾದಂತಹ insurance.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅದು ಇಡೀ ರಾಜ್ಯದಲ್ಲಿ ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಮುಂದಿನ ದಿನಗಳಲ್ಲಿ ಅತೀ ಶೀಘ್ರದಲ್ಲಿ ಅದೇ insurance ಬರುವುದು ಇದೆ. ಅದೇ ಜಾಸ್ತಿ ಜನ ರೈತರಿಗೆ ಅಳವಡಿಸುವಂತಹ ರಾಷ್ಟ್ರೀಯ ನೀತಿ ಇದೆ. ಒಂದು ನಿಮಿಷ ಕೇಳಿ. ಅದಕ್ಕಾಗಿ ನಮ್ಮ ರಾಜ್ಯ ಸರ್ಕಾರವು ಸಿದ್ಧತೆಯನ್ನು ಮಾಡಿಕೊಳ್ಳುತ್ತಿದೆ. ಅದರ ಜೊತೆಗೆ ಈಗಾಗಲೇ regular insurance ಏನಿದೆ ಅದು Agriculture Insurance Corporation of Indiaದ ನೀತಿಯಿಂದ ನಡೆಯುತ್ತಿದೆ. ಅದಕ್ಕೆ ರಾಷ್ಟ್ರಮಟ್ಟದಲ್ಲಿ ಒಂದು corporation ಇದ್ದರೆ ರಾಜ್ಯ ಮಟ್ಟದಲ್ಲಿ ಒಂದು ಕಮಿಟಿ ಇದೆ. Crop-cutting ಆಧಾರದ ಮೇಲೆ reportನ್ನು ತೆಗೆದುಕೊಳ್ಳುತ್ತೇವೆ. ಇಲ್ಲಿ ಸಮಸ್ಯೆ ಏನಾಗಿದೆ ಎಂದರೆ ಬರೀ ಲೋನ್ ತೆಗೆದುಕೊಂಡ ರೈತರು ಮಾತ್ರ

insurance ತೊಡಗಿಸುತ್ತಿದ್ದಾರೆ. Non-Loanee ರೈತರನ್ನು ಹೆಚ್ಚಿಗೆ ಮಾಡಿದರೆ ಅದರ ಲಾಭ ಸಿಗುತ್ತದೆ. ಹಾವೇರಿ ಜಿಲ್ಲೆಯ ಬಗ್ಗೆ ಕೇಳಿದರು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಸರ್ಕಾರವು ಅದನ್ನೆ ಮಾಡಿ ಎಂದು ನಾವು ಕೇಳುತ್ತಿರುವುದು.

ಒಬ್ಬ ಮಾನ್ಯ ಸದಸ್ಯರು: ಉತ್ತರವು ಸಮರ್ಪಕವಾಗಿಲ್ಲ.

ಉಪಾಧ್ಯಕ್ಷರು: ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅದನ್ನೆ ಬಗೆಹರಿಸಿ ಎಂದು ಕೇಳುತ್ತಿರುವುದು. ಅವರಿಗೆ ಸೌಲಭ್ಯ ಕೊಡಿ ಎಂದು ಕೇಳುತ್ತಿರುವುದು.

ಶ್ರೀ ಬಂಡೆಪ್ಪ ಕಾಶೆಂಪೂರ್: ನೀವು Telemetric Rain Gauge Systemನ್ನು ನೀವು ಪಂಚಾಯಿತಿ ಮಟ್ಟದಲ್ಲಿ ಮಾಡುತ್ತೇನೆಂದು ಹೇಳಿದ್ದೀರಿ. ಇದು ಏನು ಹೊಸದಲ್ಲ. ನಾವು 2007ರಲ್ಲಿಯೇ every ಪಂಚಾಯಿತಿಗೆ ಮಾಡುತ್ತೇವೆಂದು ಹೇಳಿದ್ದೆವು. ಈಗ ಎರಡು ವರ್ಷ ಡಿಲೇ ಮಾಡಿದ್ದೀರಿ. ಇದು ಹವಾಮಾನ insuranceಗೆ ಮಾತ್ರ ಸೀಮಿತವಾಗಿರುವುದು. ಇದು general insuranceಗೆ crop-cutting experimentಗೆ ಇದು ಹೋಬಳಿ ಲೆವೆಲ್‌ನಲ್ಲಿ ಆಗುತ್ತಿದೆಯೋ ಅದನ್ನು ಇನ್ನು ವಿಸ್ತಾರ ಮಾಡಿ. ಈಗ already ಇರುವಂತಹ staffನ್ನು ತೆಗೆದುಕೊಂಡು 20% ಹೆಚ್ಚಿಗೆ ಮಾಡಿ. ನಾವು ಆಗ ಕೆಲಸವನ್ನು ಮಾಡಿದ್ದೇವೆ. ಅದರಲ್ಲಿ ಎರಡು type insurance ಇದೆ. Long term and short term ಎಂದು ಮಾಡಿ ಎರಡು ಸಲ insurance ಹಣವನ್ನು ಕೊಡಿಸಿದ್ದೆವು. ನಮ್ಮ staffನ್ನು ಹೆಚ್ಚಿಗೆ ಮಾಡಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರ ಬೇಕಾಗಿಲ್ಲ. ನಮ್ಮಲ್ಲಿರುವಂತಹ staffನ್ನು ಹೆಚ್ಚಿಗೆ ಮಾಡಿಕೊಂಡು ...

ಶ್ರೀ ಬಸವರಾಜ ಬೊಮ್ಮಾಯಿ: Staffಗಳ ಕೊರತೆಯನ್ನು ನೀಗಿಸುತ್ತೇವೆಂದು ನೀವು ಹೇಳಿರುವುದನ್ನು ನಾನು ಆಗಲೇ ಹೇಳಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಅದಕ್ಕೆ ಡಿಲೇ ಮಾಡುವುದು ಬೇಡ.

ಶ್ರೀ ಬಸವರಾಜ ಬೊಮ್ಮಾಯಿ: Staffನ್ನು ಹೆಚ್ಚಿಗೆ ಮಾಡುತ್ತೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಹೋದ ಸಲ ನಾವು Short term, Long term, ಎಂದು ನಾವು ಎರಡು ಸಲ insurance ಕೊಟ್ಟಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನು ನಾವು ಹೇಳಿದ್ದೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಅದು ಕಟ್ ಆಗಿ ಒಂದೇ ಒಂದು ಸಲ insuranceನ್ನು ಕೊಡುತ್ತಿದ್ದಾರೆ.

ಶ್ರೀ ಸಿ.ಎಂ. ಉದಾಸಿ: ಅದರಲ್ಲಿ ಹಿಂಗಾರು ಮತ್ತು ಮುಂಗಾರು ಇದೆಯಲ್ಲವೇ?

ಶ್ರೀ ಬಸವರಾಜ ಬೊಮ್ಮಾಯಿ: ಹಿಂಗಾರು ಮತ್ತು ಮುಂಗಾರು ಎರಡನ್ನು ಸಹ ಕೊಡುತ್ತಾರೆ.

ಶ್ರೀ ಸಿ.ಎಂ. ಉದಾಸಿ: ನೀವು ತಪ್ಪು ಅರ್ಥ ಮಾಡಿಕೊಳ್ಳುವುದು ಬೇಡ.

ಶ್ರೀ ಬಂಡೆಪ್ಪ ಕಾಶೆಂಪೂರ್: ಅದರಲ್ಲಿ ತಪ್ಪಿಲ್ಲ.

ಶ್ರೀ ಸಿ.ಎಂ. ಉದಾಸಿ: ಒಂದೇ ಪ್ರಶ್ನೆಯನ್ನು ಕೇಳಿ. ಈಗ ಏನಾಗಿದೆ ಎಂದರೆ 1986ರಿಂದ 2000ದವರೆಗೆ ಬೆಳೆ ಸಾಲದ ವಿಮೆ ಮಾತ್ರ ಇತ್ತು. 2000-01ರಿಂದ ಬೆಳೆ ವಿಮೆ ಪ್ರಾರಂಭವಾಗಿದೆ. ಇದು ಪ್ರಾರಂಭವಾದಾಗ ಅದಕ್ಕೆ option ಇದೆ. ಬೆಳೆ ಸಾಲದ ವಿಮೆಯನ್ನು ಕಡ್ಡಾಯವಾಗಿ ಬ್ಯಾಂಕಿನಲ್ಲಿ ಅದು automatic ಆಗಿ ಆಗುತ್ತದೆ. ಬೆಳೆ ವಿಮೆಯನ್ನು ಮಾಡಿಸಬೇಕಾಗಿತ್ತು. ಇದಕ್ಕೆ ಜನರು ಮುಂದೆ ಬರಬೇಕಾಗಿತ್ತು. ಈಗ ಏನಾಗಿದೆ ಎಂದರೆ ಹಾವೇರಿ ಜಿಲ್ಲೆಯಲ್ಲಿ ಹೆಚ್ಚು ಜನರು ಬೆಳೆ ವಿಮೆಯನ್ನು ಮಾಡಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. 2002-03 ರಿಂದ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲಿಯೂ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ವರ್ಷ 10.50 ಲಕ್ಷ ಜನರು ಬೆಳೆ ವಿಮೆ ಹಾಗೂ ಬೆಳೆ ಸಾಲದ ವಿಮೆಯನ್ನು ಸೇರಿಸಿಕೊಂಡು ಮಾಡಿಸಿದ್ದಾರೆ. ಆದರೆ ಏನಾಗಿದೆ ಎಂದರೆ ಸಾಲದ ವಿಮೆಯು 5 ಪಟ್ಟು ಜನರು ಬೆಳೆ ವಿಮೆಯನ್ನು ಮಾಡಿಸಬೇಕಾಗಿದೆ. ಉದಾಹರಣೆಗೆ ಏನಾಗಿದೆ ಎಂದರೆ, ನಮ್ಮ ಹಾವೇರಿ ಜಿಲ್ಲೆಯಲ್ಲಿ 15 ಸಾವಿರ ಜನರು ಸಾಲ ಮಾಡಿರುವವರು ಇದ್ದರೆ 75,00 ಜನರು

ಸಾಲ ಮಾಡದೆ ಇದ್ದವರು ಬೆಳೆ ವಿಮೆ ಮಾಡಿದವರು ಇದ್ದಾರೆ. ಹೀಗೆ ಇರುವುದರಿಂದ 5 ಪಟ್ಟು ಅದು ಹೆಚ್ಚಾಗಿದೆ. ಇವತ್ತು ಉತ್ತರ ಕರ್ನಾಟಕದಲ್ಲಿ ಅದು ಆಗಿಲ್ಲ. ಅಲ್ಲಿ 25,000 ಜನರು ಸಾಲದ ವಿಮೆಯನ್ನು ಮಾಡಿಸಿದವರು ಇದ್ದರೆ, ಬೆಳೆ ವಿಮೆಯನ್ನು ಮಾಡಿಸಿದವರು 6,500 ಜನರು ಇದ್ದಾರೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಅದಕ್ಕೆ Governmentನವರು ಜವಾಬ್ದಾರರು ಇದ್ದಾರೆ. ನಾನು ಹೇಳುತ್ತೇನೆ ಕೇಳಿ. ಕೆಲವು ಕಡೆಯಲ್ಲಿ ನಾವು awarenessನ್ನು ತರಬೇಕಾಗುತ್ತದೆ.

ಶ್ರೀ ಸಿ.ಎಂ. ಉದಾಸಿ: ಇದು ಆಗಿ 10 ವರ್ಷಗಳು ಆಗಿದೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಅದನ್ನು ತರುತ್ತಿಲ್ಲ. ಏಕೆಂದರೆ, ಬೀದರ್, ಗುಲ್ಬರ್ಗಾ ಅಲ್ಲೆಲ್ಲಾ ನಾವು ಒಂದೊಂದು ಸಾರಿ awarenessನ್ನು ತಂದು ಬಹಳಷ್ಟು ...

ಶ್ರೀ ಸಿ.ಎಂ. ಉದಾಸಿ: ತೊಗರಿ ಒಂದು ಸಲ ಬಂದ ಮೇಲೆ ...

ಶ್ರೀ ಬಂಡೆಪ್ಪ ಕಾಶೆಂಪೂರ್: ನಾನು ಪೂರ್ಣವಾಗಿ ಮುಗಿಸಿದ ಮೇಲೆ ತಾವು ಮಾತನಾಡಿ. Crop-cutting experiments ಇನ್ನು ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು. ಅದು ಬಹಳಷ್ಟು ಮಾಡುವುದು ಇದೆ. ಆಮೇಲೆ ಕೇಂದ್ರ ಸರ್ಕಾರದ ಜೊತೆಯಲ್ಲಿ ತಮ್ಮದೇ ಆದ ಒಂದು systemನಲ್ಲಿ ಹೋಗಿದ್ದರೆ ಮುಂದಿನ ದಿನಗಳಲ್ಲಿ ಈ ರೈತರಿಗೆ ಒಳ್ಳೆಯದಾಗುತ್ತದೆ. ಮತ್ತೆ special ವಿಮೆಯ ಬಗ್ಗೆ ಬಹಳ ದೊಡ್ಡ ಚಿಂತನೆಯಾಗಿ ಅದಕ್ಕೆ ರೈತರಿಗೆ ನೇರವಾಗಿ immediate ಆಗಿ ಸಿಗುವಂತಹ ಪ್ರಯತ್ನವನ್ನು ಇಬ್ಬರು ಸೇರಿ ಮಾಡಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ಶೌಚಾಲಯಗಳ ಬಗ್ಗೆ ಬಹಳ ಮುಖ್ಯವಾಗಿದ್ದು ಬಹಳಷ್ಟು ಚರ್ಚೆಯಾಗಿದೆ. I will convince you. Don't worry.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: Insuranceದು Horticultureಗೂ ಕೂಡ ಅಳವಡಿಸುವ ಹಾಗೆ ಮಾಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ: I am not misleading.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಬಾಳೆ, ಕಬ್ಬು, Horticulture Crop ಏನಿದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: I am not misleading the House. You have mis-understood.

Dr. Sharana Prakash Rudrappa Patil: No, No, You cannot mislead the House like this.

ಉಪಾಧ್ಯಕ್ಷರು: ಆಯಿತು.

ಶ್ರೀ ಬಸವರಾಜ ಬೊಮ್ಮಾಯಿ: ಶೌಚಾಲಯಗಳ ಬಗ್ಗೆ ಬಹಳಷ್ಟು ಚರ್ಚೆಯಾಯಿತು. ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ 2500 ರೂಪಾಯಿಯನ್ನು ಕೊಡುತ್ತಿದ್ದಾರೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: 2500 ರೂಪಾಯಿಯನ್ನು ಕೊಡುವುದು total sanitation programmeನಲ್ಲಿ ಕೇಂದ್ರ ಸರ್ಕಾರವು ಕೊಡುತ್ತಿದೆ. ಈ ರೀತಿಯಾದಂತಹ ತಪ್ಪು ಮಾಹಿತಿಯನ್ನು ಕೊಡಬೇಡಿ.

ಶ್ರೀ ಬಸವರಾಜ ಬೊಮ್ಮಾಯಿ: ಬಿಪಿಎಲ್ ಇದ್ದವರಿಗೆ ಕೊಡುವಂತಹ ಯೋಜನೆ ಇದೆ. ಅದನ್ನು ನಮ್ಮ ರಾಜ್ಯ ಸರ್ಕಾರದವರು ಇನ್ನಷ್ಟು 500 ರೂಪಾಯಿಗಳಿಗೆ ಹೆಚ್ಚಿಗೆ ಮಾಡುವುದರ ಬಗ್ಗೆ ನಾವೆಲ್ಲರೂ ತೀರ್ಮಾನವನ್ನು ಮಾಡಿದ್ದೇವೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: 3000 ರೂಪಾಯಿಯನ್ನು ಕೊಟ್ಟರೆ ಏನಾಗುತ್ತದೆ?

ಉಪಾಧ್ಯಕ್ಷರು: ನೀವು ಹೇಳುವುದನ್ನು ಬಿಡದಿದ್ದರೆ ಹೇಗೆ? ಡಾಕ್ಟರೆ, ನೀವು ಪ್ರತಿಯೊಂದಕ್ಕೂ ಕೇಳುತ್ತಾ ಹೋದರೆ ಹೇಗೆ?

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಾವು ಜವಾಬ್ದಾರಿಯಿಂದ ಕೊಡುತ್ತಿದ್ದೇವೆ. 2500 ರೂಪಾಯಿಯನ್ನು ಕೊಡಲಾಗುತ್ತಿದೆ. ನೀವು 2500 ರೂ. ಕೊಟ್ಟು ಒಟ್ಟು 5000 ರೂಪಾಯಿಯನ್ನು ಕೊಡುತ್ತೇವೆಂದರೆ ಏನಾದರೂ problem solve ಆಗುತ್ತದೆ.

ಉಪಾಧ್ಯಕ್ಷರು: ನೀವು ಪ್ರತಿಯೊಂದಕ್ಕೂ ಮಾತನಾಡುವುದಕ್ಕೆ ಎದ್ದು ನಿಲ್ಲುತ್ತಿದ್ದೀರಿ?

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಪ್ರತಿಯೊಂದಕ್ಕೂ 500 ರೂಪಾಯಿಯನ್ನು ಕೊಡುತ್ತೇವೆಂದರೆ, problem solve ಆಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: 1500 ರೂಪಾಯಿಯನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. 1000 ರೂಪಾಯಿಯನ್ನು ರಾಜ್ಯ ಸರ್ಕಾರದವರು ಕೊಡುತ್ತಾರೆ. ಈಗ 500 ರೂಪಾಯಿಯನ್ನು ಜಾಸ್ತಿ ಮಾಡಿದ್ದೇವೆ. 1500 ರೂಪಾಯಿಯನ್ನು ಕೇಂದ್ರ ಸರ್ಕಾರವು ಕೊಡುತ್ತದೆ. 1000 ರೂಪಾಯಿಯನ್ನು ನಾವು ಕೊಡುತ್ತಿದ್ದೆವು. ಈಗ 500 ರೂಪಾಯಿಯನ್ನು ಸೇರಿಸಿ 3,000 ರೂಪಾಯಿಗಳು ಆಗಿವೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ್ದು ತಲಾ 1500 ರೂಪಾಯಿಗಳು ಅಂದರೆ ಒಟ್ಟು 3000 ರೂಪಾಯಿಗಳು. ಇದು ಒಂದು ಸಾಮಾಜಿಕ ಆಂದೋಲನದ ರೀತಿಯಲ್ಲಿ ಆಗಬೇಕು. ಯಾವುದೇ ಹಿಂದಿನ ಸರ್ಕಾರವಾಗಲಿ, ಈಗಿನ ಸರ್ಕಾರವೇ ಆಗಲಿ, ಅಥವಾ ಕೇಂದ್ರ ಸರ್ಕಾರವೇ ಆಗಲಿ, ಇಷ್ಟು ದೊಡ್ಡ ಪ್ರಮಾಣ ಇದ್ದಾಗ ಸಮಸ್ಯೆ ಇದ್ದಾಗ ಅದು ಆಂದೋಲನದ ರೂಪದಲ್ಲಿಯಾಗಬೇಕು. ಅದರಲ್ಲಿ ಸಮಾಜ, ಶಾಸಕರು ಎಲ್ಲರೂ ಸೇರಬೇಕು. ಈಗ ಉದಾಹರಣೆಗೆ ನಮ್ಮ ಪ್ರಕಾಶ್ ಹುಕ್ಕೇರಿಯವರು ನಿಮ್ಮ ಪಕ್ಷದವರು ಇದ್ದಾರೆ. ಶೌಚಾಲಯಕ್ಕೆ ತಮ್ಮ ಎಂಎಲ್ಎ ಫಂಡ್ ...

ಶ್ರೀ ಬಂಡೆಪ್ಪ ಕಾಶೆಂಪೂರ್: ಎಂಎಲ್ಎ ಫಂಡ್ ...

ಉಪಾಧ್ಯಕ್ಷರು: ಅವರು ಹೇಳುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಬಂಡೆಪ್ಪ ಕಾಶೆಂಪೂರ್: ನಾವು ಕೊಟ್ಟಿಬಿಡುತ್ತೇವೆ. ನಾನು ನೀವು ಮಾಡುವ ಒಳ್ಳೆಯ ಕೆಲಸದ ಬಗ್ಗೆ immediate ಆಗಿ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು: ಅವರು ಹೇಳುವುದಕ್ಕೆ ಅವಕಾಶವನ್ನು ಕೊಡದೆ ಇದ್ದರೆ ಹೇಗೆ?

ಶ್ರೀ ಬಸವರಾಜ ಬೊಮ್ಮಾಯಿ: ನೀವು ಮಂತ್ರಿಗಳಾಗಿ ಹಿಂದೆ ಕೆಲಸವನ್ನು ಮಾಡಿದ್ದೀರಿ. ನೀವು ಈ ರೀತಿಯಾಗಿ ಮಾಡಬಾರದು.

ಶ್ರೀ ಬಂಡೆಪ್ಪ ಕಾಶೆಂಪೂರ್: ತಮಗೆ ನಾನು ನೆರವಾಗುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ನಮಗೆ ನೆರವು ಬೇಕಾಗಿಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ್: ಶಾಸಕರು ...

ಉಪಾಧ್ಯಕ್ಷರು: ನೀವು ಅನುಮತಿಯನ್ನು ಸಹ ಕೇಳುವುದಿಲ್ಲ. ನಿಮ್ಮಿಷ್ಟಕ್ಕೆ ಎದ್ದು ಉತ್ತರವನ್ನು ಹೇಳುತ್ತಿದ್ದರೆ where is the end for it?

ಶ್ರೀ ಬಂಡೆಪ್ಪ ಕಾಶೆಂಪೂರ್: ಅವರ ಹತ್ತಿರ ನಾನು ದುಡ್ಡನ್ನು ಕೇಳುತ್ತಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಈಗಾಗಲೇ ಪ್ರಕಾಶ್ ಹುಕ್ಕೇರಿಯವರು ಶಾಸಕರ ನಿಧಿಯನ್ನು ಬಳಕೆ ಮಾಡಿ ಮತ್ತಿತರೆ ತಮ್ಮ ದುಡ್ಡನ್ನು ಬಳಕೆ ಮಾಡಿ ದೊಡ್ಡ ಪ್ರಮಾಣದ ಆಂದೋಲನವನ್ನು ಅವರ ಕ್ಷೇತ್ರದಲ್ಲಿ ಮಾಡಿದ್ದಾರೆ.

(ಗೊಂದಲ)

ಶ್ರೀ ಮಾಲೀಕಯ್ಯ ಗುತ್ತೇದಾರ್: ಶಾಸಕರ ದುಡ್ಡನ್ನು on-line schemeನಲ್ಲಿ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. ಹೊಸದಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ಆಯಿತು, ಹೊಸದಾಗಿ ತೆಗೆದುಕೊಳ್ಳಿ. ನಿಮಗೇನು ಬೇಕು ಅದನ್ನು ಮಾರ್ಪಾಡು ಮಾಡಿ ಕೊಡೋಣ.

(ಗೊಂದಲ)

ಉಪಾಧ್ಯಕ್ಷರು: MLA Grant ಅನ್ನು ಯಾವ ರೀತಿ ಕೊಡಬೇಕೆಂಬುದಕ್ಕೆ ಗೈಡ್‌ಲೈನ್ಸ್ ಇದೆ. ಅದು ನಮಗೆ ನಿಮಗೆ ಎಲ್ಲರಿಗೂ ಗೊತ್ತಿದೆ. There is a guideline. ಅದನ್ನು ಎಂ.ಎಲ್.ಎ. ಗ್ರಾಂಟ್ ವಿಷಯ ಬಂದಾಗ ಮಾತನಾಡಿ. ಬೇಗ ಉತ್ತರ ಮುಗಿಸಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಹೇಳಿ, ನೀವು ಮಾಡಿರುವುದನ್ನು ಹೇಳಿ.

ಉಪಾಧ್ಯಕ್ಷರು: ಆಯಿತು, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಸಾಮೂಹಿಕವಾಗಿ ನಾವು ಕೊಡುತ್ತಿದ್ದೇವೆ. ಇದು ಬಹಳ ಮುಖ್ಯವಾದುದು. Individual ಆಗಿ ಮಾತನಾಡುತ್ತಿದ್ದೇವೆ. ಇದರ ಬಗ್ಗೆ ಸದನದಲ್ಲಿ ಕ್ಲಾರಿಫೈ ಮಾಡಿದರೆ ಇಡೀ ರಾಜ್ಯದಲ್ಲಿ ಜನತೆಗೆ ಅನುಕೂಲವಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು: ಈಗ ಗೈಡ್‌ಲೈನ್ಸ್ ಬಿಟ್ಟು ಯಾರಿಗೂ ಕೊಡಲಿಕ್ಕಾಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ನಮ್ಮ ರಾಜ್ಯದಲ್ಲಿ ಈಗ waste land ಏನಿದೆ ಅದನ್ನು ಅಭಿವೃದ್ಧಿ ಮಾಡುವ ಸಲುವಾಗಿ 'ಹಸಿರು ವನ' ಎಂಬ ಕಾರ್ಯಕ್ರಮವನ್ನು ಹೊಸದಾಗಿ ರೂಪಿಸಿದ್ದೇವೆ. ನೀವೇನು ಮಾಡಿದ್ದೀರಿ ಎಂದು ಹೇಳಿದಿರಿ? ಇವತ್ತು ಆ ಒಂದು ಪ್ರದೇಶದಲ್ಲಿ ಎಲ್ಲೆಲ್ಲಿ ರೈತರು ಮುಂದೆ ಬರುತ್ತಾರೆ ಅವರಿಗೆ ಸಸಿಯನ್ನು ಕೊಡುವುದರ ಜೊತೆಗೆ ಬೀಜ ಉತ್ಪಾದನೆ

ಏನಾಗುತ್ತದೆ ಅದಕ್ಕೂ ಕೂಡ ಪ್ರೋತ್ಸಾಹ ಧನವನ್ನು ಕೊಡುವುದಾಗಿ ಹೇಳಿದ್ದೇವೆ. ಎಲ್ಲಾ ತಾಲ್ಲೂಕುಗಳಿಗೆ ಕೊಟ್ಟಿದ್ದೇವೆ. ಆದುದರಿಂದ ಇವತ್ತು ನಮ್ಮ dry landನಲ್ಲಿರುವಂಥ waste land ನಮ್ಮ ರೈತರಲ್ಲಿ ಬೇಕಾದಷ್ಟಿರುತ್ತದೆ. ಅದನ್ನು ಅವರು ತಮ್ಮ ವ್ಯಾಪ್ತಿಯಲ್ಲಿರುವಂಥ ಜಮೀನನ್ನು ಬಳಕೆ ಮಾಡುವುದಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಈ ರೀತಿ ಹತ್ತು ಹಲವಾರು ಯೋಜನೆಗಳನ್ನು ಇವತ್ತು ನಾವು ಮಾಡಿದ್ದೇವೆ. ಗ್ರಾಮೀಣ ರಸ್ತೆಯ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ಪುನಃ ನಾನು ಚರ್ಚಿಸಲಿಕ್ಕೆ ಹೋಗುವುದಿಲ್ಲ. ಆದ್ದರಿಂದ ಇವತ್ತು ಸಂಪೂರ್ಣವಾಗಿ ಗ್ರಾಮೀಣ ಮತ್ತು ರೈತರ ಅಭಿವೃದ್ಧಿಗೆ ಒಂದು ದಿಟ್ಟವಾದಂಥ ಹೆಜ್ಜೆ ಸರಿಯಾದ ದಿಕ್ಕಿನಲ್ಲಿ ನಮ್ಮ ಮುಖ್ಯಮಂತ್ರಿಗಳೂ ಹಾಗೂ ನಮ್ಮ ಸರ್ಕಾರ ಇಟ್ಟಿದೆ. ಇನ್ನೂ ಹತ್ತು ಹಲವಾರು ಸಲಹೆಗಳನ್ನು ತಾವು ಕೊಟ್ಟಿದ್ದೀರಿ. ನಮ್ಮ ಮುಖ್ಯಮಂತ್ರಿಗಳೂ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡುತ್ತೇವೆಂದು ಭಾಷಣದ ಕೊನೆಯಲ್ಲಿ ಹೇಳಿದ್ದಾರೆ. ಅದಕ್ಕೆ ನಿರಂತರವಾಗಿ ಆಗಬೇಕೆನ್ನುವುದು ನಮ್ಮ ಕಲ್ಪನೆ ಇದೆ. ಒಂದೇ ಚರ್ಚೆಯಲ್ಲಿ, ಒಂದೇ ದಿವಸದಲ್ಲಿ ಸಾಧನೆ ಮಾಡಲಿಕ್ಕಾಗುವುದಿಲ್ಲ. ನಮ್ಮ ಜಯಚಂದ್ರರವರು "Rome cannot be built in a day" ಎಂದು ಹೇಳಿದರು. ಆದ್ದರಿಂದ ನಾನು ಮೊದಲೇ ಹೇಳಿದೆ, dynamic problem, ಇದು static ಅಲ್ಲವೆಂದು. ಆದ್ದರಿಂದ ಇವತ್ತು ನೀವು ಇನ್ನಷ್ಟು ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಿ. ಅವುಗಳನ್ನು ಮುಖ್ಯಮಂತ್ರಿಗಳ ಉನ್ನತ ಸಮಿತಿಯಲ್ಲಿ ಅವೆಲ್ಲವನ್ನು ಇಟ್ಟು ಪರಿಶೀಲನೆ ಮಾಡಿ ಮುಂದಿನ ದಿನಗಳಲ್ಲಿ ಅದಕ್ಕೆ ಬಜೆಟ್‌ನಲ್ಲಿ ಹಣವನ್ನು ಒದಗಿಸಿ ಕೃಷಿ ನಮ್ಮ ಆದ್ಯತೆ, ಕೃಷಿ ನಮ್ಮ ಗುರಿ, ಕೃಷಿ ನಮ್ಮ ಉಸಿರು, ಹಸಿರೇ ನಮ್ಮ ಉಸಿರು ಎಂಬುದು ನಮ್ಮ ಸರ್ಕಾರದ ನೀತಿ ಇದೆ. ಆ ನಿಟ್ಟಿನಲ್ಲಿ ಒಂದು ದೊಡ್ಡ ಹೆಜ್ಜೆಯನ್ನು ಇವತ್ತು ನಾವಿಟ್ಟಿದ್ದೇವೆ. ನೀವೆಲ್ಲ ಸಲಹೆಗಳನ್ನು ಕೊಟ್ಟಿದ್ದೀರಿ, ನಿಮಗೂ ಕೂಡ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ: ಶರಣಪ್ರಕಾಶ್ ಪಾಟೀಲ್: ಈಗ ಹಣದ ಮೂಲ ಹೇಳಿ, ಉತ್ತರವಂತೂ ಸಂಪೂರ್ಣವಾಗಿ ಸಮರ್ಪಕವಾಗಿರಲಿಲ್ಲ. ಏನೋ ಗಾಳಿಯಲ್ಲಿ ಗೋಪುರ ಕಟ್ಟಿದ್ದೀರಿ ಅಷ್ಟೆ.

ಉಪಾಧ್ಯಕ್ಷರು: ಪ್ಲೀಸ್, ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ನೀರಾವರಿ ಮಂತ್ರಿಗಳು ಸುದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ, ಆದರೆ ಅದರಲ್ಲೇನು ಮಾಡಿದ್ದಾರೆಂದು ಹೇಳಬೇಕಾದರೆ, 37ರಲ್ಲಿ ಐದು ಆರಕ್ಕೆ ಕೊಟ್ಟು ಉಳಿದವುಗಳನ್ನು ತೇಲಿಸಿ ಬಿಟ್ಟರು. ಏಕೆಂದರೆ ಇದು ಭವಿಷ್ಯದ ಹೆಜ್ಜೆಗಳಲ್ಲ. ಏಕೆಂದರೆ ಯಾವುದಕ್ಕಾದರೂ ಒಂದಕ್ಕೆ ಹಣವನ್ನು ಇಟ್ಟಿದ್ದೀರಾ, ಎಲ್ಲಿ, ಯಾವ ಮೂಲದಿಂದ ಹಣ ಬರುತ್ತದೆ?

(ಗೊಂದಲ)

ಉಪಾಧ್ಯಕ್ಷರು: ಈಗ clarificationಗೆ ಮತ್ತೆ clarification ಕೇಳುವುದು ಎಲ್ಲಿದೆ? No, ಮೂರು ದಿವಸಗಳಿಂದ ಏನು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಿದೆ ಆ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗಿದೆ. ದಯವಿಟ್ಟು ನಿಲುವಳಿ ಸೂಚನೆಯನ್ನು ನಾಳೆ ಪ್ರಸ್ತಾಪ ಮಾಡಿ.

ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 7.25 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ: 15ನೇ ಸೆಪ್ಟೆಂಬರ್ 2009ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ನಿಃಶ್ಚಯಿಸಿತು).

*****